ಬಸವಲಿಂಗ ಪಟ್ಟದ್ದೇವರ ಬದುಕು - ಬರಹ

(ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ,
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಛಾಯಾ ಭೌರಾವ

ಮಾರ್ಗದರ್ಶಕರು

ಡಾ. ನೀಲಾಂಬಿಕಾ ಪೋಲಿಸ್ ಪಾಟೀಲ

ಕ.ರಾ.ಶಿ. ಸಂಸ್ಥೆಯ
ಸ್ನಾತ್ತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ.

ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬
ಸೆಪ್ಟೆಂಬರ್ - ೨೦೦೮

ಬಸವಲಿಂಗ ಪಟ್ಟದೇವರ ಬದುಕು-ಬರಹ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ
ಎಂ. ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಛಾಯಾ ಭೌರಾವ

ಸಂಶೋಧನ ಮಾರ್ಗದರ್ಶಕರು
ಡಾ. ನೀಲಾಂಬಿಕಾ ಪೋಲೀಸ್ ಪಾಟೀಲ
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ,
ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬

ಸೆಪ್ಟೆಂಬರ - ೨೦೦೮

ಪ್ರಮಾಣ ಪತ್ರ

"ಬಸವಲಿಂಗ ಪಟ್ಟದೇವರ ಬದುಕು-ಬರಹ" ಎಂಬ ನಿಬಂಧವನ್ನು **ಡಾ. ನೀಲಾಂಬಿಕಾ ಪೋಲಿಸ್ ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್, ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನದ ಸಂಶೋಧನ ಕೇಂದ್ರ, ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಬೀದರ

ದಿನಾಂಕ: 30/09/09

ಭಾಯಾ ಭೌರಾವ

ಎಂ.ಫಿಲ್. ವಿದ್ಯಾರ್ಥಿ

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ

ಕನ್ನಡ ಸಂಶೋಧನ ಕೇಂದ್ರ,

ಬೀದರ

ಮಾರ್ಗದರ್ಶಕರ ಪ್ರಮಾಣ ಪತ್ರ

"ಬಸವಲಿಂಗ ಪಟ್ಟದೇವರ ಬದುಕು-ಬರಹ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಛಾಯಾ ಭೌರಾವ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಬೀದರ

ದಿನಾಂಕ: 30/09/09

ಡಾ. ನೀಲಾಂಬಿಕಾ ಪೋಲಿಸ್ ಪಾಟೀಲ

ಸಂಶೋಧನಾ ಮಾರ್ಗದರ್ಶಕರು

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ

ಕನ್ನಡ ಸಂಶೋಧನ ಕೇಂದ್ರ,

ಬೀದರ

ಪರಿವಿಡಿ



ಹಿರೇಮಠ ಸಂಸ್ಥಾನ ವಿದ್ಯಾ ಪೀಠ ಟ್ರಸ್ಟ್ ಭಾಲ್ಕಿ



ಪರಮಪೂಜ್ಯ ಶ್ರೀ ಮ.ಘ.ಚ ಬಸವಲಿಂಗ ಪಟ್ಟದ್ದೇವರು
ಹಿರೇಮಠ ಸಂಸ್ಥಾನ ಭಾಲ್ಕಿ



ಅಧ್ಯಾಯ-೧

ಅಧ್ಯಯನದ ಉದ್ದೇಶ ಹಾಗೂ ಪ್ರಾಮುಖ್ಯತೆ

ಅಧ್ಯಾಯ-೧

ಅಧ್ಯಯನದ ಉದ್ದೇಶ ಹಾಗೂ ಪ್ರಾಮುಖ್ಯತೆ

ಭಾರತದ ಈ ಪವಿತ್ರ ನೆಲ ಶತಮಾನಗಳಿಂದ ಸಾಧು-ಸಂತ-ಶರಣರು ಮಹಾ ಪುರುಷರು ತನ್ನ ಪ್ರದೇಶದಲ್ಲಿಯೆ ಜನಿಸಲು ಬೇರೆಡೆ ಜನಿಸ್ಸಿದ್ದರೂ ಇಲ್ಲಿಗೆ ಬಂದು ನೆಲಸಲು ಆಕರ್ಷಿಸುತ್ತಿರುವುದೆಂದು ವಿಶೇಷ ಅಂಶವಾಗಿದೆ. ಅನಾದಿ ಕಾಲದಿಂದಲೂ ಋಷಿರ್ವರ, ಮುನಿ ಕವಿಗಳ, ಅಧ್ಯಾತ್ಮ ಜೀವಿಗಳ ಬೀಡಾಗಿರುವ ಮಾತು ಇಂದಿಗೂ ಸತ್ಯವಾಗಿ ಪರಿಣಮಿಸಿದೆ. ಜಗತ್ತಿನ ಇತರ ಪ್ರದೇಶಗಳಿಂದ ಭಾರತ ದೇಶದಲ್ಲಿ ಹುಟ್ಟಿ ಬೆಳೆದ ಅಥವಾ ಇಲ್ಲಿಗೆ ಬಂದು ನೆಲಸಿ ಬಾಳಿ ಬೆಳಗಿದ ಮಹಾತ್ಮರ ಆಧ್ಯಾತ್ಮ ಪ್ರಭೆ ಉಜ್ವಲವಾಗಿದೆ. ನಿರಂತರವಾಗಿ ತನ್ನ ಆಧ್ಯಾತ್ಮ ಪ್ರಭಾವ ಶಕ್ತಿಯನ್ನು ಬೆಳೆಸಿಕೊಂಡು ಬಂದಿದೆ. ಅಂತೆಯೇ ಭಾರತದ ಜನ ಶಾಂತಿ-ಸಹನೆಯ ಪ್ರತೀಕವಾಗಿದ್ದಾರೆ. ತೃಪ್ತಿಯ ಉದಾರತೆಯ ಸಂಕೇತವಾಗಿದ್ದರೆ. ರಾಜಕೀಯ ಏಳು ಬೀಳುಗಳ ಇತಿಹಾಸ ಏನೇ ಇರಲಿ ದೊರೆತ ಆಧಾರಗಳ ಮೇಲೆ ಹೇಳುವುದಾದರೆ ಸುಮಾರು ನಾಲ್ಕು ಸಾವಿರ ವರ್ಷಗಳಿಗಿಂತಲೂ ಪೂರ್ವದಿಂದಲೇ ಈ ನಾಡಿನಲ್ಲಿ ಧರ್ಮ, ನೀತಿ, ಆಧ್ಯಾತ್ಮಗಳ ಪ್ರವಾಹ ಅನುಕೂಲವಾಗಿ ಹರಿಯುತ್ತ ಸಾಗಿ ಬಂದಿದೆ.

ವೇದ ಕಾಲಿನ ಋಷಿಗಳಿಂದ ಆಧುನಿಕ ಮಹರ್ಷಿ ಅರವಿಂದರವರೆಗೆ ಎಡಬಿಡದೆ ಭಕ್ತಿಯ ಹೊಳೆ ಹರಿದಿದೆ. ಪ್ರಾಪಂಚಿಕ ಸುಖವನ್ನು ಮೂಲದ ಅತ್ಮೋನ್ನತಿಯ ಸುಖದ ಸುಲಭ ಮಾರ್ಗವನ್ನು ಭಕ್ತಿಯ ಮಾಧ್ಯಮದಿಂದ ಸಾಧಿಸಿ ತೋರಿಸಿದರು. ಅಸಂಖ್ಯಾತ ಭಾರತೀಯ ಸಾಧು-ಸಂತರು, ಶರಣರು, ತಮ್ಮಷ್ಟಕ್ಕೆ ತಾವೇ ತಮ್ಮ ಆತ್ಮೋನ್ನತ್ತಿಯನ್ನು ಸಾಧಿಸಿಕೊಂಡ ಸ್ವಾರ್ಥಿಗಳಾದ ತಾವು ಕಂಡ ಸತ್ಯವನ್ನು ಇತರ ಸಾಮಾನ್ಯರೂ ಕಾಣಲೆಂಬ ಸಕಲ ಜೀವಾತ್ಮರಿಗೂ ಲೇಸನ್ನೆ ಬಯಸುವ ಅವರ ಹಂಬಲದಿಂದಾಗಿ, ಅವರು ಮಹಾತ್ಮರೆನಿಸಿಕೊಂಡರು. ಮಾನವ ಜನ್ಮವನ್ನು ಪಾವನಗೊಳಿಸಿಕೊಳ್ಳಲು ತಾವು ನಡೆದ ಮಾರ್ಗದಲ್ಲಿ ಇತರರನ್ನು ಕೈಹಿಡಿದು ನಡೆಸಿ ಅವರಿಗೂ ಕೈಗೆಟುಕುವಂತೆ ಮಾಡಿದರು. ದಕ್ಷಿಣ ಭಾರತ ಇಂತಹ ಮಹಾತ್ಮರ ನೆಲೆಬಿಡಾಗಿದೆ. ಅದರಲ್ಲಿ ಕರ್ನಾಟಕದ್ದು ವಿಶೇಷ ಕೊಡುಗೆ. ಕರ್ನಾಟಕದಲ್ಲಿ ಮಹಾತ್ಮರದೇ ಒಂದು ಬ್ರಹತ್ ಪರಂಪರೆಯಿದೆ. ಅದರಲ್ಲಿ ವೀರಶೈವ ಶರಣರದು ಒಂದು ದಿವ್ಯ ಪರಂಪರೆ, ಹಿರೇಮಠ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಆ ದಿವ್ಯ ಪರಂಪರೆಯಲ್ಲಿ ಒಂದು ಮಹತ್ವದ ದಳ.

ಹಿರೇಮಠದ ಪೂಜ್ಯರು ವೀರ ವೈರಾಗಿಗಳಾಗಿಯೂ ನೇಗಿಲ ಯೋಗಿಗಳಾಗಿಯೂ ಹೆಸರುವಾಸಿ ಆಗಿದ್ದಾರೆ. ಸುಳಿವ ನೇಗಿಲವಾಗಿ ಜನಮನ ಭೂಮಿಯನ್ನು ಎತ್ತು ಹಸನಮಾಡಿದ್ದಾರೆ. ಭಕ್ತಿ ಬೀಜಗಳನ್ನು ಬಿತ್ತಿದ್ದಾರೆ. ನೀತಿ ಬೀಜಗಳನ್ನು ಬಿತ್ತಿದ್ದಾರೆ. ಇಲ್ಲಿ ಸಲ್ಲಿಸುವಂತೆ ಬೆಳೆಸಿ ಜೀವನ್ಮುಕ್ತಿಯ ಫಲಗಳನ್ನು ಕರುಣಿಸಿದ್ದಾರೆ.

ಈ ಮರ್ತ್ಯವು ಕರ್ತಾರರ ಕಮ್ಮಟವಾಗಿರಬೇಕೆಂಬುದೇ ಘನಮಠೇಶ್ವರ ಘನೋದ್ದೇಶ ಮಾನವ ಬದುಕುಬೇಕು. ಆದರೆ ಕೃಷಿಯಲ್ಲಿಯೇ ಬದುಕಬಾರದು ಕೃಷಿಯಿಲ್ಲದ ಬದುಕು ಅದೊಂದು ನುಸಿಯ

ಬದುಕು. ಹೀರೆಮಠನು ಹೀರಿ ಬದುಕಿದವರೇನು ಫಲ ? ಬರಳಿದರೇನು ಚಂದ ಕೃಷಿಗಾರನಾಗಿ ಹಸನಾಗಿ ಬಾಳೆನ್ನುವ ಸತ್ಯಸಂದೇಶವನ್ನು ಬೀರಿದ್ದಾರೆ ಘನಮಠೇಶ.

ಘನಮಠದಾರ್ಯರ ವ್ಯಕ್ತಿತ್ವದ ಇನ್ನೊಂದು ಮುಖ. ಅವರಿಗೆ ಒಕ್ಕಲಿಗರ ಬಗ್ಗೆ ಇದ್ದ ಅಸೀದುವಾದ ಅಕ್ಕರತೆ ಒಕ್ಕಲುತನದ ವಿಶೇಷ ಜ್ಞಾನ ಅದರಿಗಿದ್ದಿತೆಂದು ತೋರುತ್ತದೆ. ಅನೇಕ ಕಡೆಗೆ ಅವರು ರೈತರಿಗೆ ಬಾವಿಗಳನ್ನು ತೋಡುವಲ್ಲಿ ಸೂಕ್ತ ಸಲಹೆಗಳನಿತ್ತಿದ್ದಾರೆ.

ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರ ಕನ್ನಡ ಪ್ರೇಮ ಕೃಷಿ ಪ್ರೇಮ ಕನ್ನಡಿಗರಿಗೆ ಕೊನೆಯವರೆಗೂ ದಾರಿ ದೀಪಗಳು ಕನ್ನಡಿಗರು ಕನ್ನಡದಲ್ಲಿಯೇ ತಿಳಿದು ತಮ್ಮೊಳು ತಮ್ಮ ಮೋಕ್ಷವೆ ಗಳಿಸಿಕೊಳ್ಳಲು ಲಭ್ಯವಾಗುವಂತೆ ಭಕ್ತಿ ಸುಧಾಸಾರವನ್ನು ಬರೆದು ಹೋಗಿದ್ದಾರೆ. ಕನ್ನಡಿಗರು ಕೃಷಿಜ್ಞಾನ ಸಂಪನ್ನರಾಗಿ ಸುಖ ಶಾಂತಿಗಳಿಂದ ಬಾಳಲೆಂದು ಕೃಷಿ ಜ್ಞಾನ ದೀಪಿಕೆಯನ್ನು ನೀಡಿದರು.

ಕಲ್ಯಾಣ ಕರ್ನಾಟಕದ ಜನ ಸಂಸ್ಕೃತಿಯನ್ನು ಶರಣ ಸಂಸ್ಕೃತಿಯ ಬೆಳಕಿನಲ್ಲಿ ಮುನ್ನಡಿಸುವ ದಿವ್ಯ ಹೊಣೆಗಾರಿಕೆಯನ್ನು ಭಾಲ್ಕಿಯ ಹಿರೇಮಠ ಅಭಿನ್ನವಾಗಿ ಮಾಡುತ್ತಾ ಬರುತ್ತಿದೆ. ಸಮಾಜ ಮುಖಿ ಚಿಂತನೆಯ ಈ ಮಠವು ಮಠಗಳ ಪರಂಪರೆಯಲ್ಲಿಯೇ ವಿಶಿಷ್ಟ ಅನನ್ಯ ಎಂಬ ಅಭಿಧಾನ ಪ್ರಾಪ್ತಿವಾಗಿಸಿಕೊಂಡಿದೆ. ಲಿಂ. ಡಾ. ಚೆನ್ನಬಸವ ಪಟ್ಟದ್ದೇವರ ದಿವ್ಯ ಸಂಕಲ್ಪದ ಫಲವಾಗಿ ಹಲವು ಆಯಾಮಗಳಲ್ಲಿ ತನ್ನ ಛಾಪನ್ನು ಶ್ರೀ ಮಠ ದಾಖಲಿಸಿವೆ. ಅಭಿನವ ಬಸವಣ್ಣವೆಂದರೆ ಜನಜನಿತ ಲೋಕ ಪೂಜಿತರಾಗಿದ್ದ ಚನ್ನಬಸವಪಟ್ಟದೇವರು ನಡೆದಾಡುವ ದೇವರೆಂದು ಹೇಳುವಲ್ಲಿ ಕಿಂಚಿತ್ತು ಅತಿಶಯೋಕ್ತಿಯಿಲ್ಲ.

ಅನ್ನದಾಸೋಹ ಜ್ಞಾನ ದಾಸೋಹಗಳ ಉಜ್ವಲ ಕಾರ್ಯದಲ್ಲಿ ತೊಡಗಿರುವ ಬಸವಲಿಂಗ ಪಟ್ಟದೇವರು ಆದರಣೀಯರೂ ಅಭಿನಿಂದನೀಯರೂ ಆಗಿದ್ದಾರೆ. ಸತ್ಯ ಶುದ್ಧಕಾಯಕ ನಿಷ್ಠರಾದ ಪೂಜ್ಯರು ಸರಳ ಜೀವಿಗಳು, ನೇರ ಮಾತನವರಾದರೂ, ನಯ ವಿನಯಗಳ ಸಾಕಾರ ಮೂರ್ತಿಗಳೂ, ನಡೆ ನುಡಿ ಶುದ್ಧವಾಗಿರುವ ಶರಣ ಜೀವಿಗಳು ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಮಾನವೀಯತೆ ಮೌಲ್ಯಗಳನ್ನು ತಾಯಿ ಹೃದಯದವರಾದ ಪೂಜ್ಯರು ವಚನ ಧರ್ಮದಲ್ಲಿ ಅಪಾರ ನಂಬಿಕೆ ಇಟ್ಟುಕೊಂಡು ಶರಣರ ಮಾರ್ಗದಲ್ಲಿ ಮುನ್ನಡೆಯುತ್ತಿದ್ದಾರೆ.

ಹೀಗೆ ಭಾಲ್ಕಿಯ ಸಂಪತ್ತಾದ ಚನ್ನಬಸವ ಪಟ್ಟದೇವರ ಕರುಳಿನ ಕುಡಿಯಾಗಿ ಬಸವತತ್ವದ ಗರಡಿಯ ಮನೆಯಲ್ಲಿ ಬೆಳೆದ ಪ್ರಣವ ಸ್ವರೂಪಿ ತ್ಯಾಗ ಮೂರ್ತಿಗಳಾದ ಮ.ಘ.ಚ. ಬಸವಲಿಂಗ ಪಟ್ಟದ್ದೇವರು ಗುರುವಿನ ಸತ್ಯ ಸಂಕಲ್ಪದಂತೆ ಸಾಮಾಜಿಕ , ಧಾರ್ಮಿಕ ಸೇವೆಯನ್ನು ಮಾಡುತ್ತ ಜಗವನ್ನೆ ಬೆಳಗುತ್ತಿದ್ದಾರೆ. ಗುರುವಿನ ಕನಸು ನನಸು ಮಾಡಲು ಜೀವನವನ್ನೆ ಮುಡಪಾಗಿಟ್ಟಿದ್ದಾರೆ. ಸಮಾಜಕ್ಕೆ ಸದಾ ಒಳ್ಳೆಯದನ್ನೆ ಬಯಸುವ ಕಾಯಕ ಯೋಗಿ, ದಾಸೋಹ ಮೂರ್ತಿ, ಜ್ಞಾನ ಜ್ಯೋತಿ, ಜ್ಞಾನ ಸಿಂಧು, ಧಿನಾ ಬಂಧು, ನೊಂದವರ ಪಾಲಿನ ನಂದಾದೀಪವಾಗಿ ಬೆಳಗುವ ಜ್ಞಾನ ಜ್ಯೋತಿಗಳಿದ್ದರು.

"ಕಾವಿತೊಟ್ಟು ತ್ಯಾಗಿಯಾದವರು
ಕಾಯಕದಲ್ಲಿ ಕೈಲಾಸ ಕಂಡವರು

ಗುರುವಿನಲ್ಲಿ ಹರರನ್ನು ನೋಡಿದರು

ಪೂಜ್ಯ ಮ.ಘ.ಚ. ಬಸವಲಿಂಗ ಪಟ್ಟದ್ದೇವರು".

ದೀಪನು ತನ್ನ ಮೈಯನ್ನು ಸುಟ್ಟುಕೊಂಡು ಪರರಿಗೆ ಬೆಳಕು ನೀಡುವಂತೆ ಶ್ರೀಗಳು ಪರರಿಗಾಗಿ ಬದುಕುತ್ತಿರುವ ಪರೋಪಕಾರಿಗಳು. ಹಿರೇಮಠ ಸಂಸ್ಥಾನವು ಆಧ್ಯಾತ್ಮಿಕ ದೃಷ್ಟಿಯಿಂದ ಬಸವನೆಂಬ ಬಾನಂಗಳದಲ್ಲಿ ಹೊಳೆಯುವ ನಕ್ಷತ್ರದಂತೆ ಕಂಗೊಳಿಸುತ್ತಿದೆ. ಮ.ಘ.ಚ. ಚನ್ನಬಸವ ಪಟ್ಟದ್ದೇವರ ಪರಿಶ್ರಮದ ಬೆವರು ಭಕ್ತಿಯ ಸಾಗರವಾಗಿ ನಿರಂತರ ಹರಿದುಬರುತ್ತಿದೆ. ಕಾಯಕಯೋಗಿಯ ಕನಸಿನ ನಾಡಿಗೆ ಕಳಸವಿಟ್ಟಂತೆ ಅವರ ಉತ್ತರಾಧಿಕಾರಿಯಾಗಿ ಗುರುವಿನ ಕನಸಿನ ಕೂಸಾಗಿ ಅವರ ಸತ್ಯ ಸಂಕಲ್ಪಕ್ಕೆ ನಿರಂತರ ಶ್ರಮಿಸುತ್ತಿದ್ದಾರೆ. ಗುರು ಹಚ್ಚಿದ ದೀಪಕ್ಕೆ ಪ್ರಯತ್ನವೆಣ್ಣೆಯನ್ನು ಸುರಿದು ಜ್ಞಾನವೆಂಬ ಜ್ಯೋತಿಯನ್ನು ಬೆಳಗುತ್ತಾ ಸಾಗುತ್ತಿದ್ದಾರೆ.

ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ಹಾನಗಲ್ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಸದ್ಯ 200 ವಿದ್ಯಾರ್ಥಿಗಳಿದ್ದಾರೆ. ಭವಿಷ್ಯದಲ್ಲಿ ಒಂದು ಸಾವಿರ ಬಡ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಿಕೊಡಬೇಕೆಂಬುದು ಗುರುಗಳ ಉದ್ದೇಶವಾಗಿದೆ. ಬಸವತತ್ವ ಪಾಲಿಸಬೇಕೆಂಬ ಗೃಹಸ್ತರಿಗಾಗಿ ಸ್ವಾಮಿಗಳಿಗಾಗಿ ``ಬಸವತತ್ವ ವಿದ್ಯಾಲಯ`` ಸ್ಥಾಪಿಸುವ ಬಯಕೆ ಇದೆ. ಜನನದಿಂದ ಮರಣದವರೆಗೆ ಲಿಂಗವಂತ ಸಂಸ್ಕಾರಗಳನ್ನು ನಡೆಯಿಸಿಕೊಡುವುದಕ್ಕಾಗಿ ಬಸವ ಧರ್ಮ ಸಂಸ್ಕಾರ ಪಾಠಶಾಲೆ ಸ್ಥಾಪಿಸುವ ಇಚ್ಛೆ ಇದೆ. ಹಿರೇಮಠ ಸಂಸ್ಥಾನದ ವತಿಯಿಂದ ಈಗಿನ ಅಗತ್ಯಗಳಾದ ವೃದ್ಧಾಶ್ರಮ ಹಾಗೂ ಅನಾಥಾಶ್ರಮ ಸ್ಥಾಪಿಸುವ ಬಯಕೆ ಅವಂದಾಗಿದೆ.

ಪೂಜ್ಯ ಬಸವಲಿಂಗ ಪಟ್ಟದೇವರೊಡನೆ ನಾನು ಮಾಡಿದ ಸಂಭಾಷಣೆಯಿಂದ ಅವರು ಸಮಾಜಕ್ಕಾಗಿ ನಿರಂತರ ದುಡಿಯುವ ಸ್ವಾಮಿಗಳೆಂಬುದು ತಿಳಿದುಬರುತ್ತದೆ. ಅವರು ಹಿಡಿದ ಹಠವನ್ನು ಪಟ್ಟು ಹಿಡಿದು ಸಾಧಿಸುತ್ತಾರೆ. ಅಂತಹ ನಿಷ್ಠಾವಂತರು ಬಡವರು, ದೀನ ದಲಿತರ ಬಗ್ಗೆ ಅವರಿಗೆ ಕಳಕಳಿ ಇದೆ. ಶಿಕ್ಷಣ ಪ್ರಸಾರ, ಕನ್ನಡ ಪ್ರಸಾರ, ಬಸವತತ್ವ ಪ್ರಸಾರ ಅವರ ಪ್ರಾಣ ಜೀವಾಳವಾಗಿವೆ.

ಡಾ. ಚನ್ನಬಸವ ಪಟ್ಟದ್ದೇವರ ಧ್ಯೇಯಕ್ಕೂ ಪೂಜ್ಯ ಬಸವಲಿಂಗ ಪಟ್ಟದ್ದೇವರ ಧ್ಯೇಯಕ್ಕು ವ್ಯತ್ಯಾಸವಿಲ್ಲ. ಇವರ ಸದ್ಗುರುಗಳು ತಮ್ಮ ಕಾಲಕ್ಕೆ ಸಾಧ್ಯವಾದಷ್ಟು ತಮ್ಮದೇ ರೀತಿಯಲ್ಲಿ ಸೇವೆ ಮಾಡಿದ್ದಾರೆ. ಇವರು ಈಗಿನ ಅಗತ್ಯಕ್ಕೆ ತಕ್ಕಂತೆ ಗುರುಗಳ ಮಾರ್ಗವನ್ನು ಮುಂದುವರೆಸಿಕೊಂಡು ನಡೆದಿದ್ದಾರೆ. ಆದ್ದರಿಂದ ಪೂಜ್ಯ ಬಸವಲಿಂಗ ಪಟ್ಟದ್ದೇವರು ಗುರುವಿಗೆ ತಕ್ಕ ಶಿಷ್ಯರಾಗಿದ್ದಾರೆ. ಈ ಭಾಗದ ಜನರ ಭಾಗ್ಯವಾಗಿದೆ.

ಇಂತಹ ಮಹಾತ್ಮರ ಚರಿತ್ರೆ ಹಿಂದೆಂದಿಗಿಂತಲೂ ಈ ಸಮಯದಲ್ಲಿ ತುಂಬಾ ಅವಶ್ಯವಾಗಿದೆ. ಏಕೆಂದರೆ ನಾಡಿನಲ್ಲಿ ಅನ್ಯಾಯ, ಅತ್ಯಾಚಾರ, ಮುಂತಾದವುಗಳು ಹೆಚ್ಚಾಗಿ ಜಾತಿಯ ವೈಷಮ್ಯ ಹೆಚ್ಚಾಗಿವೆ. ಅದಕ್ಕಾಗಿ ಪೂಜ್ಯ ಬಸವಲಿಂಗ ಪಟ್ಟದ್ದೇವರ ಮಹಾನ ಚರಿತ್ರೆಯಿಂದ ಸಮಾಜದಲ್ಲಿ ಶಾಂತಿ, ಭಕ್ತಿ, ಸ್ವಾಮ್ಯತೆ ಮುಂತಾದವುಗಳನ್ನು ಮೂಡಿ ಬರುವವು. ಅದಕ್ಕಾಗಿ ಈ ವಿಷಯವನ್ನು ಕುರಿತು ಎಂ.ಫಿಲ್. ಅಧ್ಯಯನ ಕೈಗೊಂಡಿದ್ದೇನೆ.

ಭಾಲ್ಕಿಯ ಐತಿಹಾಸಿಕ ಸಾಂಸ್ಕೃತಿಕ ಪರಂಪರೆ

ಕರ್ನಾಟಕ ರಾಜ್ಯ ಉತ್ತರ ತುದಿಯಲ್ಲಿರುವ ಜಿಲ್ಲೆ ಬೀದರ. ಈ ಜಿಲ್ಲೆಯ ಐದು ತಾಲೂಕುಗಳಲ್ಲಿ ಭಾಲ್ಕಿ ತಾಲೂಕು ಮಧ್ಯವಾಗದಲ್ಲಿದ್ದು, ೧೧೧೭.೩ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಈ ತಾಲೂಕಿನಲ್ಲಿ ೧೨೨ ಗ್ರಾಮಗಳಿವೆ. ಭಾಲ್ಕಿ ಪಟ್ಟಣವು ಸಮುದ್ರ ಪಾತಳಿಯಿಂದ ೬೧೫ ಮೀ. ಎತ್ತರದಲ್ಲಿದ್ದು. ೧೮.೦೩° ಅಕ್ಷಾಂತ ಹಾಗೂ ೭೭.೧೩° ರೇಖಾಂಶಗಳ ನಡುವೆ ನೆಲೆಗೊಂಡಿದೆ.[೧] ಹಳೆಯ ಗ್ರಾಮದ ಸುತ್ತಲು ಸಣ್ಣ ಹಳ್ಳಿಗಳು ಸುತ್ತುವರೆದಿದ್ದು. ಪ್ರಾಚೀನ ಕಾಲದಿಂದಲೂ ಮಾನವ ನೆಲೆಗೆ ಸೂಕ್ತ ಪ್ರದೇಶವಾಗಿದೆ. ಈ ತಾಲೂಕಿನಲ್ಲಿ ಹರಿಯುವ ಕಾರಂಜಾ ಹಾಗೂ ಮಾಂಜರಾ ಎಂಬ ವರ್ಷಾಕಾಲದ ನದಿಗಳು ಗೋದಾವರಿಯ ಉಪ ನದಿಗಳಾಗಿವೆ. ಭಾಲ್ಕಿ ಪಟ್ಟಣವು ಎರಡು ಸಾವಿರ ವರ್ಷಗಳಿಗಿಂತಲೂ ಪ್ರಾಚೀನವಾದ ಹಾಗೂ ಅಖಂಡಿತವಾದ ಐತಿಹಾಸಿ ಪರಂಪರೆಯನ್ನು ಹೊಂದಿದ್ದರೂ ಅಧ್ಯಯನದ ಅನುಕೂಲಕ್ಕಾಗಿ ಇದನ್ನು ಪ್ರಾಚೀನ ಯುಗ ಮಧ್ಯಯುಗ ಹಾಗೂ ಆಧುನಿಕ ಯುಗವೆಂದು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಭಾಗ-೧ : ಪ್ರಾಚೀನ ಯುಗ

೧. ಪ್ರಾಗೈತಿಹಾಸಿಕ ನೆಲೆ :

ಭಾರತ ಸರಕಾರದ ಪುರಾತತ್ವ ಇಲಾಖೆ, ಪುಣೆಯ ಡೆಕ್ಕನ ಕಾಲೇಜಿನ ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗ ಮುಂತಾದ ಸಂಘ ಸಂಸ್ಥೆಗಳು ಹಾಗೂ ಪಿ.ಎಚ್.ಡಿ. ಸಂಶೋಧನೆ ಪ್ರಬಂಧಗಳಿಗಾಗಿ ಸಂಶೋಧನೆ ನಡೆಸಿದ ಡಾ. ಆರ್.ಎಂ. ಷಡಕ್ಷರಯ್ಯ ಮುಂತಾದ ಇತಿಹಾಸಕಾರರು ಇಡೀ ಬೀದರ ಜಿಲ್ಲೆಯ ಬಗ್ಗೆ ಅಧ್ಯಯನ ನಡೆಸಿ, ಇದು ಪ್ರಾಗೈತಿಹಾಸಿಕ ಮಾನವ ನೆಲೆಯಾಗಿತ್ತೆಂದು ನಿರ್ಣಯಿಸಿದ್ದಾರೆ. ಮಧ್ಯ ಹಾಗೂ ಆಧುನಿಕ ಶಿಲಾಯುಗದ ಭೂಪದಗಳನ್ನು ಗುರುತಿಸಿದ್ದಾರೆ. ಭಾಲ್ಕಿ ತಾಲೂಕಿನ ಕೋಸಮ ನಾಗೂರ ಹತ್ತಿರದ ಮಧ್ಯ ಶಿಲಾಯುಗದ ಮಾನವರ ಸಮಾಧಿಗಳಿಂದ ಅಸ್ಥಿಪಂಜರ, ಮಡಿಕೆ ಚೂರುಗಳನ್ನು ಸಂಗ್ರಹಿಸಲಾಗಿದೆ. ಗೋರ ಚಿಂಚೋಳಿಯ ಹತ್ತಿರ ಆದಿ ಮಾನವರ ಶಿರೋಪಕರಣಗಳನ್ನು ಸಂಗ್ರಹಿಸಲಾಗಿವೆ.

ಭಾಲ್ಕಿ ತಾಲೂಕಿನ ಅತನೂರು, ಸೋಮಪುರ ಹತ್ತಿರದ ಮಾಂಜರಾ ನದಿಯ ದಂಡೆಯಲ್ಲಿ ವೇದ ಕಾಲಿನ ಯಜ್ಞ ಕುಂಡದ ಅವಶೇಷಗಳನ್ನು ಗುರುತಿಸಲಾಗಿದೆ. ಯಜ್ಞಕ್ಕೆ ಹವಿಸ್ಸು ಅರ್ಪಿಸುವ ಕಟ್ಟಿಗೆಯ ಸೌಟುಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿಯ ಉತ್ಪನ್ನದಲ್ಲಿ ಆನೆ, ಜಿಂಕೆ , ಕರಡಿ ಮುಂತಾದ ವನ್ಯ ಜೀವಿಗಳ ಪಳೆಯುಳಿಕೆ ಹಾಗೂ ಮೂಳೆಗಳನ್ನು ಸಂಗ್ರಹಿಸಲಾಗಿದೆ. ಶ್ರೀರಾಮನು ವನವಾಸದಲ್ಲಿದ್ದಾಗ ಭಾಲ್ಕಿಯ ರಾಮೇಶ್ವರ ಟೀಕಣಿ (ದಿನ್ನೆ) ಗೆ ಬಂದಿದ್ದನೆಂದು, ಅವನ ಅಶ್ವಮೇಧಯಾಗದ ಕುದುರೆಯು ಬಂದಿತ್ತೆಂದು

ಜನ ವದಂತಿಗಳಿವೆ. ಮಹಾ ಭಾರತದ ಕಾಲಕ್ಕೆ ಭಾಲ್ಕಿಯ ಕುಂತಳ ದೇಶದ ಒಂದು ರಿಸಿಕ (ಅಸಿಕ) ವಾಗಿತ್ತೆಂದು ಹೇಳಲಾಗುತ್ತದೆ.

೨. ಇತಿಹಾಸ ಕಾಲದ ಭಲ್ಲೂಕ್ಕಿಪುರ :

ಭಾಲ್ಕಿ ಭಾಗವನ್ನು ನಂದರು, ಮೌರ್ಯರು, ಶಾತವಾಹನರು ಹಾಗೂ ವಾಕಟಕರು ಆಳಿದವರೆಂದು ಇತಿಹಾಸಕಾರರು ಭಾವಿಸುತ್ತಾರೆ. ಇಲ್ಲಿಯ ಪ್ರಾಚೀನ ಸ್ಥಳ ನಾಮಗಳಲ್ಲಿ ಈ ರಾಜರ ಹೆಸರುಗಳ ಪ್ರಭಾವವು ಕಂಡುಬರುತ್ತದೆ. ಬಹುಶಃ ವಾಕಟಕ ಪ್ರವರ ಸೇನನು (ಕ್ರಿ.ಶ. ೪೬೦) ಸಾಮಂತನಾಗಿದ್ದ ಭದ್ರಸೇನ ಎನ್ನುವವನು ಭಾಲ್ಕಿಯನ್ನು ಆಳುತ್ತಿದ್ದನೆಂದು ಈ ಗ್ರಾಮಕ್ಕೆ ಮೊದಲು ಕರಡಿಹಳ್ಳಿ ಎಂದು ಕರೆಯಲಾಗುತ್ತಿದ್ದು, ಭದ್ರ ಸೇನನು ಅದನ್ನು ಸಂಸ್ಕೃತೀಕರಣಗೊಳಿಸಿ ಅದಕ್ಕೆ ಭಲ್ಲೂಕ್ಕಿಪುರ ಎಂದು ಪುನರ್ನಾಮಕರಣ ಮಾಡಿದನೆಂದು ಹೇಳುತ್ತಾರೆ.

೩. ಭಲ್ಲುಕ್ಕಿ ದೇಶ :

ಬಾದಾಮಿಯ ಚಾಲುಕ್ಯರ ಕಾಲಕ್ಕೆ ಭಾಲ್ಕಿಯು ಒಂದು ಪ್ರತ್ಯೇಕ ಆಡಳಿತ ಘಟಕವಾಗಿದ್ದು, ಭಲ್ಲುಕ್ಕಿ ದೇಶ ಎಂದು ಕರೆಯಲ್ಪಡುತ್ತಿತ್ತು ಎನ್ನುವದನ್ನು ನಾಗಪುರದ ಡಾ. ವ್ಹಿ.ಬಿ. ಕೋಳಿ ಹಾಗೂ ಆ ನಂತರದಲ್ಲಿ ಧಾರವಾಡದ ಡಾ. ಶ್ರೀನಿವಾಸ ರಿತ್ತಿ ಅವರುಗಳು ಚಾಲುಕ್ಯ ವಿಜಯಾದಿತ್ಯನ (ಕ್ರಿ.ಶ. ೬೯೭-೭೩೩) ಕಾಸಾರ ಸಿರಸಿ ತಾಮ್ರ ಪಟದಿಂದ ಗುರುತಿಸಿದ್ದಾರೆ.

೪. ರಾಜಧಾನಿ ಪಟ್ಟಣ ಭಲ್ಲುಂಕಿ :

ಕಲ್ಯಾಣ ಚಾಲುಕ್ಯರ ಕಾಲಕ್ಕೆ ಭಾಲ್ಕಿಯ ಚಾಲುಕ್ಯರ ಸಾಮಂತರಾಗಿದ್ದ ರಂಜೇರಿಯ ಸಿಂಧರ ಆಡಳಿತಕ್ಕೊಳಪಟ್ಟಿತು. ಮೇಲಟ್ಟಳೆ ನಾಡಿನಲ್ಲಿ ಭಲ್ಲುಂಕೆ-೪೪ ಒಂದು ಕಂಪಣವಾಗಿತ್ತು. ಈ ಕಂಪಣಕ್ಕೆ ಭಾಲ್ಕಿಯೆ ರಾಜಧಾನಿಯಾಗಿತ್ತು. ಭಾಲ್ಕಿ ಹಾಗೂ ಈ ತಾಲೂಕಿನ ಅನೇಕ ಶಾಸನಗಳಲ್ಲಿ ಶ್ರೀಮತು ರಾಜಧಾನಿ ಪಟ್ಟಣ ಭಲ್ಲುಂಕಿ ಎನ್ನುವದು ಅನೇಕ ಸಲ ಬಂದಿದೆ. ಸಿಂಧ ಅರಸರಲ್ಲಿ ಹೆಮ್ಮಾಡಿಯು ಇಲ್ಲಿಯ ಅನೇಕ ದೇವಾಲಯಗಳಿಗೆ ದತ್ತಿಯನ್ನು ನೀಡಿದ್ದಾನೆ. ರಾಹುಜರಸನು ಇಲ್ಲಿಯ ತ್ರೈ ಪುರುಷ ದೇವರಿಗೆ ಸಂಬಂಧಿಸಿದ ವ್ಯಾಜ್ಯವನ್ನು ಬಗೆಹರಿಸಿ ಕೆಲವು ದತ್ತಿಗಳನ್ನು ನೀಡಿದ್ದಾನೆ. ಭಾಲ್ಕಿಯ ಐತಿಹಾಸಿಕ ದೇವಾಲಯಗಳಲ್ಲಿ ಸಿಂಧ ಅರಸರ ಕುಲದೇವತೆಯಾದ ಧರಣೀಶ ನಾಗೇಂದ್ರ ನ ವಿಗ್ರಹಗಳಿವೆ.

೫. ಕ್ಷಾತ್ರಭೂಮಿ ಭಲ್ಲುಂಕೆ :

ಭಾಲ್ಕಿಯ ಧರ್ಮ ನ್ಯಾಯಗಳಲ್ಲಿ ನಿಷ್ಠೆಯುಳ್ಳ ಸ್ವಾತಂತ್ರ್ಯಪ್ರಿಯರಾದ ಜನರ ನೆಲೆಯಾಗಿತ್ತು. ಇಲ್ಲಿ ದೊರೆಯುವ ಅನೇಕ ವೀರಗಲ್ಲುಗಳಿಂದ ಅವರ ಕ್ಷಾತ್ರ ತೇಜಸ್ಸಿನ ಪರಿಚಯವಾಗುತ್ತದೆ. ಭಾಲ್ಕಿಯ ಅಶೋಕನಗರದ ಲಕ್ಷ್ಮಿ ಗುಡಿಯ ಕಟ್ಟೆಯ ಮೇಲಿರುವ ವೀರಗಲ್ಲು ವೀರಭದ್ರ ದೇವಾಲಯದ ಗೋಡೆಯೊಂದರಲ್ಲಿರುವ ವೀರಗಲ್ಲು, ಹರಕಾರ ಗಲ್ಲಿಯ ಅಂಬಾಬಾಯಿ ವೀರಗಲ್ಲುಗಳು ಹೆಚ್ಚು ಪ್ರಾಚೀನವೆಂದು ತೋರುತ್ತವೆ. ಶಿರೋಮಧ್ಯೆ ಜುಟ್ಟು ಕಟ್ಟಿ, ಕಣಕಾಲಿನವರೆಗೂ ವೀರಗಾಸೆಯ ಪಂಚೆಯನ್ನುಟ್ಟಿ ಈಟಿಯನ್ನು ಹಿಡಿದು ಕಾದಾಡುತ್ತಿರುವ ಈ ಕ್ಷತ್ರಿಯ ಯೋಧರು ವಾಕಟಕರ ಕಾಲಕ್ಕೆ ಸಂಬಂಧಿಸಿರುವಂತೆ ತೋರುತ್ತದೆ. ಭಾರತೀ ಮಠದ ಪೌಳಿಗೋಡೆಯಲ್ಲಿ ಗೋಸಂರಕ್ಷಣೆಗಾಗಿ

ವೀರನೊಬ್ಬನು ಅಶ್ವಾರೋಹಿ ಅಪಹರಣಕಾರರೊಂದಿಗೆ ಹೋರಾಡಿ ಮಡಿದಿರುವ ತುರುಗಳೊಳ್ ಮಾದರಿಯ ವೀರಗಲ್ಲು ಇದೆ [೨].

ಕಲ್ಲೇಶ್ವರ ದೇವಾಲಯದ ಗೋಡೆಯಲ್ಲಿ ಶಿವಲೆಂಕನೊಬ್ಬನು ವೈಷ್ಣವ ಕ್ಷತ್ರಿಯನೊಂದಿಗೆ ಹೋರಾಡಿ ಶಿವ ದೇವಾಲಯವನ್ನು ರಕ್ಷಿಸಿ, ವೀರಮರಣವನ್ನು ಪಡೆದಿರುವ ವೀರಗಲ್ಲು ಇದೆ. ವೀರಭದ್ರೇಶ್ವರ ದೇವಾಲಯದ ಈ ಮೊದಲು ಹೇಳಿರುವ ಗೋಡೆಯಲ್ಲಿಯೇ ಶತ್ರುಗಳನ್ನು ಕೊಲ್ಲುತ್ತ ಮುನ್ನುಗ್ಗುತ್ತಿರುವ ಇನ್ನೊಬ್ಬ ಯೋಧನ ವೀರಗಲ್ಲು ಇವೆ. ಇದು ಊರಳಿವಿನೊಳ ಮಾದರಿಯ ವೀರಗಲ್ಲು ಆಗಿರುವಂತೆ ತೋರುತ್ತದೆ. ಭಾಲ್ಕಿಯ ಚನ್ನಬಸವೇಶ್ವರ ಮಹಾವಿದ್ಯಾಲಯದಲ್ಲಿ ಸಂರಕ್ಷಿಸಲಾಗಿರುವ ಭಗ್ನ ವೀರಗಲ್ಲಿನಲ್ಲಿ ಅಶ್ವ ಸೈನಿಕನೊಬ್ಬನು ಪದಾತಿಗಳೊಂದಿಗೆ ಹೋರಾಡಿ ಕೆಲವರನ್ನು ಕೊಂದು, ವೀರಮರಣ ಪಡೆದಿರುವ ಧುರದೊಳ ಮಾದರಿಯ ಒಂದು ವೀರಗಲ್ಲು ಇದೆ. ಗಂಜ ಭುಗದ ದೇವಿನಗರದ ಅಂಬಾ ಭವಾನಿ ದೇವಾಲಯದ ಮುಂದಿನ ಕಟ್ಟೆಯ ಮೇಲೆ ಕಂಡುಬರುವ ವೀರಗಲ್ಲು ತುಘಲಖ್ ಬಹಮನಿಗಳ ಕಾಲದ್ದೆಂದೆ ತೋರುತ್ತದೆ.

ಭಾಲ್ಕಿಯ ವಿದ್ಯುಚ್ಛಕ್ತಿ ನಿಗಮ ಕಚೇರಿಯ ಹಿಂದಿನ ಬಯಲಿನಲ್ಲಿ ಸುಮಾರು ಹತ್ತನೆಯ ಶತಮಾನದ ಒಂದು ಮಾಸ್ತಿಗಲ್ಲು ಇದೆ. ಇದು ಭಾಲ್ಕಿಯ ದಲಿತ ಮನೆತನವೊಂದಕ್ಕೆ ಸೇರಿದೆ. ಈದಗಾ ಮೈದಾನದ ಹತ್ತಿರವ ಒಂದು ಸತಿಯ ಗುಡಿ ಇದೆ. ಇದು ಬಹುಶಃ ಬಹಮನಿ ಕಾಲಕ್ಕೆ ಸೇರಿದ್ದು. ಮರಾಠಾ ಸಮುದಾಯಕ್ಕೆ ಸಂಬಂಧಿಸಿರುವಂತೆ ತಿಳಿದುಬರುತ್ತದೆ.

೬. ಶಿವಪುರಿ ಭೂಕೈಲಾಸ ಭಾಲ್ಕಿ :

ಕ್ರಿಸ್ತಶಕೆಯ ಆರಂಭ ಕಾಲದವರೆಗೂ ಭಾಲ್ಕಿಯು ದ್ರಾವಿಡ ಜನಾಂಗದ ನೆಲೆಯಾಗಿದ್ದು, ಶಿವಭಕ್ತಿಯ ಆಗರವಾಗಿತ್ತು. ಈ ಪಟ್ಟಣದಲ್ಲಿ ಹೆಜ್ಜೆ ಹೆಜ್ಜೆಗೂ ಶಿವಲಿಂಗ, ಶಿವ ದೇವಾಲಯಗಳಿದ್ದುದರಿಂದ ಈ ಊರಿನಲ್ಲಿ ಯಾರು ಚಪ್ಪಲಿಗಳನ್ನು ಧರಿಸುವಂತಿರಲಿಲ್ಲ. ಈ ಊರಿನ ಅಗಸೆಗೆ ಬರುತ್ತಿದ್ದಂತೆಯೇ ಎಲ್ಲರೂ ಕಾಲಲ್ಲಿರುವ ಕೆಲವು , ಚಪ್ಪಲಿಗಳನ್ನು ಕಳಚಿ , ಕಂಕುಳಲ್ಲಿ ಹಿಡಿದುಕೊಂಡು ಭೂಕೈಲಾಸವೆನಿಸಿದ ಶಿವಪುರಿ ಭಾಲ್ಕಿಯನ್ನು ಪ್ರವೇಶಿಸಬೇಕಾಗುತ್ತಿತ್ತು.

ಭಾಲ್ಕಿಯಲ್ಲಿ ದೊರೆಯುವ ಚಾಲುಕ್ಯರ ಕಾಲದ ನೂರಾರು ಭಗ್ನವಾಗಿರುವ ದೊಡ್ಡ ದೊಡ್ಡ ಶಿವಲಂಗಗಳು, ಪಾಳು ಬಿದ್ದಿರುವ ಶಿವ ದೇವಾಲಯಗಳು ಹಾಗೂ ಶಾಸನೋಲ್ಲೇಖಗಳಿಂದಲೂ ಇದು ದೃಢಪಡುತ್ತದೆ. ಇಲ್ಲಿಯ ಶಿವದೇವಾಲಯಗಳಲ್ಲಿ ಭಾಲ್ಕೇಶ್ವರ, ಕುಂಭೇಶ್ವರ ಮುಂತಾದವುಗಳನ್ನು ಇಲ್ಲಿಯ ಗ್ರಾಮದ ಭಾಷೆಯಲ್ಲಿ ಭಾಲಕೇಸೂರ್, ಕುಂಬೇಸೂರ್ ಮುಂತಾಗಿ ಎಚ್ಚರಿಸುತ್ತಾರೆ. ಇಲ್ಲಿ ಇಂತಹ ಬಾರಾಸೂರ್ (ಹನ್ನೆರಡು ಈಶ್ವರ) ಗಳು ಪ್ರಸಿದ್ಧವಾಗಿದ್ದವೆಂದು ಹೇಳುತ್ತಾರೆ. ಇಲ್ಲಿಯ ಅಸಂಖ್ಯಾತ ಸೂರಗಳಲ್ಲಿ ಆ ಹನ್ನೆರಡು ಸೂರಗಳು ಯಾವುವು ಎನ್ನುವ ಬಗ್ಗೆ ಇಂದಿಗೂ ಏಕಾಭಿಪ್ರಾಯವಿಲ್ಲವಾದರೂ, ಭಾಲ್ಕೇಶ್ವರ, ರಾಮೇಶ್ವರ, ರಾಮಲಿಂಗೇಶ್ವರ, ಧರ್ಮೇಶ್ವರ, ಮಹಾಬಳೇಶ್ವರ, ನೀಲಕಂಠೇಶ್ವರ, ಸಂಗಮೇಶ್ವರಗಳು ಆ ಬಾರಾಸೂರಗಳಾಗಿರ ಬಹುದೆಂದು ತೋರುತ್ತದೆ.

೭. ಅಗ್ರಹಾರ ಬ್ರಹ್ಮಪುರಿ ಭಲ್ಲುಂಕಿ :

ರಂಜೇರಿನ ಶಾಸನ (ಕ್ರಿ.ಶ. ೧೦೯೦-೧೧೧೫) ಮೊಂದರಲ್ಲಿ ಸಿಂಧ ಅರಸನಾದ ಜಗತ್ಸೇವ್ಯನು ಅಟ್ಟಳೆ ನಾಡನ್ನು ಆಳಲು ಬಂದಾಗ ಅವನೊಂದಿಗೆ ಅಹಿಚ್ಛತ್ರಪುರದಿಂದ ಬಂದಿರುವ ಬ್ರಾಹ್ಮಣರಿಗೆ ಭಲ್ಲುಂಕೆಯನ್ನು ಸರ್ವನಮಶ್ಯದಗ್ರಹಾರವನ್ನಾಗಿ ಮಾಡಿಕೊಡಲಾಯಿತೆಂದು ಹೇಳಲಾಗಿದೆ. ಸ್ಥಳೀಯ ಚನ್ನಬಸವೇಶ್ವರ ಮಹಾವಿದ್ಯಾಲಯದಲ್ಲಿ ಸಂರಕ್ಷಿಸಲ್ಪಟ್ಟಿರುವ ಶಾಸನವೊಂದರಲ್ಲಿ (ಕ್ರಿ.ಶ. ೧೧೦೬) ಭಲ್ಲುಂಕೆಯ ಬ್ರಹ್ಮಪುರಿಯ ಮಹಾಜನಗಳು ಬಾತಸಂಗೆಯ ಉಪಾಧ್ಯಾಯರಿಗೆ ಹತ್ತು ಗದ್ಯಾಣ ದಾನ ಮಾಡಿರುವ ಉಲ್ಲೇಖವಿದೆ. ಆದುದರಿಂದ ಒಂಬತ್ತನೆಯ ಶತಮಾನದಿಂದಲೇ ಭಾಲ್ಕಿಯು ಅಗ್ರಹಾರವಾಗಿತ್ತೆಂದು, ಇಲ್ಲಿ ವೇದಾಧ್ಯಯನ ಮಂಡಿಸುವ ಉಪಾಧ್ಯಾಯರಿದ್ದರೆಂದು ತಿಳಿದುಬರುತ್ತದೆ.

೮. ಜೈನರ ಕೇಂದ್ರ ಭಾಲ್ಕಿ :

ಭಾಲ್ಕಿಯು ರಾಜಧಾನಿ ಪಟ್ಟಣವಾದ ನಂತರ ಜೈನರು ಗುಜರಾತ್ ಕಡೆಯಿಂದ ವ್ಯಾಪಾರದ ಉದ್ದೇಶದಿಂದ ವೀರಬಣಜುಗಳೊಂದಿಗೆ ಭಾಲ್ಕಿಗೆ ಬಂದಿರಬಹುದು. ಭಾಲ್ಕಿ ಸುತ್ತಲಿನ ಪ್ರದೇಶಗಳು ಶಾಸನಗಳಲ್ಲಿ ಜಿನಮುನಿಗಳ ಉಲ್ಲೇಖ ದೊರೆಯುವುದರಿಂದ ಶ್ರವಣ ಬೆಳಗೊಳದ ಕಡೆಯಿಂದ ಧರ್ಮಪ್ರಸಾರಕ್ಕಾಗಿ ಯಾದರೂ ಬಂದಿರಬಹುದೆಂದು ತೋರುತ್ತದೆ.

ಭಾಲ್ಕಿಯ ಕ್ರಿ.ಶ. ೧೦೯೯ರ ಶಾಸನದಲ್ಲಿ ಹೆಮ್ಮ ಹೆಮ್ಮಾಡಿಯರಸನು ಇಲ್ಲಿಯ ಬ್ರಹ್ಮಜಿನಾಲಯಕ್ಕೆ ಒಂದು ಗೌಣವಾಯಿಲೆಯನ್ನು ದತ್ತಿ ನೀಡಿದ ಉಲ್ಲೇಖವಿದೆ. ದುಡ್ಡಿ ಅಗಸೆಗೆ ಹೊಂದಿಕೊಂಡಿರುವ ಹುಸೇನಸಾಬ ಖಾದ್ರಿಸಾಬ ಎನ್ನುವವರ ತೋಟದ ಬಾವಿಯಿಂದ ಹೂಳು ತೆಗೆಯುವಾಗ ೧೯೭೦ ರಲ್ಲಿ ಕೆಲವ ಜೈನವಿಗ್ರಹಗಳು ದೊರೆತಿದ್ದು, ಇವುಗಳಲ್ಲಿ ಸುಮಾರು ನಾಲ್ಕುವರೆ ಅಡಿ ಎತ್ತರವಾಗಿರುವ ಪದ್ಮಾಸನದ ವರ್ಧಮಾನ ಮಹಾವೀರನ ವಿಗ್ರಹವಿದೆ. ಇದರ ಪಕ್ಕದಲ್ಲಿ ನಿಂತಿರುವ ಭಂಗಿಯಲ್ಲಿರುವ ಅದೇ ವರ್ಧಮಾನನ ಸುಮಾರು ಒಂದುವರೆ ಅಡಿ ಎತ್ತರದ ಜ್ವಾಲಾಮಾಲಿನಿಯ ವಿಗ್ರಹವಿದೆ. ದೇಶಪಾಂಡೆ ಗಲ್ಲಿಯಲ್ಲಿರುವ ಪಾಳುಬಿದ್ದಿರುವ ಜಿನಬಸವಿಯೊಂದರಲ್ಲಿ ಭಗ್ನವಾಗಿರುವ ಚಿಕ್ಕ ಜಿನಬಿಂಬಗಳು, ಯಕ್ಷ, ಯಕ್ಷಯರ ವಿಗ್ರಹಗಳಿವೆ. ಬಸವೇಶ್ವರರ ಕ್ರಾಂತಿಯ ನಂತರ ಅನೇಕ ಜೈನ ಶೆಟ್ಟಿಗಳು ವೀರಶೈವರಾದರು, ಬಹಮನಿ ಕಾಲದಲ್ಲಿ ಉಳಿವ ಜೈನರು ವಲಸೆ ಹೋದರು. ಆಗ ಭಾಲ್ಕಿಯಲ್ಲಿ ಜೈನ ಬೋಗಾರರ ಒಂದೆ ಒಂದು ಮನೆ ಮಾತ್ರ ಉಳಿದಿದೆ.

೯. ಶಿವನನ್ನು ಕುಣಿಸಿದ ಕುಂಬಾರ ಗುಂಡಯ್ಯ :

ಭಾಲ್ಕಿಯ ಕುಂಭೇಶ್ವರನ ಭಕ್ತನಾದ ಕುಂಬಾರ ಗುಂಡಯ್ಯನು ತನ್ನ ಕುಲಕಸುಬ ಆಗಿರುವ ಮಡಿಕೆ ಮಾಡುವ ಕಾಯಕವನ್ನು ಶಿವಪೂಜೆಯೆಂದು ತಿಳಿದು ಕಾಯಕ ನಿರತನಾಗಿದ್ದನು. ಕೈಯಲ್ಲಿಯ ಕೊಡತೆಯಿಂದ ಮಡಕೆಯನ್ನು ತಟ್ಟುತ್ತ, ಶಿವಭಜನೆಯಲ್ಲಿ ನರ್ತಿಸತೊಡಗಿದಾಗ ಅವನ ಹೃದಯದಲ್ಲಿದ್ದ ಪ್ರಾಣಲಿಂಗವೂ ನರ್ತಿಸುತ್ತಿತ್ತು ಎಂದು ಹೇಳಲಾಗುತ್ತದೆ.

ಭಾಲ್ಕಿಯ ಕುಂಭೇಶ್ವರ ದೇವಾಲಯದಲ್ಲಿ ಕುಂಬಾರ ಗುಂಡಯ್ಯನ ವಿಗ್ರಹ ಹಾಗೂ ಸಮಾಧಿಗಳಿವೆ. ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಸಿದ್ಧರಾಮ ಮುಂತಾದ ಶರಣರು ಗುಂಡಯ್ಯನನ್ನು ಕೊಂಡಾಡಿದ್ದಾರೆ.

ಭಾಗ-2 : ಮಧ್ಯಯುಗ

ಕಳಚೂರಿ ಬಿಜ್ಜಳನ ಕೊಲೆಯ ನಂತರ ಭಾಲ್ಕಿಯಲ್ಲಿ ರಾಜಕೀಯ ಅಸ್ಥಿರತೆ ನಿರ್ಮಾಣವಾಯಿತು. ಸಿಂಧ ಸಾಮಂತರು ಕಳಚೂರಿ, ಯಾದವ, ಕಾಕತೀಯರ ಸಾಮಂತರಾಗಿ ಕೆಲಕಾಲ ಮುಂದುವರೆದರು. ಕ್ರಿ.ಶ.೧೨೬೦ರ ನಂತರ ಇವರ ಬಗ್ಗೆ ಯಾವುದೇ ಸುಳಿವು ದೊರೆಯುವದಿಲ್ಲ. ಫರಿಸ್ತಾನ ಹೀಳಿಕೆಯ ಮೇರೆಗೆ ಮೊಹ್ಮದ ಬಿನ್ ತುಘಲಖ್ ಕ್ರಿ.ಶ. ೧೩೨೧ ರಲ್ಲಿ ಕಲ್ಯಾಣ ಹಾಗೂ ಬೀದರ ಕ೦ಟೆಗಳನ್ನು ವಶಪಡಿಸಿಕೊಂಡನೆಂದು ತಿಳಿದುಬರುತ್ತದೆ. ಅವನು ಈ ಎರಡರ ನಡುವೆ ಇರುವ ಭಾಲ್ಕಿಯನ್ನು ಕೂಡ ಅದೇ ಸಮಯಕ್ಕೆ ಲೂಟಿ ಮುಡಿ, ಹಾಳುಗೆಡವಿ ವಶಪಡಿಸಿಕೊಂಡಿರಬಹುದು ತೋರುತ್ತದೆ. ಆ ನಂತರ ಕ್ರಿ.ಶ. ೧೩೪೭ ರಿ೦ದ ಬಹಮನಿ, ಬರೀದಶಾಹಿ, ಆದಿಲಶಾಹಿಗಳು ಈ ಭಾಗವನ್ನಾಳಿದರು.

ಕ್ರಿ.ಶ. ೧೬೫೬ ರಲ್ಲಿ ಔರಂಗಜೇಬನು ಆದಿಲಶಾಹಿಗಳನ್ನು ಸೋಲಿಸಿ, ಕಲ್ಯಾಣ, ಬೀದರಗಳನ್ನು ವಶಪಡಿಸಿಕೊಂಡನು. ಔರಂಗಜೇಬನು ಪ್ರತಿಯೊಂದು ಊರಿಗೆ ಒಂದು ಮಸೀದಿಗೆ ಹೊರತಾಗಿ ಯಾವುದೇ ಗುಡಿ, ಗುಂಡಾರ, ದೇವಾಲಯಗಳಿರಬಾರದೆಂಬ ಕಠೋರ ನಿಯಮವನ್ನು ಪಾಲಿಸುತ್ತಿದ್ದುದರಿಂದ ಈ ಕಾಲದಲ್ಲಿ ಭಾಲ್ಕಿಯ ಎಲ್ಲ ದೇವಾಲಯ ಹಾಗೂ ಬಸದಿಗಳು ನೆಲಸಮವಾದವು. ಅನೇಕ ಹಿಂದುಗಳನ್ನು ಬಲವಂತವಾಗಿ ಮುಸ್ಲೀಮರನ್ನಾಗಿ ಮಾಡಲಾಯಿತು. ಈ ದೌರ್ಜನ್ಯವನ್ನು ಹತ್ತಿಕ್ಕಲು, ಛತ್ರಪತಿ ಶಿವಾಜಿಯು ಮರಾಠಾ ಸೈನ್ಯವನ್ನು ಕಟ್ಟಿ, ಅನೇಕ ವರ್ಷಗಳ ಕಾಲ ಹೋರಾಡಿದನು. ಈ ಕಾಲದುದ್ದಕ್ಕೂ , ಭಾಲ್ಕಿಯು ಮೊಗಲ ಹಾಗೂ ಮರಾಠರ ನಡುವೆ ಹೊಯ್ದಾಡಿತು. ಕ್ರಿ.ಶ. ೧೭೦೭ ರಲ್ಲಿ ಔರಂಗಜೇಬನು ಸತ್ತ ನಂತರ ಮರಾಠರು ಪ್ರಬಲರಾದರು. ಈ ಯುಗಕ್ಕೆ ಸಂಬಂಧಿಸಿದ ಸರಾಯಿ ಮಸ್ಜೀದ್, ಗುಮ್ಮಟ ಹಾಗೂ ಒಂದೆರಡು ದರ್ಗಾಗಳು ಹಾಗೂ ಕೆಲವು ತಖಿಯಾ ಮಸ್ಜೀದಗಳು ಭಾಲ್ಕಿಯಲ್ಲಿ ಕಂಡುಬರುತ್ತವೆ.

ಭಾಗ-3 : ಆಧುನಿಕಯುಗ

ಔರಂಗಜೇಬನ ನಂತರ ದಖನ್ ಪ್ರಾಂತದಲ್ಲಿ ಮರಾಠರು ಪ್ರಬಲರಾದರು. ಮೊಗಲರಾಜನಾದ ಬಹಮಾರ ಶಾಹನ ಪ್ರತಿನಿಧಿಯಾಗಿದ್ದ ದಾವುದಖಾನ್ ಪತ್ನಿ ಎನ್ನುವವನಿಂದ ಚೌತ್ ಹಾಗೂ ಸರದೇಶಮುಖಿ ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದರು. ಆ ನಂತರ ಮೊಗಲ ರಾಜನಾದ ಫರ್‍ರೂಕ್ ಸಿಯಾರನು ನಿದಾಮ್ ಉಲ್ ಮಲ್ಕನನ್ನು ದಖನ್ ಪ್ರಾಂತದ ವಜೀರನನ್ನಾಗಿ ಮಾಡಿದನು. ಈ ನಿಜಾಮನು ಮರಾಠರಿಗೆ ತೆರಿಗೆಯನ್ನು ಕೊಡುವ ಬದಲು ಕೆಲವು ಪ್ರದೇಶಗಳನ್ನು ಬಿಟ್ಟುಕೊಟ್ಟನು. ಇವುಗಳಲ್ಲಿ ಭಾಲ್ಕಿಯೂ ಸೇರಿತ್ತು. ಚಂದ್ರಸೇನ ಜಾಧವ ಎನ್ನುವವನು ಪೇಶ್ವೆಗಳ ಸಾಮಂತನಾಗಿ ಕ್ರಿ.ಶ.

೧೭೧೪ ರಿಂದ ಭಾಲ್ಕಿಯನ್ನು ಆಳಲು ತೊಡಗಿದನು. (ಆ ನಂತರ ಕೆಲವು ವರ್ಷಗಳವರೆಗೆ ಇವನ ಮಗನಾದ ರಾಮಚಂದ್ರ ಜಾಧವನು ಆಳ್ವಿಕೆಯನ್ನು ಮುಂದುವರೆಸಿದಂತೆ ತೋರುತ್ತದೆ).

ಮೊಗಲ ಅರಸರು ನಿಜಾಮನನ್ನು ಪದೇ ಪದೇ ಒಂದು ಅಧಿಕಾರದಿಂದ ಇನ್ನೊಂದು ಅಧಿಕಾರಕ್ಕೆ ವರ್ಗಾಯಿಸುತ್ತಿದ್ದುದರಿಂದ ನಿಜಾಮನು ಅಸಮಾಧಾನಗೊಂಡಿದ್ದನು. ಅವನಿಗೆ ದಖನ ಪ್ರಾಂತದ ಹಾಗೂ ಮರಾಠರ ಪರಿಚಯವಿತ್ತು. ಇವನು ಮರಾಠಾ ಪೇಶ್ವೆಗಳ ನೆರವನ್ನು ಪಡೆದು ಕ್ರಿ.ಶ. ೧೭೨೪ ರಲ್ಲಿ ದಖನ ಪ್ರಾಂತದಲ್ಲಿ ಸ್ವತಂತ್ರ ನಿಜಾಮ ರಾಜ್ಯವನ್ನು ಸ್ಥಾಪಿಸಿದನು. ಭಾಲ್ಕಿಯಲ್ಲಿದ್ದ ಮರಾಠರ ಅಧಿಕಾರವನ್ನು ತೆಗೆದು ಹಾಕಿ, ಭಾಲ್ಕಿಯನ್ನು ಒಂದು ಪೈಗಾ ವಿಭಾಗ ಮಾಡಿ ನವಾಬರನ್ನು ನೇಮಿಸಿದನು. ಭಾಲ್ಕಿ ಹಾಗೂ ಸುತ್ತಲಿನ ಗ್ರಾಮಗಳಿಗೆ ಲಿಂಗಾಯತರನ್ನು ದೇಶಮುಖರನ್ನಾಗಿ ನೇಮಿಸಿದನು. ನಿಜಾಮ ವಂಶದ ರಾಜರು ಭಾರತ ಸ್ವಾತಂತ್ರ್ಯದ ನಂತರವೂ ಕ್ರಿ.ಶ. ೧೯೪೮ ರವರೆಗೆ ಈ ಭಾಗವನ್ನಾಳುತ್ತಿದ್ದು, ಆ ನಂತರ ಭಾರತ ಒಕ್ಕೂಟವನ್ನು ಸೇರಿದರು. ಮರಾಠಾ ಹಾಗೂ ಲಿ0ಗಾಯತ ಸ್ಥಳೀಯ ಆಳ್ವಿಕೆಯಲ್ಲಿ ಭಾಲ್ಕಿಯು ಪುನಃ ಕೆಲಲಮಟ್ಟಿಗೆ ವಿಕಸವನ್ನು ಕಂಡಿತು.

೧. ಭಾಲ್ಕಿಯ ಕೋಟೆ :

ಭಾಲ್ಕಿಯ ಕೋಟೆಯ ಚಿಕ್ಕದಾಗಿದ್ದರೂ ಭದ್ರವಾಗಿದೆ. ತೋಪುಗಳನ್ನು ಬಳಸುವ ಉದ್ದೇಶದಿಂದ ತಳಪಾಯದಿಂದಲೇ ಈ ಕೋಟೆಯಲ್ಲಿ ಆರು ಕೊತ್ತಳಗಳನ್ನು ಕಟ್ಟಿಕೊಂಡು ಹೋಗಲಾಗಿದೆ. ಸ್ವಾತಂತ್ರೋತ್ತರ ಕಾಲದಲ್ಲಿಯೂ ಈ ಕೋಟೆಯಲ್ಲಿ ತೋಪುಗಳು, ಸಿಡಿಮದ್ದು, ಸೀಸದ ಗುಂಡು, ನಗಾರಿ ಮುಂತಾದವುಗಳಿದ್ದವು. ಕೋಟೆಯ ಮೇಲೆ ಒಂದು ಕೈಗಾಡಿ ಓಡಾಡುವಷ್ಟು ಸ್ಥಳಾವಕಾಶವಿದೆ. ಕೋಟೆಯ ಗೋಡೆಯಲ್ಲಿ ಎಲ್ಲ ದಿಕ್ಕುಗಳಿಗೂ ಗುಂಡು ಹಾರಿಸಲು ಬರುವಂತೆ ಕಂಡಿಗಳನ್ನು ಬಿಡಲಾಗಿದೆ. ಕೆಳಗಿನಿಂದ ಮೇಲೇರಿ ಬರದಂತೆ ಬೆಂಕಿ, ಬಿಸಿ ನೀರುಗಳನ್ನು ಸುರಿಯಲು ಕೆಳಮುಖವಾಗಿರುವ ಕಿಂಡಿಗಳು ಕೂಡ ಇವೆ. ಈ ಕೋಟೆಯನ್ನು ಚಂದ್ರಸೇನ ಜಾಧವ ಎಂಬ ಮರಾಠಾ ಸಾಮಂತನು ಕ್ರಿ.ಶ. ೧೭೧೪ ರಿಂದ ೧೭೨೪ ರ ಅವಧಿಯಲ್ಲಿ ಕಟ್ಟಿಸಿದನು.

೨. ಭಾಲ್ಕಿಯ ಅಗಸೆಗಳು :

ಮರಾಠಾ ಸಾಮಂತರ ಕಾಲದಲ್ಲಿಯ ಭಾಲ್ಕಿ ಗ್ರಾಮದ ನಾಲ್ಕು ದಿಕ್ಕುಗಳಿಗೆ ನಾಲ್ಕು ಅಗಸೆ ಬಾಗಿಲುಗಳು ನಿರ್ಮಾಣವಾದಂತೆ ತೋರುತ್ತದೆ. ಉರ್ದು ಭಾಷೆಯಲ್ಲಿ ಅಗಸೆಗೆ ಬೇಸ್ ಎಂದು ಕರೆಯುತ್ತಾರೆ. ಭಾಲ್ಕಿ ಗ್ರಾಮದ ಈಶಾನ್ಯ ದಿಕ್ಕಿನಲ್ಲಿ ಬೀದರ ಬೇಸ್, ವಾಯುವ್ಯ ದಿಕ್ಕಿನಲ್ಲಿ ಕಾಟಿ ಬೇಸ್ (ಮುಳ್ಳು ಅಗಸೆ) , ಪಶ್ಚಿಮಕ್ಕೆ ಹುಲಸೂರು ಬೇಸ್ ಹಾಗೂ ಕಾಟಿ ಬೇಸಗಳು ಬಿದ್ದು ನೆಲಸಮವಾಗಿದೆ. ಬೀದರ ಬೇಸ್ ಹಾಗೂ ದಾಡ್ಗಿ ಬೇಸಗಳು ಇನ್ನೂ ಸುಸ್ಥಿತಿಯಲ್ಲಿವೆ.

೩. ರಾಮದಾಸ ಮಠ :

ಭಾಲ್ಕಿಯ ಭಾಲ್ಕೇಶ್ವರ ದೇವಾಲಯದ ಹಿಂಭಾಗದಲ್ಲಿ ಛತ್ರಪತಿ ಶಿವಾಜಿಯವರ ರಾಜಗುರುಗಳಾಗಿದ್ದ ರಾಮದಾಸ ಮಹಾರಾಜರ ಒಂದು ಗದ್ದುಗೆಯನ್ನು ಸ್ಥಾಪಿಸಿ, ರಾಮದಾಸ ಮಠವನ್ನು ಕಟ್ಟಲಾಗಿದೆ. ಈ ಮಠದ ಆವರಣದಲ್ಲಿ ಇಲ್ಲಿಯ ಪೂಜಾರಿಗಳ ಐದಾರು ತಲೆಮಾರಿನ ಸಮಾಧಿಗಳಿವೆ.

ಕೆಲವು ಸಮಾಧಿಗಳ ಮೇಲೆ ಅವರ ಪಾದುಕೆ ಹಾಗೂ ಹೆಸರುಗಳಿವೆ. ಈ ಮಠದ ಸ್ಥಾಪನೆಯನ್ನು ಚಂದ್ರಸೇನ ರಾಜನೆ ಮಾಡಿರಬಹುದು.

೪. ಮಹಾಂತ ಮಠಗಳು :

ಮಹಾಂತ ಎಂದರೆ ಸಾಮಾನ್ಯಾರ್ಥದಲ್ಲಿ ಪೂಜಾರಿಗಳೆಂದು ಅರ್ಥವಾಗುತ್ತದೆ. ಭಾಲ್ಕಿಯ ಮಹಾಂತರ ಮರಾಠಾ ಗೋಸಾಯಿಗಳಾಗಿದ್ದು, ಗಿರಿ ಉಪಜಾತಿಗೆ ಸೇರಿದ್ದಾರೆ. ಮುಸ್ಲಿಂ ಆಡಳಿತಾವಧಿಯಲ್ಲಿ ಪಾಳುಬಿದ್ದಿರುವ ದೇವಾಲಯಗಳನ್ನು ಅಸ್ತವ್ಯಸ್ತವಾಗಿ ಸುಧಾರಿಸಿ ಪ್ರಮುಖವಾದ ನಾಲ್ಕು ದೇವಾಲಯಗಳಲ್ಲಿ ಚಂದ್ರಸೇನನು ಈ ಮಹಾಂತರನ್ನು ನೇಮಿಸಿದಂತೆ ತೋರುತ್ತದೆ. ಭಾಲ್ಕೇಶ್ವರ ಮಠ, ರಾಮಲಿಂಗೇಶ್ವರ ಮಠ, ಉತ್ತರೇಶ್ವರ (ಕಾಲಾ ಹನುಮಾನ) ಮಠಗಳಲ್ಲಿ ಇಂದಿಗೂ ಈ ಮಹಾಂತರ ವಂಶದವರು ಪೂಜಾರಿಗಳಾಗಿದ್ದಾರೆ. ಕಲ್ಲೇಶ್ವರ ದೇವಾಲಯದ ಮಹಾಂತರಾಗಿದ್ದ ಭಾರತೀ ಮಠದ ವಂಶಸ್ಥರು ಭಾಟಸಾಂಗವಿ ಗ್ರಾಮಕ್ಕೆ ವಲಸೆ ಹೋದರೆಂದು ತಿಳಿದುಬಂದಿರುತ್ತದೆ.

ಭಾಲ್ಕಿ ಗ್ರಾಮದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಚಂದ್ರಸೇನ ರಾಜನು ಈ ಊರಿನಲ್ಲಿ ಮರಾಠಾ ಪಟೇಲರನ್ನು ನೇಮಿಸಿದಂತೆ ತೋರುತ್ತದೆ. ಈ ವಂಶಕ್ಕೆ ಸೇರಿದ ಏಳೆಂದು ಕುಟುಂಬಗಳು ಇಂದಿಗೂ ಭಾಲ್ಕಿಯ ತೀನದುಕಾನ ಗಲ್ಲಿಯಲ್ಲಿವೆ.

೫. ವೀರಶೈವರ ಆಡಳಿತ ವ್ಯವಸ್ಥೆ :

ನಿಜಾಮನು ಕ್ರಿ.ಶ. ೧೭೨೪ ರಲ್ಲಿ ತನ್ನ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದ ನಂತರ ಭಾಲ್ಕಿಯ ಆಡಳಿತ ವ್ಯವಸ್ಥೆಯನ್ನು ಮಹತ್ತರ ಬದಲಾವಣೆ ಮಾಡಿದಂತೆ ತೋರುತ್ತದೆ. ನಿಜಾಮ ಕಾಲದಲ್ಲಿ ಭಾಲ್ಕಿಯ ಪೈಗಾ ಕಂದಾಯ ಘಟಕವನ್ನಾಗಿ ಮಾಡಿ ಇದಕ್ಕೆ ಒಬ್ಬ ನವಾಬನನ್ನು ನೇಮಿಸಲಾಗಿತ್ತು. ಖುರ್ಷಿದ್ ಝಾ ಎನ್ನುವವನು ಇಲ್ಲಿಯ ಕೊನೆಯ ನವಾಬನಾಗಿದ್ದನು. ನಿಜಾಮನು ಭಾಲ್ಕಿ ಹಾಗೂ ಅದರ ಸುತ್ತಲಿನ ಗ್ರಾಮಗಳಿಗೆ ಲಿಂಗಾಯತನನ್ನು ದೇಶಮುಖರನ್ನಾಗಿ ನೇಮಿಸಿದನು. ಆ ನಂತರ ಮರಾಠಾ ಪಟೇಲರನ್ನು ತೆಗೆದು ಲಿಂಗಾಯತ ಪಟೇಲರನ್ನು ಕೂಡ ನೇಮಿಸಲಾಯಿತು. ಇದರಿಂದ ಭಾಲ್ಕಿಯಲ್ಲಿ ವೀರಶೈವ ಧರ್ಮವು ಪ್ರಬಲಗೊಂಡಿತು.

೬. ವೀರಶೈವ ಮಠಗಳು :

ಭಾಲ್ಕಿಯ ದೇಶಮುಖರ ಆಡಳಿತಾವಧಿಯಲ್ಲಿ ವೀರಶೈವ ಮಠ ಮಾನ್ಯಗಳು ಅಧಿಕಾರಗಳನ್ನು ಪಡೆದುಕೊಂಡಂತೆ ತೋರುತ್ತದೆ. ವೀರಭದ್ರೇಶ್ವರ ಮಠ, ಕಲ್ಯಾಣಪ್ಪನ ಮಠ, ಹಿರೇಮಠ ಹಾಗೂ ರುದ್ರಭೂಮಿಯ ಮಠ ಮೊದಲಾದವು. ಇವುಗಳಲ್ಲಿ ಹಿರೇಮಠ ಪ್ರಮುಖವಾಗಿದೆ.

ಈ ಹಿರೇಮಠವು ಮೊದಲು ದೇಶಿತ ಮಠವಾಗಿತ್ತು. ಈ ಮಠದ ಸ್ವಾಮಿಗಳು ಕಾಶಿ ವಿಶ್ವಾರಾಧ್ಯಪೀಠಕ್ಕೆ ಸಂಬಂಧಿಸಿದವರಾಗಿದ್ದರು. ಇವರು ಪಾಳುಬಿದ್ದಿರುವ ಕಪಿಲೇಶ್ವರ (ಕಲ್ಲೇಶ್ವರ) ದೇವಾಲಯದ ಪೂಜಾರಿಗಳಾಗಿದ್ದು, ಈ ದೇವಾಲಯದ ಆವರಣದಲ್ಲಿಯೇ ಮಠವನ್ನು ಹೊಂದಿದ್ದರು. ಚಂದ್ರಸೇನ ಜಾಧವನ ಕಾಲದಲ್ಲಿ ಕಲ್ಲೇಶ್ವರ ದೇವಾಲಯಕ್ಕೆ ಭಾರತೀಮಠದ ಮಹಾಂತ ಗಿರಿಗಳನ್ನು ನೇಮಿಸಿರುವದರಿಂದ ಸುಮಾರು ಒಂದು ದಶಕದವರೆಗೆ ವೀರಶೈವರೊಬ್ಬರು ದೇಶಮುಖರಾದುದರಿಂದ

ಇವರಿಗೆ ತಮ್ಮ ಮೂಲದ ಕಲ್ಲೇಶ್ವರ ದೇವಾಲಯವನ್ನು ಹಿಂದಿರುಗಿ ಕೊಡಿಸಿದುದಲ್ಲದೆ ಅದರ ಪಕ್ಕದಲ್ಲಿ ನಿರ್ವಂಶವಾಗಿದ್ದ ಬಸದಿಯೊಂದನ್ನು ಕೂಡಿಸಿದರು. ಈ ಮಠಕ್ಕೆ ಹಿರೇಮಠ ಸಂಸ್ಥಾನದ ಅಧಿಕಾರವನ್ನು ವಹಿಸಿಕೊಟ್ಟರು. ಈ ಮಠದ ಮೂಲ ಕರ್ತೃ ಚನ್ನಬಸವ ಸ್ವಾಮಿಗಳು. ಇವರ ಗದ್ದುಗೆ (ಸಮಾಧಿಯು ಈ ಮಠದ ಶಾಖಾಮಠವಾದ ಮೈನಳ್ಳಿಯಲ್ಲಿದೆ.

ಇವರ ನಂತರ ಕಲ್ಲಯ್ಯ, ದೇಶಮುಖ ಸ್ವಾಮಿಗಳನ್ನು ಅನುಕ್ರಮವಾಗಿ ಮಠಾಧ್ಯಕ್ಷರಾದರು. ಅನಂತರ ಪಟ್ಟಾಧ್ಯಕ್ಷರಾದ ಡಾ. ಮ.ಘ.ಚ. ಚನ್ನಬಸವ ಪಟ್ಟದ್ದೇವರು ಕ್ರಿ.ಶ. ೧೯೨೪ ರಿಂದ ೧೯೮೫ ರ ವರೆಗೆ ಈ ಮಠದ ಕೀರ್ತಿಯನ್ನು ಬೆಳಗಿಸಿ, ಪೂಜ್ಯ ಮ.ಘ.ಚ. ಬಸವಲಿಂಗ ಪಟ್ಟದ್ದೇವರಿಗೆ ಪಟ್ಟಾಧಿಕಾರವನ್ನು ವಹಿಸಿಕೊಟ್ಟರು. ಈಗ ಶ್ರೀ ಬಸವಲಿಂಗ ಸವಾಮಿಗಳು ಹಿರೇಮಠದ ಕಾರ್ಯವ್ಯಾಪ್ತಿಯನ್ನು ವಿವಿಧ ಕ್ಷೇತ್ರಗಳಿಗೆ ವಿಸ್ತರಿಸಿ, ಧರ್ಮ ಕಾರ್ಯದೊಂದಿಗೆ ವಿವಿಧ ಮುಖಗಳಿಂದ ಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ[೩].

ಅಧ್ಯಾಯ-೩

ಭಾಲ್ಕಿ ಹಿರೇಮಠದ ಸಾಂಸ್ಕೃತಿಕ ಹಿರಿಮೆ

ಅಧ್ಯಾಯ-3

ಭಾಲ್ಕಿ ಹಿರೇಮಠದ ಸಾಂಸ್ಕೃತಿಕ ಹಿರಿಮೆ

ಶ್ರೀಮಠದ ಪರಂಪರೆಯ ಹಿನ್ನಲೆ :

ಕರ್ನಾಟಕ ರಾಜ್ಯದ ಉತ್ತರ ತುದಿಯ ಬೀದರ ಜಿಲ್ಲೆಯ ಐದು ತಾಲ್ಲೂಕುಗಳ ಪೈಕಿ ಭಾಲ್ಕಿ ಪಟ್ಟಣವು ಒಂದು. ಭಾಲ್ಕಿ ಪಟ್ಟಣದಲ್ಲಿರುವ ಹಿರೇಮಠ ಸಂಸ್ಥಾನವು ಕನ್ನಡ ನಾಡಿನ ಅತ್ಯಂತ ಪ್ರಸಿದ್ಧ ಮಠಗಳಲ್ಲಿ ಒಂದಾಗಿದೆ. ಈ ಮಠವು ಸುಮಾರು ಎಂಟುನೂರು ವರ್ಷಗಳ ಸುದೀರ್ಘವಾದ ಪರಂಪರೆಯನ್ನು ಹೊಂದಿದೆ.

ಭಾಲ್ಕಿ ಹಿರೇಮಠದ ಮೂಲಪುರುಷರಾದ ಪೂಜ್ಯ ಶ್ರೀಮದ್ ಘನಲಿಂಗ ಚಕ್ರವರ್ತಿ ಚನ್ನಬಸವೇಶ್ವರ ಪಟ್ಟದ್ದೇವರು ಸ್ವಾಮಿಗಳ ನಂತರ ಈ ಮಠಕ್ಕೆ ಯಾರ್‍ಯಾರು ಉತ್ತರಾಧಿಕಾರಿಯಾಗಿ ಬಂದರೆಂಬುದು ಖಚಿತವಾಗಿ ತಿಳಿಯುವುದಿಲ್ಲ. ಮುಂದೆ ಪೂಜ್ಯ ಶ್ರೀ ಮ.ಘ.ಚ. ದೇಶಮುಖ ಪಟ್ಟದ್ದೇವರು ಸ್ವಾಮಿಗಳು, ಇವರ ತರುವಾಯ ಪೂಜ್ಯ ಶ್ರೀ ಮ.ಘ.ಚ. ಸಿದ್ಧಬಸವ ಪಟ್ಟದ್ದೇವರು ಸ್ವಾಮಿಗಳು ಭಾಲ್ಕಿ ಮಠದ ಪೀಠಾಧಿಪತಿಗಳಾಗಿದ್ದರು ಗೊತ್ತಾಗುತ್ತದೆ. ಇವರ ನಂತರದಲ್ಲಿ ಷಣ್ಮುಖಯ್ಯ, ನೀಲಕಂಠಯ್ಯಾ, ಗುರುಲಿ0ಗಯ್ಯ ಮುಂತಾದ ದೇಶಿಕರು ಇದ್ದರೆಂಬುದು ತಿಳಿದುಬರುತ್ತದೆ.

ಹೀಗೆ ಇದುವರೆಗೂ ಆಗಿಹೋದ ಈ ಮಠದ ಅನೇಕ ಮಠಾಧೀಶರುಗಳಲ್ಲಿ ಲಿಂಗೈಕ್ಯ ಪೂಜ್ಯ ಶ್ರೀಮದ್ ಘನಲಿಂಗ ಚಕ್ರವರ್ತಿ ಡಾ. ಚನ್ನಬಸವ ಪಟ್ಟದ್ದೇವರು ಅತ್ಯಂತ ಪ್ರಮುಖರೆನಿಸಿದ್ದಾರೆ. ಶತಾಯುಷಿಗಳಾದ ಇವರು ಈ ಭಾಗದ ಜನತೆಗೆ ನಡೆದಾಡುವ ದೇವರೆನಿಸಿದ್ದಾರೆ. ಇವರು ಗೈದ ಜನಪದ ಕಾರ್ಯಗಳನ್ನು ಗುರುತಿಸಿ ಗುಲಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರದಾನ ಮಾಡಿದೆ. ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಭಾರತದ ಇಬ್ಬರು ರಾಷ್ಟ್ರಪತಿಗಳಿಂದ ಗೌರವ ಸನ್ಮಾನ ದೊರೆತಿದೆ. ಇವರ ಉತ್ತರಾಧಿಕಾರಿಗಳಾದ ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ್ದೇವರು ೧೯೮೫ ರಿಂದ ಈ ಮಠದ ಪಟ್ಟಾಧ್ಯಕ್ಷರಾಗಿ ತಮ್ಮ ಗುರುಗಳ ಕಾರ್ಯಗಳನ್ನು ಮುಂದುವರೆಸಿಕೊಂಡು ನಡೆದಿದ್ದಾರೆ.

ಚನ್ನಬಸವ ಯುಗದ ಆರಂಭ :

ಬಸವ ಧರ್ಮನಿಷ್ಠೆ ಸ್ವಾಮಿಗಳು ಅರಣ್ಯದಲ್ಲಿರುವ ಆಶ್ರಮದ ಯತಿಗಳಲ್ಲ ಊರಲ್ಲಿರುವ ಮಠದ ಪ್ರತಿಗಳು. ಹೀಗಾಗಿ ಸ್ವಾಮಿಗಳು ಸಾಮಾಜಿಕ ವ್ಯಕ್ತಿ ಮಠ ಸಾಮಾಜಿಕ ಆಸ್ತಿ ಎಂಬ ಸೂತ್ರಕ್ಕೆ ಟಿಪ್ಪಣಿಯಾಗಿ ಬಿಚ್ಚಿಕೊಂಡು, ವ್ಯಾಖ್ಯಾನವಾಗಿ ಬೆಳೆದು, ಭಾಷ್ಯವಾಗಿ ಬಾಳಿದರು. ಹನ್ನೆರಡನೆಯ ಶತಮಾನದ ತರುವಾಯ ಉದ್ದಕ್ಕೂ ಸಾಂಸ್ಕೃತಿ ದಾಳಿಗೆ ತುತ್ತಾದ ಕಲ್ಯಾಣ ನಾಡಿನ ಉದ್ಧಾರಕ್ಕಾಗಿ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ರಾತ್ರಿಯನ್ನು ಹಗಲು ಮಾಡಿ ದುಡಿದರು. ಕರ್ನಾಟಕ , ಆಂಧ್ರಪ್ರದೇಶ, ಮಹಾರಾಷ್ಟ್ರ ಈ ಮೂರು ಪ್ರಾಂತಗಳ ಮೂಲೆಯಲ್ಲಿ ತುಂಬಿದ್ದ ಕತ್ತಲೆಗೆ ದೀಪವಾಗಿ ನಿಂತರು. ದೇಶ,

ಭಾಷೆ, ಧರ್ಮ, ಶಿಕ್ಷಣ, ಸಂಸ್ಕೃತಿ ಹೀಗೆ ಸಮಾಜದ ಎಲ್ಲ ಅಂಗಗಳೂ ಪಟ್ಟದ್ದೇವರ ಪರುಷ ಹಸ್ತದಿಂದ ಲಿಂಗವೆನಿಸಿದವು. ವೈಯಕ್ತಿಕ ಜೀವನವನ್ನು ಶುಚಿಯಾಗಿಟ್ಟುಕೊಳ್ಳುವವರು ಸಾಮಾನ್ಯವಾಗಿ ಸಮಾಜವನ್ನು ಮರೆಯುತ್ತಾರೆ. ಸಮಾಜವನ್ನು ಶುಚಿಗೊಳಿಸುವ ಆಸಕ್ತರು ವೈಯಕ್ತಿಕ ಬದುಕಿನ ಶುಚಿತ್ವವನ್ನು ಮರೆಯುತ್ತಾರೆ.

ಭಾಲ್ಕಿ ಹಿರೇಮಠ ಸಂಸ್ಥಾನದ ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಮಾತ್ರ ಇದಕ್ಕೆ ಅಪವಾದ. ಬಸವ ಧರ್ಮದಲ್ಲಿ ಲಿಂಗವ್ಯಸನ ಜಂಗಮ ಸೇವೆ ಎನಿಸುವ ಈ ಎರಡು ತತ್ವಗಳನ್ನು ಅವರು ಪೂರ್ಣ ಪ್ರಮಾಣದಲ್ಲಿ ಬಾಳಿದುದು, ಬದುಕಿದುದು ಈ ಯುಗದ ಒಂದು ಪವಾಡವೇ ಆಗಿದೆ.

ಭಾಲ್ಕಿಯ ಹಿರೇಮಠ ಸಂಸ್ಥಾನದ ಪೂಜ್ಯ ಚನ್ನಬಸವ ಪಟ್ಟದ್ದೇವರ ಕುರಿತಾಗಿ ಗದಗ ತೋಂಟದಾರ್ಯ ಮಠದ ಪೂಜ್ಯ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ನುಡಿದ ಈ ನುಡಿಗಳು ಅಪ್ಪಟ ಸತ್ಯವಾದವುಗಳಾಗಿವೆ[೪].

ಕ್ರಿ.ಶ. ೧೯೨೪ ರ ಫೆಬ್ರವರಿಯಲ್ಲಿ ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಕಾರಿಗಳಾಗಿ ಪೂಜ್ಯ ಚನ್ನಬಸವ ಪಟ್ಟದ್ದೇವರು ಬಂದರು. ಇವರು ಭಕ್ತವರ್ಗಕ್ಕೆ ಸೇರಿದವರಾಗಿದ್ದಾರೆ. ಹಾನಗಲ್ಲ ಕುಮಾರ ಸ್ವಾಮಿಗಳಿಂದ ಸ್ಥಾಪಿತವಾದ ಶಿವಯೋಗ ಮಂದಿರದಲ್ಲಿ ಜ್ಞಾನಾರ್ಜನೆ ಹೊಂದಿ, ಲಿಂಗವಂತ ಧರ್ಮದ ಸಂಸ್ಕಾರ ಪಡೆದವರಾಗಿದ್ದಾರೆ. ಬಸವಾದಿ ಶರಣರ ಮತ್ತು ಹಾನಗಲ್ಲ ಕುಮಾರಸ್ವಾಮಿಗಳ ಬೋಧನೆಯ ತಿರುಳನ್ನು ತಮ್ಮ ನಿತ್ಯದ ಬದುಕಿನಲ್ಲಿ ಅಳಾಡಿಸಿಕೊಂಡು, ಪೂಜ್ಯ ಚನ್ನಬಸವ ಪಟ್ಟದ್ದೇವರು ಹೊಸ ದಾರಿಯನ್ನು ಬೆಳಗಿದ್ದಾರೆ. ಆ ಬೆಳಕಿನಲ್ಲಿ ಅಸಂಖ್ಯಾತರು ನಡೆದಿದ್ದಾರೆ. ಹನ್ನೆರಡನೆಯ ಶತಮಾನ ಬಸವ ಯುಗದ ಆರಂಭ ಎನಿಸಿದರೆ, ಇಪ್ಪತ್ತೊಂದನೆಯ ಶತಮಾನ ಚನ್ನಬಸವ ಯುಗದ ಆರಂಭ ಎನಿಸುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

ನಾಡು ನುಡಿಯ ಸಂರಕ್ಷಣೆ ಮತ್ತು ಶೈಕ್ಷಣಿಕ ಸೇವೆ :

ಕನ್ನಡ ನಾಡು ನುಡಿಯ ಬಗೆಗೆ ಸಾಕಷ್ಟು ಚರ್ಚೆ, ವಿಚಾರ ವಿನಿಮಯಗಳು ನಡೆದಿವೆ. ಈ ಎಲ್ಲಾ ವಿಚಾರಗಳ ಮಧ್ಯಯೂ ಕೆಲವು ಆತಂಕ ನೋವುಗಳು ನಮ್ಮ ಮನವನ್ನು ಕಲುಕುತ್ತವೆ. ಅವೇನೆಂದರೆ, ಹಿಂದಿದ್ದ ಕನ್ನಡ ನಾಡು ನುಡಿಯ ಶ್ರೀಮಂತಿಕೆಯನ್ನು ಇಂದು ಉಳಿಸಿಕೊಳ್ಳಲು ಸಾಧ್ಯವಾಗಿದೆಯೇ ? ಎನ್ನುವುದು ಕರ್ನಾಟಕದ ಬಹುತೇಕ ಮಠಗಳಲ್ಲಿ ವೇದಘೋಷ, ಸಂಸ್ಕೃತದ ಶ್ಲೋಕಗಳು ನಿಂತಿಲ್ಲ. ಕನ್ನಡದ ಸೊಬಗನ್ನು ಹೆಚ್ಚಿಸುವ, ಜನಮನವನ್ನು ಮಿಡಿದ , ಎಲ್ಲರ ಹೃದಯಕ್ಕೆ ಹತ್ತಿರವಾದ ಬಸವಾದಿ ಶರಣರ ವಚನಾಮೃತಕ್ಕೆ ಅಲ್ಲಿ ಅವಕಾಶವಿಲ್ಲ. ಇದಕ್ಕೆ ಅಪವಾದವೆಂಬಂತೆ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಚನ್ನಬಸವ ಪಟ್ಟದ್ದೇವರು ಗಡಿಭಾಗದಲ್ಲಿ ಕನ್ನಡ ಸಂಸ್ಕೃತಿ ಉಳಿಸಿ, ಬೆಳೆಸುವ ಕಾರ್ಯ ಮಾಡಿದ್ದು ಮಾದರಿಯಾಗಿದೆ.

ಸ್ವಾತಂತ್ರ್ಯ ಪೂರ್ವ ಹೈದ್ರಾಬಾದ ನಿಜಾಮ ಆಡಳಿತದ ಬೀದರ ಜಿಲ್ಲೆಯಲ್ಲಿ (ಒಂಬತ್ತು ತಾಲ್ಲೂಕುಗಳನ್ನು ಹೊಂದಿದ್ದ ಅಂದಿನ ಬೀದರ ಜಿಲ್ಲೆ) ಅನ್ಯ ಭಾಷಾ ದಬ್ಬಾಳಿಕೆಯಿಂದ ಕನ್ನಡ ನಲುಗಿತ್ತು. ಉರ್ದು ರಾಜ್ಯ ಭಾಷೆಯಾಗಿ ಮೆರೆಯುತ್ತಿತ್ತು. ಕನ್ನಡ ಮಾತಾಡುವುದು ಅಪರಾಧ ಎಂಬಂತೆ

ಬಿಂಬಿಸಲಾಗುತ್ತಿತ್ತು. ಇಂತಹ ಕ್ಲೀಷ್ಟಕರ ಪರಿಸ್ಥಿತಿಯಲ್ಲಿ ಈ ಭಾಗದಲ್ಲಿ ಕನ್ನಡ ಉಳಿಸಿದ್ದಷ್ಟೇ ಅಲ್ಲ, ಬೆಳೆಸುವಲ್ಲಿ ಅಪ್ರತಿಮ ಸೇವೆ ಸಲ್ಲಿಸಿದವರಲ್ಲಿ ಭಾಲ್ಕಿ ಹಿರೇಮಠ ಸಂಸ್ಥಾನದ ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಅಗ್ರಗಣ್ಯರು. ಕ್ರಿ.ಶ. ೧೯೩೬ ರಲ್ಲಿ ಹಿರೇಮಠ ಸಂಸ್ಥಾನದ ಮೂಲಕ ಆರಂಭಿಸಿದ ಕನ್ನಡ ಕ್ರಾಂತಿ ಅಮೋಘ. ಇದೇ ಕಾರಣದಿಂದ ಭಾಲ್ಕಿ ಹಿರೇಮಠಕ್ಕೆ ಕನ್ನಡ ಮಠ ಎಂದೂ ಕರೆಯಲಾಗುತ್ತದೆ.

ನಿಜಾಮನ ಅಟ್ಟಹಾಸದ ಆಡಳಿತದಲ್ಲಿ ಹೊರಗೆ ಉರ್ದು ಪಾಠಶಾಲೆ ಎಂದು ಫಲಕ ಹಾಕಿ ಒಳಗೆ ರೀತಿಯ ಭೂಗತ ಚಟುವಟಿಕೆ ನಡೆಸಿದವರು ಪೂಜ್ಯ ಚನ್ನಬಸವ ಪಟ್ಟದ್ದೇವರು. ಕ್ರಿ.ಶ. ೧೯೩೬ ರಿಂದ ೧೯೫೬ ರ ವರೆಗೆ ಶ್ರೀಗಳು ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ಕೊರತೆಯಾಗದಂತೆ ನೋಡಿಕೊಂಡಿದ್ದು, ಹಳ್ಳಿ ಹಳ್ಳಿ ತಿರುಗಾಡಿ ಕಾಳು ಸಂಗ್ರಹಿಸುವ ಮುಷ್ಟಿ ಫಂಡ್ ಯೋಜನೆ ಆರಂಭಿಸಿ, ಮಕ್ಕಳಿಗೆ ಪ್ರಸಾದ ನಿಲಯದಲ್ಲಿ ಉಚಿತವಾಗಿ ಊಟೋಪಚಾರ ಒದಗಿಸಿದ್ದು ಅವರ ಹೋರಾಟದ ಬದುಕಿಗೆ ಹಿಡಿದ ಕೈಗನ್ನಡಿಯಾಗಿದೆ.

ಮಠ ಎಂಬ ಶಬ್ದಕ್ಕೆ ಅನೇಕ ಅರ್ಥಗಳಿದ್ದು, ಅವುಗಳಲ್ಲಿ ವಿದ್ಯಾಕೇಂದ್ರ ಎಂಬ ಒಂದು ಅರ್ಥವೂ ಇದೆ. ಈ ಅರ್ಥದಲ್ಲಿ ಭಾಲ್ಕಿ ಹಿರೇಮಠದ ವತಿಯಿಂದ ಶೈಕ್ಷಣಿಕ ಸೇವೆ ಪ್ರತ್ಯೇಕವಾಗಿ ನಾಲ್ಕು ವಿದ್ಯಾ ಸಂಸ್ಥೆಗಳ ಮೂಲಕ ನಿರಂತರ ನಡೆಯುತ್ತಿವೆ.

- ೧೯೩೬ ರಲ್ಲಿ ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಸ್ಥಾಪಿಸಿದ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಭಾಲ್ಕಿ (ಕರ್ನಾಟಕ) (ಇಂದು ಈ ಸಂಸ್ಥೆಯ ಅಡಿಯಲ್ಲಿ ೧೩ ಶಾಲೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ).
- ೧೯೪೯ ರಲ್ಲಿ ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಸ್ಥಾಪಿಸಿದ ಶರಣ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಹಣೆಗಾಂವ (ಮಹಾರಾಷ್ಟ್ರ) ಇಂದು ಈ ಸಂಸ್ಥೆಯ ಅಡಿಯಲ್ಲಿ ಮೂರು ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.
- ೧೯೯೨ ರಲ್ಲಿ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಸ್ಥಾಪಿಸಿದ ಹಿರೇಮಠ ಸಂಸ್ಥಾನ ವಿದ್ಯಾಪೀಠ (ಟ್ರಸ್ಟ) ಭಾಲ್ಕಿ (ಕರ್ನಾಟಕ) ಇಂದು ಈ ಸಂಸ್ಥೆಯ ಅಡಿಯಲ್ಲಿ ೨೪ ಶಾಲೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.
- ೨೦೦೩ ರಲ್ಲಿ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಸ್ಥಾಪಿಸಿದ ಹಿರೇಮಠ ಸಂಸ್ಥಾನ ವಿದ್ಯಾಪೀಠ (ಟ್ರಸ್ಟ್) ಕಾಲಾಮುಂಗಿ (ಆಂಧ್ರಪ್ರದೇಶ) ಇಂದು ಈ ಸಂಸ್ಥೆಯ ಅಡಿಯಲ್ಲಿ ಎರಡು ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

ಹೀಗೆ ಒಟ್ಟು ೧೭ ಪ್ರಾಥ್ಮಿಕ ಶಾಲೆಗಳು, ೧೦ ಪ್ರೌಢ ಶಾಲೆಗಳು, ೧೨ ಕಾಲೇಜುಗಳು, ೩ ಇತರೆ ಅಂಗ ಸಂಸ್ಥೆಗಳಲ್ಲಿ ಒಟ್ಟು ಹತ್ತು ಸಾವಿರ ವಿದ್ಯಾರ್ಥಿಗಳು ಎಂಟೂನೂರು ಜನ ಬೋಧಕರು ಮತ್ತು ಇನ್ನೂರು ಜನ ಬೋಧ್ಯೇತರರು ಇದ್ದಾರೆ. ಇದಲ್ಲದೆ ೧೯೩೬ ರಿಂದಲೇ ಬಡವ, ಅನಾಥ, ನಿರಾಶ್ರಿತ ಮಕ್ಕಳಿಗಾಗಿ ಪ್ರಸಾದ ನಿಲಯ ಆರಂಭಿಸಿ, ಉಚಿತ ಶಿಕ್ಷಣ, ವಸತಿ ಮತ್ತು ಪ್ರಸಾದ ಲಭ್ಯವಾಗುವಂತೆ ಶ್ರೀ ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯ ನಡೆಸಿಕೊಂಡು ಬರಲಾಗುತ್ತಿದೆ.

ಅಡಿಟಿಪ್ಪಣಿ

೧. ಪುಸ್ತಕ – ಚನ್ನಬಸವ ಕಲ್ಯಾಣ (ಸ್ಮರಣ ಸಂಚಿಕೆ) ವಿಷಯಃ ಭಾಲ್ಕಿಯ ಐತಿಹಾಸಿಕ ಸಾಂಸ್ಕೃತಿಕ ಪರಂಪರೆ ಬರೆದವರು ಡಾ. ವೈನಾಥ ಭಂಡೆ ಪುಟ (೧ ರಿಂದ ೬)

೨. ಪುಸ್ತಕ – ಚನ್ನಬಸವ ಕಲ್ಯಾಣ (ಸ್ಮರಣ ಸಂಚಿಕೆ) ವಿಷಯಃ ಭಾಲ್ಕಿ ಹಿರೇಮಠದ ಸಾಂಸ್ಕೃತಿಕ ಹಿರಿಮೆ. ಪುಟ (೧೨ ರಿಂದ ೧೪ರ ವರೆಗೆ)

೩. ಚನಬಸವಕಲ್ಯಾಣ ಪು.ಸಂ. ೧ ರಿಂದ ೬ ರವರೆಗೆ/೨೦೦೬

೪. ಚನಬಸವಕಲ್ಯಾಣ ಪು.ಸಂ. ೧೨ ರಿಂದ ೨೬ ರವರೆಗೆ/೨೦೦೬

೫. ಚನಬಸವಕಲ್ಯಾಣ ಪು.ಸಂ. ೩೩ ರಿಂದ ೩೭ ರವರೆಗೆ/೨೦೦೬

ಅಧ್ಯಾಯ-೪

ಪೂಜ್ಯ ಮ.ಘ.ಚ. ಶ್ರೀ ಬಸವಲಿಂಗ ಪಟ್ಟದ್ದೇವರ ಶಿವ ಜೀವನ

ಪೂಜ್ಯ ಮ.ಘ.ಚ. ಶ್ರೀ ಬಸವಲಿಂಗ ಪಟ್ಟದ್ದೇವರ ಶಿವ ಜೀವನ

ಜನನ :

"ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಾಯ್ತು
ಅಯ್ಯಾ ನಿಮ್ಮ ಶರಣರಿದ್ದ ಪುರದ ಕೈಲಾಸಪುರವಯ್ಯಾ ಅಯ್ಯಾ
ನಿಮ್ಮ ಶರಣರು ನಿಂದುದೆ ನಿವಾಸಮಯ್ಯಾ
ಚನ್ನಮಲ್ಲಿಕಾರ್ಜುನಯ್ಯಾ.
ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವಾಗಿ
ಅನು ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು".

–ಅಕ್ಕಮಹಾದೇವಿ

ಅಕ್ಕ ಮಹಾದೇವಿಯ ಈ ವಚನವು ಶರಣರು ಅಡಿಯಿಟ್ಟ ನೆಲದ ಮಹಿಮೆಯನ್ನು ಸಾರುತ್ತದೆ. ಬೀದರ ಜಿಲ್ಲೆಯ ಈ ಕಲ್ಯಾಣ ನಾಡಿನಲ್ಲಿ ಕಾಲದಿಂದ ಕಾಲಕ್ಕೆ ಮಹಾತ್ಮರು ಉದಯಿಸಿ ಜನರಿಗೆ ಸನ್ಮಾರ್ಗಗಾಮಿಗಳನ್ನಾಗಿ ಮಾಡಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಬಾಳಿದ ಅನೇಕ ಶಿವಶರಣರು. ಇದೇ ಭೂಮಿಯಲ್ಲಿ ಜನ್ಮವೆತ್ತಿ ಪಾವನಗೊಳಿಸಿದರು. ಸುಮಾರು ಹದಿನಾರನೆಯ ಶತಮಾನದಲ್ಲಿ ವೀರಸಂಗಯ್ಯ ಎಂಬ ಶರಣರು ಬೀದರಿನಲ್ಲಿ ಜನ್ಮವೆತ್ತಿ ಧರ್ಮಧ್ವಜವನ್ನು ಎತ್ತಿ ಹಿಡಿದು ಕಾಪಾಡಿದರು. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ನಾವದಗಿ ರೇವಪ್ಪಯ್ಯ ಮಹಾಶಿವಶರಣರು ಇಲ್ಲಿ ಅವತರಿಸಿ ಲಿಂಗವಂತರಿಗೆ ಸ್ವ ಧರ್ಮದ ಸವಿಯನ್ನು ಉಣಿಸಿದರು. ಆ ಮೇಲೆ ಹಾರಕೂಡದ ಚನ್ನ ಬಸವೇಶ್ವರರು ಬಂದರು. ಅವರ ನಂತರ ಬಂದ ಭಾಲ್ಕಿಯ ಚನ್ನಬಸವೇಶ್ವರರು ಜೀವ ಹಿಡಿದುಕೊಂಡಿದ್ದ ಕನ್ನಡ ನುಡಿಯನ್ನು ಮತ್ತೆ ಪ್ರಜ್ವಲಿಸುವಂತೆ ಮಾಡಿದರು. ಇವರ ಕರಸಂಜಾತರಾದ ಬಸವಲಿಂಗ ಪಟ್ಟದ್ದೇವರು, ಹಿರಿಯರು ಬಿಟ್ಟು ಹೋದ ಮಣಿಹವನ್ನೇ ಮುಂದುವರಿಸಿಕೊಂಡು ಬರುತ್ತಲಿದ್ದಾರೆ.

ಶ್ರೀಗಳ ಬಾಲ್ಯ ಜೀವನ :

ರಮಣಶ್ರೀ ಪ್ರಶಸ್ತಿ ಪುರಸ್ಕೃತರಾದ ಮ.ಘ.ಚ. ಬಸವಲಿಂಗಪಟ್ಟದ್ದೇವರು ಈಗಿನ ಆಂಧ್ರ ಪ್ರದೇಶದ ನಾರಾಯಣಖೇಡ ತಾಲೂಕಿನ ನಾಗೂರ (ಬಿ) ಎಂಬ ಗ್ರಾಮದಲ್ಲಿ ಶಿವಭಕ್ತ ಕುಟುಂಬದವರಾದ ಶರಣ ಶ್ರೀ ರಾಚಪ್ಪಾ, ಶರಣೆ ಭಾಗಿರಥಿ ಕಾಡೋದೆ ಈ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು. ಈ ಶರಣರ ಉದರದಲ್ಲಿ ಚೋಚ್ಚಿಲ ಮಗುವಾಗಿ ದಿವ್ಯಮೂರ್ತಿಗಳಾದ ಶ್ರೀಗಳು ದಿನಾಂಕ ೨೫-೮-೧೯೫೦ ರಲ್ಲಿ ಜನ್ಮತಾಳಿದರು. ಶ್ರೀಗಳ ಮೂಲ ಹೆಸರು ಶಿವರಾಜ, ಸಾತ್ವಿಕ ಗುಣವುಳ್ಳ ತಂದೆ-ತಾಯಿಯ ಒಡನಾಟದಲ್ಲಿ ಸಹಜವಾಗಿಯೇ ಇವರಿಗೆ ಒಳ್ಳೆಯ ಸಂಸ್ಕಾರ

ದೊರೆಯುವಂತಾಯಿತು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಶ್ರೀಗಳು ಬಾಲ್ಯದಿಂದಲೇ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಕಳಕಳಿ ಉಳ್ಳವರಾಗಿದ್ದರು. ತಮ್ಮ ಗ್ರಾಮದಲ್ಲಿ ತಂದೆಯವರ ಜೊತೆ ಧಾರ್ಮಿಕ ಕಾರ್ಯಕ್ರಮಗಳಾದ ದೇವಾಲಯಕ್ಕೆ ಹೋಗುವುದು, ಭಜನೆ ಮಾಡುವುದು, ಧ್ಯಾನ ಮಾಡುವುದು, ಪೂಜೆ ಮಾಡುವುದು, ಪ್ರವಚನ ಕೇಳುವುದು ಅವರ ಆಸಕ್ತಿಯಾಗಿತ್ತು.

ಅಭ್ಯಾಸ :

ನಾಗೂರಿನ ಪ್ರಾಥಮಿಕ ಶಾಲೆ ಮುಗಿದ ನಂತರ ಇವರ ಸಂಬಂಧಿಕರಾದ ಬಂಡೆಪ್ಪ ಪ್ಯಾಡೆ ಅವರಾದ ಇವರ ಆಶ್ರಯದಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿದರು. ಅವರ ಆಪ್ತೇಷ್ಟರಾದ ರಾಜಪ್ಪ ಮುದ್ದಾ ಹಾಗೂ ಗುರುಲಿಂಗಪ್ಪ ಘೂಳೆಯವರಿಬ್ಬರೂ ಕೂಡಿಕೊಂಡು ಇವರನ್ನು ಮುಂದಿನ ವಿದ್ಯಾರ್ಜನೆಗಾಗಿ ಭಾಲ್ಕಿ ಹಿರೇಮಠಕ್ಕೆ ಕರೆತಂದರು. ಚನ್ನಬಸವ ಪಟ್ಟದ್ದೇವರು ಇವರಿಗೆ ತಮ್ಮ ಹಾನಗಲ್ ಕುಮಾರೇಶ್ವರ ಪ್ರಸಾದ ನಿಲಯದಲ್ಲಿ ಆಶ್ರಯವನ್ನಿತ್ತರು. ಭಾಲ್ಕಿಯ ಚನ್ನಬಸವೇಶ್ವರ ಮಹಾವಿದ್ಯಾಲಯದಲ್ಲಿ ಬಿ.ಎ.ಪದವಿ ಪಡೆದರು. ಮುಂದೆ ಮಹಾರಾಷ್ಟ್ರದ ಕೊಲ್ಹಾಪುರ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಉತ್ತೀರ್ಣ ಹೊಂದಿದರು. ಬೆಂಗಳೂರಿನ ಬಸವ ಮಂಟಪದ ಸ್ವಾಮಿ ಲಿಂಗಾನಂದರ ದಿವ್ಯ ಜ್ಞಾನ ಮಹಾವಿದ್ಯಾಲಯದಲ್ಲಿ ಒಂದು ವರ್ಷ ತತ್ವಜ್ಞಾನದ ಶಿಕ್ಷಣ ಪಡೆದರು.

ದೀಕ್ಷೆ :

ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರಲ್ಲಿ ಎದ್ದು ಕಂಡುಬರುವ ಅಭೂತಪೂರ್ವ ತೇಜಸ್ಸಿಗೆ, ಕಣ್ಗಳ ಕಾಂತಿಗೆ, ಶಕ್ತಿಯುತವಾದ ವಾಣಿಗೆ ಅವರ ವ್ಯಕ್ತಿತ್ವದ ಒಂದು ಮುಖವಾದ ವೈರಾಗ್ಯವೆನ್ನಬಹುದು. ವೈರಾಗ್ಯವು ಜೀವನದಲ್ಲಿ ಮನುಷ್ಯನನ್ನು ಉಜ್ಜಿ, ಒರೆಹಚ್ಚಿ ಪರೀಕ್ಷಿಸುವ ಶಕ್ತಿ ಎಂದು ಹೇಳಬಹುದು. ಆಶನವ ಬಿಟ್ವಾಟ, ವ್ಯಸನವ ಮರೆದಾತ, ವಿರಾಗಿಲ್ಲ. ವೈರಾಗ್ಯವು ಪರಮಾತ್ಮನ ಒಲುಮೆಗೆ, ಸಮಾಜದ ಕಾರ್ಯಕ್ಕೆ ಇಂದ್ರೀಯ ಸುಖವನ್ನು ತಳ್ಳಿ, ನಾಲಗೆಯ ರುಚಿ ಮೆಟ್ಟಿ ಸ್ವಭಾವದಿಂದ ಇಂದ್ರಿಯಾತೀತ ಸಂಯಮವನ್ನು ವ್ಯಕ್ತಗೊಳಿಸುವ ಒಂದು ಮಹಾಶಕ್ತಿಯೆಂದು ಹೇಳಬಹುದು. ಇಂದ್ರಿಯ ನಿಗ್ರಹವೆಂಬುದು ಕೊರಗಿನ ಮೇಲೆ ನಡೆವ ಮಾರ್ಗವಾಗಿದೆ. ಮುಗ್ಗರಿಸುವವರೇ ಹೆಚ್ಚು. ಇಂತಿರುತ್ತಿರಲು ಶರಣ ಸಂಪ್ರದಾಯದಲ್ಲಿ, ಅಲ್ಲಮಪ್ರಭು, ಮಹಾದೇವಿಯಕ್ಕ, ಸಿದ್ಧರಾಮೇಶ್ವರರು ಮೊದಲುಗೊಂಡು, ನೂರೊಂದು ವಿರಕ್ತರು, ಅಲ್ಲದೆ ಬಾಲಲೀಲಾ ಮಹಂತ ಶಿವಯೋಗಿಗಳು, ಸರ್ಪಭೂಷಣರು, ನಿಜಗುಣರು ಮೊದಲಾದ ಮಹಾ ವಿದ್ವಾಂಸರು ಸ್ವಭಾವತಃ ವಿರಾಗಿಗಳೂ, ಆ ವಿರಾಗವನ್ನು ಭಕ್ತಿಗೆ ಸಮಾಜ ಸೇವೆಗೆ ಉಪಯೋಗಿಸಿವರು ಆಗಿದ್ದಾರೆ.

ಮಾನವನು ತನ್ನ ಮೂಲಭೂತ ಪ್ರವೃತ್ತಿಗಳನ್ನು ತಡೆಯುವುದು ಅತಿ ಕಠಿಣವೇ ಆದರೂ ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಸಹಜ ವಿರಕ್ತರು ತಮ್ಮ ಜೀವನವನ್ನು, ಅತ್ಯಂತ

ಉಪಯುಕ್ತವಾಗಿಸಿಕೊಂಡಿದ್ದಾರೆ. ಸನ್ಯಾಸಿ ಎಂಬುವನು ಹೇಗಿರುತ್ತಿದ್ದನೆಂಬುದನ್ನು ಕುರಿತಾದ ಮಹಾದೇವಿಯಕ್ಕಗಳ ಒಂದು ಸ್ವಾರಸ್ಯಮಯ ವಚನವನ್ನು ಇಲ್ಲಿ ಉದಾಹರಿಸಬಹುದು.

"ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ
ಅಸ್ತಮಾನದಿಂದ ಮೇಲೆ ಜಿತೇಂದ್ರಿಯಲಿಲ್ಲ
ವಿಧಿಯ ಮೀರುವ ಅಮರರಿಲ್ಲ
ಕ್ಷುಧೆ, ವಿಧಿಃ ವ್ಯಸನಕ್ಕಂಜಿ
ನಾ ನಿಮ್ಮ ಮರೆಹೊಕ್ಕು ಬದುಕಿದೆ, ಚೆನ್ನಮಲ್ಲಿಕಾರ್ಜುನ".

ಹಿರಿಯರೆಂಬುವರು ಮಧ್ಯಾಹ್ನದವರೆಗೆ, ಜಿತೇಂದ್ರಿಯರು ಅಸ್ತಮಾನ (ಸಾಯಂಕಾಲ) ದ ವರೆಗೆ ಮಾತ್ರ ಎಂಬ ಅತಿ ಕಠೋರ ಅಭಿಪ್ರಾಯವನ್ನು ಅಕ್ಕನು ಇಲ್ಲಿ ವ್ಯಕ್ತಪಡಿಸಿದ್ದಾಳೆ. ಅಕ್ಕನಂತಹ ವೀರವಿರಾಗಿಣಿಯೇ ಈ ಮಾತನ್ನು ಆಡಿರುವಾಗ ಸಾಮಾನ್ಯರ ಪಾಡೇನು ಎಂದು ಯಾರಿಗಾದರೂ ದಿಗ್ಭ್ರಮೆವುಂಗಾಗುತ್ತಿದೆ. ಹೊನ್ನು, ಹೆಣ್ಣು, ಮಣ್ಣುಗಳ, ಅಭಾವದ ಮೂಲಕ ವೈರಾಗ್ಯ ಬರುವುದೊಂದು ವಿಧವಾದರೆ ಬಾಲ್ಯದಿಂದಲೇ ಸಹಜ ವೈರಾಗ್ಯವನ್ನು ಶ್ರೀ ಬಸವಲಿಂಗ ಪಟ್ಟದ್ದೇವರಂತೆ, ಶ್ರೀ ಶಂಕರಾಚಾರ್ಯರಂತೆ, ಮಹಾದೇವಿಯಕ್ಕನವರಂತೆ ಪಡೆಯವುದು ಇನ್ನೊಂದು ವಿಧ. ಶ್ರೀ ಬಸವಲಿಂಗ ಪಟ್ಟದ್ದೇವರಂತ ಮಹಾಸ್ವಾಮಿಗಳು ಎರಡನೆಯ ವರ್ಗಕ್ಕೆ ಸೇರಿದವರು. ಗುರುಭಕ್ತಿಗೆ ಅವಕಾಶ ಮಾಡಿಕೊಳ್ಳುವುದಕ್ಕೆ ತಮ್ಮ ವೈರಾಗ್ಯವನ್ನು ಬಳಸಿಕೊಂಡರು. ಬ್ರಹ್ಮಚರ್ಯದ ಪಾಲನೆಯ ಬಲದಿಂದ ಬಂದ ತೇಜಸ್ಸು, ಅವರ ಮುಖದ ಮೇಲೆ ಯಾವ ಅಭಾವದ ಸೂಚನೆಯನ್ನು ತೋರತೊಡಗುತ್ತಿರಲಿಲ್ಲ. ಇದು ಅಲ್ಲದೆ, ಅವರು ಸ್ವಭಾವತಃ ವೈರಾಗ್ಯಶ್ರೀಯೆಂಬುದನ್ನು ಮನವರಿಕೆಮಾಡಿಕೊಡಲು ಹಲವಾರು ದೃಷ್ಟಾಂತವನ್ನು ಎತ್ತಿ ತೋರಿಸಬಹುದು.

ಹೀಗೆ ಪೂಜ್ಯ ಬಸವಲಿಂಗ ದೇವರ ಸನ್ನಡತೆ ಸದ್ಗುಣಗಳು ಪೂಜ್ಯ ಚನ್ನಬಸವ ಪಟ್ಟದ್ದೇವರನ್ನು ತುಂಬ ಆಕರ್ಷಿಸಿದವು. ಇವರಿಗೆ ೧೯೭೬ ರಲ್ಲಿ ಜಂಗಮ ದೀಕ್ಷೆಯನ್ನಿತ್ತರು. ೧೯೮೫ ರಲ್ಲಿ ಚನ್ನಬಸವ ಪಟ್ಟದ್ದೇವರು ಇವರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿದರು. ನಾಡಿನ ಖ್ಯಾತ ಸ್ವಾಮಿಗಳು ಆ ಸಂದರ್ಭದಲ್ಲಿ ಆಗಮಿಸಿದ್ದರು. ಪಟ್ಟಾಭಿಷೇಕದ ಸಂದರ್ಭದಲ್ಲಿ ಜನಸಾಗರವನ್ನುದ್ದೇಶಿ ಪೂಜ್ಯ ಚನ್ನಬಸವ ಪಟ್ಟದ್ದೇವರು ನುಡಿದ ಮಾತುಗಳು ಹೀಗಿವೆ. ಸದ್ಭಕ್ತರೇ, ಇಂದಿನವರೆಗೆ ನನ್ನ ಆಯುಷ್ಯದಲ್ಲಿ ಗಳಿಸಿದ ನನ್ನ ಅನುಷ್ಠಾನ ಶಕ್ತಿ ಎಲ್ಲವನ್ನೂ ಇವರಿಗೆ ಧಾರೆಯೆರೆದು ಕೊಡುತ್ತಿದ್ದೇನೆ. ನನ್ನಲ್ಲಿ ಮತ್ತು ಇವರಲ್ಲಿ ಯಾವ ಭೇದವಿಲ್ಲ. ಮುಂದೆ ನನ್ನನ್ನು ಕಾಣಬೇಕಾದರೆ ಬಸವಲಿಂಗ ದೇವರಲ್ಲಿ ಕಾಣಬೇಕು ಎಂದರು. ಇವರಿಬ್ಬರಲ್ಲಿ ಭೇದ ಕಾಣುವ ಜನರಿಗೆ ಮೇಲಿನ ಮಾತುಗಳು ಚಾಟಿ ಏಟಿನಂತಿವೆ ಎಂದು ಹೇಳಬಹುದಾಗಿದೆ. ಈ ನುಡಿಯನ್ನಾಲಿಸಿದ ಬಸವಲಿಂಗ ಪಟ್ಟದ್ದೇವರು ಶ್ರೀಗಳಿಗೆ ವಂದಿಸಿ ಹೀಗೆ ನುಡಿದರು. ನನ್ನ ತಂದೆಯ ಚರಣಗಳಿಗೆ ಹೂವು ತರುವೆನಲ್ಲದೆ ಹುಲ್ಲು ತಾರೆನು. ಚಾಚೂ ತಪ್ಪದೆ ಅವರ ಮಾರ್ಗದಲ್ಲಿಯೇ ನಡೆಯುತ್ತೇನೆ. ಎಂದು ಜನತೆಗೆ ಈ ಆಶ್ವಾಸನೆ ನೀಡಿದರು. ಅಂದಿನಿಂದ ನಿಷ್ಕಳಂಕವಾಗಿ ಜೀವನ ಸಾಗಿಸುತ್ತಿದ್ದಾರೆ.

ಶಿವಾನುಭವಗೋಷ್ಠಿ :

ಚನ್ನಬಸವಾಶ್ರಮದಲ್ಲಿ ಪ್ರತಿ ತಿಂಗಳ ಇಪ್ಪತ್ತೆರಡನೆಯ ದಿನಾಂಕದಂದು ಶರಣ ಸಂಗಮ ಕಾರ್ಯಕ್ರಮವಿಟ್ಟುಕೊಳ್ಳುತ್ತಾರೆ. ವಿಶಾಲವಾದ ಈ ಕ್ಷೇತ್ರದಲ್ಲಿ ಭಾಲ್ಕಿ ನಗರ ಹಾಗೂ ಸುತ್ತಲಿನ ಗ್ರಾಮಗಳ ಭಕ್ತರು ನೂರಾರು ಸಂಖ್ಯೆಯಲ್ಲಿ ಒಂದೆಡೆ ಸೇರುತ್ತಾರೆ. ಈ ಕಾರ್ಯಕ್ರಮಕ್ಕೂ ಕೂಡ ವಿದ್ವಾಂಸರನ್ನು ಸಂಗೀತಗಾರರನ್ನು ಬರಮಾಡಿಕೊಳ್ಳುತ್ತಾರೆ. ಬಂದವರೆಲ್ಲರಿಗೂ ಪ್ರಸಾದದ ವ್ಯವಸ್ಥೆ ಇರುತ್ತದೆ. ಇದುವರೆಗೆ ೮೩ ಶರಣ ಸಂಗಮ ಜರುಗಿವೆ. ಭಕ್ತಿಕಂಪಿತನಾದ ಶಿವನು ಕುಂಬಾರ ಗುಂಡಯ್ಯನ ಭಕ್ತಿಗೆ ಮಾರುಹೋಗಿ ಅವನೊಡನೆ ಕಣಿವನೆಂದು ಹರಿಹರ ಕವಿ ಬಣ್ಣಿಸಿದ್ದುಂಟು ! ಭಕ್ತಿಗೆ ಬೀಡಾದ ಭಾಲ್ಕಿಯಲ್ಲಿ ಮತ್ತೆ ಭಕ್ತಿಯ ಕಂಪನ್ನು ಬಸವಲಿಂಗ ಪಟ್ಟದ್ದೇವರು ಹರಡುತ್ತಾದ್ದಾರೆಂಬುದನ್ನು ಅವರ ಎಡೆಬಿಡದ ಕಾರ್ಯಕ್ರಮಗಳೇ ಸಾಕ್ಷಿಯಾಗಿವೆ[೧].

ಅಡಿಟಿಪ್ಪಣಿ

೧. ಬಸವ ಶಿಶು ಪು.ಸಂ. ೧೨/೨೦೦೨

೨. ಕನ್ನಡ ಜಂಗಮ ಪು.ಸಂ. ೬/೨೦೦೨

ಅಧ್ಯಾಯ-೫

ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರ ಸಾಧನೆಗಳು

ಅಧ್ಯಾಯ–೫

ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರ ಸಾಧನೆಗಳು

೧. ಸಾಮಾಜಿಕ ಸಾಧನೆಗಳು :

ಮನುಷ್ಯ ಸಂಘ ಜೀವಿ, ಒಬ್ಬಂಟಿಗನಾಗಿ ಕಾಡಿನಲ್ಲಿ ಬಾಳುವುದು ಅಸಾಧ್ಯ. ಸಮಾಜ ಮಧ್ಯ ಜೀವಿಸಲೇಬೇಕಾದ ಮಾನವನಿಗೆ ತನ್ನ ಹಿತ ಚಿಂತನೆಯೊಂದನ್ನೆ ಮಾಡಿದರೆ ಸಾಲದು ನೆರೆಹೊರೆಯವರು ಕೂಡ ಸುಃಖ ಶಾಂತಿಯಿಂದ ಬಾಳಬೇಕು. ತಾನು ಸಮಾಜದ ಅಂಗ ಎಂದು ತಿಳಿಯಬೇಕು. ಪ್ರಸ್ತುತ ಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ. ಮನುಷ್ಯ ಸ್ವಾರ್ಥ ಸಾಧನೆಗಾಗಿ ತನ್ನವರು, ಪರರ ಗೋಣು ಮುರಿಯುವ ಹೀನ ಕೃತ್ಯಕ್ಕೆ ಕೈ ಹಾಕುತ್ತಾನೆ. ಸಮಾಜದಲ್ಲಿ ಜಾತಿ ಭೇದಗಳು ದ್ವೇಷಾಸುಯೆಗಳು, ಲಂಚ, ಶಿಫಾರಸ್ಸುಗಳ ಅವ್ಯಾಹತವಾಗಿ ಸಾಗಿದೆ. ಇದಕ್ಕೆ ಕೊನೆಯಲ್ಲಿದೆ ? ಇದೆ, ಇದಕ್ಕೆ ಬಸವಲಿಂಗ ಪಟ್ಟದ್ದೇವರು ಸುರಿದ ಸೂಳ್ನುಡಿಗಳ ಪೀಯುಷಪಾನವೇ. ಸಿದ್ಧಾಷದಿ ಅವರ ಪ್ರವಚನದ ಮೂಲಕ ಸಾರಿದ ನೀತಿ ವ್ಯಕ್ತಿ ಸಮಾಜ ರಾಷ್ಟ್ರ ವಿಶ್ವಕ್ಕೆ ಸತ್ಯಥೆವನ್ನು ತೋರಿಸುವ ಕೈದೀಪಿಕೆ. ವಿಶ್ವಧರ್ಮದ ನೀತಿಗೆ ಕೈಪಿಡಿ Charity begins at home ಎಂಬಂತೆ ಉದ್ದಾರ ಕಾರ್ಯ ಉಪದೇಶ ಪಾಠ ಮನೆಯಿಂದಲೇ ಆರಂಭವಾಗಬೇಕು.

ಮಾನವನ ದಾರಿದ್ರ್ಯ ದೌರ್ಬಲ್ಯ ಅಧಃ ಪತನಕ್ಕೆ ಕಾರಣವೇನು ? ಜಗತ್ತಿನ ಅಶಾಂತಿ ಅಸೌಖ್ಯ ಅಸ್ಥಿರತೆಯ ರಹತ್ಯವೇನು ? ಯುದ್ಧದ ಕಾರ್ಮೋಡಗಳು ಭಯಂಕರವಾಗಿ ಕುಣಿಯುತ್ತಿರುವುದೆಂದರೆ ಇದರ ಗುಡ್ಡೇನು ? ಈಗಿನ ಸೂಕ್ಷ್ಮ ಪರಿಸ್ಥಿತಿಯಲ್ಲಿ ಈ ಬೃಹತ ಪ್ರಶ್ನೆಗಳು ನಮ್ಮೆಲ್ಲರ ಚಿತ್ತ ಧೈರ್ಯವನ್ನು ಕಲಹ ಹತ್ತಿವೆ ಇವುಗಳಿಗೆ ಸಂಕ್ಷಿಪ್ತ ಉತ್ತರ ನೈತಿಕ ಎ ುಟ್ಟದ ಅವನತಿ ಅಧ್ಯಾತ್ಮಿಕ ಶಕ್ತಿಯ ನೀತಿಲಾಹಿತ್ಯದಿಂದ ಜಗತ್ತಿನಳಿವು. ನೀತಿ ವರ್ಧನದಿಂದ ಜಗತ್ತಿನ ಉಳಿವು.

ಭಾಲ್ಕಿಯ ಪೂಜ್ಯ ಬಸವಲಿಂಗ ಪಟ್ಟದ್ದೇವರ ಸಮಾಜದಲ್ಲಿ ಎರಡು ಪಂಗಡಗಳಾಗುತ್ತವೆ. ಒಂದು ಭವಿಗಳ ಪಂಗಡ, ಎರಡನೆಯದು ಭಕ್ತರ ಪಂಗಡ. ಲಿಂಗಧಾರಿಗಳಾಗಿ ಭಕ್ತರಾದವರು ಭವಿಗಳಿಗಿಂತ ಮೇಲೆಂದು ವಚನಕಾರರು ಹೇಳುತ್ತಾರೆ. ಭವಿ ಎಂದರೆ ಹುಟ್ಟು ಸಾವುಗಳನ್ನು ಆದ್ದರಿಂದ ಮುಕ್ತಿಗೆ ಆಯೋಗ್ಯವನ್ನು ಎಂದು ತಾತ್ಪರ್ಯ.

ಸಮಾಜದ ಭದ್ರತೆಗಾಗಿ ತಳಹದಿಯಾಗಿ ಹಲವು ನೀತಿಗಳನ್ನು ಬಸವಲಿಂಗ ಪಟ್ಟದ್ದೇವರು ಉಪದೇಶಿಸಿದ್ದಾರೆ. ವ್ಯಕ್ತಿಯ ಕ್ಷೇಮಕ್ಕೂ ಸಮಾಜದ ಕ್ಷೇಮಕ್ಕೂ ದೇಶದ ಕ್ಷೇಮಕ್ಕೂ ಅವು ವಜ್ರಕವಚಗಳಂತಿದೆ. ಸಮಾಜದಲ್ಲಿ ಸ್ವಾತಂತ್ರ್ಯ, ಸರ್ವ, ಸಮಾನತೆ, ಪರಸ್ಪರ ಭಾತೃತ್ವಭಾವ ಇವು ಮೂಲಸ್ತಂಭಗಳಾಗಿವೆ. ಆದುದರಿಂದ ನೂತನ ಸಮಾಜದ ಭದ್ರತೆಗೆ ಪಂಚಾಚಾರಗಳೆಂಬ ಮತಧರ್ಮದ ಕಟ್ಟು ಪಾಡುಗಳನ್ನು ಬಸವಲಿಂಗಪಟ್ಟದ್ದೇವರು ಹೇಳಿದ್ದಾರೆ.

ಅಸ್ಪ್ರಶ್ಯತಾ ನಿವಾರಣೆ :

ಅಸ್ಪ್ರಶ್ಯತೆ ಒಂದು ಮಹಾ ಪಾಪ ಉಚ್ಚ ನೀಚವೆಂಬ ಭೇದಭಾವ ಬುದ್ಧಿಯ ಹಿರಿಯಪಾಪ. ಈ ಎರಡು ಮಹಾಪಾಪಗಳು ಭರತ ಭೂಮಿಗೆ ಅದೆಷ್ಟೊ ಕಾಲದಿಂದ ಬಡೆದುಕೊಂಡು ಬಂದಿವೆ. ಅಜ್ಞಾನ ದಾರಿದ್ರ್ಯಗಳ ಭವರೋಗವರಣ್ಯದಲ್ಲಿ ಅಸ್ಪ್ರಶ್ಯತೆಯೆಂಬುದು ಹುಟ್ಟು ಪಡೆದು ಅದರ ಕಹಿ ಫಲಗಳನ್ನು ಭಾರತ ದೇಶವು ಹೊಟ್ಟೆತುಂಬಿ ಹೊರ ಚಲ್ಲುವಷ್ಟು ಮಾಡಿದೆ. ಅಸ್ಪ್ರಶ್ಯತೆಯನ್ನು ನಿರ್ಮೂಲ ಮಾಡದಿದ್ದರೆ ಜನತೆಗೆ ಸುಖವಿಲ್ಲ. ನಾಡಿಗೆ ನೆಮ್ಮದಿಯಿಲ್ಲ. ಸತ್ಯಕ್ಕೆ ಧರ್ಮಕ್ಕೆ ಸಮಾಜಕ್ಕೆ ಸಮ್ಮತವಿಲ್ಲದೆ ಇವೆರಡು ಮಹಾ ಪಾಪ ಶಾಪಗಳನ್ನು ಬೇರು ಸಹಿತ ಕಿತ್ತುಹಾಕಲು ಮಹಾತ್ಮ ಬಸವಣ್ಣನವರು ತಮ್ಮ ಬಾಳಿನುದ್ದಕ್ಕೂ ಪತಿತ ಪಾವನರಾಗಿ ಲೋಕೈಕ ವೀರರಾಗಿ ನ್ಯಾಯನ ನಿಷ್ಠೂರ ಲೋಕ ವಿರೋಧಿಯಾಗಿ ಹೋರಾಡಿದರು. ಮಾನವ ಜೀವನದಿಂದ ದೈವಿ ಜೀವನಕ್ಕಾಗಿ ಪರಿತಪಿಸುವುದು ಮಾನವನ ಜನ್ಮಸಿದ್ಧಹಕ್ಕಾಗಿದೆ. ನಿಸರ್ಗ ಸಿದ್ಧವಾದ ಹಕ್ಕೆಂದೆ ಇಂದಿಗೆ ಎರಡು ನೂರು ವರ್ಷಗಳ ಹಿಂದೆಯೇ ಸಾರಿದರು. ಅಣ್ಣ ಬಸವಣ್ಣನವರು.

ಜಾತಿ, ಮತ, ಲಿಂಗ, ವರ್ಣಭೇದಗಳ ಬಂಧನಗಳಾಚೆ ಕಣ್ಣಿದ್ದು ಕುರುಡರಾದ ಮಾನವ ಜನಾಂಗವನ್ನು ಕೈಹಿಡಿದು ನಡೆಸುವುದಕ್ಕಾಗಿ ಭಾಲ್ಕಿಯ ಹಿರೇಮಠ ಎಂಬ ಮಹಾನ ಸಂಸ್ಥೆಯನ್ನು ಸ್ಥಾಪಿಸಿದರು. ಬಸವಲಿಂಗ ಪಟ್ಟದ್ದೇವರು.

ಶ್ರೀಗಳು ಜಾತಿಭೇದ ಎನ್ನಲಾರದೆ ಮಾನವರೆಲ್ಲರೂ ಒಂದು ಎಂದು ತಿಳಿದು ಅದರಲ್ಲಿ ವಚನದ ಸಾರವನ್ನು ಉಣಬಿಡಿಸಿ ಭಕ್ತಿಯ ಜ್ಞಾನವನ್ನು ಮೂಡಿಸಿ ಅವರ ಮನಗಳನ್ನು ಬೆಳಗುತ್ತಿದ್ದಾರೆ. ಮನೆ ಮನೆಗೆ ಹೋಗಿ ಲಿಂಗ ದೀಕ್ಷೆಯನ್ನು ಕೊಟ್ಟು ದಲಿತರ ಉದ್ದಾರ ಮಾಡುತ್ತಿದ್ದಾರೆ. ಅದಕ್ಕೆ ಈ ಜೀವಂತ ಘಟನೆ ಸಾಕ್ಷಿ ಎಂದು ಹೇಳಬಹುದು. ಒಂದು ಸಲ ಶ್ರೀಗಳು ಮಹಾರಾಷ್ಟ್ರದ ದೇಗಲೂರ ತಾಲೂಕಿನ ಕೇದಾರ ಕಮ್ಮಾ ಎಂಬ ಗ್ರಾಮಕ್ಕೆ ಹೋಗಿ ಇಷ್ಟಲಿಂಗ ದೀಕ್ಷೆಯನ್ನು ಕೊಟ್ಟರು. ನಂತರ ಊರಿನ ಹನುಮಾನ ಮಂದಿರದಲ್ಲಿ ಶ್ರೀಗರು ಆಸನರಾಗಿದ್ದರು. ಗುಡಿಯ ಹೊರಗಡೆ ದಲಿತರು ನಿಂತಿದರು. ಅದಕ್ಕೆ ಶ್ರೀಗಳು ಅವರನ್ನು ಹೇಳುತ್ತಾರೆ. ನೀವುಗಳು ಲಿಂಗ ದೀಕ್ಷೆಯನ್ನು ಗುರುಮಾರ್ಗವನ್ನು ಪಡೆದವರು, ನೀವು ಶಿವಶರಣರು ಗುಡಿಯೊಳಗೆ ಬನ್ನಿ ಎಂದು ಶ್ರೀಗಳೇ ಹೇಳುತ್ತಾರೆ. ಆದರೆ ಊರಿನ ಕೆಲವು ಜನರು ಗುಡಿಯೊಳಗೆ ದಲಿತರಿಗೆ ಪ್ರವೇಶ ನೀಡುವುದಿಲ್ಲ. ಆಗ ಶ್ರೀಗಳು ಪಟ್ಟು ಹಿಡಿಯುತ್ತಾರೆ. ದಲಿತರನ್ನು ಗುಡಿಯೊಳಗೆ ಪ್ರವೇಶ ಮಾಡಿದರೆ ಮಾತ್ರ ನಾನು ಹೋಗುವೆ ಇಲ್ಲದಿದ್ದರೆ ನಾನು ಇಲ್ಲಿಂದ ಹೋಗುವುದಿಲ್ಲಾ ಎನ್ನುತ್ತಾರೆ.

ಶ್ರೀಗಳ ಈ ದಿವ್ಯ ಮಾತನ್ನು ಕೇಳಿದ ಜನರು ದಿಗ್ಭ್ರಮೆಗೊಂಡರು. ಶ್ರೀಗಳ ಈ ಮಾತಿಗೆ ಒಪ್ಪಿಕೊಂಡು ದಲಿತರಿಗೆ ಗುಡಿಯೊಳಗೆ ಪ್ರವೇಶ ನೀಡಿದರು. ದಲಿತರು ಸಂತೋಷದಿಂದ ಶ್ರೀಗಳಿಗೆ ಮಾಲಾರ್ಪಣೆ ಮಾಡಿದರು. ಅಂದಿನಿಂದ ಇಂದಿನವರೆಗೆ ಕೇದಾರಕಮ್ಮಾರಲ್ಲಿ ದಲಿತರಿಗೆ ಮುಕ್ತ ಪ್ರವೇಶ ಸಿಕ್ಕಿತ್ತು. ಇದು ಶ್ರೀಗಳ ದಿವ್ಯ ಹೆಜ್ಜೆ ಎಂದೇ ಹೇಳಬಹುದು.

ಅಂತರ ಜಾತಿಯ ವಿವಾಹ :

ಬಸವಲಿಂಗ ಪಟ್ಟದ್ದೇವರು ಅಂತರಜಾತಿಯ ವಿವಾಹಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಅಲ್ಲದೆ ಅನೇಕ ಅಂತರಜಾತಿಯ ವಿವಾಹಗಳು ಮಾಡಿದ್ದಾರೆ. ೧೯೭೨ ರಲ್ಲಿ ಬೀದರಿನ ದಿವ್ಯ ಲಿಂಗಧಾರಿ ಶಿಕ್ಷಕರು ಸಮಗಾರರ ಹೆಣ್ಣು ಮಗಳೊಬ್ಬಳನ್ನು ಲಗ್ನವಾಗಬಯಸಿದಾಗ ಒಂದು ಸಮಸ್ಯೆ ಉದ್ಭವಿಸಿತ್ತು. ಅದು ಪೂಜ್ಯ ಅಪ್ಪಗಳ ಮುಂದೆ ಬಂದಿತು. ಆದರೆ ಅವರು ಅದನ್ನು ಸಮಸ್ಯೆಯೆಂದು ತಿಳಿಯದೆ ಆ ಸಮಗಾರರ ಹೆಣ್ಣು ಮಗಳಿಗೆ ಲಿಂಗಾಯತ ಧರ್ಮದ ದೀಕ್ಷೆಯನ್ನುಕೊಟ್ಟು ತಮ್ಮ ಸಮಕ್ಷಮದಲ್ಲಿಯ ವಿವಾಹ ಮಹೋತ್ಸವ ಅತ್ಯಂತ ವಿಜೃಂಭಣೆಯಿಂದ ಬೀದರ ನಗರದ ಬಸವ ಮಂಟಪದಲ್ಲಿ ನೆರವೇರಿಸಿಕೊಟ್ಟರು.

ಇದೇ ರೀತಿ ಮತ್ತೊಂದು ವಿವಾಹ ಬೀದರ ಜಿಲ್ಲೆಯ ಹುಮನಾಬಾದನಲ್ಲಿ ನಡೆಯಿತ್ತು. ಜಂಗಮರ ಹುಡುಗನೊಬ್ಬನು ಮುಸ್ಲಿಮರ ಹುಡುಗಿಯೊಂದಿಗೆ ಮದುವೆಯಾಗ ಬಯಸಿದಾಗ ಕನ್ಯೆಗೆ ಲಿಂಗದೀಕ್ಷೆಯ ಕೊಟ್ಟು ಹತ್ತಾರು ಸಾವಿರ ಜನರ ಸಮಕ್ಷಮದಲ್ಲಿ ವಿವಾಹ ಮಹೋತ್ಸವ ಪೂಜ್ಯ ಅಪ್ಪಗಳ ತಮ್ಮ ಸಮಕ್ಷಮದಲ್ಲಿ ನೆರವೇರಿಸಿದರು. ಕೊಂಬಲ್ಲಿ ಕೋಡುವಲ್ಲಿ ಕ ುಲೆನಂಸುವರು ಎಂಬ ಮಾತು ಸಾವಕಾಶವಾಗಿ ಶಿಥಿಲಗೊಳ್ಳುತ್ತಿದೆ ಎಂಬಂತೆ ನೋಡುಗರಿಗೆ ಭಾಸವಾಗುತ್ತಿತ್ತು.

ಅದೇ ರೀತಿ ಹರಳಯ್ಯನ ಸಮಾಜಕ್ಕೆ ಸಂಬಂಧಪಟ್ಟ ಡಾ. ಸಚ್ಚಿದಾನಂದ ವಾಘಮಾರೆ ಇವರ ವಿವಾಹವನ್ನು ಲಿಂಗಾಯತ ಧರ್ಮದ ದೀಕ್ಷೆ ಪಡೆದ ಕ್ರಿಶ್ಚಿಯನ್ ಹುಡುಗಿಯೊಡನೆ ಹೆಡಗಾಪುರದಲ್ಲಿ ಅತ್ಯಂತ ಸಂಭ್ರಮದಿಂದ ಪೂಜ್ಯ ಅಪ್ಪಗಳ ಮಾರ್ಗದರ್ಶನದಲ್ಲಿ ನೆರವೇರಿಸಲಾಯಿತು. ಹೀಗೆ ಅನೇಕ ಅಂತರ ಜಾತಿ ವಿವಾಹಗಳು ಪೂಜ್ಯರ ಸಮ್ಮುಖದಲ್ಲಿ ನೆರವೇರಿವೆ. ಇನ್ನು ನೆರವೇರುತ್ತಲಿವೆ. ಉದಾಹರಣೆಗೆ ಕೆಲವು ಜೋಡಿಗಳ ಹೆಸರು ಕ ೂಡಾ ಈ ಕೆಳಗಿನಂತೆ ಕೊಡಲಾಗಿದೆ.

ಕ್ರ.ಸಂ.	ವಧು	ವರ
೧.	ಶಾರದಾ (ಲಿಂಗಾಯತ)	ನವಲಿಂಗ (ಮುಸ್ಲಿ ಹೆಸರು ಬದಲಾಯಿಸಿದ)
೨.	ಪರಮೇಶ್ವರಿ (ಕ್ಷತ್ರಿಯ)	ಗುರುಪಾದೇಶ (ಲಿಂಗಾಯತ)

ಅದೇ ರೀತಿಯ ಬಸವಲಿಂಗ ಪಟ್ಟದೇವರ ಅನೇಕ ಸಲ ಸಾಮೂಹಿಕ ಉಚಿತ ವಿವಾಹಗಳು ಮಾಡಿಸಿದರೆ ಪ್ರತಿ ತಿಂಗಳು ನಡೆಯುವ ಶಿವಾನುಭವಗೋಷ್ಠಿ ಮತ್ತು ಶರಣ ಸಂಗಮ ಕಾರ್ಯಕ್ರಮಗಳಲ್ಲಿ ಮತ್ತು ಪ್ರತಿ ವರ್ಷ ನಡೆಯುವ ಸ್ಮರಣೋತ್ಸವ (ಪೂಜ್ಯ ಅಪ್ಪಗಳ) ಸಮಾರಂಭದಲ್ಲಿ ಸಾಮೂಹಿಕ ಉಚಿತ ವಿವಾಹಗಳು ನೆರವೇರಲು ವೇದಿಕೆ ಕಲ್ಪಿಸಲಾಗಿದೆ. ಜಾತಿ ಮತ ಪಂಥ ಭೇದವಿಲ್ಲದೆ ಸಮಾಜದ ಎಲ್ಲರೂ ಈ ಸಾಮೂಹಿಕ ಉಚಿತ ವಿವಾಹ ವೇದಿಕೆ ಬಳಸಿಕೊಳ್ಳಬಹುದಾಗಿದೆ. ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ. ವಧು ವರರಿಗೆ ಉಚಿತವಾಗಿ ತಾಳಿ ಕಾಲುಂಗರ, ಹೊದಿಕೆಗಳನ್ನು ನೀಡಲಾಗುತ್ತದೆ. ನೆರೆಯ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ರಾಜ್ಯಗಳ ಗ್ರಾಮಗಳಿಂದ ವಧುವರರು ಹೆಚ್ಚಾಗಿ ಈ ವೇದಿಕೆಯ ಪ್ರಯೋಜನ ಪಡೆಯುತ್ತಿದ್ದಾರೆ. ಈ ವೇದಿಕೆಯಲ್ಲಿ ವಿವಾಹವಾದ ವಧು ವರರ ಕೆಲವು ಹೆಸರುಗಳು ಕೆಳಗೆ ನಮೂದಿಸಲಾಗಿದೆ.

ಉದಾ:

ಕ್ರ.ಸಂ.	ವರ	ವಧು
೦೧.	ಪಂಚಾಗೌಡ ಬೆಮರಾ (ಆಂಧ್ರ)	ಅನೀತಾ ಅಭ್ಯಂದಾ
೦೨.	ರವೀಂದ್ರ ಗೌಡರು (ಆಂಧ್ರ)	ಶಿವದಾನಾ ಗಾರುಂಡ
೦೩.	ಮನೋಜಕುಮಾರ ಬೊಳೆಗಾಂವ (ಮಹಾರಾಷ್ಟ್ರ)	ಮಹಾದೇವಿ ಜೈನಾಪುರ (ಮಹಾರಾಷ್ಟ್ರ)
೦೪.	ಗೋವಿಂದ ಕಾಳಗಾವ (ಮಹಾರಾಷ್ಟ್ರ)	ಅನುಸಯಾ

ಸ್ತ್ರೀಯರ ಸ್ಥಾನಮಾನ :

೧೨ ನೇ ಶತಮಾನದಲ್ಲಿ ಬರುವ ಸ್ತ್ರೀಯರು ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದರು. ಹಿಂದೆಂದೂ ಸಿಗದ ಸ್ತ್ರೀಂ ಸ್ವಾತಂತ್ರ್ಯವನ್ನು ಬಸವಾದಿ ಪ್ರಥಮರು ಕೊಟ್ಟು ಸ್ತ್ರೀಯರನ್ನು ಮುಂದಕ್ಕೆ ತಂದರು. ವೈದಿಕ ಸಂಪ್ರದಾಯದ ಧರ್ಮದ ಕದ್ದಳೆಗಳನ್ನು ಕಡಿದು ಹಾಕಿ ಶರಣ ಧರ್ಮದಲ್ಲಿ ತಮ್ಮದೆ ಆದ ಹೊಸ ಮಾರ್ಗವನ್ನು ಸ್ತ್ರೀಯರಿಗೆ ಹಾಕಿಕೊಟ್ಟರು ಶಿವಶರಣರು.

ಈ ಪರಂಪರೆಯಲ್ಲಿಯ ಅಥವಾ ಆ ಹಿನ್ನಲೆಯಲ್ಲಿ ಬರುವ ಬಸವಲಿಂಗ ಪಟ್ಟದ್ದೇವರು ಹೆಣ್ಣು ಮಾಯಯೆಂದು ಒಪ್ಪುವುದಿಲ್ಲ. ಹೆಣ್ಣು ಹೊನ್ನು ಎ ಣ್ಣು ಮಾಯಯೆಂದು ಸಾರಿದ ದುರುಳ ವೇದಾಂತಿಗಳು ಮಾತನ್ನು ಬಸವಲಿಂಗ ಪಟ್ಟದೇವರು ಅಲ್ಲಗಳೆದರು.

"ಹೊನ್ನು ಮಾಯಯೆಂಬುದು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆವೆಂಬುದು ಹೆಣ್ಣು ಮಾಯೆಯಲ್ಲ, ಮಣ್ಣು ಮಾಯವೆಂಬುದು ಮಣ್ಣು ಮಾಯೆಯಲ್ಲ ಮನದ ಮಂದಣ ಆಶೆಯೆ ಮಾಯೆಕಾಶಾ ಗುಹೇಶ್ವರಂ".[೭]

ಎಂದು ಅಲ್ಲಮಪ್ರಭುಗಳು ಅಪ್ಪಣೆಕೊಟ್ಟದ್ದಾರೆ. ಅದೇ ರೀತಿ

"ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಸಾಕ್ಷಾತ ಕಮಲಸಿದ್ಧ ಮಲ್ಲಿಕಾರ್ಜುನ" ಎನ್ನುವ ಶಿವಯೋಗಿ ಸಿದ್ಧರಾಮೇಶ್ವರರ ಮಾತಿನಂತೆ ಭಾಲ್ಕಿಯ ಪಟ್ಟದ್ದೇವರು ಹೆಣ್ಣು ಮಕ್ಕಳನ್ನು ಕಂಡು ಗೌರವಿಸುತ್ತಿದ್ದಾರೆ.

ಬಸವಾದಿ ಶರಣರ ಮುಂಜಾಗೃತೆಯಿಂದಾಗಿ ಶರಣ ಧರ್ಮದ ಸಾಂಸ್ಕೃತಿಕ ಜಾಗೃತಿಯಲ್ಲಿ ಆ ಕಾಲದಲ್ಲಿ ಲಿಂಗಭೇದವು ಕಾಣಿಸಿಕೊಳ್ಳಲಿಲ್ಲ. ಶತ ಶತಮಾನಗಳಿಂದ ಮೂಲೆಗುಂಪಾಗಿದ್ದ ಮಹಿಳೆಯರು ಶರಣರ ವಿಚಾರಗಳನ್ನರಿತು ಹೆಣ್ಣು ಗಂಡೆಂಬ ತಾರತಮ್ಯ ಮರೆತು ಅದರೊಂದಿಗೆ ಪಾಲ್ಗೊಂಡಿದ್ದು ಅತ್ಯಂತ ಮಹತ್ವದ ಸಂಗತಿ.

"ಮೂಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಒಂದಡೆ ಗಂಡೆಂಬುದು
ನಡುವೆ ಸುಳಿವ ಆತ್ಮನು ಹೆಣ್ಣು ಗಂಡು ಅಲ್ಲ
ರಾಮನಾಥ"[೮]

ಎಂಬ ದೇವರ ದಾಸಿಮಯ್ಯನವರ ವಚನ ಶಾರೀರಿಕ ಭೇದವನ್ನು ಖಂಡಿಸಿ ಮಂಡಿಸಿ ಅವಿನಾಶಿಯಾದ ಆತ್ಮಕ್ಕೆ ಭೇದವಿಲ್ಲ. ಇಬ್ಬರಲ್ಲಿ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ ಎಂದು ತಿಳಿಸುತ್ತದೆ.

ಮಹಿಳೆಗೆ ಸ್ವಾತಂತ್ರ್ಯವಿಲ್ಲ. ಅವಳು ದಲಿತಳು ಅಸ್ಪ್ರಶ್ಯಳೆಂಬ ಶಾಪಗಳಿಂದ ಮುಕ್ತಳಾಗಿ ಅವಳು ಪುರುಷನೊಂದಿಗೆ ಸರಿಸಮಾನವಾಗಿ ವರ್ತಿಸುವುದಕ್ಕೆ ಪ್ರೇರಣೆಯನ್ನಿತ್ತರು. ಬಸವಾದಿ ಶರಣರು ಅಂತಹೀ ಅಸಂಖ್ಯಾತ ದಿವ್ಯ ಶರಣೆಯರು ಮರ್ತ್ಯದಲ್ಲಿ ರೂಪುಗೊಂಡರು.

ಅಕ್ಕಮಹಾದೇವಿ, ಅಕ್ಕನಾಗಮ್ಮ, ಗಂಗಾಬಿಕೆ, ನೀಲಾಂಬಿಕೆ, ಲಿಂಗಮ್ಮ, ಲಕ್ಕಮ್ಮ, ಗಂಗಮ್ಮ, ಸೋಮಮ್ಮ, ವೀರಮ್ಮ, ಗೊರೆಂದ್ರ ರೆಮ್ಮವ್ವ, ಕಾಳಜ್ಜಿ, ರೇಚವ್ವ, ಗುಡ್ಡಜ್ಜಿ, ಸಂಕವ್ವ, ಸತ್ಯಕ್ಕ, ಮುತ್ತಾಯಕ, ಮಹಾದೇವಿಯಮ್ಮ, ಕಲ್ಯಾಣಮ್ಮ, ಬೆರತಾದೇವಿ, ಕೇತಲದೇವಿ ಮುಂತಾದ ಶಿವಶರಣೆಯರು ವಚನ ಸಾಹಿತ್ಯವನ್ನು ನಿರ್ಮಿಸುವಲ್ಲಿ ಅದೇ ಸಮಾನತೆಯನ್ನು ಅನುಭವ ಮಂಟಪದಲ್ಲಿ ಅನುಭವಿಸಿದ್ದಾರೆ. ಇವರೆಲ್ಲರೂ ರಚಿಸಿದ ವಚನಗಳು ಈಗಲೂ ಭಕ್ತರ ಹೃದಯವನ್ನು ಕಂಪನಗೊಳಿಸುತ್ತವೆ.

ಹೆಣ್ಣು ಮಕ್ಕಳ ಸರ್ವತೋಮುಖ ಸುಧಾರಣೆ ಮಾಡುವದೆ ಪೂಜ್ಯರಿಗೆ ಚಿಂತೆ. ಊರಿಗೊಂದು ಅಕ್ಕನ ಬಳಗ ಸ್ಥಾಪನೆ ಅಕ್ಕನಾಗಮ್ಮನ ಜಯಂತಿ ಆಚರಿಸಿದವರಲ್ಲಿ ಮೊದಲಿಗರು ತಮ್ಮ ಹಿರೇಮಠದಲ್ಲಿ ಹಾಗೂ ಅಲ್ಲಲ್ಲಿ ಹೆಣ್ಣು ಮಕ್ಕಳು ಸಂಗೀತ ಭಜನೆ ಕಲಿಯುವ ವ್ಯವಸ್ಥೆ ಮಾಡಿದ್ದಾರೆ. ತಮ್ಮ ಶಿಕ್ಷಣ ಸಂಸ್ಥೆಗಿಗೆ ಶಿವಶರಣೆಯರ ಹೆಸರಿಟ್ಟ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವಂತೆ ಮಾಡಿದ್ದಾರೆ.

ಹೆಣ್ಣು ಮಕ್ಕಳು ಒಳ್ಳೆಯ ಶಬ್ದ ಕೇಳದಂತೆ ತಪ್ಪಸನ್ನು ಮಾಡಿದ ಮಹಾ ವೈರಾಗ್ಯನಿಧಿ ಲಿಂಗಾಂಗಯೋಗಿ ಪೂಜ್ಯ ಚನ್ನಬಸವ ಪಟ್ಟದ್ದೇವರು ಮಠಗಳಿಗೆ ಬರುವ ಮಹಿಳೆಯರಲ್ಲಿ ಶಿವಶರಣೆಯರನ್ನು ಕಾಣುವ ಹಂಬಲ ತಾಯಿ ದೃಷ್ಟಿಯನ್ನು ಕಂಡು ತಾಯಿ ಎಂದು ಕರೆಯುತ್ತಿದ್ದರು. ಅಪಾರ ಕರುಣೆ ಮಮತೆ ಉಳ್ಳವರು ೧೦೪ ವಯಸ್ಸಿನವರೆಗೂ ಕಾಯಕ ಮಾಡುತ್ತಾ ಸಮಾನತೆಗಾಗಿ ದುಡಿದು ಬಸವ ಮಹಾ ಬೆಳಗಿನಲ್ಲಿ ಬಯಲಾದರು.

ಪೂಜ್ಯ ದೊಡ್ಡಪ್ಪಗಳ ಹೆಜ್ಜೆಯಲ್ಲಿಯೇ ಹೆಜ್ಜೆಯಿಡುತ್ತಾ ಬಸವತತ್ವವನ್ನು ಪ್ರಸಾರ ಮಾಡುತ್ತಿರುವವರು ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು.

"ಭಕ್ತನ ಮನೆ ಹೆಣ್ಣು ಹೊಳಗಡೆ ವಿವಾಹವಾಗಿ
ಕೊಡುವುದು ಭಕ್ತನ ಮನ ಮಣ್ಣಿನೊಳಗಡೆ
ಕೊಂಡು ಆಲಯನ ಮಾಡುವುದು.
ಭಕ್ತನ ಮನ ಹೊನ್ನಿಯೊಳಗಡೆ ಬಳಲಿ
ದೊರಕಿಸುವುದು ನೋಡೆ".

ಕಪಿಲ್ಯದ್ಧ ಮಲ್ಲಿಕಾರ್ಜುನ.

ಎಂಬ ವಚನದಲ್ಲಿ ಶಿವಯೋಗಿ ಸಿದ್ಧರಾಮೇಶ್ವರರು ಗಂಡು ಹೆಣ್ಣು ಪರಸ್ಪರ ಕೂಡಿದಾಗ ಮಾತ್ರ ಲಗ್ನವಾಗುವ ಪರಿ ಲೌಕಿಕವಾಗಿ ಗೋಚರವಾದರೂ. ಮನ ಹೆಣ್ಣಿನೊಳಗಾದಾಗಲೇ ವಿವಾಹವಾಗಿ ಕೂಡುವುದು ಎಂದು ಸೂಕ್ಷ್ಮವಾಗಿ ಅರಹುತ್ತಾರೆ.

ಬಸವಲಿಂಗ ಪಟ್ಟದೇವರು ಮನ ಹೆಣ್ಣಿನೊಳಗಾದೆ ಸದ್ಗುರು ಚನ್ನಬಸವ ಪಟ್ಟದೇವರ ಭಕ್ತಿಯೊಳಗಾಯಿತು. ಪೂಜ್ಯ ಶ್ರೀಗಳ ಯುಕ್ತಿಗೆ ಕಾಮಿಸಿದರು. ಕಾಮಿಸಿದ ಕಾಮಲೆ ಕೈಸಾರಿತ್ತು. ಚನ್ನ ಬಸವ ಪಟ್ಟದೇವರ ಕರುಣದಿಂದ.

"ಎಲ್ಲಿ ನೋಡಿದರಲ್ಲಿ ಮನೆವೆಳಸಿದಡೆ
ಅಣ್ಣೆ ನಿಮ್ಮೊಣೆ ನಿಮ್ಮ ಪ್ರಾಮಧಾರಣೆ
ಪರವಧುವನು ಮಹಾದೇವಿಯಂಬೆ
ಕೂಡಲಸಂಗಮದೇವಾ".[೧೦]

ಎಂಬ ಜಗಜ್ಯೋತಿ ಬಸವಣ್ಣನವರ ವಚನದಂತೆ ಕಂಡಕಂಡಲ್ಲಿ ಕ ಣ್ಣನ್ನು ಹರಿಯಬಿಟ್ಟರೆ ಮನಸ್ಸು ಚಂಚಲವಾಗಿ ವ್ಯಕ್ತಿತ್ವಕ್ಕೆ ಮಾರಕವಾಗುತ್ತವೆ. ಅಂತಹವನ್ನು ಮಾಡಲಾರೆನೆಂದ ಪರಮಾತ್ಮರ ಮೇಲೆ ಪಥದ ಥಯರ ಮೇಲೆ ಅಣೆಯಿಟ್ಟು ಹೇಳುತ್ತಾ, ಪರವಧುವನ್ನು ಮಹಾದೇವಿಯಂಬೆ. ಆ ರೀತಿ ಕಾಣುವುದಾಗಿ ಪ್ರತಿಜ್ಞೆ ಸ್ವೀಕರಿಸಿದವರು ಪೂಜ್ಯ ಬಸವಲಿಂಗ ಪಟ್ಟದ್ದೇವರು.

"ತಾಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯ ಸೇರಿತ್ತು
ತಾಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದು ಕಾರಣ.
ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಲಸಿಲಸಿದ್ದ ಮಲ್ಲಿಕಾರ್ಜುನ ನೋಡಾ".[೧೧]

ಎಂಬ ವಚನದಲ್ಲಿ ಸಿದ್ಧರಾಮೇಶ್ವರರು ತಿಳಿಸಿದಂತೆ ಪೂಜ್ಯ ಬಸವಲಿಂಗ ಪಟ್ಟದ್ದೇವರು ಹೆಣ್ಣಿನಲ್ಲಿ ಅಖಂಡತ್ವವನ್ನು ಕಂಡಿದ್ದಾರೆ. ಪ್ರತ್ಯಕ್ಷ ದೇವರೆಂದು ಭಾವಿಸಿದ್ದಾರೆ. ಪೂಜ್ಯ ಬಸವಲಿಂಗ ಪಟ್ಟದ್ದೇವರು ಬಡ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ಮತ್ತು ಪ್ರಸಾದ ಒದಗಿಸುತ್ತಿದ್ದಾರೆ. ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡುವರು. ಎಷ್ಟೋ ಸಂಸಾರ ದಾಂಪತ್ಯ ಜೀವನ ವಿರಸವಾದಾಗ ಮಹಿಳೆಯರಿಗೆ ಹೆತ್ತ ತಂದೆಯಂತೆ ತಿಳಿಯಾಗಿ ತಿಳಿಸಿ ಒಂದಾಗಿ ಮಾಡಿದ್ದಾರೆ. ದಾಂಪತ್ಯದಲ್ಲಿ ಸಾಮರಸ್ಯ ಮುಖ್ಯವೆಂದು ಒತ್ತಿ ಹೇಳಿದ್ದಾರೆ. ಬಡ ಮತ್ತು ಅನಾಥ ಯುವತಿಯರನ್ನು ಉಚಿತವಾಗಿ ಮದುವೆ ಮಾಡಿರುತ್ತಾರೆ.

ವಿಧವೆಯರಿಗೆ ಮನೆಯನ್ನು ತೊರದು ಬಂದ ಮಹಿಳೆಯರಿಗೆ ಗುರುಕಲದಲ್ಲಿ ಕಾಯಕ ಕೊಟ್ಟು ನೆಮ್ಮದಿಯಾಗಿ ಬಾಳುವಂತೆ ವ್ಯವಸ್ಥೆ ಮಾಡಿರುವುದು ನೋಡಿದರೆ ಮಹಿಳೆಯರ ಬಗ್ಗೆ ಇದ್ದ ಕಾಳಜಿ ಎತ್ತಿ ತೋರುತ್ತದೆ.

ಒಟ್ಟಾರೆ ಮಹಿಳೆಯರನ್ನು ಪೂಜ್ಯ ಭಾವನೆಯಿಂದ ಕಾಣುವರು ನಮ್ಮ ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ್ದೇವರು.

ನರರೂಪಿಯನ್ನು ಭಕ್ತರೂಪಿಯನ್ನಾಗಿಸಿದ ಶ್ರೀಗಳು :

ಒಂದು ಸಲ "ಕುನಮಾರಪಳ್ಳಿ" ಎಂಬ ಗ್ರಾಮದಲ್ಲಿ ಘಾಳೆಪ್ಪಾ ಎಂಬ ವ್ಯಕ್ತಿಯಿದ್ದ. ಅವನು ಎಲ್ಲಾ ಕೆಟ್ಟ ಗುಣಗಳನ್ನು ಅಳವಡಿಸಿಕೊಂಡಿದ್ದನು. ಅನೇಕ ಚಟಗಳಿಗೆ ಬಲಿಯಾದನು. ಜುಜಾಡುವುದು ಸರಾಯಿ ಕೂಡಿಯುವುದು ಇವನ ಕೆಟ್ಟ ಚಟಗಳು. ಮುಂದೆ ಇಬ್ಬರು ಅಪ್ಪಾಜಿಯವರ ಸೇವೆಯಲ್ಲಿ ನಿರತವಾಗಿದ್ದರಿಂದ ಆ ವ್ಯಕ್ತಿಯಲ್ಲಿದ ದುಶ್ಚಟಗಳು ಸ್ವಲ್ಪ ಸ್ವಲ್ಪ ಮಾಯವಾಗತೊಡಗಿದವು. ನಂತರ ಮುಂದೆ ಘಾಳೆಪ್ಪಾ ಅಪ್ಪಾಜಿಯವರ ಪಾದಕ್ಕೆ ಶರಣಾದ.

ಹೀಗೆ ಶ್ರೀಗಳ ಪ್ರಯತ್ನದಿಂದ ಹೀಗೆ ಅನೇಕ ಜನರಿಗೆ ದೀಕ್ಷೆಯನ್ನು ಕೊಟ್ಟು ಪರಿವರ್ತಿಸಿದ್ದಾರೆ. ಔರಾದ ತಾಲೂಕಿನ ಹೆಡಗಾಪುರ ಎಂಬ ಗ್ರಾಮದಲ್ಲಿ ಶ್ರೀಗಳು ಮಾಸಿಕ ಬಸವ ಜ್ಯೋತಿ ಕಾರ್ಯಕ್ರಮವನ್ನು ನೀಡುತ್ತಿದ್ದರು. ಅಂತಹ ಸಮಯದಲ್ಲಿ ಶ್ರೀಗಳು ಪ್ರವಚನ ಮಾಡುತ್ತಿದ್ದರು. ಆ ಪ್ರವಚನದಲ್ಲಿ ಬಸವಧರ್ಮವೂ ಎಲ್ಲರನ್ನು ಸಮಾನವೆಂದು ಬಗೆಯುತ್ತಾರೆ. ಯಾರು ಮೇಲೂ ಅಲ್ಲಾ ಯಾರು ಕೀಳಲ್ಲಾ. ಎಲ್ಲರೂ ಸಮಾನರು ಲಿಂಗ ದಿಕ್ಷೆ ಹೊಂದಿದವರು ಯಾರೆಯಾದಲ್ಲಿ ಅವರ ಮನೆಯಲ್ಲಿ ಪೂಜೆ ಜರುಗಿಸುತ್ತೇವೆ ಎಂದು ಸಾರಿದರು. ಆವಾಗ ಒಬ್ಬ ವ್ಯಕ್ತಿಯೂ ಎದ್ದು ನಿಂತು ಮುಂದಿನ ತಿಂಗಳು ದಲಿತರ ವ್ಯಕ್ತಿ ಮಾರುತಿ ಎಂಬುವರು ಇಟ್ಟುಕೊಳ್ಳಲಿ ಎಂದು ಪ್ರಸ್ತಾಪ ಮಾಡಿದರು. ಆವಾಗ ಶ್ರೀಗಳು ಹೇಳಿದರು ಭಿನ್ನಹ ನೀಡಲು ಅವರ ಮನೆಗೆ ಬರುತ್ತೇವೆ ಎಂದರು.

ನಂತರ ಶ್ರೀಗಳು ನುಡಿದಂತೆ ಹೆಡಗಾಪುರದ ದಲಿತರ ಓಣಿಯಲ್ಲಿ ಪೂಜೆ ಮತ್ತು ಪ್ರವಚನವನ್ನು ನುಡಿದರು. ಅಂದಿನಿಂದ ಆ ಓಣಿಯು ಪರಿಶುದ್ಧವಾಯಿತು ಎಂದು ಅಲ್ಲಿನ ಜನರು ಸಂತೋಷದಿಂದ ನುಡಿದರು. ಹೀಗೆ ಶ್ರೀಗಳು ಸಮಾಜದಲ್ಲಿ ಅನೇಕ ಸಾಮಾಜಿಕ ಕಾರ್ಯಗಳನ್ನು ಕೈಗೊಂಡು ಬಸವ ಧರ್ಮವನ್ನು ಬೆಳೆಸುತ್ತಿದ್ದಾರೆ.

ಶ್ರೀಗಳ ಗರಡಿಯಲ್ಲಿ ಬೆಳೆಯುತ್ತಿರುವ ಸಾವಿರ ಜನರ ಜೀವನ ಬಂಗಾರವಾಗಿದೆ :

ಶ್ರೀಗಳ ಉದರದಲ್ಲಿ ಶುದ್ಧ ಕಾರ್ಯನಿಷ್ಠೆ ಮತ್ತು ಪ್ರಮಾಣಿಕತೆಯಿಂದ ಸೇವೆ ಮಾಡುತ್ತಾ ಹಿರೇಮಠ ಸಂಸ್ಥಾನದಲ್ಲಿ ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದಾರೆ.

ಎಷ್ಟೊ ಕಡುಬಡ ವಿದ್ಯಾರ್ಥಿಗಳು ಶ್ರೀಗಳ ಆಶ್ರಯದಲ್ಲಿ ಬಂದು ಓದು ಬರಹ ಕಲಿತು ಶ್ರೀಗಳ ಕೃಪೆಯಿಂದ ಹಿರೇಮಠ ಸಂಸ್ಥಾನದಲ್ಲಿಯ ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. ಅಂಥವರಲ್ಲಿ ಹಿರೀಮಠ ಸಂಸ್ಥಾನದ ಆಡಳಿತಾಧಿಕಾರಿಯಾಗಿದ್ದ ಮೋಹನರೆಡ್ಡಿ ಅವರು ಮೊದಲು ನೆನಪಿಗೆ ಬರುತ್ತಾರೆ.

ಶ್ರೀ ಮೋಹನರೆಡ್ಡಿಯವರು ಮೂಲ, ಆಂಧ್ರದವರು ಮೇದಕ ಜಿಲ್ಲೆಯ ನಾರಾಯಣಖೇಡ ತಾಲೂಕಿನ ಬೆಮ್ರಾ ಎಂಬ ಹಳ್ಳಿಯವರೂ. ಬಡ ಕುಟುಂಬದಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೇ ಶಿಕ್ಷಣ ಪಡೆಯಲು ಮಠಕ್ಕೆ ಬಂದರು. ಮಠದ ಮತ್ತು ಶ್ರೀಗಳ ಸೇವೆಯನ್ನು ಮಾಡುತ್ತಾ ಶಿಕ್ಷಣವನ್ನು ಪಡೆದರು. ಪೂಜ್ಯ ಅಪ್ಪಾಜಿಯವರು ಇವರ ವ್ಯಕ್ತಿತ್ವಕ್ಕೆ ಮರುಳಾಗಿ ತಮ್ಮ ಮಠದ ಕೆಲಸ ಕಾರ್ಯಗಳಲ್ಲಿ ಇವರಿಗೆ ಅವಕಾಶ ಕೊಡಲು ಪ್ರಾರಂಭಿಸಿದರು. ಇವರ ಕಾರ್ಯವನ್ನು ಕಂಡು ಶ್ರೀಗಳು ತಮ್ಮ ಸಂಸ್ಥೆಯಲ್ಲಿಯೇ ಸೇವೆ ಮಾಡಲು ತಿಳಿಸಿದರು. ಶ್ರೀಗಳ ಅಪ್ಪಣೆಯಿಂದ ಇವರು ಸೇವೆಯನ್ನು ಪ್ರಾರಂಭಿಸಿದರು. ದಿನ ಕಳೆದಂತೆ ಸಂಸ್ಥೆಯ ಮೇಲಿನ ಕಾಯಕ ನಿಷ್ಠೆ ಹೆಚ್ಚುತ್ತಾ ಹೋಯಿತು. ಪ್ರಾಮಾಣಿಕವಾಗಿ ಮತ್ತು ಶಿಸ್ತಿನಿಂದ ಗುರು ಸೇವೆಯನ್ನು ಮಾಡುತ್ತಾ ಹಿರೇಮಠ ಸಂಸ್ಥಾನವು ಇಂದು ಹೆಮ್ಮರವಾಗಿ ಬೆಳೆಯುವದಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಶ್ರೀಗಳ ಒಲಮ ಕೂಡಾ ಮೋಹನ ರೆಡ್ಡಿಯವರ ಮೇಲೆ ಹೆಚ್ಚಾಗತೊಡಗಿತ್ತು. ಅವರು ಶ್ರೀಗಳ ಪ್ರೀತಿಯ ಮೆಚ್ಚುಗೆಗೆ ಪಾತ್ರರಾದರು. ಇವರ ಈ ನಿಸ್ವಾರ್ಥ ಸೇವೆ ಮತ್ತು ಭಾವನೆಯಿಂದ ಇವತ್ತು ಇವರು ಹಿರೇಮಠ ಸಂಸ್ಥಾನದ ಅಡಿಯಲ್ಲಿ ಬರುವ ಎಲ್ಲ ಶಾಲಾ ಕಾಲೇಜುಗಳ ಆಡಳಿತಾಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದಾರೆ.

ಹೀಗೆ ಶ್ರೀಗಳ ಆಶ್ರಯದಲ್ಲಿ ಇವರಷ್ಟೆ ಅಲ್ಲ ಯುವ ಪ್ರಶಸ್ತಿ ಪಡೆದಿರುವ ಗುರು ಬಸವ ಮೂಲಗೆಯವರ ಸೇವೆಯು ಕಮ್ಮಿ ಇಲ್ಲಾ. ಇವರು ಶ್ರೀಗಳ ಎಡಗೈಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂತಹ ಅನೇಕ ವಿದ್ಯಾರ್ಥಿಗಳಿಗೆ ಶ್ರೀಗಳು ತಮ್ಮಲ್ಲಿಯ ಓದು ಬರಹ ಕಲಿಸಿ ಸಮಾಜದಲ್ಲಿ ಅವರ ಪ್ರತಿಕ್ಷೆಯನ್ನು ಹೆಚ್ಚಿಸುವಂತೆ ಮಾಡಿದ್ದಾರೆ. ಶ್ರೀಗಳು ಇಂತಹ ಯುವಕರಿಗೆ ಆಶ್ರಯ ಕೊಟ್ಟು ಪ್ರೋತ್ಸಾಹ ನೀಡಿ ಸಮಯದಲ್ಲಿ ಅವರದೇ ಆದ ಒಂದು ಸ್ಥಾನ ಉಳಿಸಿಕೊಳ್ಳುವುದಕ್ಕೆ ಪ್ರೇರಣೆ ನೀಡುತ್ತಿದ್ದಾರೆ.

ಅನಾಥ ಮಕ್ಕಳಿಗೆ ಶ್ರೀಗಳ ಆಶ್ರಯ :

ಅನಾಥ ಮಕ್ಕಳಿಗೆ ತಂದೆ ತಾಯಿ ಬಂಧು ಬಳಗವಾಗಿ ಆಶ್ರಯ ನೀಡಿದ್ದಾರೆ. ಶ್ರೀಗಳಲ್ಲಿ ಮಮತೆಯ ವಾತ್ಸಲ್ಯ ತುಂಬಿ ಹರಿಯುತ್ತದೆ. ಇದಕ್ಕೆ ಗುರುಕುಲದಲ್ಲಿ ಬೆಳೆಯುತ್ತಿರುವ ಅನಾಥ ಮಕ್ಕಳೇ ಸಾಕ್ಷಿ ಎಂದು ಹೇಳಬಹುದು.

ಅನಾಥ ಮಕ್ಕಳು ಎಲ್ಲಿ ಇವೇ ಎಂದು ಸುದ್ಧಿ ತಿಳಿದ ಕ ೂಡಲೇ ಧಾವಿಸಿ ಆಶ್ರಮಕ್ಕೆ ಹೊತ್ತುಕೊಂಡು ಬರುತ್ತಾರೆ. ಶ್ರೀಗಳು ಎಂದು ಕೋರ್ಟಿನ ಮೆಟ್ಟಿಲು ಹತ್ತಿದವರಲ್ಲ. ಆದರೆ ಆ ಅನಾಥ ಮಕ್ಕಳಿಗಾಗಿ ಅವುಗಳಿಗೆ ಜೀವದಾನ ಕೊಡುವ ಸಲುವಾಗಿ ಸಮಾಜದಲ್ಲಿ ಉಳಿಸುವ ಸಲುವಾಗಿ ಕೋರ್ಟಿನ ಮೆಟ್ಟಿಲು ಹತ್ತಿ ಹೋರಾಡಿ ತೆಗೆದುಕೊಂಡು ಬಂದಿದ್ದಾರೆ.

ಚನ್ನಬಸವ ಪಟ್ಟದ್ದೇವರ ಅಖಂಡ ಆರ್ಶೀವಾದದಿಂದ ಬಸವಲಿಂಗ ಪಟ್ಟದ್ದೇವರ ಆಶ್ರಯದಲ್ಲಿ ಹೊಳೆಯುವ ನಕ್ಷತ್ರದಂತೆ ೭ ಅನಾಥ ಮಕ್ಕಳು ಚನ್ನಬಸವಪಟ್ಟದ್ದೇವರ ಗುರುಕುಲ ವಸತಿ ಶಾಲೆಯಲ್ಲಿ ನಗು ನಗುತ್ತಾ ಅರಳುತ್ತಿವೆ. ಅವುಗಳ ಪಾಲನೆ ಪೋಷಣೆ ಮಾಡುವುಕ್ಕೆ ಇಬ್ಬರು ದಾದಿಯರು ಇದ್ದಾರೆ. ಒಂದು ಕುಟುಂಬದಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳ ಪಾಲನೆ ಘೋಷಣೆ ಮಾಡುವುದರಲ್ಲಿ ಏರು

ಪಾರಾಗಬಹುದು. ಆದರೆ ಈ ಅನಾಥ ಮಕ್ಕಳ ಪಾಲನೆ ಪೋಷಣೆಯಲ್ಲಿ ಯಾವುದೇ ರೀತಿ ಏರುಪಾರಾಗುವುದಕ್ಕೆ ಸಾಧ್ಯವೇ ಇಲ್ಲ. ಮನೆಯವರಕ್ಕಿಂತಲೂ ಹೆಚ್ಚು ಜವಾಬ್ದಾರಿಯಿಂದ ನೋಡಿಕೊಳ್ಳುತ್ತಿದ್ದಾರೆ. ಕೇವಲ ಹೆತ್ತಿದ ಮಾತ್ರಕ್ಕೆ ಆಕೆ ತಾಯಿಯಾಗುವುದಿಲ್ಲ. ಮಕ್ಕಳ ಪಾಲನೆ ಪೋಷಣೆ ಮಾಡಿ ಆ ಮಕ್ಕಳನ್ನು ಮುನ್ನಡೆಸುವಳೇ ನಿಜವಾದ ತಾಯಿ ಅಂತಹ ಕಾರ್ಯವನ್ನು ಗುರುಕುಲದ ತಾಯಿಂದಿರು ಮಾಡುತ್ತಿದ್ದಾರೆ. ಸ್ವಂತ ಮಕ್ಕಳಗಿಂತ ಹೆಚ್ಚು ಪ್ರೀತಿಯನ್ನು ತೋರಿಸುತ್ತಾರೆ. ನಮಗೂ ನಿಮಗೂ ಕೇವಲ ಒಬ್ಬಳೆ ತಾಯಿಯಾದರೆ ಈ ಕಂದಮ್ಮಗಳಿಗೆ ಗುರುಕುಲದಲ್ಲಿ ಇರುವರೆಲ್ಲರು ತಂದೆ ತಾಯಿಗಳಾಗಿದ್ದಾರೆ. ಸಾವಿರ ಜನ ಸಹೋದರು ಸಹೋದರಿಯರು ಇದ್ದಾರೆ.

ಇದನೆಲ್ಲಾ ಗಮನಿಸಿದರೆ ನಿಜವಾಗಲು ಈ ಮಕ್ಕಳು ತುಂಬಾ ಧನ್ಯವಂತರು. ಈ ಮಕ್ಕಳನ್ನು ನೋಡಿದರೆ ರಾಕ್ಷಸರ ಮನಸ್ಸು ಕೂಡಾ ಕರಗಿ ಹೋಗುತ್ತದೆ. ಹೇಳಲು ಮಾತ್ರ ಇವರು ಅನಾಥ ಮಕ್ಕಳು ಆದರೆ ಇವರು ಶ್ರೀಗಳ ಅಧೀನದಲ್ಲಿ ಬೆಳೆಯುವ ಮುಂದಿನ ಸಮಾಜದ ರತ್ನಗಳು ಎಂದು ಹೇಳಬಹುದು. ಇಂಥಹ ಮಕ್ಕಳ ಕೆಲವು ಹೆಸರು ಇಲ್ಲಿ ತಿಳಿಸಲಾಗಿದೆ.

ಶ್ರೀಗಳು ಮಾಡಿರುವ ನಾಮಕರಣ ಬಸವ ಪ್ರಣವ, ಶರಣಾಂಜಲಿ, ದಿವ್ಯಾಂಜಲಿ, ಬಸವಾಂಜಲಿ, ಬಸವ ಪ್ರಣವ, ಬಸವ ಜಯಂತಿ ಮತ್ತು ಬಸವೇಶ.

ಈ ಎಲ್ಲಾ ಮಕ್ಕಳಿಗೆ ಶ್ರೀಗಳೆ ತಂದೆ ತಾಯಿ ಬಂಧು ಬಳಗ, ಈ ಮಕ್ಕಳನ್ನು ಕಂಡರೆ ಶ್ರೀಗಳಿಗೆ ಎಲ್ಲಿಲ್ಲಿದ ಪ್ರೀತಿ, ಆದ್ದರಿಂದ ಗುರುಕುಲಕ್ಕೆ ಬಂದಾಗ ಒಂದು ಸಲ ಈ ಎಲ್ಲಾ ಮಕ್ಕಳನ್ನು ಕಣ್ಣತುಂಬಾ ನೋಡಿ ಹೋಗುತ್ತಾರೆ. ಅಲ್ಲದೆ ಗುರುಕುಲಕ್ಕೆ ಬಂದ ಎಲ್ಲಾ ಅತಿಥಿಗಳು ಈ ಮಕ್ಕಳನ್ನು ಕರೆಸಿ ನೋಡಿ ಅವುಗಳೊಂದಿಗೆ ಮಾತನಾಡಿ ಅವರ ಪಾಲನೆ ಪೋಷಣೆಯ ಬಗ್ಗೆ ವಿವರಿಸಿ ಅವುಗಳಿಗೆ ಆರ್ಶೀವಾದ ನೀಡಿ ಹೋಗುತ್ತಾರೆ.

ಶ್ರೀಗಳು ಈ ಅನಾಥ ಮಕ್ಕಳಿಗೆ ದೇವರೆಂದೆ ತಿಳಿಯುತ್ತಿದ್ದರು. ಅದಕ್ಕೆ ಈ ಒಂದು ಉದಾಹರಣೆಯ ಸಾಕ್ಷಿ ಆಗಿದೆ.

ಒಂದು ಸಲ ಒಂದು ದಂಪತಿಗಳ ಮನೆಯಲ್ಲಿ ಒಂದು ಕಾರ್ಯಕ್ರಮವಿತ್ತು. ಅವರು ಗುರುಕುಲದಲ್ಲಿರುವ ಎಲ್ಲಾ ಸಿಬ್ಬಂಧಿ ವರ್ಗದವರಿಗೆ ಭೋಜನ ಕ ೂಟಕ್ಕೆ ಹೇಳಿದರು. ಅದರಂತೆ ಮುಖ್ಯವಾಗಿ ಆ ಕಾರ್ಯಕ್ರಮದ ಉದ್ದಾರಾಗಿ ಶ್ರೀಗಳಿಗೆ ಕರೆಯಿಸಿದರು. ಶ್ರೀಗಳು ಅವರ ಮನೆಯಲ್ಲಿ ಪೂಜೆಯನ್ನು ನೆರವೇರಿಸುತ್ತಿದ್ದರು. ಆದರೆ ಹೊರಗಡೆ ಮಕ್ಕಳ ಸಾಲಾಗಿ ಕುಳಿತು ಊಟ ಮಾಡುತ್ತಿದ್ದರು. ಗುರುಕುಲದ ಸಿಬ್ಬಂದಿ ವರ್ಗದವರು ಕೂಡಾ ಬಂದರು. ಮಕ್ಕಳು ಊಟ ಮಾಡುವುದನ್ನು ನೋಡಿ ಊಟ ಪ್ರಾರಂಭವಾಗಿದೆ ಎಂದು ತಿಳಿದುಕೊಂಡರು. ಆದರೆ ಒಳಗಡೆ ಮಾತ್ರ ಶ್ರೀಗಳು ಪೂಜೆ ಮಾಡುತ್ತಿದ್ದರು. ಇದನ್ನು ಕಂಡ ಒಬ್ಬರು ಶ್ರೀಗಳು ಒಳಗಡೆ ಪೂಜೆ ಮಾಡುತ್ತಿದ್ದಾರೆ. ಆದರೆ ಆಗಲ್ಲೆ ಈ ಮಕ್ಕಳು ಊಟ ಮಾಡುತ್ತಿದ್ದಾರಲ್ಲ ಎಂದರು. ಅದಕ್ಕೆ ಮಧುಕರ ಗಾಂವಕರ ಎಂಬುವವರು ಇನ್ನು ಊಟ ಪ್ರಾರಂಭವಾಗಿಲ್ಲ. ಪೂಜೆ ಆದ ನಂತರ ಪ್ರಾರಂಭವಾಗುತ್ತದೆ ಎಂದರು. ಅಷ್ಟರಲ್ಲಿಯ ಶ್ರೀಗಳು ಪೂಜೆಯನ್ನು ಮುಗಿಸಿ ಹೊರಗಡೆ ಬಂದು ನಗು ನಗುತ್ತಾ ಹೇಳಿದರು. ಆ ಮಕ್ಕಳೆ ನಿಜವಾದ ದೇವರು.

ಆ ಮಕ್ಕಳಲ್ಲಿಯೇ ದೇವರ ರೂಪ ಅಡಗಿದೆ. ಅವರ ೧೨ನೇ ಶತಮಾನದ ಮಹಾನ ಶಿವಶರಣರು ಎಂದು ಹಸನ್ಮುಖದಿಂದ ಶ್ರೀಗಳು ನುಡಿದರು. ಇವರ ಈ ಮಾತನ್ನು ಕೇಳಿ ಅಲ್ಲಿದ್ದವರೆಲ್ಲರೂ ಆಶ್ಚರ್ಯ ವ್ಯಕ್ತಪಡಿಸಿದರು.

ಹೀಗೆ ಶ್ರೀಗಳಿಗೆ ಮಕ್ಕಳೆಂದರೆ ಪಂಚ ಪ್ರಾಣ. ಅದರಲ್ಲಿ ಅನಾಥ ಮಕ್ಕಳೆಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಶ್ರೀಗಳು ಅವರ ಸಲುವಾಗಿ ಒಂದು ವಿಶೇಷ ಶಾಲೆಯನ್ನು ಸ್ಥಾಪಿಸಬೇಕೆಂಬ ಆಶೆಯನ್ನು ಹೊಂದಿದ್ದಾರೆ.

ಅಲ್ಲದೆ ಈ ಅನಾಥ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಗಳು ಆಗಲಾರದಂತೆ ನೋಡಿಕೊಂಡು ಹೋಗುವುದಕ್ಕೆ (ಅನಾಥ ಶಿಶುಗಳ ಕುಟೀರ) ಎಂಬುದು ಸ್ಥಾಪನೆ ಮಾಡಿದ್ದಾರೆ.

ಹೆತ್ತ ತಾಯಿಗೆ ಬೇಡವಾದ ಶಿಶುಗಳು ತಿಪ್ಪೆಯಲ್ಲಿ ನದಿಯ ತೀರದಲ್ಲಿ ಅಥವಾ ಇನ್ನಾವುದೇ ನಿರ್ಜನ ಪ್ರದೇಶದಲ್ಲಿ ಬಿಸಾಡಿ ಹೋದ ಘಟನೆಗಳು ಪತ್ರಿಕೆಗಳಲ್ಲಿ ಆಗಾಗ ನಮಗೆ ಓದಲಿಕ್ಕೆ ದೊರೆಯುತ್ತವೆ. ನಿಜವಾಗಿಯೂ ಇಂತಹ ಘಟನೆಗಳು ಹೃದಯಕ್ಕೆ ಆಘಾತವನ್ನುಂಟು ಮಾಡುತ್ತದೆ. ಯಾವುದೇ ಪಾಪ ಕಾರ್ಯ ಮಾಡದ ಶುದ್ಧವಾದ ಶಿಶು ನರಕ ಯಾತನೆ ಬೋಗಿ ಸುವಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಅನಾಥ ಶಿಶುಗಳ ಸಂರಕ್ಷಣೆ ಮಾಡಬೇಕೆನ್ನುವ ಸದುದ್ದೇಶದಿಂದ ಐದು ವರ್ಷಗಳು ಹಿಂದೆ ಈ ಕುಟೀರ ವಿದ್ಯಾಪೀಠದ ಆಡಿಯಲ್ಲಿ ಆರಂಭಿಸಲಾಯಿತು. ಈ ಕುಟೀರದಲ್ಲಿ ಈಗಾಗಲೇ ೭ ಅನಾಥ ಮಕ್ಕಳು ಪೋಶಿಸಲ್ಪಡುತ್ತಿವೆ. ಕಳೆದ ವರ್ಷ ಈ ಸಂಸ್ಥೆ ಅರ್ಹ ಸಂಸ್ಥೆ ಯಾಗಿ ನೊಂದಾವಣಿಯಾಗಿದೆ. ಇದರಿಂದ ಇಂತಹ ಅನಾಥ ಮಕ್ಕಳು ಅಥವಾ ಶಿಶುಗಳು ಎಲ್ಲಿಯೇ ಇರಲಿ ಈ ಸಂಸ್ಥೆಯಲ್ಲಿ ತಂದು ಬಿಡಲು ಪತ್ರಿಕೆಗಳಲ್ಲಿ ಜಾಹಿರಾತು ನೀಡಲಾಗಿದೆ. ಶ್ರೀ ಹಾನಗಾಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯಂ ಪಿ.ಟಿ.ಡಬ್ಲ್ಯೂ.

ಸಾಮಾನ್ಯ ಶಿಬಿರಗಳು :

ಇಂದು ಜನಸಾಮಾನ್ಯರಲ್ಲಿ ಅದರಲ್ಲೂ ವಿಶೇಷವಾಗಿ ಯುವಕರಲ್ಲಿ ದುಶ್ಚಟ ದ್ರವ್ಯಸನಗಳು ಹೆಚ್ಚಾಗಿ ಕಾಣಿಸುತ್ತಿವೆ. ಇಂತಹ ಚಟಗಳಿಗೆ ಜನರು ವ್ಯಕ್ತಿತ್ವಗತಾಗಿ ಹಾಳಾಗುವ ಜೊತೆಗೆ ಸಮಾಜ ಕೆಡಸಲು ಕಾರಣವಾಗುತ್ತವೆ. ಬೀಡಿ, ಸಿಗರೇಟ, ಗಾಂಜಾ, ಸೇದುವುದು ಗುಟಕಾ ತಿನ್ನುವುದು, ಡ್ರಕ್ಸ ಸೇವಿಸುವುದು, ಮಧ್ಯಪಾನ ಮಾಡುವುದು, ಅನೈತಿಕ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗುವುದು ಮುಂತಾದ ಇಂತಹ ದುರ್ನಡತೆಗಳಿಂದ ರಾಷ್ಟ್ರದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಇಂತಹ ಅನಾಹುತ ಆಗಲಾರದಂತೆ ತಡೆಯುವುದಕ್ಕೆ ದುಶ್ಚಟ ದುರ್ವ್ಯಸನಗಳಿಂದ ಮುಕ್ತರಗಲು ಜನಜಾಗೃತಿ ಶಿಬಿರಗಳನ್ನು ಹಳ್ಳಿ ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಅದಕ್ಕಾಗಿ ಇವರನ್ನು ಈ ಭಾಗದ ನಡೆದಾಡುವ ದೇವರೆಂದು ಕರೆಯುತ್ತವೆ.

ಅಂಗವಿಕಲದ ಮೇಲೆ ಶ್ರೀಗಳ ಕಾಳಜಿ :

ಶ್ರೀಗಳು ಅಂಗವಿಕಲರ ಮೇಲೆಯು ಎಲ್ಲಿಲ್ಲದ ಕಾಳಜಿಯನ್ನು ತೋರಿಸುತ್ತಾರೆ. ಶ್ರೀಗಳು ಹೇಳುತ್ತಾರೆ. ಅಂಗವಿಕಲರು ಕೇವಲ ದೇಹದಿಂದ ಮಾತ್ರ ಅಂಗವಿಕಲರು ಹೊರತು ಮನಸ್ಸಿನಿಂದಲ್ಲ ಅನ್ನುತ್ತಾರೆ. ಶ್ರೀಗಳ ಇಂತಹ ಅಂತರಾಳದ ಮಾತುಗಳಿಂದ ನಮ್ಮೆಲ್ಲರ ಮನಸ್ಸು ಕದಿಯುತ್ತಾರೆ. ಶ್ರೀಗಳು ಅಂಗವಿಕಲರ ಮೇಲೆ ಎಷ್ಟು ಒಲವು ತೋರಿಸುತ್ತಾರೆ. ಎನ್ನುವುದಕ್ಕೆ ಹಿರೇಮಠ ಸಂಸ್ಥಾನವೇ ಸಾಕ್ಷಿ. ಅಂಗವಿಕಲರಿಗೆ ಸಮಾಜದಲ್ಲಿ ಒಂದು ಬಾಳುವ ಸ್ಫೂರ್ತಿಯನ್ನು ನೀಡುತ್ತಾರೆ. ಉತ್ತಮ ಉದ್ಯೋಗ ಅವಕಾಶ ದೊರೆಯಬೇಕೆಂಬ ಯೋಜನೆಯನ್ನು ರೂಪಿಸಿದ್ದಾರೆ. ಅದಕ್ಕಾಗಿ ಸಂಗಮದಲ್ಲಿ ನಿಲಾಂಬಿಕಾ ಅಂಗವಿಕಲ ಮಹಿಳಾ ಸಂಗೀತ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಅಲ್ಲದೆ ಅನೇಕ ಅಂಗವಿಕಲ ವ್ಯಕ್ತಿಗಳಿಗೆ ಆಶ್ರಯ ನೀಡಿದ್ದಾರೆ. ಇದಕ್ಕೆ ಸಾಕ್ಷಿ ಶ್ರೀ ಶಿವಾನಂದ ಅವಡಿ ಗವಾಯಿಗಳು ಮತ್ತು ಲೋಕನಾಥ ಚಾಂಗಲೇರಾ ಇವರುಗಳು. ಇವರು ಅಂಥ ಸಂಗೀತಗಾರರಾಗಿದ್ದು ಕಣ್ಣು ಇದ್ದವರಿಗಿಂತಲೂ ಇಂಪಾಗಿ ಸುಂದರವಾಗಿ ಸಂಗೀತವನ್ನು ನುಡಿಸುತ್ತಾರೆ. ಅಲ್ಲದೆ ಸಂಗೀತದಲ್ಲಿ ಮಹತ್ತರವಾದ ಸಾಧನೆಯನ್ನು ಗೈದಿದ್ದಾರೆ. ಅಷ್ಟಲ್ಲದೆ ಸಂಗೀತದಲ್ಲಿ ಅನೇಕ ಪ್ರಶಸ್ತಿಯನ್ನು ಪಡೆದಿದ್ದಾರೆ.

ಶ್ರೀ ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯ :

ಕ್ರಿ.ಶ. ೧೯೩೬ ರಲ್ಲಿ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಬಡ ಮತ್ತು ಅನಾಥ ಮಕ್ಕಳಿಗಾಗಿ ಉಚಿತ ಶಿಕ್ಷಣ ಜೊತೆಗೆ ವಸತಿ ಮತ್ತು ಪ್ರಸಾದ ನಿಲಯ ಮೂರ್ಕಿಯಲ್ಲಿ ಆರಂಭಿಸಿದರು. ಇಪ್ಪತ್ತು ವಿದ್ಯಾರ್ಥಿಗಳಿಂದ ಆರಂಭವಾದ ಈ ಪ್ರಸಾದ ನಿಲಯ ಮುಂದೆ ಅನಿವಾರ್ಯ ಕಾರಣಗಳಿಂದ ಸಂಗಮಕ್ಕೆ ಅಲ್ಲಿಂದ ಭಾಲ್ಕಿಗೆ ವರ್ಗಾವಣೆಗೊಂಡಿತು. ಇಂದು ಭಾಲ್ಕಿಯಲ್ಲಿ ಈ ಪ್ರಸಾದ ನಿಲಯ ಅತ್ಯುತ್ತಮವಾಗಿ ನಡೆಸಿಕೊಂಡು ನಡೆದಿದ್ದಾರೆ. ಭಾಲ್ಕಿಯಲ್ಲಿ ನಡೆಸಿಕೊಂಡು ಬರಲಾಗುತ್ತಿರುವ ಈ ಪ್ರಸಾದ ನಿಲಯದಲ್ಲಿ ನಾಲ್ಕನೂರಕ್ಕೂ ಅಧಿಕವಾಗಿ ಬಡವ ಮತ್ತು ಅನಾಥ ಮಕ್ಕಳು ಉಚಿತ ಶಿಕ್ಷಣ ವಸತಿ ಮತ್ತು ಪ್ರಸಾದ ವ್ಯವಸ್ಥೆ ನೀಡುತ್ತಿದ್ದಾರೆ. ಸಮಾಜದ ಎಲ್ಲಾ ಮತ ಧರ್ಮಗಳ ವಿದ್ಯಾರ್ಥಿಗಳು ಈ ಪ್ರಸಾದ ನಿಲಯದ ಸೌಲಭ್ಯ ಪಡೆಯುತ್ತಿದ್ದಾರೆ. ಈ ವ್ಯವಸ್ಥೆ ಒಂದು ಸಾವಿರ ಮಕ್ಕಳಿಗೆ ದೊರೆಯಬೇಕೆಂಬ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುತ್ತಿದೆ.

ಡಾ. ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯ :

೨೦೦೭ ಆಗಸ್ಟ ತಿಂಗಳಲ್ಲಿ ಈ ಪ್ರಸಾದ ನಿಲಯ ಬೀದರ ಪಟ್ಟಣದಲ್ಲಿ ಸ್ಥಾಪಿಸಿ ಆರಂಭಿಸಲಾಯಿತು. ಹತ್ತನೇ ತರಗತಿ ಪಾಸಾಗಿ ಉನ್ನತ ಶಿಕ್ಷಣ ಪಡೆಯಬೇಕೆಂಬ ಹಂಬಲವುಳ್ಳ ಗ್ರಾಮಾಂತರ ಪ್ರದೇಶ ವಿದ್ಯಾರ್ಥಿಗಳ ಬೀದರ ನಗರದಲ್ಲಿ ಉಳಿದು ವಿದ್ಯಾಭ್ಯಾಸ ಮಾಡಲು ಈ ಪ್ರಸಾದ ನಿಲಯ ಆರಂಭಿಸಲಾಯಿತು. ಇಪ್ಪತ್ತೈದು ವಿದ್ಯಾರ್ಥಿಗಳಿಂದ ಈ ಪ್ರಸಾದ ನಿಲಯದಲ್ಲಿ ಇಂದು ಐವತ್ತಕ್ಕೂ ಮೀರಿ ಬಡ ವಿದ್ಯಾರ್ಥಿಗಳು ಇದ್ದಾರೆ. ಸಮಾಜದ ಎಲ್ಲಾ ಮತ ಧರ್ಮಗಳ ವಿದ್ಯಾರ್ಥಿಗಳು ಈ ಪ್ರಸಾದ ನಿಲಯದ ಸೌಲಭ್ಯ ಪಡೆಯುತ್ತಿದ್ದಾರೆ. ಈ ಪ್ರಸಾದ ನಿಲಯ ಸದ್ಯದಲ್ಲಿ ಬಾಡಿಗೆ ಕಟ್ಟಡದಲ್ಲಿ

ನಡೆಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಇದಕ್ಕಾಗಿಯೇ ಸ್ವಂತ ನಿವೇಶನ ಖರೀದಿಸಿ ಶಾಶ್ವತ ಕಟ್ಟಡ ನಿರ್ಮಾಣ ಮಾಡಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ ಮಾಡುವ ಯೋಜನೆ ರೂಪಿಸಲಾಗುತ್ತದೆ.

ಶ್ರೀ ಚನ್ನ ಬಸವೇಶ್ವರ ನಿತ್ಯ ದಾಸೋಹ :

ಕ್ರಿ.ಶ. ೧೯೨೪ ರಲ್ಲಿ ಪೂಜ್ಯ ಚನ್ನಬಸವ ಪಟ್ಟದೇವರು ಭಾಲ್ಕಿ ಹಿರೇಮಠ ಸಂಸ್ಥಾನದ ಉಪಾಧ್ಯಕ್ಷಕರಾಗಿ ಅಧಿಕಾರ ವಹಿಸಿಕೊಂಡರು. ಅವರ ಸತ್ಯ ಸಂಕಲ್ಪದಂತೆ ಈ ಮಠದಲ್ಲಿ ಹೋದ ಸ್ಥಳಗಳಿಂದ ಬರುವ ಸದ್ಭಕ್ತರಿಗೆ ನಿತ್ಯ ಪ್ರಸಾದ ದೊರೆಯುವಂತಾಗಲು ಈ ಯೋಜನೆ ರೂಪಿಸಲಾಗಿದೆ. ಆರಂಭದಲ್ಲಿ ಶ್ರೀ ಮಠಕ್ಕೆ ಭೇಟಿ ನೀಡುವ ಸದ್ಭಕ್ತರ ಸಂಖ್ಯೆ ಬಹಳ ಕಡಿಮೆ ಪ್ರಮಾಣದಲ್ಲಿ ಇತ್ತು. ಇಂದು ಈ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಇದಕ್ಕಾಗಿ ಹೆಚ್ಚಿನ ವ್ಯವಸ್ಥೆ ಮಾಡಲಾಗಿದೆ. ನಿತ್ಯವು ಈ ದಾಸೋಹದಲ್ಲಿ ಬೆಳಗಿನ ಉಪಹಾರ ಮಧ್ಯಾಹ್ನ ಮತ್ತು ಸಾಯಂಕಾಲ ಹೀಗೆ ಎರಡು ಸಲ ಪ್ರಸಾದ (ಊಟ) ವ್ಯವಸ್ಥೆ ನಿತ್ಯವೂ ಇರುತ್ತದೆ.

ಬೀದಿ ನಾಟಕ ಪ್ರದರ್ಶನ :

ದೃಷ್ಯ ಮಾಧ್ಯಮದಿಂದ ಜನರಿಗೆ ತಿಳಿಸಬೇಕಾದ ಸಂಗತಿಯನ್ನು ಪರಿಣಾಮಕಾರಿಯಾಗಿ ತಿಳಿಸಬಹುದಾಗಿದೆ. ಈ ಮಾಧ್ಯಮದಿಂದ ಜನಸಾಮಾನ್ಯರಲ್ಲಿ ತಿಳುವಳಿಕೆ ಬಹುಕಾಲ ಜ್ಞಾಪಕದಲ್ಲಿ ಉಳಿಯಲು ಸಾಧ್ಯವಾಗುತ್ತದೆ. ಅಂದಿನ ಸಮಾಜದಲ್ಲಿ ಅಸ್ಪ್ರುಶ್ಯತೆ ಏಡ್ಸ ರೋಗ ಮತ್ತು ಅನಕ್ಷರತೆ ಇಂತಹ ಮುಂತಾದ ಅಸ್ಪ್ರುಶ್ಯತೆಗಳು ಉಳಿದು ಬೆಳೆಯುತ್ತಿರುವುದು. ಖೇದಕರ ಸಂಗತಿಯೂಗಿದೆ. ಇವೆಲ್ಲ ಹೋಗಲಾಡಿಸಲು ಸರಕಾರ ವಿವಿಧ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಹವ್ಯಾಸಿ ನಾಟಕ ತಂಡಗಳು ಈ ದಿಶೆಯಲ್ಲಿ ಶ್ರಮಿಸುತ್ತಿವೆ. ಸರಕಾರದ ಯೋಜನೆಗಳು ಮತ್ತು ಹವ್ಯಾಸಿ ತಂಡಗಳಿಗೆ ಪ್ರೋತ್ಸಾಹ ನೀಡಿ ಅವುಗಳನ್ನು ಜನ ಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಬೀದಿ ನಾಟ ಪ್ರದರ್ಶನ ಏರ್ಪಡಿಸಲಾಗುತ್ತಿದೆ.

ಜಾಗೃತಿ ಜಾಥಾ :

ಇಂದು ಜನಸಾಮಾನ್ಯರಲ್ಲಿ ಅದರಲ್ಲೂ ವಿಶೇಷವಾಗಿ ಯುವಕರಲ್ಲಿ ದುಶ್ಚಟ ದುರ್ವ್ಯಸನಗಳು ಹೆಚ್ಚಾಗಿ ಕಾಣಿಸುತ್ತಿವೆ. ಇಂತಹ ಚಟಗಳಿಗೆ ತುತ್ತಾದ ಜನರು ವ್ಯಕ್ತಿಗತವಾಗಿ ಹಾಳಾಗುವ ಜೊತೆಗೆ ಸಮಾಜದ ಕೆಡಕಿಗೂ ಕಾರಣವಾಗುತ್ತವೆ. ಬೀಡಿ, ಸಿಗರೇಟ, ಗಾಂಜಾ ಸೇದುವುದು. ಗುಟಕಾ ತಿನ್ನುವುದು, ಡ್ರಗ್ಸ ಸೇವಿಸುವುದು. ಮಧ್ಯಪಾನ ಮಾಡುವುದು. ಅನೈತಿಕ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗುವುದು ಮುಂತಾದ ಇಂತಹ ದುರ್ನಡತೆಗಳಿಂದ ರಾಷ್ಟ್ರದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಇಂತಹ ದುರ್ಗತಿಗೆ ಜನಸಾಮಾನ್ಯರಲ್ಲಿ ಅಕ್ಷರ ಜ್ಞಾನದ ಕೊರತೆಯು ಪ್ರಮುಖ ಕಾರಣವಾಗಿದೆ. ಜನಸಾಮಾನ್ಯರಲ್ಲಿ ಸಾಕ್ಷರತೆ ಮೂಡಿಸಲು ಇಂತಹ ಜಾಗೃತಿ ಜಾಥಾಗಳನ್ನು ಹಳ್ಳಿ ಹಳ್ಳಿಗಳಲ್ಲಿ ಮತ್ತು ನಗರಗಳ ವಿವಿಧ ಬಡಾವಣೆಗಳಲ್ಲಿ ಏರ್ಪಡಿಸಲಾಗುತ್ತದೆ. ಈ ಜಾಗೃತಿ ಜಾಥಾದಲ್ಲಿ ಶಾಲಾ/ಕಾಲೇಜು ಮಕ್ಕಳು ಘೋಷಣೆಗಳನ್ನು ಕೂಗುತ್ತಾ ಸಾಲಾಗಿ ಸಾಗುತ್ತಾರೆ. ವಿವಿಧ ಬರವಣಿಗೆಗಳ ಪೋಸ್ಟರ್ ಪ್ರದರ್ಶನ ಮಾಡಲಾಗುತ್ತದೆ.

ನಿಸರ್ಗ ಚಿಕಿತ್ಸಾ ಶಿಬಿರ :

ನಮ್ಮ ಭಾರತ ದೇಶದಲ್ಲಿ ವೇದಕಾಲದಿಂದ ಯೋಗ ಮತ್ತು ನಿಸರ್ಗ ಚಿಕಿತ್ಸೆಗೆ ಬಹಳ ಪ್ರಧಾನ್ಯತೆ ಕೊಡಲಾಗಿದೆ. ಇತ್ತಿಚೆಗೆ ವೈದ್ಯಕೀಯ ಶಾಸ್ತ್ರದಲ್ಲಿ ಆವಿಷ್ಕಾರವಾಗಿ ರಸಾಯನಿಕ ಪದಾರ್ಥವುಳ್ಳ ಅನೇಕ ಔಷಧಿಗಳು ಜನರು ಬಳಸುತ್ತಿರುವುದು ಕಾಣುತ್ತೇವೆ. ಇಂತಹ ಔಷಧಿಗಳಿಂದ ಬಂದಿರುವ ರೋಗ ಗುಣಮುಖವಾದರೂ ಹೆಚ್ಚಿನ ದುಷ್ಪರಿಣಾಮಗಳು ಆಗುತ್ತಿರುವುದು ಕಾಣುತ್ತೇವೆ. ಇಂತಹ ಕಲುಷಿತ ಔಷಧಿಗಳನ್ನು ತ್ಯಜಿಸಿ ಮತ್ತೆ ನಾವು ಯೋಗ ಮತ್ತು ನಿಸರ್ಗ ಚಿಕಿತ್ಸೆಗೆ ಒತ್ತು ಕೊಡಬೇಕಾದ ಅವಶ್ಯಕತೆ ಇಂದು ಬಹಳವಾಗಿದೆ. ಈ ದಿಶೆಯಲ್ಲಿ ಜನಸಾಮಾನ್ಯರಲ್ಲಿ ರೋಗಗಳ ಬಗ್ಗೆ ಮತ್ತು ನಿಸರ್ಗ ಚಿಕಿತ್ಸಾ ಬಗ್ಗೆ ಅರಿವು ಮೂಡಿಸುವ ಶಿಬಿರಗಳು ಏರ್ಪಡಿಸಲಾಗುತ್ತಿವೆ.

ಪೂಜ್ಯ ಮಹಾಲಿಂಗ ದೇವರು, ಪೂಜ್ಯ ಬಸವಾನಂದ ಶರಣರು ಈ ನಿಟ್ಟನಲ್ಲಿ ವಿಶೇಷ ಪರಿಣಿತಿಯನ್ನು ಪಡೆದಿದ್ದಾರೆ. ಹಿರೇಮಠ ಸಂಸ್ಥಾನ ಆಶ್ರಯದಲ್ಲಿ ಇವರು ಹಳ್ಳಿ ಹಳ್ಳಿಹಳಲ್ಲಿ ಮತ್ತು ನಗರದ ವಿವಿಧ ಬಡಾವಣೆಗಳಲ್ಲಿ ಯೋಗ ಮತ್ತು ನಿಸರ್ಗ ಚಿಕಿತ್ಸಾ ಶಿಬಿರಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಪ್ರತಿ ಶಿಬಿರದಲ್ಲಿ ನಲವತ್ತರಿಂದ ಐವತ್ತು ಜನ ಮಹಿಳೆಯರು ಮತ್ತು ಪುರುಷರು ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದುಕೊಂಡು ರೋಗ ಮುಕ್ತರಾಗಿದ್ದಾರೆ. ಹಲವಾರು ಪ್ರಸಂಗಗಳಲ್ಲಿ ಪರಿಣಿತ ವೈದ್ಯರನ್ನು ಆಹ್ವಾನಿಸಿ ಅವರಿಂದ ವಿಶೇಷ ಆರೋಗ್ಯ ಕುರಿತಾಗಿ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ.

ಸಾಮಾನ್ಯ ಶಿಬಿರಗಳು :

ರಕ್ತದಾನ ಶಿಬಿರ :

ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದೇವರ ಜಯಂತೋತ್ಸವ ಮತ್ತು ಸ್ಮರಣೋತ್ಸವಗಳನ್ನು ಪ್ರತಿ ವರ್ಷ ಕ್ರಮವಾಗಿ ಡಿಸೆಂಬರ್ ೨೨ ಮತ್ತು ಏಪ್ರೀಲ ೨೨ ರಂದು ಹಿರೇಮಠ ಸಂಸ್ಥಾನ ಭಾಲ್ಕಿ ಆಶ್ರಯದಲ್ಲಿ ಬೃಹತ್ ಪ್ರಮಾಣದಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು. ಈ ಸಂದರ್ಭದಲ್ಲಿ ಆರೋಗ್ಯ ತಪಾಸಣೆ ಶಿಬಿರ ನೇತ್ರದಾನ ಶಿಬಿರ ಮತ್ತು ರಕ್ತದಾನ ಶಿಬಿರಗಳನ್ನು ಇಲ್ಲಿಯ ಡಾ. ಅಮೀತ ಅಷ್ಟೂರೆ ಮತ್ತು ಮಲ್ಲಮ್ಮ ವಾಲಿ ಅವರ ಮಾರ್ಗದರ್ಶನದಲ್ಲಿ ಪ್ರತಿ ವರ್ಷ ಹಮ್ಮಿಕೊಳ್ಳಲಾಗುತ್ತಿದೆ. ಕಣ್ಣಿನ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಕೂಡಾ ಏರ್ಪಡಿಸಲಾಗುತ್ತದೆ. ರಕ್ತದಾನ ಮತ್ತು ನೇತ್ರದಾನ ಬಗ್ಗೆ ಜನಸಾಮಾನ್ಯರಲ್ಲಿ ಸರಿಯಾದ ಮಾಹಿತಿಯನ್ನು ನೀಡಿ ಜಾಗೃತಿ ಮೂಡಿಸಲಾಗುತ್ತಿದೆ ಪ್ರತಿ ವರ್ಷ ಅನೇಕ ಯುವಕರು ರಕ್ತದಾನ ಮಾಡಿ ಅನೇಕರ ಜೀವ ಉಳಿಸುವಲ್ಲಿ ಸಹಕಾರಿಯಾಗಿದ್ದಾರೆ.

ಪರಿಸರ ಸಂರಕ್ಷಣೆ :

ಜನಸಂಖ್ಯೆಯ ಹೆಚ್ಚಳದಿಂದ ಇಂದು ವಿಶ್ವದಲ್ಲಿ ಪರಿಸರ ತ್ವರಿತ ಗತಿಯಲ್ಲಿ ಮಲಿನಗೊಳ್ಳುತ್ತಿದೆ. ಆದಕ್ಕಾಗಿ ವಿಶ್ವದಾದ್ಯಂತ ಸರಕಾರಗಳು ಸಂಘ ಸಂಸ್ಥೆಗಳು ಪರಿಸರ ಸಂರಕ್ಷಣೆಗಾಗಿ ಜನ ಸಾಮಾನ್ಯರಲ್ಲಿ

ಅರಿವು ಮೂಡಿಸುವ ಕಾರ್ಯಕ್ರಮಗಳು ರೂಪಿಸುತ್ತಿದ್ದಾರೆ. ಪರಿಸರ ಮಲಿನಗೊಂಡರೆ ಓಝೋನ್ ಪರದೆಯಲ್ಲಿ ರಂದ್ರಗಳು ಉಂಟಾಗುತ್ತಿವೆ. ಇದರಿಂದ ಸೂರ್ಯನ ಶಾಖಾ ಭೂಮಿಗೆ ಹೆಚ್ಚಿನ ಪ್ರಮಾಣದಲ್ಲಿ ಒಡಿವುದರಿಂದ ವಿಶ್ವದ ತಾಪಮಾನ ಹೆಚ್ಚುತ್ತಿದೆ. ಇಂತಹ ಅವಘಡಗಳನ್ನು ತಪ್ಪಿಸಬೇಕಾದರೆ ಪರಿಸರ ಸಂರಕ್ಷಣೆ ಬಗ್ಗೆ ಪ್ರತಿಯೊಬ್ಬರು ಕಾರ್ಯ ಮಾಡಬೇಕಾಗುತ್ತದೆ. ಶುದ್ಧವಾದ ಆಮ್ಲಜನಕ ಜನರಿಗೆ ಸಿಗಬೇಕಾದರೆ ಮತ್ತು ಸಕಾಲಿಕವಾಗಿ ಮಳೆ ಗಾಳಿ ಬರಬೇಕಾದರೆ ಹೆಚ್ಚಿನ ಪ್ರಮಾಣದಲ್ಲಿ ಗಿಡಗಳನ್ನು ಬೆಳೆಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹಿರೇಮಠ ಸಂಸ್ಥಾನ ಭಾಲ್ಕಿ ವತಿಯಿಂದ ನಡೆಯುತ್ತಿರುವ ಕಾರ್ಯಕ್ರಮಗಳಲ್ಲಿ ಜೂನ, ಜುಲೈ, ಆಗಸ್ಟ ತಿಂಗಳುಗಳಲ್ಲಿ ಸಸಿಗಳನ್ನು ಪ್ರತಿ ವರ್ಷ ಜನರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ಸಸಿಗಳ ಈ ವಿವರಣೆ ಕಾರ್ಯದಲ್ಲಿ ಸ್ಥಳೀಯ ತೋಟಗಾರಿಕೆ ಇಲಾಖೆ ಅರಣ್ಯ ಇಲಾಖೆ ಮತ್ತು ಸಂಘ ಸಂಸ್ಥೆಗಳು ಸಹಕರಿಸುತ್ತಿವೆ.

ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸ ಶಿಬಿರಗಳು :

ಇಂದಿನ ದಿನಮಾನಗಳಲ್ಲಿ ಪಠ್ಯಪುಸ್ತಕದ ಜ್ಞಾನವಷ್ಟೆ ಮಕ್ಕಳಿಗೆ ಸಾಕಾಗುವುದಿಲ್ಲ. ಪಠ್ಯೇತರ ಜ್ಞಾನ ಇಂದು ಮಕ್ಕಳಿಗೆ ನೀಡುವುದು ಬಹಳ ಅವಶ್ಯಕವೆನಿಸಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಸರ್ವಾಂಗೀಣ ವಿಕಾಸ ಹೊಂದಬೇಕಾಗಿದೆ. ಇಂತಹ ವ್ಯಕ್ತಿತ್ವ ವಿಕಾಸ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಮೂಡಿಸಲು ವಿಶೇಷ ತಜ್ಞರಿಂದ ಉಪನ್ಯಾಸಗಳನ್ನು ನೀಡುವುದು. (ಅವಕಾಶ ಸಿಕ್ಕಾಗ ಹಿರೇಮಠ ಸಂಸ್ಥಾನ ವಿದ್ಯಾಪೀಠದ ಅಡಿಯಲ್ಲಿರುವ ಎಲ್ಲಾ ಶಾಲೆಗಳಲ್ಲಿ ನಡೆಸಲಾಗುತ್ತಿದೆ). ಈ ಪರಿಣಾಮವಾಗಿ ವಿದ್ಯಾಪೀಠದ ವಿದ್ಯಾರ್ಥಿಗಳು ವೈದ್ಯಕೀಯ ಚಾರಿತ್ರಿಕ ಮತ್ತು ಕಂಪ್ಯೂಟರ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಪಡೆಯಲಿಕ್ಕೆ ಸಾಧ್ಯವಾಗಿದೆ. ಇನ್ನು ಈ ದಿಶೆಯಲ್ಲಿ "ಪರಿಣಾಮಕಾರಿ ಶಿಬಿರಗಳು" ಏರ್ಪಡಿಸುವ ಯೋಜನೆ ಇದೆ.

ಗೋವುಗಳ ಆಶ್ರಯದಾತ ಬಸವಲಿಂಗ ಪಟ್ಟದೇವರು :

ಗೋವುಗಳ ಪಾಲನೆ ಮತ್ತು ಪೋಷಣೆಗಾಗಿ ವಿಶೇಷ ಗೋಶಾಲೆ ಹಿರೇಮಠ ಸಂಸ್ಥಾನ ವಿದ್ಯಾಪೀಠ ಅಡಿಯಲ್ಲಿ ೧೦ ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಇದಕ್ಕಾಗಿ ಐವತ್ತು ಎಕರೆ ಕೃಷಿ ಭೂಮಿಯನ್ನು ನಿಗದಿಪಡಿಸಲಾಗಿದೆ. ಇಂದು ಈ ಗೋಶಾಲೆಯಲ್ಲಿ ಐವತ್ತಕ್ಕೂ ಮೀರಿ ಒಳ್ಳೆಯ ಆಕಳುಗಳು ಸಂರಕ್ಷಿಸಲಾಗುತ್ತಿದೆ. ಜೊತೆಗೆ ಬಂಜೆ ಆಕಳುಗಳನ್ನು ಗುರುತಿಸಿ ಅವುಗಳನ್ನು ಕಸಾಯ ಖಾನೆಗೆ ಕಳುಹಿಸುವ ಬದಲಾಗಿ ನಮ್ಮ ಗೋಶಾಲೆಯಲ್ಲಿ ರಕ್ಷಣೆ ನೀಡಲಾಗುತ್ತಿದೆ. ಗೋವಿನ ಸಗಣಿಯನ್ನು ಸಂಗ್ರಹಿಸಿ ಉತ್ತಮ ಗೊಬ್ಬರ ನಿರ್ಮಾಣ ಮಾಡಲಾಗುತ್ತಿದೆ. ವಿಭೂತಿ ತಯಾರಿಕೆಯಲ್ಲಿ ಸಗಣಿಯನ್ನು ಬಳಸಲಾಗುತ್ತಿದೆ. ವಸತಿ ಶಾಲೆಯ ಮಕ್ಕಳಿಗೆ ಉತ್ತಮ ಮುಟ್ಟದ ಹಾಲು ಮತ್ತು ಮಜ್ಜಿಗೆ ಪೂರೈಸಲಾಗುತ್ತಿದೆ.

ಅಬಲಿಯರ ಆಶ್ರಯದಾತಾ :

ಮನುಷ್ಯ ಜೀವನ ಅಸ್ಥಿರವಾಗಿದೆ. ಯಾರು ಯಾವಾಗ ಮರಣವನ್ನಪ್ಪುವರೂ ಯಾರು ಬಲ್ಲವರು? ಒಂದು ಕುಟುಂಬದ ಜವಾಬ್ದಾರಿ ಹೊತ್ತ ಗಂಡ ಅಕಾಲಿಕ ಮರಣವನ್ನಪ್ಪಿದಾಗ ಮಹಿಳೆಗೆ ವಿಧವೆ ಪಟ್ಟ ಬರುತ್ತದೆ. ಗಂಡ ಹೆಂಡರ ಮಧ್ಯೆ ವಿರಸ ಉಂಟಾಗಿ ಬೇರ್ಪಡುವ ಪ್ರಸಂಗಗಳು ಕಾಣುತ್ತೇವೆ. ಇಂತಹ ಸಂದರ್ಭದಲ್ಲಿ ಮಹಿಳೆ ಅಬಲೆಯಾಗುತ್ತಾಳೆ. ಇಂತಹ ವಿಧವೆ ವಿಚ್ಛೇದಿತ ಅಥವಾ ಅಬಲಾ ಸ್ತ್ರೀಯರಿಗೆ ಆಶ್ರಯ ದೊರೆತು ಅವರು ಸಮಾಜದಲ್ಲಿ ತಲೆ ಎತ್ತಿ ಬಾಳಲು ಸಂಘ ಸಂಸ್ಥೆಗಳು ಮಠಗಳು ಸರಕಾರದ ಜೊತೆಗೂಡಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಈ ದಿಸೆಯಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಅಡಿಯಲ್ಲಿ ಅಬಲೆ ಮಹಿಳೆಯರಿಗೆ ಆಶ್ರಯ ನೀಡುವ ಯೋಜನೆ ರೂಪಿಸಲಾಗಿದೆ. ಈಗಾಗಲೇ ಗುರುಕುಲ ವಸತಿ ಶಾಲೆಯಲ್ಲಿ ನಲವತ್ತಕ್ಕೂ ಹೆಚ್ಚು ವಿಧವೆಯರು, ವಿಚ್ಛೇದಿತರು, ಅಬಲ ಸ್ತ್ರೀಯರು ಆಶ್ರಯ ಪಡೆದಿದ್ದಾರೆ. ಅವರಿಗೆ ಬಹುತೇಕ ಅಡುಗೆ ಮನೆ ಕೆಲಸ ಮತ್ತು ಮಕ್ಕಳ ಪಾಲನೆ ಪೋಷಣೆ ಕಾಯಕ ನೀಡಲಾಗಿದೆ. ವಿದ್ಯಾವಂತ ಮಹಿಳೆರಿದ್ದರೆ ಅವರಿಗೆ ಶಿಕ್ಷಕಿಯಾಗಿ ನೇಮಕ ಮಾಡಿಕೊಳ್ಳಲಾಗಿದೆ. ಒಂದು ಸಂರಕ್ಷಿತ ಅಬಲೆಯರ ಆಶ್ರಯ ಗುರುಕುಲದಲ್ಲಿ ಕಾರ್ಯನಿರ್ವಹಿಸುತ್ತಿದೆ.

ವೃದ್ಧರ ಆಶ್ರಯದಾತಾ (ವೃದ್ಧಾಶ್ರಮ) :

ಸಮಾಜದಲ್ಲಿ ಸಂಭವಿಸುವ ಪ್ರತಿ ಒಂದು ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಬಸವಲಿಂಗ ಪಟ್ಟದೇವರು ಮುಂದುವರೆಯುತ್ತಿದ್ದಾರೆ. ಇಂದಿನ ಜನಜೀವನದಲ್ಲಿ ದಿನೇ ದಿನೇ ಕ್ಷಿಪ್ರ ಬದಲಾವಣೆ ಕಾಣಿಸುತ್ತಿವೆ. ಉದ್ಯೋಗ ಆಧಾರಿತ ಶಿಕ್ಷಣ ಪಡೆದವರಿಗೆ ಸ್ಥಳೀಯವಾಗಿ ಯಾವುದೇ ನಗರಗಳಿಗೆ ವಲಸೆ ಹೋಗುವ ಅನಿವಾರ್ಯತೆ ಇದೆ. ಇಂತಹ ಪರಿಸ್ಥಿತಿಯಲ್ಲಿ ವೃದ್ಧ ತಾಯಿ ತಂದೆಯರಿಗೆ ಊರಲ್ಲಿಯೇ ಬಿಟ್ಟು ಕೇವಲ ಹೆಂಡತಿ ಮಕ್ಕಳೊಂದಿಗೆ ಹೋಗುವ ಅನಿವಾರ್ಯತೆ ಇದೆ. ಈ ಕಾರಣದಿಂದ ವೃದ್ಧ ತಾಯಿ ತಂದೆಗಳಿಗೆ ನೋಡಿಕೊಳ್ಳಲು ಮಕ್ಕಳು ಇಲ್ಲದಂತಾಗಿದೆ. ಈ ಕಾರಣಕ್ಕಾಗಿ ಇಂದಿನ ದಿನ ಮಾನಗಳಲ್ಲಿ ವೃದ್ಧಾಶ್ರಮ ಅನಿವಾರ್ಯವಾದಂತಾಗಿದೆ.

ಈ ಅವಶ್ಯಕತೆಯನ್ನು ಮನಗಂಡು ಹಿರೇಮಠ ಸಂಸ್ಥಾನ ಭಾಲ್ಕಿ ಆಶ್ರಮದಲ್ಲಿ ಒಂದು ಸುಸಜ್ಜಿತ ವೃದ್ಧಾಶ್ರಮ ಶೀಘ್ರದಲ್ಲಿ ಆರಂಭಿಸುವ ಯೋಜನೆ ರೂಪಿಸಲಾಗುತ್ತಿದೆ. ಈಗಾಗಲೇ ಅನೇಕ ವೃದ್ಧರಿಗೆ ಹಗುರವಾದ ಕಾಯಕಗಳನ್ನು ನೀಡಿ ಅವರಿಗೆ ಸೂಕ್ತ ಸಂಭಾವನೆ ನೀಡಲಾಗುತ್ತಿದೆ. ನಿರ್ಗತಿಕ ವೃದ್ಧರಿಗೆ ಮಠದಲ್ಲಿಯೇ ವಸತಿ ಮತ್ತು ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ.

ಡಾ. ಚನ್ನಬಸವ ಪಟ್ಟದ್ದೇವರ ಭವ್ಯ ಸ್ಮಾರಕ :

ಜಂಗಮ ಎನ್ನುವುದು ಜಾತಿ ವಾಚನ ಶಬ್ದದಲ್ಲಿ ಅದೊಂದು ತತ್ವವಾಚಕ ಶಬ್ದವಾಗಿದೆ. ಶರಣರು ಸಮಾಜಕ್ಕೆ ಜಂಗಮವೆಂದಿದ್ದಾರೆ. ಉಂಗಮ ಜಾತಿಯಲ್ಲಿ ಹ ುಟ್ಟಿದವನು ಮಾತ್ರ ಮಠದ ಪಟ್ಟಾಧಿಕಾರ ವಹಿಸಿಕೊಳ್ಳಬೇಕೆಂಬ ನಂಬಿಕೆಯಲ್ಲಿರುವ ಅರ್ಥವಿಲ್ಲ. ಪಟ್ಟಾಧಿಕಾರ ವಹಿಸಿಕೊಳ್ಳುವ ವ್ಯಕ್ತಿ ಆ

ಸ್ಥಾನಕ್ಕೆರುವ ಅರ್ಹತೆ ಪಡೆದ ಯೋಗ್ಯ ವ್ಯಕ್ತಿ ಆಗಿರಬೇಕೆಂಬುವುದೆ ಮುಖ್ಯವೆನಿಸುತ್ತದೆ. ಜಾತಿ ಆಧರಿಸಿ ಅಧಿಕಾರ ವಹಿಸಿಕೊಡುವ ಬದಲಾಗಿ ಯೋಗ್ಯತೆಯನ್ನು ಆಧರಿಸಿ ಅಧಿಕಾರ ವಹಿಸಿಕೊಡುವುದು ಯೋಗ್ಯವೆಂಬುವ ನಿರ್ಧಾರಕ್ಕೆ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಅಪ್ಪಗಳು ಒಪ್ಪಿಕೊಂಡರು.

ಈ ದಿಶೆಯಲ್ಲಿ ಹೇಳುವ ಕುರುಬ, ಹರಿಜನ, ಲೋಹಾರ, ಇತ್ಯಾದಿ ಕೆಳಸ್ತರದ ಜಾತಿಯೆಂದೆನಿಸಿದರೂ ಅವರಲ್ಲಿರುವ ಪ್ರತಿಭೆ ಯೋಗ್ಯತೆಗೆ ಬೆಲೆ ಕೊಟ್ಟು ಅಂತಹದವರಿಗೆ ಜಂಗಮ ದೀಕ್ಷೆ ನೀಡಿ ಮಠಗಳ ಜವಾಬ್ದಾರಿ ವಹಿಸಿಕೊಟ್ಟಿದ್ದು ಪೂಜ್ಯ ಅಪ್ಪಗಳ ಮಹತ್ಕಾರ್ಯಗಳಲ್ಲಿ ಒಂದಾಗಿದೆ. ಈ ಕಾರಣಕ್ಕಾಗಿ ಸಮಾಜದಿಂದ ಅನೇಕ ರೀತಿಯ ವಿರೋಧಗಳನ್ನು ಎದುರಿಸಬೇಕಾಗಿ ಬಂದಾಗ ಅವರು ಧೀರರಾಗಿ ಮಟ್ಟಿನಿಂತರು. ಸಮಾಜದಲ್ಲಿ ಜಾತಿ ಪದ್ಧತಿ ಹೊಡೆದೂಡಿಸಿ ಸಮಾನತೆ ತರುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು.

ಪೂಜ್ಯ ಸಿದ್ಧರಾಮೇಶ್ವರ ಬೆಲ್ದಾಳ ಶರಣರು ಪೂಜ್ಯ ಶಂಕರಲಿಂಗ ಸ್ವಾಮಿಗಳು ಪೂಜ್ಯ ಮಹಾಲಿಂಗ ದೇವರು, ಪೂಜಯ ಪ್ರಭುಲಿಂಗ ಸ್ವಾಮಿಗಳು, ಮುಂತಾದವರನ್ನು ಇಲ್ಲಿ ಉದಾಹರಿಸಬಹುದು. ಶ್ರೀ ಜಿ.ಎಚ್. ಶಿವಮಠ, ಶ್ರೀ ಬಸವಾನಂದ ಮುಂತಾದವರು ಅಪ್ಪಗಳ ಕಾರ್ಯದಲ್ಲಿ ನೇರವಾಗಿ ನೆರವಾಗುವುದು ನಿತ್ಯವು ಕಾಣಬಹುದಾಗಿದೆ. ಈ ರೀತಿಯಾಗಿ ಮಠಾದೀಶರ ಆಯ್ಕೆಯಲ್ಲಿ ವೈಚಾರಿಕತೆ ಮಾಡಿದ್ದು ಹಿರೇಮಠ ಸಂಸ್ಥಾನ ಭಾಲ್ಕಿಯ ವೈಶಿಷ್ಟವಾಗಿದೆ.

ಹೀಗೆ ಅಂದಿನಿಂದ ಇಂದಿನವರೆಗೆ ಅಪ್ಪಗಳ ಶಕ್ತಿಯಿಂದಲೇ ಬಸವಲಿಂಗ ಪಟ್ಟದ್ದೇವರು ದೃಢ ಹೆಜ್ಜೆಯಿಡುತ್ತ ಸಾಗಿದ್ದಾರೆ. ಹಿರಿಯ ಶ್ರೀಗಳ ಅಪ್ಪಣೆಯೇ ಮಹಾಮಂತ್ರವೆಂದು ತಿಳಿದು ಅಳುಕದೆ ಸಾಗಿದ್ದಾರೆ. ಶ್ರೀಮಠದ ಕೀರ್ತಿ ಎತ್ತರೆತ್ತರಕ್ಕೆ ಬೆಳೆಸುತ್ತ ಅಡಿಯಿಟ್ಟಿದ್ದಾರೆ.

ಅಪ್ಪಾಜಿಯವರ ಹಾದಿಯೇ ಹೂವಿನ ಹಾಸಿಗೆಯಿಲ್ಲ. ನಗುವಿಗಿಂತ ನೋವೆ ಅಧಿಕ ಉಂಡಿದ್ದಾರೆ. ಆದರೆ ಅವರ ತಾಳ್ಮೆ ಅಗಾಧವಾದದ್ದು. ಎಲ್ಲವನ್ನು ಹೊಟ್ಟೆಯೊಳಢಿಟ್ಟುಕೊಂಡು ನಂಜನ್ನು ಕುಡಿದು ಜೀವಿಸುವ ಕಲೆ ಸ್ವಲ್ಪ ಹೆಜ್ಜೆ ರೂಡಿಸಿಕೊಂಡಿದ್ದಾರೆ. ಗಿಟ್ಟುಕೊಂಡು ನಂಜನ್ನು ಕುಡಿದು ಜೀವಿಸುವ ಕಾಂತಿ ಬಾಡಿದ್ದೇ ಇಲ್ಲ. ನಿರಂತರ ಸೂಸುವ ಬಸವ ಬೆಳಕು ಮಂದವಾಗಿದ್ದೆ ಇಲ್ಲ. ನಿರಂತ ಪ್ರವಾಸ ಶರಣ ಸಂಸ್ಕೃತಿ ಪಸರಿಸುವಿಕೆಯ ಕಾರ್ಯ ನಿಂತಿದ್ದೇ ಇಲ್ಲ. ನಿಲ್ಲುವುದು ಬೇಡ. ಏಕೆಂದರೆ ಸಧ್ಯದ ಜಗತ್ತಿನ ಆಶಾಕಿರಣ ಬಸವಲಿಂಗ ಪಟ್ಟದ್ದೇವರು. ಪೂಜ್ಯರು ನಮ್ಮ ಪೊರೆಯುತ್ತ ನೂರಾರು ಜೊತೆಗಿರಲೆಂದು ಗುರು ಬಸವ ತಂದೆಯಲ್ಲಿ ಬೇಡುತ್ತ ನನ್ನ ಆಯುಷ್ಯವನ್ನು ನನ್ನ ಪ್ರೀತಿಯ ಅಪ್ಪಾಜಿಯವರಿಗೆ ಧಾರೆಯೆರೆಯಲೆಂದು ಕೇಳಿಕೊಳ್ಳುತ್ತೇನೆ.

೨. ಸಾಹಿತ್ಯಿಕ ಸಾಧನೆಗಳು :

ಶ್ರೀಗಳು ಸಾಮಾಜಿಕ, ಧಾರ್ಮಿಕ, ಸಾಹಿತ್ಯ ಕ್ಷೇತ್ರಕ್ಕೂ ಅನೇಕ ರೀತಿಯಾದಂತಹ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ಶ್ರೀಗಳು ಬಾಲ್ಯದಲ್ಲಿಯೇ ಸಾಹಿತ್ಯ ಅಧ್ಯಯನದಲ್ಲಿ ತಮ್ಮನ್ನು ತಾವು ಸಕ್ರೀಯವಾಗಿ ತೊಡಗಿಸಿಕೊಂಡರು. ವಿದ್ಯಾರ್ಥಿ ದೆಸೆಯಿಂದಲೇ ಕವನ ಲೇಖನ ಬರೆಯುವ ಪ್ರವರ್ತಿ ಬೆಳೆಸಿಕೊಂಡರು. ಮೊದಲಿಗೆ ಶ್ರೀಗಳು ಗದ್ಯರೂಪದಲ್ಲಿ "ಶರಣರ ದಾರಿಯಲ್ಲಿ ಚನ್ನಬಸವ ಪಟ್ಟದ್ದೇವರು" ಎಂಬ ಲೇಖನ ಬರೆಯುವುದರ ಮುಖಾಂತರವಾಗಿ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ನಂತರ ಶರಣ ಸಂಸ್ಕೃತಿಗೆ ಪೂರಕವಾದ ಗ್ರಂಥಗಳನ್ನು ಜನಮನಕ್ಕೆ ಮುಟ್ಟಿಸುವ ಮೂಲಕ ವೈಚಾರಿಕ ಸಮಾಜ ನಿರ್ಮಾಣದ ಉತ್ಕಟವಾದ ಹಂಬಲವೇ ಅವರ ಸಾಹಿತ್ಯ ರಚನೆಗೆ ಪೂರಕ ಶಕ್ತಿಯಾಯಿತ್ತು. ಶ್ರೀಗಳು ಕೇವಲ ಸಾಹಿತ್ಯ ರಚನೆ ಅಲ್ಲದೆ ಶರಣರ ಒಂದು ಬಳಗವನ್ನು ಕಟ್ಟಿಕೊಂಡು ಮಹತ್ತರವಾದ ಸುಧಾರಣೆಗಳನ್ನು ಕೈಗೊಂಡಿದ್ದಾರೆ. ಡಾ. ಚನ್ನಬಸವ ಪಟ್ಟದೇವರ ಕುರಿತು "ಚೆಂಬಳಕು" ಎಂಬ ಪ್ರಥಮ ಕವನ ಸಂಕಲನವನ್ನು ೧೯೭೪ ರಲ್ಲಿ ಹೊರತಂದರು. ಶ್ರೀಗಳು ಕೇವಲ ತಾನು ಬೆಳೆಯುವುದು ಅಲ್ಲದೆ ತಮ್ಮ ಜೊತೆಗೆ ಇನ್ನೊಬ್ಬರನ್ನು ಬೆಳೆಸುವುದು ಅವರ ಭಾವನೆಯಾಗಿತ್ತು. ಇದಕ್ಕೆ ಸೂಕ್ತ ಉದಾಃ ಇಲ್ಲಿದೆ. "ಚೆಂಬಳಕು" ಎಂಬ ಕವನ ಸಂಕಲನದ ಮೂಲಕ ಗಡಿ ಭಾಗದಲ್ಲಿ ಸುಮಾರು ೩೫ ಕವಿಗಳನ್ನು ಗುರುತಿಸಿದರು. ಅದರಲ್ಲಿ ೮ ಕವಿಯತ್ರಿಯರಿಗೂ ಅವಕಾಶ ನೀಡಿದರು. ಇದರಿಂದ ತಿಳಿಯುವುದೇನೆಂದರೆ ಶ್ರೀಗಳು ಎಲ್ಲರಿಗೂ ಸಮಾನ ಭಾವನೆಯಿಂದ ನೋಡುತ್ತಿದ್ದರು. ಶ್ರೀಗಳ ಸಾಹಿತ್ಯವೆಂದರೆ "ಬಸವನೈವೇದ್ಯ" ಈ ಗ್ರಂಥದಲ್ಲಿ ಶರಣ ಸಂಸ್ಕೃತಿಗೆ ಸಂಬಂಧಪಟ್ಟ ಲೇಖನಗಳು ಮತ್ತು ಕನ್ನಡಾಭಿಮಾನ ಆಧ್ಯಾತ್ಮಿಕ ಸಾಮಾಜಿಕ ವಾಸ್ತವಿಕ ಸಮಸ್ಯೆಗಳು, ಮೂಢ್ಯ ಕಂದಾಚಾರ, ಅಂಧಾನುಕರಣೆಗಳ ನಿರ್ಮೂಲನೆಗೊಳಿಸಿದ್ದಾರೆ. ಪ್ರಜ್ಞಾವಂತ ಸಮಾಜ ನಿರ್ಮಾಣ ಮಾಡುವ ತುಡಿತ ಅವರಲ್ಲಿ ನಿಶ್ಚಳವಾಗಿ ಗೋಚರಿಸುತ್ತದೆ.

ಶ್ರೀಗಳ ಹೃದಯದಲ್ಲಿನ ಸಾಹಿತ್ಯ ಅಧ್ಯಯನ ಯಾರಿಗೂ ಅರ್ಥವಾಗದೆ ಇರದು. ಅವರ ಮೂಲ ಆಸೆಯೆಂದರೆ ಪ್ರಭುದ್ಧ ಸಮಾಜ ನಿರ್ಮಾಣ ಮಾಡುವುದು. ಸುತ್ತಲಿನ ಸಮಾಜವನ್ನೆ ಬರುವಣಿಗೆಯ ವಸ್ತುವನ್ನಾಗಿಟ್ಟುಕೊಂಡು ಜೀವನದ ಅನೇಕ ಸಮಸ್ಯೆಗಳಿಗೆ ಉತ್ತರ ಹುಡುಕುವುದಾಗಿದೆ. ಅವರ ಬರವಣಿಗೆ ಶೈಲಿ ವೈಶಿಷ್ಟ್ಯಪೂರ್ಣವಾದದ್ದು ಎಂದು ಗಜಲ ಕವಿಯಾದ ದಿ. ಶಾಂತರಸರು ಶ್ರೀಗಳ ಕೃತಿಯ ಮುನ್ನೂಡಿಯಲ್ಲಿ ತಿಳಿಸಿದ್ದಾರೆ. ಇಲ್ಲಿ ಶ್ರೀಗಳು ಸಮಾಜವು ಪ್ರಗತಿ ಪಥದತ್ತ ಸಾಗಬೇಕೆನ್ನುವ ಮಹತ್ವವಾದ ಉದ್ದೇಶ ಹೊಂದಿರುವುದರಿಂದಲೇ ಸ್ವಚ್ಛವಾದ ಈ ಗ್ರಂಥ ಕಳಕಳಿಯ ನೈಜ ಅಭಿವ್ಯಕ್ತಿಯ ಮೂಲಕ ಹೊರತರಲಾಗಿದೆ.

ಕಲ್ಯಾಣ ಕರ್ನಾಟಕವು ಶತಮಾನಗಳಿಂದ ಸಾಹಿತ್ಯಕವಾಗಿ ಸಾಂಸ್ಕೃತಿಕವಾಗಿ ಶ್ರೀಮಂತ ವಾತಾವರಣ ಹೊಂದಿದ್ದು. ಹಲವಾರು ಮೌಲಿಕ ಕೃತಿಕಾರರನ್ನು ಜನ್ಮ ನೀಡಿದೆ. ಹಳೆಗನ್ನಡ ನಡುಗನ್ನಡ ಕಾಲದಲ್ಲಿ ಹೇಗೋ ಹಾಗೆಯೇ ಹೊಸಗನ್ನಡ ಸಂದರ್ಭದಲ್ಲಿಯೂ ಸಹ ಈ ಭಾಗದಲ್ಲಿ ಯಾವುದೇ ಕೊರತೆ ಇಲ್ಲ.

೧೨ನೇ ಶತಮಾನದಲ್ಲಿ ಬಸವಾದಿ ಶರಣರ ಸಾಹಿತ್ಯವು ಆಧ್ಯಾತ್ಮಿಕವಾಗಿ ಕ್ರಾಂತಿ ಮಾಡಿ ಜಗದ ಕತ್ತಲೆ ಇಂದಿನ ಸಂದರ್ಭದಲ್ಲಿ ನಮ್ಮ ಭಾಗದ ನಡೆದಾಡುವ ದೇವರು. ಕನ್ನಡದ ಪಟ್ಟದೇವರೆಂದೇ ಕರೆಸಿಕೊಂಡ ಭಾಲ್ಕಿಯ ಲಿಂ. ಚೆ. ಚನ್ನಬಸವ ಪಟ್ಟದೇವರು ಶರಣರ ಮಣಿಹ ಹೊತ್ತು ಕಾರ್ಯಗೈದರೆ ಅವರ ಶಿಷ್ಯರಾಗಿ ಗುರುವಿನ ಮಣಿಹ ಹೊತ್ತು ಬಸವಾದಿ ಶರಣರ ತಾತ್ವಿಕ ಸಿದ್ಧಾಂತಗಳಿಗೆ ಕಾಯಕಲ್ಪ ನೀಡಲು ಬಸವಲಿಂಗ ಪಟ್ಟದೇವರು ದುಡಿಯುತ್ತಿದ್ದಾರೆ. ಅವರ ಸಾಹಿತ್ಯ ಆಧ್ಯಾತ್ಮಿಕ ಬದುಕಿನ ಕೊಡುಗೆ, ನಮ್ಮ ಸಂದರ್ಭದ ಬದುಕಿಗೆ ಅನನ್ಯ. ಅದನ್ನು ಕುರಿತು ಆಲೋಚನೆಯೇ ಈ ಲೇಖನದ ಮುಖ್ಯ ವಿಷಯ.

ಬಸವಲಿಂಗ ಪಟ್ಟದೇವರು ಕೇವಲ ಸಾಹಿತಿಗಳಲ್ಲಿ ಸಾಹಿತಿಗಳ ನಿರ್ಮಾತೃವೂ ಆಗಿರದೆ, ಅನೇಕ ಬರಹಗಾರರಿಗೆ ಬರೆಯಲು ಪ್ರೇರಣೆ ನೀಡಿದ್ದಾರೆ. ಬರೆದುದನ್ನು ಅಚ್ಚಾಗುವಂತೆ ಮಾಡಿದ್ದಾರೆ. ಸಾಂಸ್ಕೃತಿಕ ಬದುಕಿನ ಕೊಂಡಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಓದುಗರಿಗೆ ಕೃತಿ ತಲುಪಿಸಿ ಆ ಮೂಲಕ ಓದುವ ವರ್ಗವೊಂದನ್ನು ಬೆಳೆಯುವಂತೆ ಮಾಡಿದ್ದಾರೆ. ಸಾಹಿತ್ಯದ ಹೂವಿಗೆ ಅವರ ಕೊಡುಗೆ ಅಪಾರವೆಂದೇ ಹೇಳಬೇಕು.

ಹಾಗಾಗಿ ಪೂಜ್ಯರ ಸಾಹಿತ್ಯ ಬದುಕನ್ನು ಕುರಿತು ಆಲೋಚಿಸುವಾಗ ಅವರ ಒಟ್ಟು ಸಾಹಿತ್ಯ ಸೇವೆಯನ್ನು ಸ್ಥೂಲವಾಗಿ ಅಧ್ಯಯನದ ದೃಷ್ಟಿಯಿಂದ ನಾಲ್ಕು ಭಾಗಗಳಲ್ಲಿ ವಿಂಗಡಿಸಬಹುದು.

೧. ಸೃಜನಶೀಲ ಸಾಹಿತಿಯಾಗಿ

೨. ಸಂಪಾದಕರಾಗಿ

೩. ಪ್ರಕಾಶಕರಾಗಿ

೪. ಪತ್ರಿಕಾರಣಕ್ಕೆ ಶ್ರೀಗಳ ಕೊಡುಗೆ

೧. ಸೃಜನಶೀಲ ಸಾಹಿತಿಯಾಗಿ :

ಬಾಲ್ಯದಿಂದಲೇ ಸಾಹಿತ್ಯಾಧ್ಯಯನದಲ್ಲಿ ತಮ್ಮನ್ನು ತಾವು ಸಕ್ರೀಯವಾಗಿ ತೊಡಗಿಸಿಕೊಂಡರು. ವಿದ್ಯಾರ್ಥಿ ದೆಸೆಯಿಂದಲೇ ಕವನ ಲೇಖನಗಳನ್ನು ಬರೆಯುವ ಪ್ರವೃತ್ತಿ ಅವರಲ್ಲಿ ಒಡಮಾಡತ್ತು. ಮೊದಲಿಗೆ ಗದ್ಯರೂಪದಲ್ಲಿ ಶರಣರ ದಾರಿಯಲ್ಲಿ "ಚನ್ನಬಸವ ಪಟ್ಟದ್ದೇವರು" ಎಂಬ ಲೇಖನ ಬರೆಯುವುದರ ಮುಖಾಂತರವಾಗಿ ಸಾಹಿತ್ಯಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಕಾರಣ ಸಂಸ್ಕೃತಿಗೆ ಪೂರಕವಾದ ಗ್ರಂಥಗಳನ್ನು ಜನಮನಕ್ಕೆ ಮೆಚ್ಚಿಸುವ ಮೂಲಕ ವೈಚಾರಿಕ ಸಮಾಜ ನಿರ್ಮಾಣದ ಉತ್ಕಟವಾದ ಹಂಬಲವೇ ಅವರ ಸಾಹಿತ್ಯ ರಚನೆಗೆ ಪೂರಕ ಶಕ್ತಿಯಾಯಿತು.

ಶ್ರೀಗಳು ಶರಣ ಬಳಗ ಕಟ್ಟಿಕೊಂಡು ಅವರ ಅಧ್ಯಕ್ಷರಾಗಿ ಮಹತ್ತರವಾದ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅವರು ಲಿಂ. ಪೂಜ್ಯ ಚನ್ನಬಸವ ಪಟ್ಟದ್ದೇವರ ಕುರಿತು "ಚೆಂಬೆಳಕು" ಎಂಬ ಪ್ರಥಮ ಕವನ ಸಂಕಲನ ಹೊರ ತಂದರು. ಕ್ರಿ.ಶ. ೧೯೭೪ ರ ಸಂದರ್ಭದಲ್ಲಿ ಈ ಕವನ ಸಂಕಲನದ ಮೂಲಕ ಗಡಿಭಾಗದಲ್ಲಿನ ಮೂವತ್ತೈದು ಕವಿಗಳನ್ನು ಗುರುತಿಸಿದರು. ಅವರ ಪ್ರತಿಭೆಯನ್ನು ಹೊರಗಳೆಯುವ ಕಾರ್ಯ ಶರಣ ಬಳಗದ ಅಧ್ಯಕ್ಷರಾಗಿದ್ದುಕೊಂಡು ಮಾಡಿದರು. ಪೂರ್ವಾಶ್ರಮದ

ಶಿವರಾಜ ಕಾಡೋದೆಯಾಗಿದ್ದಾಗಲೇ ಈ ಮಹತ್ತರವಾದ ಕಾರ್ಯ ಗೈದಿದ್ದಾರೆ. ಸ್ವತಃ ಕವಿಗಳಾಗಿ, ವಚನಕಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲತಃ ಈ ಶರಣ ಬಳಗದ ಉದ್ದೇಶವನ್ನು ಕುರಿತು ಚೆಂಬೆಳಕು ಕವನ ಸಂಕಲನದ ಮುನ್ನುಡಿಯಲ್ಲಿ ಶಾಂತರಸರು ಭಾಲ್ಕಿಯ ಶರಣ ಬಳಗ ಬೀದರ ಜಿಲ್ಲೆಯ ಗಡಿಭಾಗದ ಒಂದು ದಿವ್ಯ ಚೇತನ ಆಧ್ಯಾತ್ಮ ಅನುಭಾವ, ಸಾಹಿತ್ಯ, ಸಮಾಜ ಸೇವೆ ಹೀಗೆ ನಾನಾ ಬಗೆಯ ಕಾರ್ಯಗಳಿಂದ ಆ ಭಾಗದಲ್ಲಿ ದುಡಿಯಲು ಸಂಕಲ್ಪಿಸಿದೆ. ಈ ಬಳಗ ವೆಂಬುದನ್ನು ಬರೆದಿದ್ದಾರೆ. ಪೂಜ್ಯರು ಅತ್ಯಂತ ಕಾಳಜಿ ಪೂರ್ವಕವಾಗಿ ಈ ಭಾಗದಲ್ಲಿ ಸಾಹಿತ್ಯಾಸಕ್ತರನ್ನು ಸಾಹಿತಿಗಳನ್ನು ಹುರಿದುಂಬಿಸಿ. ಹೊಳ ಚೈತನ್ಯ ಪೂರ್ವಕವಾದ ಸಾಹಿತ್ಯ ಪ್ರವಾಹ ಹರಿಯುವಂತೆ ಮಾಡಿದ್ದು ಮಾಡುತ್ತಿರುವುದು ಶ್ಲಾಘನೀಯವಾಗಿದೆ.

ಪಟ್ಟದ್ದೇವರ ಪ್ರಥಮ ಸೃಜನಶೀಲ ಸಾಹಿತ್ಯವೆಂದರೆ "ಬಸವ ನೈವೇದ್ಯ" ಈ ಗ್ರಂಥದಲ್ಲಿ ಶರಣ ಸಂಸ್ಕೃತಿಗೆ ಸಂಬಂಧಪಟ್ಟ ಸಾಮಾಜಿಕ ಅಂತ್ಯ ಸಂಸ್ಕಾರ. ವಾಸ್ತವಿಕ ಸಮಸ್ಯೆಗಳು, ಮೌಢ್ಯ ಕಂದಾಚಾರ, ಅಂಧಾನುಕರುಣೆಗಳ ವಿಚಾರಗಳನ್ನು ಒಡಮೂಡಿಸಿದ್ದಾರೆ. ಪ್ರಜ್ಞಾವಂತ ಸಮಾಜ ನಿರ್ಮಾಣ ಮಾಡುವ ತುಡಿತ ಅವರಲ್ಲಿ ನಿಚ್ಚಳವಾಗಿ ಗೋಚರಿಸುತ್ತದೆ. ನಮ್ಮ ಸಮಾಜದ ಸೂತ್ತಲು ಹೆಣೆದುಕೊಂಡ ಸಮಸ್ಯೆಗಳನ್ನು ತಮ್ಮ ಪ್ರಥಮ ಗ್ರಂಥದಲ್ಲಿಯೇ ಅತ್ಯಂತ ಸರಳ ಶೈಲಿಯಲ್ಲಿ ಒಡಮೂಡಿಸಿರುವುದನ್ನು ನೋಡಿದರೆ ಅವರಲ್ಲಿನ ಸಾಹಿತ್ಯಾಧ್ಯಯನದ ಪ್ರೌಢಿಮೆ ಅರ್ಥವಾಗದೇ ಇರದು. ಅವರ ಮೂಲ ಆಶಯ ಪರಿಶುದ್ಧ ಸಮಾಜ ನಿರ್ಮಾಣ ಮಾಡುವುದು. ಸುತ್ತಲಿನ ಸಮಾಜವನ್ನೇ ೧೨ ಬಸವಶೋಧ್ಯ ಬರವಣಿಗೆಯ ವಸ್ತುವಾಗಿಟ್ಟುಕೊಂಡು ಜೀವನದ ಅನೇಕ ಜ್ವಲಂತ ಸಮಸ್ಯೆಗಳಿಗೆ ಉತ್ತರ ಹ ುಡುಕುವುದಾಗಿದೆ. ಅವರ ಸಾಹಿತ್ಯ ಅಭಿವ್ಯಕ್ತಿ ನಿರಾಭರಣ ಶೈಲಿಯಾಗಿದೆ.

೨. ಸಂಪಾದಕರಾಗಿ :

ಶಾಂತಿಕಿರಣ ಪತ್ರಿಕೆ: ಒಂದೆಡೆ ಕೃತಿಗಳ ಮೂಲಕ ಶರಣ ತತ್ವವನ್ನು ಸಾರುತ್ತಿರುವ ಪೂಜ್ಯರು ಮತ್ತೊಂದೆಡೆ ಪತ್ರಿಕೆಯ ಮೂಲಕವು ಆ ಕಾರ್ಯವನ್ನು ಮುಂದುವರೆಸಿದ್ದಾರೆ. ಬೀದರ ಜಿಲ್ಲೆಯ ಪ್ರಥಮ ಧಾರ್ಮಿಕ ಮಾಸ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಶಾಂತಿಕಿರಣದ ಸಂಪಾದಕರಾಗಿ ೧೯೭೫ ರಲ್ಲಿ ಸೇವೆ ಗೈದಿದ್ದಾರೆ. ಕೆ. ಭೀಮರಾವ ಪಾಟೀಲ ಡಾ. ಜಿ. ವಿ. ವಿಸಾಜಿಯವರು ಸೇವೆ ಸಲ್ಲಿಸಿದ ತರುವಾಯ ಸಂಪಾದಕತ್ವದ ಶಿಸ್ತಿನ ಸಿಪಾಯಿಯಾಗಿ ಅಚ್ಚುಕಟ್ಟುತನದಿಂದ ಸಂಪಾದಕರ ಹೊಣೆಗಾರಿಕೆಯನ್ನು ನಿಭಾಯಿಸುತ್ತಿದ್ದಾರೆ. ಸಾಹಿತ್ಯ ಗ್ರಂಥ ಬರೆಯವುದಕ್ಕಿಂತ ಸಮಕಾಲೀನ ಸಮಸ್ಯೆಗಳನ್ನು ವಿವೇಚಿಸಲು ಯೋಗ್ಯ ಮಾಧ್ಯಮ ಪತ್ರಿಕೆ ಎಂಬುದನ್ನು ಅರಿತ ಶ್ರೀಗಳು ಶಾಂತಿಕಿರಣ ಸಂಪಾದಕರಾಗಿ ಬಸವಾದಿ ಶರಣರ ತತ್ವ ಪ್ರಸಾರಕ್ಕೆ ಒಳ್ಳೆಯ ಸಾಹಿತಿಗಳಿಂದ ವಾಸ್ತವಿಕ ಬದುಕಿಗೆ ಅಗತ್ಯವಾದ ವೈಚಾರಿಕ ಪೂಜ್ಞೆಯ ಲೇಖನಗಳನ್ನು ಬರೆಸಿ ಪ್ರಚುರಪಡಿಸುವುದರ ಜೊತೆಗೆ ಪತ್ರಿಕೆಯ ಆಶಯವೇನೆಂಬುದನ್ನು ನಾಡಿನ ಜನಮನಕ್ಕೆ ಮುಟ್ಟಿಸುವ ಜವಾಬ್ದಾರಿಯನ್ನು ಅತ್ಯಂತ ಕಾಳಜಿಪೂರ್ವಕವಾಗಿ ನಿಭಾಯಿಸಿದ್ದಾರೆ. ಸಧ್ಯ ಶಾಂತಿಕಿರಣ ಪತ್ರಿಕೆಯ ಸಂಚಾಲಕರಾಗಿ ಪತ್ರಿಕೆಯ ಮೂಲಕ ಸಾಹಿತ್ಯಿಕ ಸೇವೆ ಸಲ್ಲಿಸುತ್ತಿದ್ದಾರೆ.

ಸಾಹಿತ್ಯ ಬರೆಯುವುದು ಎಷ್ಟು ಮುಖ್ಯವಾಗಿರುತ್ತದೆಯೋ ಅಷ್ಟೇ ಒಂದು ಸಾಹಿತ್ಯ ಸಂಪಾದಕತ್ವದ ಹೊಣೆಗಾರಿಕೆಯೂ ಆಗಿರುತ್ತದೆ. ಪೂಜ್ಯರು ತಮ್ಮ ಸಂಪಾದಕತ್ವದಲ್ಲಿ ಮೂರು ಕೃತಿಗಳನ್ನು ಹೊರತಂದಿದ್ದಾರೆ. ಅವು ಅಷ್ಟೇ ಪ್ರಸ್ತುತ ಮತ್ತು ಮೌಲಿಕವಾದವುಗಳಾಗಿವೆ. ೧೯೮೭ ರಲ್ಲಿ ಪ್ರಥಮವಾಗಿ ಇಷ್ಟಲಿಂಗ ಪೂಜೆಯ ವಿಧಿವಿಧಾನದ ಬಗ್ಗೆ ಸರಳವಾಗಿ ಸುಲಭವಾಗಿ ಅರಿವಾಗುವ ರೀತಿಯಲ್ಲಿ ಸಂಗ್ರಹಿಸಿದ್ದು ಅತ್ಯಂತ ಮಹತ್ವಪೂರ್ಣವೆನಿಸಿದೆ.

ಬಸವ ಜ್ಯೋತಿ: ''ಬಸವ ಜ್ಯೋತಿ'' ಎಂಬ ಕಿರುಹೊತ್ತಿಗೆ ಅಪ್ಪಗಳ ಎರಡನೆಯ ಸಂಪಾದನೆ ಕೃತಿ. ಈ ಗ್ರಂಥದಲ್ಲಿ ಬಸವ ಧರ್ಮದ ಜೀವಾಳವಾಗಿರುವ ಅಷ್ಟಾವರಣ ಪಂಚಾಚಾರ ಷಟಸ್ಥಲಗಳನ್ನು ಕುರಿತು ಬಸವಣ್ಣನವರ ವಚನಗಳನ್ನು ಸಂಗ್ರಹಿಸಲಾಗಿದೆ.[೧೨] ವ್ಯವಸ್ಥಿತವಾದ ರೀತಿಯಲ್ಲಿ ಬಸವಣ್ಣನವರ ಷಟಸ್ಥಲ ಅಷ್ಟಾವರಣ ಪಂಚಾಚಾರಕ್ಕೆ ಸಂಬಂಧಿಸಿದ ಕೆಲ ವಚನಗಳನ್ನು ಈ ಕಿರು ಹೊತ್ತಿಗೆ ಹೊರತರುವ ಉದ್ದೇಶ ಕುರಿತು ತಮ್ಮ ನುಡಿಯಲ್ಲಿ ವಚನಗಳಲ್ಲಿಯೇ ಬಸವ ದರ್ಶನ ಮಾಡಿಕೊಳ್ಳಬೇಕು. ವಚನಗಳಲ್ಲಿಯೇ ಬಸವಾದಿ ಪ್ರಮಥರು ಜೀವಂತವಾಗಿ ವಚನ ಪಾರಾಯಣ ತಪ್ಪಿದ್ದರಿಂದಲೇ ನಮ್ಮಲ್ಲಿ ಅನ್ಯ ಸಂಸ್ಕೃತಿ ಮನೆ ಮಾಡಿದೆ.

ಮತ್ತೆ ಬಸವ ಸಂಸ್ಕೃತಿ ಪ್ರತಿಯೊಬ್ಬರ ಹೃದಯಾಂತರಾಳದಲ್ಲಿ ಪ್ರತಿಷ್ಠಾಪನೆ ಮಾಡಬೇಕಾದರೆ ಮೊದಲು ವಚನ ಪಾರಾಯಣ ನಡೆಯಬೇಕು. ಅರ್ಥವಿಲ್ಲದ ವ್ಯರ್ಥ ಪಾರಾಯಣ ನಿಂತು ತ್ರಿಕಾಲ ಸತ್ಯವಾದ ವಚನ ಪಾರಾಯಣ ನಡೆಯಬೇಕು. ಹಿರಿಯರು, ಕಿರಿಯರು, ಹಾಗೂ ಮಕ್ಕಳ ನಾಲಗೆಯ ಮೇಲೆ ವಚನಗಳು ತಕಥೈ, ತರಥೈ ಎಂದು ಸದಾ ನರ್ತನೆ ಮಾಡಬೇಕು. ಆವಾಗ ಒಂದೊಂದೆ ವಚನ ನಿತ್ಯ ಜೀವನದಲ್ಲಿಯೂ ಇಳಿಯುತ್ತದೆ.[೧೩]

ನೈತಿಕತೆ ಕುಸಿಯುತ್ತಿರುವ ಇಂದಿನ ಸಂದರ್ಭದಲ್ಲಿ ವಚನಗಳೇ ಅದಕ್ಕೆ ದಿವ್ಯ ಔಷಧಿ ಎಂಬ ಮಹತ್ತರವಾದ ಆಯೋಜನೆಯನ್ನು ಬಸವ ಜ್ಯೋತಿ ಹೊರ ಹೊಮ್ಮುತ್ತದೆ. ವಚನ ಪಠಣ ಪಾರಾಯಣ ಮಾಡುವುದರಿಂದ ಮನಸ್ಸು ಮೃದುಗೊಳ್ಳುತ್ತದೆ.[೧೪] ಆ ದಿಸೆಯಲ್ಲಿ ಈ ಪ್ರಯತ್ನ ಅತ್ಯಂತ ಯಶಸ್ವಿಯಾಗಿದೆ. ಈ ಹೊತ್ತಿಗೆ ಮೂರನೆಯ ಮುದ್ರಣ ಕಂಡುಕೊಳ್ಳುತ್ತಿರುವುದನ್ನು ನೋಡಿದರೆ ಪೂಜ್ಯರು ಪ್ರಯತ್ನದ ಸಾಫಲ್ಯತೆಯ ಅರಿವಾಗುತ್ತದೆ.[೧೪]

ಶಿವಶರಣೆಯರ ವಚನಗಳು : ಪೂಜ್ಯರ ಮೂರನೆಯ ಕಿರು ಹೊತ್ತಿಗೆ ಶಿವಶರಣೆಯರ ವಚನಗಳು ಇಲ್ಲಿ ನಾವು ಪ್ರಮುಖವಾಗಿ ೧೨ನೇ ಶತಮಾನದ ಮೂವತ್ಮೂರು ವಚನ ಕಾರ್ತಿಯರ ವಚನಗಳನ್ನು ಕಾಣುತ್ತೇವೆ. ಈ ಹೊತ್ತಿಗೆಯ ಮೂಲ ಆಶಯವೆಂದರೆ ಎಲ್ಲಾ ವಚನಕಾರ್ತಿಯರ ಪರಿಚಯ ಪ್ರತಿಯೊಬ್ಬರಿಗೂ ಗೊತ್ತು ಮಾಡುವುದು ಹಾಗೂ ಅವರ ಒಟ್ಟು ವಚನಗಳ ಪರಿಕಲ್ಪನೆ ಮೂಡಿಸುವುದು. ಜೊತೆಗೆ ಅವರ ಮುಖ್ಯವಾದ ವಚನಗಳು ಒಂದೆಡೆ ಸಂಗ್ರಹಿಸಿ ಓದುಗರಿಗೆ ಲಾಭವಾಗುವಂತೆ ಮಾಡುವುದಾಗಿದೆ.[೧೪]

೩. ಪ್ರಕಾಶಕರಾಗಿ :

ಪೂಜ್ಯರು ಅನೇಕ ಜನ ಸಾಹಿತ್ಯಗಳಿಗೆ ಪೋಷಕ, ಪೂರಕರಾಗಿದ್ದಾರೆ. ಉದಯೋನ್ಮುಖ ಬರಹಗಾರರನ್ನು ಗುರುತಿಸುವ ನಿಟ್ಟಿನಲ್ಲಿ ಕಾರ್ಯಗೈಯುತ್ತಿದ್ದಾರೆ. ಶ್ರೀ ಮಠದಿಂದ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಹತ್ತು ಹಲವಾರು ಗ್ರಂಥಗಳನ್ನು ಪ್ರಕಟಗೊಳಿಸುವುದರ ಮೂಲಕ ಸಾಹಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. ಆರಂಭದಲ್ಲಿ "ಬಸವಧರ್ಮ ಗ್ರಂಥ ಮಾಲೆ" ಸ್ಥಾಪಿಸಿ ಅದರ ಮುಖಾಂತರ ಕೃತಿಗಳನ್ನು ಹೊರತಂದರು. ನಂತರ "ಬಸವಧರ್ಮ ಪ್ರಸಾರ ಸಂಸ್ಥೆ" ಸ್ಥಾಪಿಸಿ ಶರಣ ಸಂಸ್ಕೃತಿಗೆ ಸಂಬಂಧಪಟ್ಟ ಗ್ರಂಥಗಳನ್ನು ಪ್ರಕಾಶಿಸಿಗೊಳಿಸಿ ಸಾಹಿತ್ಯದ ಹೂವಿಗೆ ಕಾರಣಕರ್ತರಾಗಿದ್ದಾರೆ. ಬಸವ ಧರ್ಮ ಪ್ರಸಾರ ಸಂಸ್ಥೆಯಿಂದ ಪ್ರಕಟಗೊಂಡ ಗ್ರಂಥಗಳ ವಿವರ ಈ ಕೆಳಗಿನಂತಿದೆ.

೧. ಸಾಮೂಹಿಕ ಪ್ರಾರ್ಥನೆ (ಕನ್ನಡ)
೨. ಸಾಮೂಹಿಕ ಪ್ರಾಥನೆ (ಮರಾಠಿ)
೩. ಶಿವಶರಣರ ನನ್ನಯ್ಯ (ನಾಟಕ)
೪. ವೈರಾಗ್ಯ ನಿಧಿ ಅಕ್ಕಮಹಾದೇವಿ (ಭಜನ ಮಾಲಿಕ)
೫. ಬಸವೇಶ್ವರರ ನಾಮಾವಳಿ
೬. ಚನ್ನನ ಮಹಿಮೆ
೭. ಅಕ್ಕನ ವಚನಾಮೃತ (ಮರಾಠಿ)
೮. ಚಿಂತನ ದೀಪಿಕೆ
೯. ಸುಖ ಜೀವನದ ಸೂತ್ರಗಳು
೧೦. ವಚನಜ್ಯೋತಿ
೧೧. ಶಿವಶರಣೆಯರ ವಚನಗಳು
೧೨. ಬಸವೇಶ್ವರ ಅಂಬೇಡ್ಕರ (ಕನ್ನಡ)
೧೩. ಬಸವೇಶ್ವರ ಅಂಬೇಡ್ಕರ (ಮರಾಠಿ)
೧೪. ಬಸವ ನೈವೇದ್ಯ (ಕನ್ನಡ) ಇತ್ಯಾದಿ.

ಶ್ರೀಗಳು ಶರಣ ಸಾಹಿತ್ಯ ದಶದಿಕ್ಕುಗಳಿಗೂ ಪಸರಿಸಬೇಕೆಂಬ ಉತ್ಕಟವಾದ ಹಂಬಲದಿಂದ ಮರಾಠಿಯಲ್ಲಿ ಹಿಂದಿಯಲ್ಲಿ ಅನುವಾದಗೊಳಿಸುವ ಮಹೋನ್ನತವಾದ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಜೊತೆಗೆ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಪಿ.ಎಚ್.ಡಿ. ಗ್ರಂಥಗಳನ್ನು ಪ್ರಕಾಶನಗೊಳಿಸುವ ಉದ್ದೇಶ ಹೊಂದಿದ್ದಾರೆ. ಶ್ರೀಗಳು ಗ್ರಂಥ ಪ್ರಕಟಣೆಯನ್ನು ಒಂದು ವ್ರತವಾಗಿ ಪಾಲಿಸುತ್ತಿದ್ದಾರೆ. ಓದುಗರನ್ನು ಸಹೃದಯರನ್ನು ಸಾಹಿತ್ಯಾಕಾರರನ್ನು ಸೃಷ್ಟಿಸುತ್ತಿದ್ದಾರೆ. ನಾಡಿನ ಜನರಿಗೆ ಜ್ಞಾನ ದಾಸೋಹ ಮಾಡುತ್ತಿದ್ದಾರೆ.

ಲಿಂ. ಖಾ. ಚನ್ನಬಸವ ಪಟ್ಟದೇವರ ಹುಟ್ಟು ಹಬ್ಬದ ಸ್ಮರಣಾರ್ಥವಾಗಿ ವರ್ಷಕ್ಕೊಂದು ಗ್ರಂಥವನ್ನು ಹೊರ ತರುವ ಸಂಕಲ್ಪ ಹೊಂದಿದ್ದಾರೆ. ಶರಣ ಸಾಹಿತ್ಯವು ಹಿಂದಿ, ಮರಾಠಿ ಮೊದಲಾದ ಭಾಷೆಗಳಲ್ಲಿ ಅದಷ್ಟು ಸುಲಭ ಬೆಲೆಗೆ ದೊರೆಯುವಂತೆ ಮಾಡುವುದು ಪೂಜ್ಯರು ಮುಖ್ಯ ಉದ್ದೇಶವಾಗಿದೆ. ಹೀಗೆ ಮಾಡುವುದರಿಂದ ನಮ್ಮ ನಾಡಿನ ಅನೇಕ ಲೇಖಕರಿಗೆ ನೆರವಾದಂತ್ತಾಗುತ್ತದೆ. ಅವರ ಬುದ್ಧಿಶಕ್ತಿಯನ್ನು ನಮ್ಮ ನಾಡು ನುಡಿಗಳ ಸೇವೆಗೆ ಉಪಯೋಗಿಸಿಕೊಂಡಂತಾಗುತ್ತದೆ. ಆ ದಿಸೆಯಲ್ಲಿ ಶ್ರೀಗಳ ಅತ್ಯಂತ ಕಾಳಜಿಪೂರ್ವಕವಾಗಿ ಸಾಹಿತಿ ಸಹೃದಯದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪೋಷಕರಾಗಿ :

ಒಬ್ಬ ಉತ್ತಮ ಸಾಹಿತಿ ತನ್ನ ವೈಚಾರಿಕ ಗ್ರಂಥಗಳನ್ನು ಪ್ರಕಟಗೊಳಿಸಿದ್ದಾಗ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯ ಹಾಗೂ ಪ್ರೋತ್ಸಾಹಿಸುವ ವರ್ಗದ ಅವಶ್ಯಕತೆಯನ್ನು ಹೊಂದಿರುತ್ತಾನೆ. ಸಾಹಿತಿಗಳನ್ನು ಪ್ರೋತ್ಸಾಹಿಸುವ ಪ್ರವೃತ್ತಿ ಇದ್ದಾಗಲೇ ಹೆಚ್ಚಿನ ಸಾಹಿತ್ಯ ಸೃಷ್ಟಿಯಾಗಲು ಸಾಧ್ಯ. ಕೃತಿಕಾರರನ್ನು ಗುರುತಿಸಿ ಅವರಿಗೆ ಸತ್ಕರಿಸಿದಾಗ ಅವರ ಸಾಹಿತ್ಯಕ್ಕೆ ಹಾಗೂ ಅವರಲ್ಲಿನ ಪ್ರತಿಭೆಗೆ ಹೊಸ ಚೈತನ್ಯ ತುಂಬಿದಂತಾಗುತ್ತದೆ. ಮೌಖಿಕ ಕೃತಿಗಳನ್ನು ಹೊರತರಲು ಸಾಧ್ಯವಾಗುತ್ತದೆ. ಅಂಥಹ ಮಹೋನ್ನತವಾದ ಕಾರ್ಯಶ್ರೀ ಬಸವಲಿಂಗ ಪಟ್ಟದೇವರು ಕೈಗೊಂಡಿದ್ದಾರೆ.

ಶ್ರೀಗಳ ಪ್ರಶಸ್ತಿಗಳನ್ನು ವಿವಿಧ ಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಮಹನೀಯರಿಗೆ ನೀಡುತ್ತಿದ್ದಾರೆ. ಆ ದಿಸೆಯಲ್ಲಿ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳಿಗೆ ಹೊರನಾಡಿನ ಸಾಹಿತಿಗಳಿಗೆ ಮಕ್ಕಳ ಸಾಹಿತ್ಯಕ್ಕೆ ಹಾಗೂ ಬೀದರ ಜಿಲ್ಲಾ ಮಟ್ಟದ ಉದಯೋನ್ಮುಖ ಸಾಹಿತಿಗಳಿಗೆ ಪುರಸ್ಕಾರವನ್ನಿತ್ತು ಸಾಹಿತ್ಯದ ಹರವಿಗೆ ಕಾರಣೀಕರ್ತರಾಗಿದ್ದಾರೆ. ಈ ಪುರಸ್ಕಾರದ ಒಟ್ಟು ಆಶಯವೆಂದರೆ, ಮನೆಯಿಂದ ಮನೆಯವರೆಗೆ ಸಾಹಿತ್ಯದ ಹಂದರವು ಪಸರಿಸಲ್ಲಿ. ಸಾಹಿತಿಗಳಿಗೆ ತಕ್ಕಮಟ್ಟಿಗಾದರೂ ಉತ್ತಮ ಉತ್ತೇಜನ ಸಿಗಲಿ ಎಂಬುದ್ದಾಗಿದೆ. ಜೊತೆಗೆ ಶ್ರೀಮಠದಲ್ಲಿ ನಡೆಯುವ ಶಿವಾನುಭವಗೋಷ್ಠಿ ಹಾಗೂ ಶರಣ ಸಂಗಮ ಕಾರ್ಯಕ್ರಮಕ್ಕೆ ಒಳ್ಳೆಯ ಸಾಹಿತಿಗಳನ್ನು ಬರಮಾಡಿಕೊಂಡು ಸನ್ಮಾನಿಸಿ ಅವರಿಗೆ ಪ್ರೋತ್ಸಾಹಿಸುವ ಕಾರ್ಯ ನಿರಂತರವಾಗಿ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಯುವ ಸಾಹಿತಿಗಳಿಗೆ ಅವರ ಉಗಮ ಸ್ಥಾನ ಆಗಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಗಡಿಯಿಂದಾಚೆಯ ಮರಾಠಿಯಲ್ಲಿ ಶರಣ ಸಂಸ್ಕೃತಿ ಪರಂಪರೆಯು ಉಜ್ವಲವಾಗಿ ಬೆಳೆದು ಮೌಲಿಕ ಗ್ರಂಥಗಳು ಬರಲಿ ಎಂಬ ಉದ್ದೇಶದಿಂದ ೧೯೯೫ ರಲ್ಲಿ ಚನ್ನಬಸವ "ಪಟ್ಟದ್ದೇವರ ಪುರಸ್ಕಾರ" ಎಂಬ ಪ್ರಶಸ್ತಿ ನೀಡಲು ಪ್ರಾರಂಭಿಸಲಾಗಿದೆ. ಆ ಮೂಲಕ ಸಾಹಿತ್ಯ ಸೇವೆ ಗುರುತಿಸಿ ಗೌರವಿಸಲಾಗುತ್ತದೆ. ಮೊದಲಿಗೆ ಲಿಂ. ಜಯದೇವಿ ತಾಯಿ ಲಿಗಾಡೆಯವರ ಸಾಹಿತ್ಯಕ್ಕೆ ಮರಣೋತ್ತರ ಪ್ರಶಸ್ತಿ ನೀಡಲಾಯಿತು. ಮುಂದೆ ಶಶಿಕಲಾ ಮಡಕಿ ಡಾ. ಸುಧಾಕರ ಮೊಗಲೆವಾರ, ಭಗವಾನದಾಸ ತಿವಾರಿ ಇತ್ಯಾದಿ ಸಾಹಿತಿಗಳಿಗೆ ಈ ಪುರಸ್ಕಾರ ನೀಡಿ ಗೌರವಿಸಲಾಗಿದೆ.

ಮಕ್ಕಳಲ್ಲಿ ಉತ್ತಮ ಸಾಹಿತ್ಯದತ್ತ ಬೆಳೆಯಲಿ ಶಿಶು ಸಾಹಿತಿಗಳಿಗೆ ಒಳ್ಳೆಯ ಅವಕಾಶ ದೊರೆಯಲಿ ಎಂದು ಮಹೋನ್ನತವಾದ ಉದ್ದೇಶವನ್ನಿರಿಸಿಕೊಂಡು ೧೯೯೮-೯೯ ರಲ್ಲಿ ಮಕ್ಕಳ ಸಾಹಿತ್ಯ ಪ್ರಶಸ್ತಿ ನೀಡಲು ಪ್ರಾರಂಭಿಸಿದ್ದಾರೆ. ಶ್ರೀ ಎ.ಕೆ. ರಾಮೇಶ್ವರರಂಥ ಮಕ್ಕಳ ಸಾಹಿತಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ತಮ್ಮ ಮಠದಿಂದ "ಮಕ್ಕಳ ಸಾಹಿತ್ಯ ಮಾಲೆ" ಆರಂಭಿಸುವ ಉದ್ದೇಶವೂ ಪೂಜ್ಯರದಾಗಿದೆ.

೨೦೦೧ ರಲ್ಲಿ ಪೂಜ್ಯರು ೬೩ ದಿವಸಗಳ ಅಖಂಡ ಅನುಷ್ಠಾನಗೈದರು. ಅದರ ಎ ಏಕ್ತಾಯ ಸಮಾರಂಭದ ಭವ್ಯ ಕಾರ್ಯಕ್ರಮದಲ್ಲಿ ಸದ್ಭಕ್ತರು ಪೂಜ್ಯರಿಗೆ ೫೦,೦೦೦ ರೂ. ನೀಡಿ ಗೌರವಿಸಿದರು. ವಿನಯಶೀಲರೂ, ಮಾತೃ ಹೃದಯಿಗಳೂ, ನಿರಾಡಂಬರ ಜೀವಿಗಳು, ಸಾಹಿತ್ಯ ಪ್ರೇಮಿಗಳೂ ಆಗಿರುವ ಪಟ್ಟದೇವರು ಕೆರೆಯ ನೀರು ಕೆರೆಗೆ ಚೆಲ್ಲುವ ಪ್ರಜ್ವಲ ಮನಸ್ಸಿನವರು. ಆದ್ದರಿಂದಲೇ ಭಕ್ತಾದಿಗಳು ನೀಡಿದ ಹ ಣವನ್ನು ತಮ್ಮ ಮಠಕ್ಕೆ ಬೆಳೆಸಿಕೊಳ್ಳದೆ ಜಿಲ್ಲೆಯ ಸಾಹಿತಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಗುರುತಿಸುವ ಕಾರ್ಯಕೈಗೊಂಡಿದ್ದಾರೆ. ಅದೇ ರೀತಿಯಾಗಿ ಚನ್ನಬಸವ ಪಟ್ಟದೇವರ ಸಂಘ ಸ್ಥಾಪಿಸಿ, ಚನ್ನಬಸವ ಪಟ್ಟದ್ದೇವರ ಪ್ರಶಸ್ತಿ ಇರಿಸಿ ಬೀದರ ಜಿಲ್ಲೆಯ ಉತ್ತಮ ಕೃತಿಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ.

ಪೂಜ್ಯರ ಸಾಹಿತ್ಯ ಸೇವೆಯ ಮತ್ತೊಂದು ಮೈಲುಗಲ್ಲೆಂದರೆ ಕ್ರಿ.ಶ. ೨೦೦೦ ದಲ್ಲಿ "ಚನ್ನಬಸವ ಪಟ್ಟದ್ದೇವರ ಪ್ರತಿಷ್ಠಾನ" ಸ್ಥಾಪಿಸಿದ್ದು. ಅವರ ಮೂಲಕ ಹಿರಿಯ ಸಾಹಿತಿಗಳಿಂದ ಉತ್ತಮವಾದ ಗ್ರಂಥಗಳನ್ನು ಹೊರತರುವುದಾಗಿದೆ. ಈಗಾಗಲೇ ಪ್ರಭು ಖಾನಾಪುರೆಯವರ ಸಂಪಾದಕತ್ವದಲ್ಲಿ "ಮುಖಾಮುಖಿ" ಗ್ರಂಥ ಹೊರಬಂದಿದೆ.

ಹೀಗೆ ಹತ್ತು ಹಲವಾರು ಮುಖಗಳಿಂದ ಸಾಹಿತ್ಯದ ಹರಿವಿಗೆ ಹಾಗೂ ಸಾಹಿತಿಗಳಿಗೆ ಪ್ರೋತ್ಸಾಹ ನೀಡಿ ಗಡಿ ಭಾಗವಾದ ನಮ್ಮ ಭಾಗದಲ್ಲಿ ಸಮೃದ್ಧ ಸಾಹಿತ್ಯ ಬೆಳೆಯಲಿ ಎನ್ನುವ ಉತ್ಕಟವಾದ ಹಂಬಲವೆನ್ನಿರಿಸಿಕೊಂಡು ಪೂಜ್ಯರು ಸ್ವತಃ ಕವಿಗಳಾಗಿ, ಸಾಹಿತಿಗಳಾಗಿ, ಆಧುನಿಕ ವಚನಕಾರರಾಗಿ ಸಾಹಿತ್ಯದ ಹರವನ್ನು ತನ್ಮೂಲಕವಾಗಿ ಪಸರಿಸುವಲ್ಲಿ ಮಹತ್ತರವಾದ ಸಾಧನೆ ಗೈಯುತ್ತಿದ್ದಾರೆ. ಅವರ ನಿಷ್ಠೆ, ಅಧ್ಯಯನದ ತಾತ್ಪರ್ಯ, ಆಲೋಚನೆ, ಚಿಂತನೆ ಹಾಗೂ ಸಾಮಾಜಿಕ ಕಾಳಜಿಯಿಂದಾಗಿ ಹತ್ತು ಹಲವು ರೀತಿಯಲ್ಲಿ ಅವಿರತವಾಗಿ ಸಾಹಿತ್ಯ ಕ ೃಷಿಯು ನಡೆಯುತ್ತಿದೆ.

೪. ಪತ್ರಿಕಾರಂಗಕ್ಕೆ ಶ್ರೀಗಳ ಕೊಡುಗೆ :

ಪತ್ರಿಕಾರಂಗಕ್ಕೆ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಲ್ಕನೇ ಅಂಗ ಎಂದು ವಿದಿತವಾಗಿದೆ. ಸಮಾಜದ ಓರೆಕೋರೆಗಳನ್ನು ಬಯಲು ಮಾಡುವ ಸಮಸ್ಯೆಗಳಿಗೆ ಸ್ಪಂದಿಸುವ ಕರ್ತವ್ಯ ಪತ್ರಿಕಾ ಧರ್ಮವಾಗಿದೆ. ಪತ್ರಿಕೆಯೆಂಬುದನ್ನು ಸಮಾಜದ ಒಂದು ಕನ್ನಡಿಯಂತಿದ್ದರೆ. ಸಮಸ್ಯೆಗಳ ಸ್ಪಂದನ ಸಮಸ್ಯೆಗಳ ವಿಶ್ಲೇಷಣೆ, ಸತ್ಯ ನಿಷ್ಠುರತೆ ಅವರ ಧರ್ಮವಾಗಿದೆ.

ಪೂಜ್ಯ ಬಸವಲಿಂಗ ಪಟ್ಟದೇವರು ಬಸವತತ್ವ ಪ್ರಸಾರದ ಅಗ್ರ ಸ್ವಾಮೀಜಿಯವರಾಗಿ ನಾಡಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಲ್ಯಾಣ ನಾಡಿನಲ್ಲಿ ಬಸವತತ್ವ ಪ್ರಸಾರದ ತವರು ಮನೆಯಂತಿರುವ ಭಾಲ್ಕಿ ಹಿರೇಮಠದ ಪಟ್ಟಾಧ್ಯಕ್ಷರಾಗಿ ಶರಣರ ತತ್ವಗಳ ಸಂಸ್ಕಾರ ಸಂಸ್ಕೃತಿಯನ್ನು ಪ್ರಕಾಶ, ಪ್ರಚಾರಕ್ಕೆ ತಮ್ಮನೇ

ತಾವು ತೊಡಗಿಸಿಕೊಂಡಿದ್ದಾರೆ. ಶ್ರೀಗಳ ಪತ್ರಿಕಾರಂಗದ ಒಡನಾಟ, ಸಂಪರ್ಕ, ಪ್ರೇರಣೆ, ಪ್ರೋತ್ಸಾಹ ಮತ್ತು ಧರ್ಮದ ಪ್ರಸಾರ ಕಾರ್ಯ ವಿಶೇಷವಾದವುಗಳು.

ಶ್ರೀ ಮಠದಿಂದ ಹೊರಡುವ ಶಾಂತಿಕಿರಣ ಮಾಸಪತ್ರಿಕೆಯ ಸಂಪಾದಕರಾಗಿ ಮಾರ್ಗದರ್ಶಿಯಾಗಿ ತನ್ಮೂಲಕ ಬಸವತತ್ವ ಪ್ರಸಾರ ಕಾರ್ಯಕೈಗೊಂಡು ಸಮಾಜಕ್ಕೆ ಅರ್ಪಿಸಿಕೊಂಡಿದ್ದಾರೆ. ಪತ್ರಿಕೆ, ಪತ್ರಿಕಾರಂಗ, ವೆಂದರೆ ಶ್ರೀಗಳಿಗೆ ಅಚ್ಚು ಮೆಚ್ಚು. ಪತ್ರಿಕಾ ಧರ್ಮದ ಸ್ಪಂದನ ಪತ್ರಕರ್ತರಿಗೆ ಅವನು ನೀಡುವ ಪ್ರೇರಣೆ, ಪ್ರೋತ್ಸಾಹ, ಗೌರವ ಅವರ ವ್ಯಕ್ತಿತ್ವದ ಹಿರಿಮೆಯಾಗಿದೆ.

ಶಾಂತಿಕಿರಣ ಪತ್ರಿಕೆಯನ್ನು ಬಸವಾದಿ ಶಿವಶರಣರ ಸಾಹಿತ್ಯ ಸಂಸ್ಕೃತಿ, ತತ್ವ ಪ್ರಸಾರದ ಪತ್ರಿಕೆಯಾಗಿ ಬೆಳೆಸಿರುವ ಶ್ರೀಗಳು, ಪತ್ರಿಕೆಯನ್ನು ಭಾಲ್ಕಿ ಹಿರೇಮಠ ಸಂಸ್ಥಾನದ ಮುಖವಾಣಿಯಂತೆ ಅದನ್ನು ರೂಪಿಸಿದ್ದಾರೆ. ಲಿಂ. ಡಾ. ಚನ್ನಬಸವ ಪಟ್ಟದ್ದೇವರು ಸ್ಥಾಪಿಸಿದ "ಶಾಂತಿಕಿರಣ" ಪತ್ರಿಕೆ ಪೋಷಕರಾಗಿ ಮಾರ್ಗದರ್ಶಕರಾಗಿ ಪತ್ರಿಕೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದಾರೆ.

ಬಸವತತ್ವ ಹಾಗೂ ಶರಣ ಸಂಸ್ಕೃತಿಯ ಪ್ರಸಾರ, ಪ್ರಚಾರದ ಮುಖ್ಯ ಧೋರಣೆಯನ್ನಿಟ್ಟುಕೊಂಡ ಡಾ. ಚನ್ನಬಸವ ಪಟ್ಟದೇವರು ನಡೆಸಿರುವ ಶಾಂತಿಕಿರಣ, ಪತ್ರಿಕೆಯಿಂದ ಬೀದರ ಜಿಲ್ಲೆಯಲ್ಲಿ ಶರಣ ಸಾಹಿತಿಗಳನ್ನು ಶರಣತತ್ವ ಬರಹಗಾರರನ್ನು ರೂಪಿಸಿದೆ ಎನ್ನಬಹುದು. ಪೂಜ್ಯ ಸಿದ್ಧರಾಮ ಶರಣರು ಬೆಲ್ದಾಳ ಸೇರಿದಂತೆ ಎಂ. ಬಂಡೆಪ್ಪನವರು, ಬಾ.ನಾ. ಸೋಲಾಪುರೆ, ಪಂಚಾಕ್ಷರಿ ಪುಣ್ಯಶೆಟ್ಟಿ, ಡಾ. ಜಿ.ಬಿ. ವಿಸಾಜಿ, ವ್ಹಿ. ಸಿದ್ದರಾಮಣ್ಣನವರು, ಕೆ.ಜಿ. ಮಾಳಶೆಟ್ಟಿ ದೇವಪ್ಪ ಮುಂತಾದವರಿಗೆ ಪತ್ರಿಕೆ ಶರಣ ಸಾಹಿತ್ಯ ಬರಹಕ್ಕೆ ಉದ್ದೀಪನಗೊಳಿಸಿದೆ ಎನ್ನಬಹುದು.

ಸಾಹಿತಿಗಳಿಗೆ ಬಹುಮಾನ :

(೧) ಮರಾಠಿ ಭಾಷೆಯಲ್ಲಿ ಶರಣ ಸಾಹಿತ್ಯ ಗ್ರಂಥ ಬರೆದ ಉತ್ತಮ ಲೇಖಕರಿಗೆ ಐದು ಸಾವಿರ ರೂಪಾಯಿಗಳು (೨) ಉತ್ತಮ ಮಟ್ಟದ ಮಕ್ಕಳ ಸಾಹಿತ್ಯ ರಚಿಸಿದ ಲೇಖಕರಿಗೆ ೫,೦೦೦/- ರೂಪಾಯಿಗಳು. (೩) ಖ್ಯಾತ ಸಮಾಜ ಸೇವಕರಿಗೆ ೫,೦೦೦/- ರೂಪಾಯಿಗಳು (೪) ಬೀದರ ಜಿಲ್ಲಾ ಮಟ್ಟದ ಉತ್ತಮ ಲೇಖಕರಿಗೆ ೧,೦೦೦/- ರೂಪಾಯಿಗಳು (೫) ಸಿದ್ಧರಾಮ ಜಂಬಲದಿನ್ನಿಯವರ ಸ್ಮರಣಾರ್ಥ ವಚನ ಸಂಗೀತ ಗಾಯಕರಿಗೆ ೫,೦೦೦/- ರೂಪಾಯಿಗಳು ಮತ್ತು ಪ್ರಶಸ್ತಿ ಪತ್ರಗಳೆನ್ನಿತ್ತು ಪ್ರತಿವರ್ಷ ಗೌರವಿಸುತ್ತಾರೆ. ಇದು ಜಿಲ್ಲೆಯಲ್ಲಿಯೇ ನೂತನವಾಗಿದೆ.

ಹಿರೇಮಠ ಸಂಸ್ಥಾನ ಭಾಲ್ಕಿ ವತಿಯಿಂದ ಪ್ರತಿವರ್ಷ ಪ್ರಧಾನ ಮಾಡುವ ಡಾ. ಚೆನ್ನಬಸವ ಪಟ್ಟದ್ದೇವರು ಪ್ರಶಸ್ತಿಗಳು ಮತ್ತು ವಿಜೇತರು:

ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಗುರುತಿಸಿ ಹಿರೇಮಠ ಸಂಸ್ಥಾನ ಭಾಲ್ಕಿ ವತಿಯಿಂದ ಪ್ರತಿ ವರ್ಷ ಸನ್ಮಾನಿಸಿ ಪ್ರೋತ್ಸಾಹಿಸಲಾಗುತ್ತಿದೆ. ಅಂತಹವರಿಗೆ ಡಾ. ಚನ್ನಬಸವ ಪಟ್ಟದ್ದೇವರು ಪ್ರಶಸ್ತಿ ಪತ್ರ ರೂ. ೧೦,೦೦೦/- ನಗದು ಪುರಸ್ಕಾರ,

ಶಾಲು ಹೂಮಾಲೆ ಇತ್ಯಾದಿ ನೀಡಿ ಗೌರವಿಸಲಾಗುತ್ತಿದೆ. ಇಲ್ಲಿಯವರೆಗೆ ಅಂತಹ ಪ್ರಶಸ್ತಿ ಸ್ವೀಕರಿಸಿದವರ ಹೆಸರುಗಳು ಕೆಳಗೆ ನಮೂದಿಸಲಾಗಿದೆ.

ಅ. **ಮಹಾರಾಷ್ಟ್ರದಲ್ಲಿ ಶರಣರ ಸಾಹಿತ್ಯ ಮರಾಠಿ ಭಾಷೆಯಲ್ಲಿ ರಚಿಸಿದ ಸಾಹಿತಿಗಳಿಗೆ :**

೧. ಲಿಂಗೈಕ್ಯ ಡಾ. ಜಯದೇವಿ ತಾಯಿ ಲಿಗಾಡೆ ಸೋಲಾಪುರ ಮರಣೋತ್ತರ (೧೯೯೪)
೨. ಶ್ರೀಮತಿ ಶಶಿಕಲಾ ರಾಜಶೇಖರ ಮಡಕಿ ಸೋಲಾಪುರ (೧೯೯೫)
೩. ಡಾ. ಸುಧಾಕರ ಎಸ್. ಮೊಗಲೆವಾರ ನಾಗಪೂರ (೧೯೯೬)
೪. ಲಿಂಗೈಕ್ಯ ಡಾ. ಭಗವಾನದಾಸ ತಿವಾರಿ ಸೋಲಾಪುರ (೧೯೯೭)
೫. ಶ್ರೀ ಸಿ.ಬಾ. ಸಂಗನವಾಡೆ ಪಾಟೀಲ ಕೋಲ್ಹಾಪೂರ (೧೯೯೮)
೬. ಶ್ರೀಮತಿ ಶಾಲಿನಿ ತಾಯಿ ಶ್ರೀಶೈಲ ದೊಡ್ಡಮನಿ (೧೯೯೯)
೭. ಶ್ರೀ ರಾಜೇಂದ್ರ ಶಂಕರೆಪ್ಪ ಜಿರೋಬೆ ಉದಗೀರ (೨೦೦೦)
೮. ಶ್ರೀ ಮನೋಹರ ಪಾರಪ್ಪ ಗವ್ಹಾಣೆ ಅಮರಾವತಿ (೨೦೦೦)
೯. ಡಾ. ಸೂರ್ಯಕಾಂತ ಘೂಗರೆ ಬಾರ್ಸಿ (೨೦೦೧)
೧೦. ಡಾ. ಅಶೋಕ ಪ್ರಭಾಕರ ಕಾಮತ್ ಪುಣೆ (೨೦೦೨)
೧೧. ಶ್ರೀ ಬಸವರಾಜ ವೈಜಿನಾಥ ಕೋರೆ ಜಾಲನಾ (೨೦೦೩)
೧೨. ಡಾ. ಅಶೋಕ ಗಂಗಾಧರ ಮನಕುದಳೆ ಯವತಮಾಳ ವಿದರ್ಭ (೨೦೦೪)
೧೩. ಶ್ರೀಮತಿ ಸ್ವರೂಪತಾಯಿ ಅಪ್ಪಾಸಾಹೇಬ ಬಿರಾದಾರ ಕಾಸರ ಸಿರ್ಸಿ (೨೦೦೫)
೧೪. ಶ್ರೀ ಎಂ.ಎಂ. ಹಿರೇಮಠ ಸೋಲಾಪುರ (೨೦೦೭)
೧೫. ಶ್ರೀ ಬಾಳಾ ಸಾಹೇಬ ಪಾಟೀಲ ಕೋಲ್ಹಾಪೂರ (೨೦೦೮)

ಆ. **ಮಕ್ಕಳ ಸಾಹಿತ್ಯ ರಚಿಸಿದ ಸಾಹಿತಿಗಳಿಗೆ :**

೧. ಶ್ರೀ ಎ.ಕೆ. ಕ.ರಾಮೇಶ್ವರ (೨೦೦೦)
೨. ಸಂಗಮೇಶ (೨೦೦೧)
೩. ಶ್ರೀಮತಿ ವರದಾ ಬೆಂಗಳೂರು (೨೦೦೨)
೪. ಶರಣಪ್ಪ ಕಂಚಾಣಿ (೨೦೦೩)
೫. ಶ್ರೀಮತಿ ಕವಿತಾ ಕೃಷ್ಣ ತುಮಕೂರು (೨೦೦೪)
೬. ಶರೀ ಚನ್ನಬಸಪ್ಪ ರಾಯಬಾಗ (೨೦೦೫)
೭. ಶ್ರೀ ಗಿರಿರಾಜ ಬಿ. ಹೊಸಮನಿ ಕಂಬಳಿಹಾಳ ಲಿಂಗಸೂಗೂರು (೨೦೦೮)

ಇ. ಸಿದ್ಧರಾಮ ಜಂಬಲದಿನ್ನಿ ಸ್ಮರಣೆಯಲ್ಲಿ ಉತ್ತಮ ವಚನ ಸಂಗೀತಕಾರರಿಗೆ :

೧. ಶ್ರೀ ಕೇಷಪ್ಪ ಗಟ್ಟೂರ ಗವಾಯಿಗಳು ಬಸವಕಲ್ಯಾಣ (೨೦೦೩)

೨. ಶ್ರೀ ಈಶ್ವರಪ್ಪ ಪಾಂಚಾಳ ಬೀದರ (೨೦೦೭)

೩. ಶ್ರೀ ಶಿವಾನಂದ ಅವಡಿ ಗವಾಯಿಗಳು ಗೊಟ್ಟೂರು (೨೦೦೮)

೪. ಶ್ರೀಮತಿ ತಾರಾಬಾಯಿ ಗುಲಬರ್ಗಾ (೨೦೦೪)

ಈ. ಸಮಾಜದ ವಿವಿಧ ರಂಗಗಳಲ್ಲಿ :

೧. ಶ್ರೀ ಬಿ.ಎಸ್. ಕುದುರೆ (ಸಹಕಾರ) (೨೦೦೧)

೨. ಶ್ರೀ ಕ ಜಿ ಅರ್ಶದಅಲಿ (ಪತ್ರಿಕಾರಂಗ) (೨೦೦೨)

೩. ಶ್ರೀ ವಿ.ಕೆ.ಪಾಟೀಲ ಔದ್ಯೋಗಿಕ (೨೦೦೩)

೪. ಪೂಜ್ಯ ಶ್ರೀ ಡಾ. ಶರಣಬಸವಪ್ಪ ಅಪ್ಪ ಕಲಬುರ್ಗಿ (ಶೈಕ್ಷಣಿಕ) (೨೦೦೪)

೫. ಶ್ರೀ ವಿಶ್ವನಾಥಪ್ಪ ಬಿರಾದಾರ (ಸಾಮಾಜಿಕ) (೨೦೦೭)

೬. ಶ್ರೀ ರಂಜಾನ ದರ್ಗಾ (ಸಾಹಿತ್ಯಿಕ) (೨೦೦೮)

ಉ. ಬೀದರ ಜಿಲ್ಲೆಯಲ್ಲಿ ಉತ್ತಮ ಗ್ರಂಥ ರಚಿಸಿದ ಸಾಹಿತಿಗಳಿಗೆ :

೧. ಶ್ರೀ ಸಿ.ಎನ್. ಹಿರೇಮಠ ಕಮಲನಗ (೨೦೦೨)

೨. ಡಾ. ವಿಕ್ರಮ ವಿಸಾಜಿ ಭಾಲ್ಕಿ (೨೦೦೩)

೩. ಶ್ರೀಮತಿ ಮೀನಾ ಮು. ಬೋರಳಕರ ಚಿಟಗುಪ್ಪಾ (೨೦೦೪)

೪. ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ ಬೀದರ (೨೦೦೫)

೫. ಶ್ರೀ ಸಿದ್ದರಾಮೇಶ್ವರ ಬೆಲ್ದಾಳ ಕೌಠಾ (ಬಿ) (೨೦೦೭)

೬. ಶ್ರೀ ಎಮ್.ವಿ. ದೇಶಪಾಂಡೆ ಬೀದರ (೨೦೦೮)

ಊ. ಬೀದರ ಜಿಲ್ಲೆಯ ಹಿರಿಯ ಸಾಹಿತಿಗಳಿಗೆ :

೧. ದೇಶಾಂಶ ಹುಡುಗಿ ಬೀದರ (೨೦೦೩)

೨. ಶ್ರೀ ಬಿ.ಎಸ್. ಖೂಬಾ ಗಡವಂತಿ (೨೦೦೪)

ಋ. ಮನೆಗೊಂಡು ವಚನ ಪ್ರವಚನದಿಂದ ಬಸವಧರ್ಮ ಪ್ರಸಾರ ಮಾಡುತ್ತಿರುವವರಿಗೆ:

೧. ಶರಣೆ ರತ್ನಮ್ಮಾ ನಾಗಯ್ಯಾ ಸ್ವಾಮಿ ಭಾಲ್ಕಿ (೨೦೦೪)

೨. ಶರಣೆ ಮಲ್ಲಮ್ಮ ಆರ್. ಪಾಟೀಲ ಭಾಲ್ಕಿ (೨೦೦೭)

೩. ಶರಣೆ ರೇಖಾ ಎಸ್. ಜೋತೆಪ್ಪನೂರ ಭಾಲ್ಕಿ (೨೦೦೭)

೪. ಶರಣೆ ವಿಜಯಲಕ್ಷ್ಮಿ ಪ್ರಭಾಕರ ಬೆಳಕೇರೆ ಭಾಲ್ಕಿ (೨೦೦೮)

ೠ. ಉತ್ತಮ ಓದುಗ ಪ್ರಶಸ್ತಿ :

೧. ಶ್ರೀ ಬಸವರಾಜ ಮಾಳಗೆ (೨೦೦೩)

೨. ಶ್ರೀ ಪ್ರಕಾಶ ದೇಶಮುಖ (೨೦೦೪)

೩. ಕು. ಸುಧಾ ನಾಯ್ಕ (೨೦೦೫)

೪. ಶ್ರೀ ಮೋಹನ ರೆಡ್ಡಿ (೨೦೦೭)

ಅಡಿ ಟಿಪ್ಪಣಿ

೧. ಚೆಂಬೆಳಕು ಪು.ಸಂ. ೨೬/೧೯೭೮

೨. ಬಸವನೈವೆದ್ಯ ಪು.ಸಂ. /೨೦೦೨

೩. ಶಿವಶರಣೆಯರ ವಚನಗಳು ಪು.ಸಂ. ೧೯/೨೦೦೨.

೩. ಶೈಕ್ಷಣಿಕ ಸಾಧನೆಗಳು :

ಕರ್ನಾಟಕ ಸಂಸ್ಕೃತಿಯ ಸಂದರ್ಭನೆಯಲ್ಲಿ ಲಿಂಗಾಯತ ಮಠಗಳದು ಪ್ರಮುಖ ಪಾತ್ರವೆಂಬುದನ್ನು ಮರೆಯುವಂತಿಲ್ಲ. ಅನ್ನದಾಸೋಹದ ಜೊತೆಗೆ ಈ ಮಠಗಳು ಜ್ಞಾನದಾಸೋಹವನ್ನು ಏರ್ಪಡಿಸಿ ನಾಡಿನ ಭವಿಷ್ಯವನ್ನು ಉಜ್ವಲವಾಗಿ ಯುವಕ ಯುವತಿಯರನ್ನು ನಿರಂತರವಾಗಿ ಸಿದ್ಧಗೊಳಿಸುತ್ತಿದೆ. ಕರ್ನಾಟಕದ ತುಂಬೆಲ್ಲಾ ಲಿಂಗಾಯತ ಮಠಗಳಿದ್ದು ಇವುಗಳಲ್ಲಿ ಅನೇಕ ಮಠಗಳು ಶಾಲೆ ಕಾಲೇಜುಗಳನ್ನು ನಡೆಸುತ್ತಿವೆ. ಕೆಲವು ವೈದ್ಯಕೀಯ ಹಾಗೂ ತಾಂತ್ರಿಕ ಕಾಲೇಜುಗಳನ್ನು ನಡೆಸುತ್ತಿವೆ. ಸರಕಾರ ಮಾಡುವ ಜ್ಞಾನದಾಸೋಹದ ಈ ಕಾರ್ಯವನ್ನು ಎಷ್ಟೋ ಲಿಂಗಾಯತ ಮಠಗಳು ಸಮರ್ಥವಾಗಿ ಅಷ್ಟೂ ಚೊಕ್ಕವಾಗಿ ಮಾಡುತ್ತಿವೆ. ಜನಸಾಮಾನ್ಯರಲ್ಲಿ ಮನೆ ಮಾಡಿಕೊಂಡಿದ ಅಜ್ಞಾನ, ಮೂಢನಂಬಿಕೆ ಸಣ್ಣತನ, ಸಂಕುಚಿತ ಮನೋಭಾವ, ದ್ವೇಷ, ಅಸೂಯೆ, ಜಾತಿಯತೆ ಮುಂತಾದುದನ್ನು ಹೋಗಲಾಡಿಸಿ ಇವು ಜನತೆಯನ್ನು ವಿಶಾಲ ಹೃದಯಿಗಳನ್ನಾಗಿಸುತ್ತಿದ ಸುಸಂಸ್ಕೃತವನ್ನಾಗಿಸುತ್ತಿವೆ. ಧರ್ಮದ ತತ್ವಗಳನ್ನು ಜನ ಸಾಮಾನ್ಯರಿಗೆ ಸುಲಭಗೊಳಿಸಿ ತಿಳಿ ಹೇಳುವ ಮಠದ ಅಧಿಪತಿಗಳು ಸಮಾಜದ ಮಾನವನ್ನು ಕಾಪಾಡುತ್ತಿದ್ದಾರೆ. ಸಮಾನತೆಯ ಹಂದರದ ಮೇಲೆ ನವಸಮಾಜವನ್ನು ನಿರ್ಮಿಸುವಲ್ಲಿ ಲಿಂಗಾಯತ ಮಠಗಳು ತುಂಬ ಮಹತ್ವದ ಕಾರ್ಯ ಮಾಡುತ್ತಿವೆ. ಒಂದರ್ಥದಲ್ಲಿ ಈ ಮಠಗಳು ಸಮಗ್ರ ಮನುಕುಲವನ್ನು ಸನ್ಮಾರ್ಗದಲ್ಲಿ ಮುನ್ನಡೆಸುವ ವಿದ್ಯಾ ಕೇಂದ್ರಗಳಾಗಿವೆ.

ಮಠ ಎಂಬ ಪದ ಸಂಸ್ಕೃತ ಮೂಲದ್ದು. ಇದರ ಅರ್ಥ ವಾಸಿಸು. ಶಿವಶರಣರು ಮಠವನ್ನು ಭಕ್ತರಮನೆ ಶರಣರ ಮಹಾ ಮನೆ ಎಂಬರ್ಥದಲ್ಲಿ ಬಳಸಿದ್ದಾರೆ. ಕಿಟಲ್ ಬರೆದ ಲೇಖನ ಮಠದ ಅರ್ಥ ಹೀಗಿದೆ. A hut, A cottage, A school, a devotees, deal Real sidenee, of a guru A temple ಅಮರ ಕೂಟದಲ್ಲಿ ಮಠ ಛಾತ್ರಾದಿ ನಿಲಯಂ ಎಂದಿದೆ. ಅಪ್ಪೆಯವರು ಮಠ ವೆಂದರೆ A place of learning A temple ಎಂದು ಅರ್ಥೈಸಿದ್ದಾರೆ. ಒಟ್ಟಿನಲ್ಲಿ ಮಠವೆಂದರೆ ಗುರುಗಳ ಹಾಗೂ ವಿದ್ಯಾರ್ಥಿಗಳು ವಾಸಸ್ಥಾನ ವಿದ್ಯಾಕೇಂದ್ರ ವಿದ್ಯಾಸಂಸ್ಥೆ ಎಂದಲ್ಲ ಅರ್ಥೈಸಬಹುದು.

ಮಠ ಮೂಲತಃ ವಾಸಿಸುವ ಪವಿತ್ರ ಸ್ಥಳವಾಗಿದ್ದು ಮುಂದೆ ಅದು ಓದಿಸೋ ಮಠ ಸಾಲಿಮಠ ವಿರಕ್ತ ಮಠ, ಕಲ್ಮಠ ದಾಸೋಹ ಮಠ, ಮೂರು ಸಾವಿರ ಮಠ, ಜಂಗಿಮಠ, ಗಚ್ಚಿನ ಮಠ, ಮುಂತಾಗಿ ಕಾರ್ಯ, ಆಯಾ ಊರುಗಳ ಹೆಸರು ಪಡೆದು ರೂಢಿಯಲ್ಲಿ ಬಂದುದನ್ನು ಕಾಣಬಹುದಾಗಿದೆ. ಮಠಗಳು ಇರುವುದು ಶಿಕ್ಷಣ ನೀಡುವ ಮೂಲಕ. ಸಮಾಜದ ಏಳ್ಗೆಗಾಗಿ ಇವು ಯಾರೊಬ್ಬರ ಆಸ್ತಿಗಳಾಗಿರದೆ ಸಮಸ್ತ ಸಮಾಜದ ಆಸ್ತಿಗಳಾಗಿದ್ದು. ಸಮಾಜೋನ್ನತ್ತಿಯ ಆ ಜನಸಮುದಾಯದ ಕಲ್ಯಾಣ ಕಾರ್ಯಗಳಲ್ಲಿ ಇವು ತೊಡಗಿಕೊಂಡಿರುವುದನ್ನು ಕಾಣಬಹುದು.

ಕಲ್ಯಾಣ ನಾಡು ಪ್ರಮುಖ್ಯವಾಗಿ ಬೀದರ, ಗುಲಬರ್ಗಾ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿದೆ. ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಗಡಿಭಾಗದ ಊರುಗಳು ಸಹಜವಾಗಿ ಈ ವ್ಯಾಪ್ತಿಗೆ ಒಳಪಡಿರುವುದು ಕಾಣಬಹುದಾಗಿದೆ.

ಭಾರತದಲ್ಲಿ ವಿವಿಧ ಧರ್ಮಗಳಿಗೆ ಸೇರಿದ ಸಂಸ್ಥೆಗಳು ಮಠಗಳು ದೇಶದ ಸಾಮಾಜಿಕ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಕ್ಕೆ ಮಹತ್ತರವಾದ ಸೇವೆಯನ್ನು ಸಲ್ಲಿಸುತ್ತಾ ಬರುತ್ತಿವೆ. ಇಂಥ ವಿಶಿಷ್ಟವಾದ ಜನಕಲ್ಯಾಣ ಸೇವಾ ಮಾರ್ಗದಲ್ಲಿ ಸಾಗಿದ ಮಠಗಳ ಹಿಂದೆ ತರ್ಕ ಶಕ್ತಿಗಳಾಗಿ ಪ್ರೇರಣಾ ಪಥನ ಚೈತ್ಯನ್ಯ ಮೂರ್ತಿಗಳಾಗಿ ದುಡಿದ ಸ್ವಾಮಿಗಳ ಕಾರ್ಯ ಪರೋಕ್ಷವಾಗಿ ಸಮಗ್ರ ಭಾರತದ ಜನಪ್ರಗತಿಗೆ ವಿವೇಕ ವರ್ಧನೆಗೆ ಆದರ್ಶವಾಗುವಂಥದ್ದು. ಈ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಕರ್ನಾಟಕದ ಮಠಗಳಲ್ಲಿ ಬೀದರ ಜಿಲ್ಲೆಯ ಭಾಲ್ಲಿ ಹಿರೇಮಠಕ್ಕೆ ತನ್ನದೆ ಆದ ವಿಶಿಷ್ಟ ಸ್ಥಾನವಿದೆ.

ಚನ್ನಬಸವ ಪಟ್ಟದೇವರು ಅಧಿಕಾರ ವಹಿಸಿಕೊಂಡ ನಂತರ ಭಾಲ್ಕಿ ಹಿರೇಮಠ ಸಂಸ್ಥಾನವು ಹಲವು ರಂಗಗಳಲ್ಲಿ ಮಹತ್ವದ ಮುನ್ನಡೆಯನ್ನು ಸಾಧಿಸಿತು. ತನ್ನ ಅರ್ಥಪೂರ್ಣ ಕಾರ್ಯಗಳಿಂದ ನಾಡಿನ ಸಾಂಸ್ಕೃತಿಕ ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಲೋಕದ ಗಮನವನ್ನು ಸೆಳೆಯಿತು. ಅದರಲ್ಲೂ ಪ್ರಮುಖವಾಗಿ ಕರ್ನಾಟಕ ಏಕೀಕರಣ. ಕನ್ನಡ ಶಾಲೆಗಳ ಸ್ಥಾಪನೆ ಉಚಿತ ಪ್ರಸಾದ ನಿಲಯಗಳ ಸ್ಥಾಪನೆ, ದಲಿತರಿಗೆ ಲಿಂಗದೀಕ್ಷೆಯಂಥ ಕಾರ್ಯಗಳು ಮಠದ ಕೀರ್ತಿಯನ್ನು ಹೆಚ್ಚಿಸಿದವು.

ಮನುಷ್ಯನ ಆತ್ಮಕ್ಕೆ ಆಕಾರ ಕೊಡುವುದೇ ಶಿಕ್ಷಣ ಎಂಬ ಎಡಿಸನ್ ವಿಚಾರ ಹಾಗೂ ಶಿಕ್ಷಣದಿಂದ ವ್ಯಕ್ತಿಯ ನಿರ್ಮಾಣ ಸಾಧ್ಯ ಎನ್ನುವ ಗಾಂಧೀಜಿಯ ಉಕ್ತಿಯಂತೆ ಜನರಲ್ಲಿ ಅರಿವು ಪ್ರಜ್ಞೆ ಮೂಡಿಸಲು ಮತ್ತು ಅಜ್ಞಾನವೆಂಬ ಅಂಧಕಾರ ಹೋಗಲಾಡಿಸಲು ಶಿಕ್ಷಣವೆಂಬ ದೀಪಿಕೆ ಅನಿವಾರ್ಯ. ಕೆಳಮಟ್ಟದಲ್ಲಿಯೇ ಸಂಸ್ಥಾನಯುಕ್ತ ಮತ್ತು ವಕಾಲ್ಪಿಕ ಶಿಕ್ಷಣ ಕೊಡಬೇಕೆಂಬ ಕಳಕಳಿಯಿಂದ ಪೂಜ್ಯರು ಶಿಕ್ಷಣ ಸಂಸ್ಥೆಯ ಸ್ಥಾಪಿಸಿದ್ದಾರೆ. ಪ್ರಾಥಮಿಕ ಹಂತದಿಂದ ಔದ್ಯೋಗಿಕ ಮಟ್ಟದ ಶಿಕ್ಷಣ ಶಾಖೆಗಳನ್ನು ಸಂಸ್ಥೆಯ ಅಡಿಯಲ್ಲಿ ಸಮರ್ಥವಾಗಿ ನಿಭಾಯಿಸುತ್ತಿರುವುದು ಅವರ ದಕ್ಷತೆಗೆ ಹಿಡಿದ ಕನ್ನಡಿಯಾಗಿದೆ. ಮಕ್ಕಳಲ್ಲಿ ಮಾನವಿಯ ಮೌಲ್ಯ ಕೌಶಲ್ಯ ಮತ್ತು ಕಲಾತ್ಮಕವಾದ ಗುಣಗಳನ್ನು ಬೆಳೆಸುವಲ್ಲಿ ಸಫಲರಾಗಿದ್ದಾರೆ. ಬಾಲಕರಿಂದ ಪಾಲಕರು ಪರಿವರ್ತನೆ ಯಾಗುವಂತಹ ಜೀವನ ಶಿಕ್ಷಣ ಕೊಡಿಸುವ ಪ್ರಾಮಾಣಿಕ ಪ್ರಭುತ್ವ ಮಾಡುತ್ತಿದ್ದಾರೆ. ಶಿಕ್ಷಣದಿಂದ ರಾಷ್ಟ್ರೀಯತೆ, ಐಕ್ಯತೆ ಮತ್ತು ಸುಸಂಸ್ಕೃತಿ ಮಾಡಲು ಸಾಧ್ಯವೆಂದರಿತ ಶ್ರೀಗಳು ಶಿಕ್ಷಣಕ್ಕೆ ಹೆಚ್ಚಾಗಿ ಪ್ರಾಮುಖ್ಯತೆ ಕೊಟ್ಟಿದ್ದಾರೆ.

ಮೂರು ವರುಷದ ಬುದ್ಧಿ ನೂರು ವರುಷ ಸಸಿಯಾಗಿ ಬಗ್ಗದ್ದು ಮರವಾಗಿ ಬಗ್ಗಿತೆ ಎನ್ನುವ ಗಾದೆಮಾತಿನಂತೆ ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಆದ್ಯತೆ ನೀಡಿದ್ದಾರೆ. ಶಿಕ್ಷಣದಿಂದ ಮಾತ್ರ ಸರ್ವಾಂಗೀಣ ವಿಕಾಸ ಸಾಧ್ಯವೆಂಬುದು ಅರಿತಿರುವ ಪೂಜ್ಯರು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟನ್ನು ಭಾಲ್ಕಿ ಕೇಂದ್ರ ಸ್ಥಳವನ್ನಾಗಿಸಿಕೊಂಡು ಸ್ಥಾಪಿಸಿರುವದು ಅದರ ಮಾಂದ್ರಪಿಯ ಧೊಸೀಲಕವೆನ್ನಬಹುದಾಗಿದೆ.

ಶ್ರೀಗಳು ಕೇವಲ ಧಾರ್ಮಿಕ, ಸಾಮಾಜಿಕ, ಅಭಿವೃದ್ಧಿ ಮಾಡಿದರೆ ಸಮಾಜ ಬೆಳವಣಿಗೆಯಾಗುವುದಿಲ್ಲ ಮತ್ತು ಸಮಾಜದಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಲು ಆಗುವುದಿಲ್ಲ ಎಂದು ತಿಳಿದವರು ಪೂಜ್ಯ ದೊಡ್ಡಪಗಳು ಶಿಕ್ಷಣ ಕ್ಷೇತ್ರಕ್ಕೆ ವಿಶೇಷವಾದ ಮಹತ್ವವನ್ನು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ದೃಷ್ಟಿಯಿಂದ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಸಾವಿರಾಜು ಜನರಿಗೆ ಶಿಕ್ಷಣವನ್ನು ನೀಡಿದರು. ಗುರುವಿನ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಹಾಕುವ ಪವಿತ್ರ ಕಾಯಕದೊಂದಿಗೆ ಶ್ರೀಗಳು ೧೯೯೨-೯೩ ರಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು. ಆ ಸಂಸ್ಥೆಯ ಆಶ್ರಯದಲ್ಲಿ ಅನೇಕ ಶಾಲೆಗಳು ಇಂದು ಕಾರ್ಯನಿರ್ವಹಿಸುತ್ತಿದೆ. ಚನ್ನಬಸವ ಪಟ್ಟದೇವರು ನೆಟ್ಟ ಆ ಮರಕ್ಕೆ ಗಳು ಪರಿಶ್ರಮ ಎಂಬ ನೀರನ್ನು ಸುರಿದು ಇಂದು ಹೆಮ್ಮರವಾಗಿ ಬೆಳಸಿದ್ದಾರೆ. ಈ ಶಿಕ್ಷಣ ಸಂಸ್ಥೆಯು ಇಂದು ರಾಜ್ಯಕ್ಕೆ ಒಂದು ಮಾದರಿಯಾಗಿದೆ. ಈ ಸಂಸ್ಥೆಯ ಅಡಿಯಲ್ಲಿ ಕೆಳಕಂಡ ಶಾಲೆ ಕಾಲೇಜು ನಡೆಸುತ್ತಿದ್ದಾರೆ. ಸಂಸ್ಥೆಯ ನೋಂದಣಿ ಸಂಖ್ಯೆ ಬಿಕೆ ೨೨/೯೩-೯೪ ಇದೆ.

ಕ್ರ. ಸಂ.	ಶಾಲೆಯ ಹೆಸರು	ಆರಂಭವಾದ ವರ್ಷ	ಒಟ್ಟು ಸಿಬ್ಬಂಧಿ ವರ್ಗ	ಒಟ್ಟು ವಿದ್ಯಾರ್ಥಿಗಳು
೧.	ಶ್ರೀ ಸಂಗಮೇಶ್ವರ ಪ್ರಾಥಮಿಕ ಶಾಲೆ ಭಾಲ್ಕಿ ಜಿ. ಬೀದರ.	೧೯೮೩-೮೪	೦೮	೪೨೨
೨.	ಶ್ರೀ ಸಂಗಮೇಶ್ವರ ಪ್ರೌಢ ಶಾಲೆ ಭಾಲ್ಕಿ ಜಿಃ ಬೀದರ.	೧೯೯೨-೯೩	೦೬	೨೫೦
೩.	ಶ್ರೀ ಚನ್ನಬಸವೇಶ್ವರ ಗಿ ಎರುಕುಲ ವಸತಿ ಕಿರಿಯ ಪ್ರಾಥಮಿಕ ಶಾಲೆ ಕರಡ್ಯಾಳ ತಾಃ ಭಾಲ್ಕಿ ಜಿಃ ಬೀದರ.	೧೯೯೨-೯೩	೦೭	೧೩೦
೪.	ಶ್ರೀಮತಿ ಸಂಗಮ್ಮ ಸಂಗ್ರಾಮಪ್ಪ ಬಿರಾದಾರ ಪ್ರೌಢ ಶಾಲೆ ಕಾಸಾರ ತುಗಾಂವ ತಾಃ ಭಾಲ್ಕಿ ಜಿಃ ಬೀದರ.	೧೯೯೨-೯೪	೦೬	೧೦

೫.	ಶ್ರೀ ಚನ್ನಬಸವೇಶ್ವರ ಗುರುಕುಲ ಸಂಚಾಲಿತ ಶಾಖೆ ಪ್ರಾಥಮಿಕ ಶಾಲೆ ಕರಡ್ಯಾಳ ತಾಃ ಭಾಲ್ಕಿ ಜಿಃ ಬೀದರ.	೧೯೯೩-೯೪	೧೪	೫೦೦
೬.	ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿ ಹಿರಿಯ ಪ್ರಾಥಮಿಕ ಶಾಲೆ ಕರಡ್ಯಾಳ ತಾಃ ಭಾಲ್ಕಿ ಜಿಃ ಬೀದರ.	೧೯೯೬-೯೭	೧೮	೨೦೦
೭.	ಬಸವ ಗುರುಕುಲ ಶಿಶು ವಿಹಾರ ಪ್ರಾಥಮಿಕ ಶಾಲೆ ಔರಾದ(ಬಿ) ಜಿಃ ಬೀದರ.	೧೯೯೬-೯೭	೧೪	೪೦೩
೮.	ಶ್ರೀ ಗುರಪ್ಪಾ ಟೊಣ್ಣೆ ಶಿಶು ವಿಹಾರ ಪ್ರಾಥಮಿಕ ಶಾಲೆ ಕಮಲನಗರ ತಾಃ ಔರಾದ ಜಿಃ ಬೀದರ.	೧೯೯೬-೯೭	೨೩	೬೨೦
೯.	ಶ್ರೀ ಚನ್ನಬಸವೇಶ್ವರ ಗುರುಕುಲ ಹಿರಿಯ ಪ್ರಾಥಮಿಕ ಶಾಲೆ ಕರಡ್ಯಾಳ ತಾಃ ಭಾಲ್ಕಿ ಜಿಃ ಬೀದರ.	೧೯೯೭-೯೮	೧೯	೬೫೦
೧೦.	ಶ್ರೀ ಚನ್ನಬಸವೇಶ್ವರ ಗುರುಕುಲ ಹಿರಿಯ ಪ್ರೌಢ ಶಾಲೆ ಕರಡ್ಯಾಳ ತಾಃ ಭಾಲ್ಕಿ ಜಿಃ ಬೀದರ.	೧೯೯೯-೨೦೦೦	೧೪	೨೨೫
೧೧.	ಗುರುಪ್ರಸಾದ ಶಿಶು ವಿಹಾರ ಪ್ರಾಥಮಿಕ ಶಾಲೆ ಹಿರೇಮಠ ಆವರಣ ಭಾಲ್ಕಿ ಜಿಃ ಬೀದರ.	೨೦೦೧-೦೨	೧೮	೫೫೦
೧೨.	ಡಾ. ಚನ್ನಬಸವ ಪಟ್ಟದ್ದೇವರು ಶಿಶು ವಿಹಾರ ಪ್ರಾಥಮಿಕ ಶಾಲೆ	೨೦೦೧-೦೨	೧೪	೨೫೦
೧೩.	ಅಲ್ಲಮ ಪ್ರಭು ಶಿಶು ವಿಹಾರ ಪ್ರಾಥಮಿಕ ಶಾಲೆ ಕಾಸರತುಗಾಂವ ತಾಃ ಭಾಲ್ಕಿ ಜಿಃ ಬೀದರ.	೨೦೦೩-೦೪	೦೮	೨೦೦
೧೪.	ಬಸವ ಗುರುಕುಲ ಪ್ರೌಢ ಶಾಲೆ ಔರಾದ ಜಿಃ ಬೀದರ.	೨೦೦೩-೦೪	೦೭	೧೦೦

೧೫.	ಅನುಭವ ಮಂಟಪ ಪ್ರೌಢ ಶಾಲೆ ಸಂತಪುರ ತಾಃ ಔರಾದ ಜಿಃ ಬೀದರ.	೨೦೦೩–೦೪	೦೮	೭೦
೧೬.	ಡಾ. ಚನ್ನಬಸವ ಪಟ್ಟದ್ದೇವರು ಪ್ರೌಢ ಶಾಲೆ ಕಮಲನಗರ ತಾಃ ಔರಾದ ಜಿಃ ಬೀದರ.	೨೦೦೦–೦೨	೧೮	೬೦
೧೭.	ಡಾ. ಚನ್ನಬಸವ ಪಟ್ಟದ್ದೇವರು ಕೈಗಾರಿಕಾ ತರಬೇತಿ ಕೇಂದ್ರ ತಾಃ ಔರಾದ ಜಿಃ ಬೀದರ.	೨೦೦೩–೦೪	೦೭	೫೦
೧೮.	ಡಾ. ಚನ್ನಬಸವೇಶ್ವರ ಗುರುಕುಲ ವಸತಿ ವಿಜ್ಞಾನ ಪದವಿಪೂರ್ವ ಕಾಲೇಜು ಕರಡ್ಯಾಳ ತಾಃ ಭಾಲ್ಕಿ.	೨೦೦೩–೦೪	೧೧	೧೨೫
೧೯.	ಡಾ. ಚನ್ನಬಸವೇಶ್ವರ ಗುರುಕುಲ ಸಂಚಾಲಿತ ಪ್ರೌಢ ಶಾಲೆ ಕರಡ್ಯಾಳ ತಾಃ ಭಾಲ್ಕಿ ಜಿಃ ಬೀದರ.	೨೦೦೪–೦೫	೦೮	೧೫೦
೨೦.	ಬಸವ ಗುರುಕುಲ ಶಿಶು ವಿಹಾರ ಪ್ರಾಥಮಿಕ ಶಾಲೆ ಮೋರ್ಗಿ ತಾಃ ನಾರಾಯಣಖೇಡ ಜಿಃ ಬೀದರ.	೨೦೦೪–೦೫	೨೧	೨೪೧
೨೧.	ಗುರುಕುಲ ಡಿ. ಇಡ್.ಕಾಲೇಜ ಕರಡ್ಯಾಳ	೨೦೦೪–೦೫	೦೬	೧೦೦
೨೨.	ಚನ್ನಬಸವ ಪಟ್ಟದೇವರ ಶಿಶು ವಿಹಾರ ಪ್ರಾಥಮಿಕ ಶಾಲೆ ಕಂದಗೂಳ ತಾಃ ಹುಮನಾಬಾದ ಜಿಃ ಬೀದರ.	೨೦೦೫–೦೬	೦೯	೨೫೩
೨೩.	ಜಿ.ಎಚ್.ಶಿವಮಠ ನಿಡಗುಂದಿ ಕೈಗಾರಿಕಾ ತರಬೇತಿ ಕೇಂದ್ರ ಭಾಲ್ಕಿ ಜಿಃ ಬೀದರ.	೨೦೦೬–೦೭	೦೬	೫೦
೨೪.	ಸಿದ್ದಮ್ಮಾ ಕಲ್ಯಾಣರಾವ ಪಾಟೀಲ ಗುರುಕುಲ ಪ್ರಾಥಮಿಕ ಶಾಲೆ	೨೦೦೮–೦	೦೬	೧೦೨
೨೫.	ಸಚ್ ಪರ್ಸನ ಇನ್ಸ್ಟ್ಯೂಟ್ ಗುರುಕುಲ ಕ್ಯಾಂಪಸ ಕರಡ್ಯಾಳ.			

ಶ್ರೀ ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯ :

ಕ್ರಿ.ಶ. ೧೯೩೬ ರಲ್ಲಿ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ಬಡವ ಮತ್ತು ಅನಾಥ ಮಕ್ಕಳಿಗಾಗಿ ಉಚಿತ ಶಿಕ್ಷಣ ಜೊತೆಗೆ ವಸತಿ ಮತ್ತು ಪ್ರಸಾದ ನಿಲಯ ಮೋರ್ಗಿಯಲ್ಲಿ ಆರಂಭಿಸಿದರು. ಇಪತ್ತು ವಿದ್ಯಾರ್ಥಿಗಳಿಂದ ಆರಂಭವಾದ ಈ ಪ್ರಸಾದ ನಿಲಯ ಮುಂದು ಅನಿವಾರ್ಯ ಕಾರಣಗಳಿಂದಾಗಿ ಸಂಗಮನಗರಕ್ಕೆ ಮತ್ತು ಭಾಲ್ಕಿಗೆ ವರ್ಗಾವಣೆಗೊಂಡಿತು. ಇಂದು ಭಾಲ್ಕಿಯಲ್ಲಿ ನಡೆಸಿಕೊಂಡು ಬರಲಾಗುತ್ತಿರುವ ಈ ಪ್ರಸಾದ ನಿಲಯದಲ್ಲಿ ನಾಲ್ಕುನೂರಕ್ಕೂ ಅಧಿಕವಾಗಿ ಬಡವ ಮತ್ತು ಅನಾಥ ಮಕ್ಕಳು ಉಚಿತ ಶಿಕ್ಷಣ ವಸತಿ ಮತ್ತು ಪ್ರಸಾದ ವ್ಯವಸ್ಥೆ ಪಡೆಯುತ್ತಿದ್ದಾರೆ. ಸಮಾಜದ ಎಲ್ಲಾ ಮತ ಧರ್ಮಗಳ ವಿದ್ಯಾರ್ಥಿಗಳು ಈ ಪ್ರಸಾದ ನಿಲಯದ ಸೌಲಭ್ಯ ಪಡೆಯುತ್ತಿದ್ದಾರೆ. ಈ ವ್ಯವಸ್ಥೆ ಒಂದು ಸಾವಿರ ಮಕ್ಕಳಿಗೆ ದೊರೆಯಬೇಕೆಂಬ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುತ್ತಿದೆ.

ಪ್ರಸಾದ ನಿಲಯದ ಪ್ರಸ್ತೂತತೆ :

ಆಗಿನ ಕಷ್ಟಮಯ ಸಮಯದಲ್ಲಿ ಭಕ್ತರು ಕೈಯಿಂದ ನೀಡುವ ಧಾನ್ಯಗಳ ದಾನಕ್ಕೆ ಮುಷ್ಠಿ ಪಡ್ ಎಂದು ಹೆಸರಿದ್ದವರೇ ಲಿಂ. ಡಾ. ಚನ್ನಬಸವ ಪಟ್ಟದೇವರು. ಒಂದೆಡೆ ಅನ್ಯರ ಆಡಳಿತ ಮತ್ತೊಂದೆಡೆ ಉರ್ದು ಧರ್ಮಾಂಧರ (ರಜಾಕಾರರು) ಕಾರ್ಯ ಆಡಳಿತ ಭಾಷೆ ಉರ್ದುವಾಗಿತ್ತು. ಅನ್ಯ ಭಾಷೆಯ ಕಲಿಕೆಗೆ ಇಲ್ಲಿ ಅವಕಾಶವೇ ಇರಲಿಲ್ಲ. ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಹೊರಗೆ ಉರ್ದು ಫಲಕ ಹಾಕಿ ಒಳಗೆ ಕನ್ನಡದ ವಚನಗಳನ್ನು ಬೋಧಿಸಿದ ಕೀರ್ತಿ ಈ ಉಚಿತ ಪ್ರಸಾದ ನಿಲಯದಿಂದ ಪ್ರಾರಂಭಗೊಂಡಿದ್ದು ವಿಶೇಷವಾಗಿದೆ. ಆಗಿನ ಕಾಲದಲ್ಲಿ ಸಾಮಾನ್ಯರು ಮತ್ತು ಮಧ್ಯಮ ವರ್ಗದವರು ಉದ್ಯೋಗ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದಿಲ್ಲ. ಜೀವನದ ನಿರ್ವಹಣೆಗೆ ನೆರವಾಗಬೇಕಾದಷ್ಟು ಓದಲು ಬರೆಯಲು ಮತ್ತು ಲೆಕ್ಕ ಮಾಡಲು ಬಂದೆ ಸಾಕಿತ್ತು.

ಇಂಥ ಪರಿಸ್ಥಿತಿಯ ಮಧ್ಯ ಬೀದರ ಜಿಲ್ಲೆಯಲ್ಲಿ ಆಗಾಗ ಬರಗಾಲವೂ ಕಾಡುತ್ತಿತ್ತು. ಬಡತನದ ಬಗೆಯೂ ಸಾಕಷ್ಟಿತ್ತು. ಭಾಲ್ಕಿ ಹಿರೇಮಠ ಸಂಸ್ಥಾನದ ಭಕ್ತಾದಿಗಳು ನೆರೆಯ ಮಹಾರಾಷ್ಟ್ರ ಮತ್ತು ಆಂಧ್ರದ ಗಡಿ ಗ್ರಾಮಗಳಲ್ಲಿ ಸಾಕಷ್ಟಿದ್ದರು. ಇವರಲ್ಲೆರ ಮುಂದಿನ ಭವಿಷ್ಯ ಉಜ್ವಲವಾಗಬೇಕಾದರೆ ಬರೆಗೈಯ ಆಶೀರ್ವಾದದಿಂದ ಏನು ಆಗದೆಂಬ ದಿಟವನ್ನು ಚನ್ನಬಸವ ಪಟ್ಟದೇವರು ಅರಿತಿದ್ದರು. ಶಿಕ್ಷಣದ ಮೂಲಕ ಮಠದ ಭಕ್ತರ ಆಶಾದೀಪಿಕೆ ಬೆಳಗಬಲ್ಲದು ಎಂಬುದು ಅವರ ಅಂತರ ದೃಷ್ಟಿಯಾಗಿತ್ತು. ತಡಮಾಡದೇ ಕೆಲವು ಭಕ್ತಾದಿಗಳ ಮಕ್ಕಳನ್ನು ವಿದ್ಯೆಗೆ ಅಣಿಗೊಳಿಸಿದರು. ಅವರೆಲ್ಲರ ಅನ್ನ, ಆಶ್ರಯ ವಿದ್ಯೆಯ ಹೊಣೆಯನ್ನು ಹೊತ್ತುಕೊಂಡರು. ಆದರೆ ಮಠಕ್ಕೂ ಹೇಳಿಕೊಳ್ಳುವಂಥ ಆದಾಯ ಇರಲಿಲ್ಲ.

ಭಕ್ತರನೆರನೇ ಮಠಕ್ಕೆ ಆಶ್ರಯವಾಗಿತ್ತು. ಹೀಗಾಗಿ ಚನ್ನಬಸವರು ಸಶಕ್ತ ಭಕ್ತರ ಮನೆಗಳಲ್ಲಿ ಜೋಳಿಗೆಗಳನ್ನು ಇದ್ದುದು ದಿನ ನಿತ್ಯದ ಶ್ರಮದಲ್ಲಿನ ಒಂದಷ್ಟು ಭಾಗವನ್ನು ತಮ್ಮ ಶಕ್ತ್ಯಾನುಸಾರ ಜೋಳಿಗೆಯಲ್ಲಿ ಹಾಕುವಂತೆ ಹೇಳಿದರು. ಆ ಹಣಕ್ಕೆ ಬಂದಿತ್ತು. ಆದರೆ ಧಾನ್ಯಗಳು ಭಕ್ತರ ಕೈಯಲ್ಲಿ ಇರುತ್ತಿತ್ತು. ಅದನ್ನೆ ಭಕ್ತರು ದಿನನಿತ್ಯ ಅಷ್ಟೂ ಇಷ್ಟೂ ಹಾಕುತ್ತಿದ್ದರಿಂದ ಜೋಳಿಗೆ ತುಂಬಿದಾಗ ಮಠಕ್ಕೆ ಸಂದೇಶ ರವಾನಿಸುತ್ತಿದ್ದರು. ಗುರುಗಳು ಆ ಧಾನ್ಯಗಳನ್ನು ಚೀಲದಲ್ಲಿ ತುಂಬಿಕೊಂಡು ಕುದುರೆಯ ಮೇಲೆ ಹೊತ್ತು ತರುತ್ತಿದ್ದರು. ಈಗಿನ ಔರಾದ ತಾಲೂಕಿನ ಪಂಗಮೆದ ಮಾಂಜ್ರಾನದಿ ಮೇಲಿರುವ ಆಶ್ರಮದಲ್ಲಿ ಪ್ರಸಾದ ನಿಲಯ ಮತ್ತು ಶಾಲೆ ಇತ್ತು. ನದಿಗೆ ಪ್ರವಾಹ ಬಂದರೂ ಓದುವ ಮಕ್ಕಳು ಉಪವಾಸ ಇರಬಾರದೆಂಬ ಮದತ್ತೆಯಿಂದ ತಲೆಗೆ ಒಂದಿಷ್ಟು ಧಾನ್ಯಗಳನ್ನು ಕಟ್ಟಿಕೊಂಡು ಈಜಾಡಿ ಬಂದು ಪಟ್ಟದ್ದೇವರು ಅನ್ನ ಹಾಕಿದ್ದರೆಂದು ಅವರ ಸಮಕಾಲೀನರು ನೆನೆಸುತ್ತಾರೆ.

ಪ್ರಸಾದ ನಿಲಯದಿಂದ ಬೆಳಗಿದವರು :

ಸಾಕಷ್ಟು ಕಷ್ಟಪಟ್ಟು ಬೆಳಗಿದ ಹಾನಗಲ ಶ್ರೀ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಊಟ ಮಾಡಿದ ಹಲವಾರು ಇಂದು ಸಮಾಜದ ಪ್ರಮುಖ ವಾಹಿನಿಯಲ್ಲಿ ಮಿಂಚುವ ಪ್ರತಿಭೆಗಳಾಗಿದ್ದಾರೆ. ರಾಜ್ಯ, ರಾಷ್ಟ್ರದಲ್ಲಿಷ್ಟು ಅಲ್ಲ ವಿದೇಶಗಳಲ್ಲೂ ಹೆಸರು ಮಾಡಿದ್ದಾರೆ. ಈಚೆಗೆ ಬೀದರದಲ್ಲಿ ಜರುಗಿದ ಅಖಿಲ ಭಾರತ ೭೨ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶಾಂತರಸರು ಭಾಲ್ಕಿಯ ಈ ಪ್ರಸಾದ ನಿಲಯದ ಅನ್ನವನ್ನು ಸ್ವೀಕರಿಸಿ ವಿದ್ಯೆ ಕಲಿತಿದರು. ಹೀಗೆ ಮಠದ ಈಗಿನ ಪೀಠಾಧಿಪತಿ ಮ.ಘ.ಚ. ಬಸವಲಿಂಗ ಪಟ್ಟದ್ದೇವರು ಸಹ ಹಿಂದೊಮ್ಮೆ ಇಲ್ಲಿನ ವಿದ್ಯಾರ್ಥಿಗಳೆ. ಅನೇಕ ವಿದ್ಯಾರ್ಥಿಗಳು ವರಿಷ್ಠ ಪತ್ರಕರ್ತರು, ಪ್ರಾಧ್ಯಾಪಕರು, ವೈದ್ಯರು, ವಕೀಲರು, ಸಾಹಿತಿಗಳು ಆಗಿ ಮಠದ ಕೀರ್ತಿಯ ಜೊತೆಗೆ ಜಿಲ್ಲೆಯ ಹಿರಿಮೆಯನ್ನು ಸಾಗುತ್ತಿದ್ದಾರೆ.

ಇಲ್ಲಿನ ವಿದ್ಯಾರ್ಥಿಗಳು ವಿದೇಶಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಇಂಗ್ಲೇಂಡನ ಮಿಚಿಗನ್ ಯುನಿವರ್ಸಿಟಿಯ ಏಂಜಿನಿಯರಿಂಗ ಕಾಲೇಜನಲ್ಲಿ ಇಲ್ಲಿನ ಹಳೆಯ ವಿದ್ಯಾರ್ಥಿ ಡಾ. ಬಾಬುರಾವ ಫತ್ತೆಪೂರ ಸಂಶೋಧನಾ ಅಧಿಕಾರಿಯಾಗಿದ್ದಾರೆ. ಇಲ್ಲಿನ ಸುಜಿತ ಪಾಟೀಲ ಅಮೇರಿಕಾದ ಸಾಫ್ಟವೇರ ಏಂಜಿನೀಯರ್ ಎಂದು ಸೇವೆ ಸಲ್ಲಿಸುತ್ತಿದ್ದಾರೆ. ರುದ್ರಮಣಿ ಹಿರೇಮಠ ಎಂಬುವವರು ಸಿಂಗಾಪುರನಲ್ಲಿ ಶಿಪ್ಪಿಂಗ್ ಕಾರ್ಪೋರೇಷನ್‌ನ ಉನ್ನತ ಅಧಿಕಾರಿ ಇದ್ದಾರೆ. ಹೀಗೆ ಈ ಪ್ರಸಾದ ನಿಲಯದ ಹಳೆಯ ವಿದ್ಯಾರ್ಥಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇಲ್ಲಿ ಓದಿದ್ದೇನೆಂದು ಹೇಳುವುದೇ ಒಂದು ಮಹಾನ ಪ್ರಶಸ್ತಿ ಪಡೆದಂತೆ ಎಂಬ ಹಳೆಯ ವಿದ್ಯಾರ್ಥಿಗಳ ಮನದಾಳದ ಮಾತು ವಾಸ್ತವಿಕತೆಯ ಮುತ್ತುಗಳಾಗಿ ಮೀನುಗತ್ತಿವೆ. ಈಗಲೂ ಇಲ್ಲಿ ಸುಮಾರು ೩೦೦ ವಿದ್ಯಾರ್ಥಿಗಳು ಸರ್ವಜನಾಂಗದ ತೋಟದ ಹೂಗಳಂತೆ ಅರಳುತ್ತಿದ್ದಾರೆ.

ಈಗಿನ ಪೀಠಾಧಿಪತಿ ಶ್ರೀಮದ ಘನಲಿಂಗ ಚಕ್ರವರ್ತಿ ಬಸವಲಿಂಗ ಪಟ್ಟದ್ದೇವರು ಈ ಪ್ರಸಾದ ನಿಲಯದ ಸರ್ವಾಂಗೀಣ ವಿಕಾಸಕ್ಕೆ ಹಗಲಿರಳು ಶ್ರಮಿಸುತ್ತಿದ್ದಾರೆ. ಸುಮಾರು ಒಂದೂ ಸಾವಿರಕ್ಕೂ ಅಧಿಕ ಮಕ್ಕಳು ಈ ಪ್ರಸಾದ ನಿಲಯದಲ್ಲಿ ಆಶ್ರಯ ಪಡೆದು ವಿದ್ಯಾರ್ಜನೆ ಮಾಡಬೇಕೆಂಬ ಹಂಬಲ ತಮ್ಮದಾಗಿದೆ ಎನ್ನುತ್ತಾರೆ. ಆಗ ನಾವು ಓದುತ್ತಿದ್ದಾಗ ಈಗ ಇಲ್ಲಿ ನಾಲ್ಕನೂರಕ್ಕೂ ಅಧಿಕ ಬಡ ವಿದ್ಯಾರ್ಥಿಗಳು ಇದ್ದಾರೆ. ಮುಂದೆ ಸಾವಿರಕ್ಕೂ ಮಿಗಿಲಾದ ಮಕ್ಕಳಿಗೆ ಆಶ್ರಯ ನೀಡುವಷ್ಟು ಆರ್ಥಿಕ ಶಕ್ತಿ ಪೂಜ್ಯ ಗುರುಗಳು ಕದುಣಿಸಿದ್ದಾರೆನ್ನುತ್ತಾರೆ. ಬಸವಲಿಂಗ ಗುರು ಅವರ ಆಶಯಕ್ಕೆ ಭಕ್ತರ ಸಹಕಾರ ಮತ್ತು ಶ್ರಮ ದೊರಕಲಿ ಎಂದು ಹಾರೈಸೋಣಾ.

ಕರಡಿಯಾಳದ ಚನ್ನಬಸವೇಶ್ವರ ಗುರುಕುಲ :

ಕನ್ನಡ ನಾಡಿನಲ್ಲಿ ಅಲ್ಲೊಂದು ಇಲ್ಲೊಂದು ಎನ್ನುವಂತೆ ಬೆಳವಣಿಗೆಯ ಶಿಕ್ಷಣ ಸಂಸ್ಥೆಗಳು ನಿರ್ಮಾಣವಾಗುತ್ತಿದೆ. ಅವರುಗಳಲ್ಲಿ ಭಾಲ್ಕಿ ಹಿರೇಮಠದ ಯುವಯುತಿ ಶ್ರೀಮದ ಘನಲಿಂಗ ಚಕ್ರವರ್ತಿ ಬಸವಲಿಂಗ ಪಟ್ಟದ್ದೇವರು ನೇತ್ರತ್ವದಲ್ಲಿ ನಿರ್ಮಾಣವಾಗಿರುವ ಕರಡಿಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿಶಾಲೆ ವಿಶೇಷವಾಗಿ ಗಮನಸೆಳೆಯುವಂಥದ್ದಾಗಿದೆ. ಇಂಗ್ಲೀಷ ಸ್ಕೂಲಗಳ ವ್ಯಾಮೋಹದ ಈ ಕಾಲದಲ್ಲಿ ಆ ಸ್ಕೂಲಗಳಿಗೆ ಸವಾಲೆಂಬಂತೆ ಇದೇ ಅನುಭವ ಮಂಟಪದ ನಾಡಿನಲ್ಲಿ ಕನ್ನಡದಲ್ಲಿ ಚನ್ನಬಸವೇಶ್ವರ ಗುರುಕುಲ ಮೈವೆತ್ತಿನಿಂತಿದೆ. ಮಾನವೀಯ ಸಂಸ್ಕೃತಿಯ ನೆಲೆಯಲ್ಲಿ ಅದು ಸಮಾಜೊದ್ದಾರವ ಪರಮ ಗುರಿ ಹೊತ್ತು ಸರ್ವಾಂಗ ಸುಂದರವಾಗಿ ಬೆಳೆಯುತ್ತಿರುವುದನ್ನು ಕಾಣಬಹುದಾಗಿದೆ.

ಚನ್ನಬಸವೇಶ್ವರ ಗುರುಕುಲ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಕರಡಿಯಾಳ ಗ್ರಾಮದಲ್ಲಿ ನಿರ್ಮಾಣವಾಗಿದೆ. ಕರಡ್ಯಾಳ, ಕರಡ್ಯಾಳ ಎಂಬ ಹೆಸರುಗಳಿಂದಲೂ ಕರೆಸಿಕೊಳ್ಳುವ ಕರಡಿಯಾಳ ಗ್ರಾಮ ಭಾಲ್ಕಿಯಿಂದ ಪೂರ್ವಕ್ಕೆ ಕೇವಲ ಏಳು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ವಿಶಾಲವಾದ ಹೊರ ಬಯಲಿನ ನಿಸರ್ಗದತ್ತ ನಿರ್ಜನ ಪ್ರದೇಶದಲ್ಲಿ ವೇದಿಪ್ಯ ಮಾನವಾಗಿ ಕಂಗೊಳಿಸುವ ಈ ಗುರುಕುಲ ಶಿಕ್ಷಣ ಮಹರ್ಷಿ ಲಿಂ.ಡಾ.ಚನ್ನಬಸವ ಪಟ್ಟದೇವರ ಸತ್ಯ ಸಂಕಲ್ಪದ ಸಾಕಾರ ರೂಪ.

ಚನ್ನಬಸವೇಶ್ವರ ಗುರುಕುಲ ಜೂನ ೧೫, ೧೯೯೨ ರಂದು ಭಾಲ್ಕಿ ಹಿರೇಮಠದ ಪ್ರಶಾಂತವಾದ ಪರಿಸರದಲ್ಲಿ ಪ್ರಾರಂಭವಾಯಿತು. ಮೂವರು ಶಿಕ್ಷಕರು ಹಾಗೂ ನಲವತ್ತು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಗುರುಕುಲ ನಾಲ್ಕು ವರ್ಷಗಳವರೆಗೆ ಮಠದಲ್ಲಿಯೇ ನಡೆಯಿತು. ತನ್ನ ಐದನೆಯ ವರುಷದಲ್ಲಿ ಅವು ಸ್ಥಳದ ಅಭಾವದಿಂದಾಗಿ ಹಿರೇಮಠದಿಂದ ಬೀಳ್ಕೊಂಡಿತು. ಭಾಲ್ಕಿ ಪಟ್ಟಣದ ಪ್ರಕ್ಷುಬ್ಧ ವಾತಾವರಣವನ್ನು ಮಾಡಿ ಕರಡ್ಯಾಳ ಗ್ರಾಮದ ಹೊರಗೆ ಭಾಲ್ಕಿ , ಬೀದರ ಮುಖ್ಯ ರಸ್ತೆಯ ಅನತಿ ದೂರದಲ್ಲಿ ಎತ್ತರವೂ. ಪ್ರಶಸ್ತವೂ ಆದ

ಪ್ರಕೃತಿರಮ್ಯ ಪ್ರದೇಶದಲ್ಲಿ ಒಂದು ನೆಲೆಯಾರಿತು. ಗುರುಕುಲಕ್ಕೆಂದೇ ಖರೀದಿಸಿದ ಈ ಪ್ರದೇಶದಲ್ಲಿ ಆಗ ಗುರುಮಠ ಮತ್ತು ಲಿಂಗಮಠ ಎಂಬ ಎರಡು ಕಟ್ಟಡಗಳು ಸಜ್ಜಾಗಿದ್ದವು.

ಹೊರಾಂಗಣ ಒಳಾಂಗಣ :

ಚನ್ನಬಸವೇಶ್ವರ ಗುರುಕುಲ ೪೦ ಎಕರೆ ಭೂಮಿಯನ್ನು ಹೊಂದಿದೆ. ಎತ್ತರವಾಗಿ ಬೆಳೆದ ಮಾವು, ಬೇವು, ತೆಂಗು, ನೇರಳೆ, ಆಲ ಮೊದಲಾದ ಮರಗಳ ಮಧ್ಯದಲ್ಲಿ ವಿವಿಧ ಹೂ ಬಳ್ಳಿಗಳೊಂದಿಗೆ ತುಂಬ ಸೊಗಸಾಗಿ ಶೋಭಿಸುತ್ತಿರುವ ಗುರುಕುಲಕ್ಕೀಗ ೧೧ ವರ್ಷ, ೧೦ ವಸಂತಗಳನ್ನು ನಿರಾತಂಕವಾಗಿ ಕಳೆದ ಸಂತೋಷದಲ್ಲಿ ದಶಮಾನೋತ್ಸವವನ್ನು ಆಚರಿಸುವ ಸಂಭ್ರಮದಲ್ಲಿರುವ ಅದು ಒಂದು ಮಾದರಿ ಶಾಲೆಗೆ ಯಾವ ಅನುಕೂಲಗಳು ಬೇಕೋ ಆ ಎಲ್ಲಾ ಅನುಕೂಲಗಳನ್ನು ಪಡೆದು ನಿಂತಿದೆ. ಕಟ್ಟಡ ಸಿಬ್ಬಂಧಿ, ಗ್ರಂಥಾಲಯ, ಕಂಪ್ಯೂಟರ, ಪೀಠೋಪಕರಣ, ಪಾಠೋಪಕರಣ, ಪ್ರಯೋಗಾಲಯ, ಕ್ರೀಡಾಂಗಣ, ಚಿತ್ರಕಲೆ, ಸಾಂಸ್ಕೃತಿಕ ಕಲೆ, ಗೋಶಾಲೆ, ಲಾಂಡ್ರಿ, ಕ್ಷೌರ, ಬಿಸಿನೀರು ಹೀಗೆ ಮಕ್ಕಳ ತನು, ಮನ, ಬುದ್ಧಿ, ಭಾವ, ಆತ್ಮಶಕ್ತಿಗಳ ಸಂಸ್ಕಾರಕ್ಕೆ ಅಗತ್ಯವಿರುವ ವ್ಯವಸ್ಥೆಗಳನ್ನೆಲ್ಲಾ ಅದು ಅಳವಡಿಸಿಕೊಂಡಿದೆ.

ಗುರುಕುಲದ ಕಟ್ಟಡ ವಿಶಾಲ ಸುಂದರ ಸುಸಜ್ಜಿತವಾಗಿದೆ. ತುಂಬ ಅಚ್ಚುಕಟ್ಟದಿಂದ ಕೂಡಿದೆ. ವಸತಿ, ವರ್ಗಗಳಿಗಾಗಿ, ಮಾತ್ರ ಮಾತ್ರವಲ್ಲದೆ ಅಡಿಗೆ, ಪ್ರಸಾದ, ಉಗ್ರಾಣ, ತರಕಾರಿ, ಆಸ್ಪತ್ರೆ, ಗ್ರಂಥಾಲಯ, ಕಾರ್ಯಾಲಯ, ಪ್ರಾರ್ಥನಾ ಮಂದಿರ, ಶೌಚಾಲಯ, ಸ್ನಾನ, ಲಾಂಡ್ರಿಗಳಿಗಾಗಿಯೂ ಅದು ಪ್ರತ್ಯೇಕ ಕೋಣೆಗಳನ್ನು ಹೊಂದಿದೆ. ಈ ಕೋಣೆಗಳಲ್ಲಿ ಶೌಚ, ಸ್ನಾನ, ಲಾಂಡ್ರಿ, ಕೋಣೆಗಳನ್ನು ಹೊರತುಪಡಿಸಿ ಉಳಿದ ಕೋಣೆಗಳಿಗೆಲ್ಲಾ ಬಸವಾದಿ ಶರಣ ಹೆಸರುಗಳನ್ನು ಇಡಲಾಗಿದೆ.

ಗುರುಕುಲದಲ್ಲಿ ಒಟ್ಟು ಆರು ವಸತಿಗೃಹಗಳಿವೆ. ಆರು ಗುರುಮಠ, ಲಿಂಗಮಠ, ವಿಭೂತಿಮಠ, ರುದ್ರಾಕ್ಷಿಮಠ ಎಂಬ ಅಷ್ಟಾವರಣಗಳಲ್ಲಿಯ ಆರು ಆವರಣಗಳ ಹೆಸರುಗಳಿಂದ ಕರೆಸಿಕೊಳ್ಳುತ್ತದೆ. ಪರಿಶುದ್ಧವಾದ ಗಾಳಿ ಬೆಳಕಿನಿಂದ ಕ ೂಡಿರುವ ಅವುಗಳಲ್ಲಿ ವಿದ್ಯಾರ್ಥಿಗಳಿಗೆ ಮಲಗುವುದಕ್ಕಾಗಿ ಮಂಚ ಹಾಗೂ ಗಾದಿಯ ವ್ಯವಸ್ಥೆ ಮಾಡಲಾಗಿದೆ.

ವಸತಿಗ್ರಹಗಳು ಒಳ ವಿಭಾಗಗಳಿಂದ ಕೂಡಿದೆ. ಪ್ರತಿ ವಿಭಾಗದ ವಿದ್ಯಾರ್ಥಿಗಳ ಆರೋಗ್ಯ ಕ್ಷೇಮಕ್ಕಾಗಿ ಪ್ರತ್ಯೇಕ ಅನುಭವಿ ನರ್ಸರಿ ಶಿಕ್ಷಕಿಯರಿದ್ದಾರೆ. ನಿಷ್ಟಾವಂತ ಮೇಲ್ವಿಚಾರಕರಿದ್ದಾರೆ. ವಿದ್ಯಾರ್ಥಿಗಳು ರಾತ್ರಿ ೧೦ ಗಂಟೆಯವರೆಗೆ ಗ್ರಹ ಅಭ್ಯಾಸದಲ್ಲಿ ತೊಡಗಿರುತ್ತಾರೆ. ಅದರ ಗ್ರಹ ಅಭ್ಯಾಸವನ್ನು ನೋಡಿಕೊಳ್ಳುವದಕ್ಕಾಗಿ ಪರಿಣಿತ ಶಿಕ್ಷಕರನ್ನು ನೇಮಿಸಲಾಗಿದೆ. ಗುರುಕುಲ ತನ್ನ ವಿದ್ಯಾರ್ಥಿಗಳ ಸ್ನಾನಕ್ಕಾಗಿ ಪ್ರತ್ಯೇಕವಾದ ಸ್ನಾನದ ಮನೆಗಳನ್ನು ಕಟ್ಟಿದೆ. ವಿದ್ಯಾರ್ಥಿಗಳು ಹಿತವಾದ ಬಿಸಿ ನೀರಿನಲ್ಲಿ ಸ್ನಾನ ಮಾಡುತ್ತಾರೆ. ನೀರು ಕಾಯಿಸುವುದಕ್ಕಾಗಿ ಅಲ್ಲಿ ವಿದ್ಯುತ್ ಕೊಪ್ಪರಿಗೆ

(Boiler) ಗಳನ್ನು ಅಳವಡಿಸಲಾಗಿದೆ. ಈ ಕೊಪ್ಪರಿಗೆಗಳನ್ನು ಏಕಕಾಲಕ್ಕೆ ೧೫೦ ಜನರು ಸ್ನಾನಮಾಡುವಷ್ಟು ನೀರನ್ನು ಕಾಯಿಸಿಕೊಡುತ್ತವೆ.

ಗುರುಕುಲದಲ್ಲಿ ಮಡಿವಾಳ ಹಾಗೂ ಕ್ಷೌರಿಕ ವ್ಯವಸ್ಥೆಯನ್ನು ಮಾಡಲಾಗಿದೆ. ಮಕ್ಕಳ ಬಟ್ಟೆ ಸ್ವಚ್ಛತೆ ಹಾಗೂ ಇಸ್ತ್ರಿಗಾಗಿ ಎಂಟು ಜನ ಮಡಿವಾಳರಿದ್ದಾರೆ. ಗುರುಕುಲದ ಕ್ಷೌರಿಕರು ಉತ್ತಮವಾಗಿ ಪಳಗಿದವರಾಗಿದ್ದು. ಅವರು ಗುರುಕುಲಕ್ಕೆ ತಿಂಗಳಿಗೊಮ್ಮೆ ಭಾಲ್ಕಿ ಪಟ್ಟಣದಿಂದ ಬಂದು ಹೋಗುತ್ತಾರೆ.

ಮಕ್ಕಳ ಆರೋಗ್ಯವನ್ನು ಕಾಪಾಡುವಲ್ಲಿ ಹಾಲಿನ ಪಾತ್ರ ತುಂಬ ಹಿರಿದಾದುದಾಗಿದ ಅತ್ಯಂತ ಸಾತ್ವಿಕ ಆಹಾರವಾದ ಅದು ಅವರ ದೇಹಕ್ಕೆ ಅತ್ಯುತ್ತಮವಾದ ಪೌಷ್ಠಿಕತೆಯನ್ನು ತಂದುಕೊಡುತ್ತದೆ. ಇದನ್ನು ಮನಗಂಡ ಶ್ರೀ ಬಸವಲಿಂಗ ಪಟ್ಟದ್ದೇವರು ಗುರುಕುಲದಲ್ಲಿ ಒಂದು ಗೋಶಾಲೆಯನ್ನು ತೆರೆದಿದ್ದಾರೆ. ಗುರುಕುಲದ ಈ ಗೋಶಾಲೆಯಲ್ಲಿ ಒಟ್ಟು ೪೪ ಆಕಳು (ಹಸು) ಗಳಿವೆ. ಪ್ರತಿನಿತ್ಯ ಈ ಆಕಳುಗಳು ಒಂದು ನೂರು ಲೀಟರ ಹಾಲು ಕರೆಯುತ್ತವೆ. ಅವುಗಳನ್ನು ನೋಡಿಕೊಳ್ಳುವುದಕ್ಕಾಗಿ ಅಲ್ಲಿ ಆಳುಗಳ ವ್ಯವಸ್ಥೆ ಮಾಡಲಾಗಿದೆ.

ಗುರುಕುಲದ ಗೋಶಾಲೆಯಲ್ಲಿ ಹಾಲೂ ಕರೆಯದ ಗೊಡ್ಡಾಕಳುಗಳು ಸಾಕಷ್ಟಿವೆ. ಅಂಥವುಗಳನ್ನು ಭಾಲ್ಕಿ ಶ್ರೀಗಳ ಕಟುಕರ ಬಾಯಿಯಿಂದ ತಪ್ಪಿಸಿ ತಂದು ಅವುಗಳಿಗೆ ಜೀವದಾನ ನೀಡಿದ್ದಾರೆ. ಹಾಲು ಕೊಡದ ಇಂಥ ಆಕಳುಗಳಿಂದ ಗ ುರುಕುಲಕ್ಕೆನು ಲಾಭ ? ಎಂದು ಕೇಳಿದ್ದಕ್ಕೆ ಹೆಂಡಿಯಾದರೂ ಕೊಡುತ್ತದಲ್ಲಿ ಸಾಕು ಎಂದು ಸಮಾಜಾತಿಯ ಉತ್ತರ ಕೊಡುವುದರ ಜತೆಗೆ ಅವುಗಳು ಜೀವ ಉಳಿಸಿದ ಸಂತೋಷದ ಲಾಭಕ್ಕಿಂತಲೂ ಮತ್ತ್ಯಾನ ಲಾಭ ಬೇಕು ? ಎಂದು ಮರು ಪ್ರಶ್ನೆ ಕೇಳುತ್ತಾರೆ. ಅವರ ಈ ಹಿರಿಮೆ ಶರಣರ ದಯಾ ತತ್ವಾನುಸರಣೆಯ ದ್ಯೋತಕವಾಗಿದೆ.

ಗುರುಕುಲದ ಅಡಿಗೆ ಮನೆ ತುಂಬ ದೊಡ್ಡದಾಗಿದೆ ಪ್ರತ್ಯೇಕವಾದ ಉಗ್ರಾಣ, ತರಕಾರಿ ಕೋಣೆಗಳಿಂದ ಸಜ್ಜಾಗಿರುವ ಅಡಿಗೆ ಮನೆಯಲ್ಲಿ ಒಟ್ಟು ೧೫ ಜನ ಅಡಿಗೆಗಳನ್ನು ಸಿದ್ದಪಡಿಸುತ್ತಾರೆ. ಉಳಿದ ಮೂವರು ಪಾತ್ರೆ ತೊಳೆಯುತ್ತಾರೆ. ಕಸ ಗುಡಿಸುತ್ತಾರೆ. ಅಡಿಗೆ ಮಾಡುವುದಕ್ಕಾಗಿ ಅಲ್ಲಿ ದೊಡ್ಡ ದೊಡ್ಡ ಉಗಿ ಕೊಪ್ಪರಿಗೆ ಜೋಡಿಸಲಾಗಿದೆ. ಈ ಕೊಪ್ಪರಿಗೆಗಳು ಏಕಕಾಲಕ್ಕೆ ೨೦೦ ಜನರಿಗೆ ಸಾಕಾಗುವಷ್ಟು ಅಡಿಗೆಯನ್ನು ತಯಾರಿಸಿಕೊಡುತ್ತವೆ.

ವ್ಯಕ್ತಿಯ ಎಲ್ಲಾ ಭಾಗ್ಯಗಳಿಗಿಂತಲೂ ಅವನ ಆರೋಗ್ಯ ಭಾಗ್ಯ ಅತ್ಯಂತ ಹಿರಿದಾದುದು. ಅಂತೆಯೇ ಶ್ರೀ ಬಸವಲಿಂಗ ಪಟ್ಟದ್ದೇವರು ಮಕ್ಕಳ ಆರೋಗ್ಯ ಸಂಪತ್ತನ್ನು ಕಾಪಾಡುವುದಕ್ಕಾಗಿ ಗುರುಕುಲದಲ್ಲಿ ಒಂದು ವೈದ್ಯಕೀಯ ವಿಭಾಗವನ್ನೆ ತೆರೆದಿದ್ದಾರೆ. ಈ ವೈದ್ಯಕೀಯ ವಿಭಾಗವು ಸ್ವತಂತ್ರವಾದ ಕೋಠಡಿ ಹೊಂದಿದ್ದು. ಅಲ್ಲಿ ಶಶಿಕಲಾ ನರ್ಸಾಗಿ ಹಾಗೂ ಶಿವಲಿಂಗ ಸ್ವಾಮಿ ವೈದ್ಯ

ಸಹಾಯಕರಾಗಿ ಕೆಲಸ ಮಾಡುತ್ತಾರೆ. ಬೀದರದ ಮಕ್ಕಳ ತಜ್ಞರಾದ ಡಾ. ಸಿ.ಎಸ್.ಮಾಲಿ ಪಾಟೀಲರವರು ಅಲ್ಲಿಗೆ ವಾರಕ್ಕೊಮ್ಮೆ ಬಂದು ಮಕ್ಕಳನ್ನು ತಪಾಸಿಸುತ್ತಾರೆ.

ಗ್ರಂಥಾಲಯ ಪ್ರತಿಯೊಂದು ಶಿಕ್ಷಣ ಸಂಸ್ಥೆಗೂ ಅನಿವಾರ್ಯ. ಏಕೆಂದರೆ ಗ್ರಂಥಗಳು ಸೃಷ್ಟಿಯ ಜ್ಞಾನವನ್ನೆಲ್ಲಾ ಕ್ರೋಢಿಕರಿಸಿಕೊಂಡಿರುತ್ತವೆ. ಹೀಗಾಗಿ ಶಿಕ್ಷಕ ಮೊದಲು ಮಾಡಿ ಲೋಕದ ಮಾನವರೆಲ್ಲರಿಗೂ ಗ್ರಂಥಗಳು ಬೇಕೇಬೇಕು. ಅವುಗಳ ಸಹಾಯವಿಲ್ಲದೆ ಶಾಲೆ ಕಾಲೇಜುಗಳಲ್ಲಿ ಬೋಧನೆ ಮಾಡುವುದು ಅಸಾಧ್ಯ. ಒಬ್ಬ ಶಿಕ್ಷಕ ಒಂದು ಪುಸ್ತಕವನ್ನು ಓದಿ ಅರ್ಥ ಮಾಡಿಕೊಂಡರೆ, ಅದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಯೋಜನವಾಗುತ್ತದೆ. ಗುರುಕುಲದ ಗ್ರಂಥಾಲಯದಲ್ಲಿ ೨೦೦೦ ಕ್ಕೂ ಮೀರಿ ಗ್ರಂಥಗಳಿವೆ. ಗ್ರಂಥ ಸಂಗ್ರಹದ ವಿಷಯದಲ್ಲಿ ಈ ಗ್ರಂಥಾಲಯ ಮಕ್ಕಳ ವಯೋಮಾನವನ್ನು ಗಮನದಲ್ಲಿಟ್ಟುಕೊಂಡಿದೆ. ಪಠ್ಯ ಪಠ್ಯಪೂರಕ ಗ್ರಂಥಗಳಲ್ಲದೆ ಪಠ್ಯೇತರ ಗ್ರಂಥಗಳಿಗೂ ಹೆಚ್ಚಿನ ಆದ್ಯತೆ ನೀಡಿದೆ. ಮಕ್ಕಳ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರುವಂತಹ ಮಹಾತ್ಮರ ಜೀವನ ಚರಿತ್ರೆಗಳ ಚಿತ್ರಗಳಿಂದ ಕೂಡಿದ ಉತ್ತಮ ನೀತಿ ಕಥೆಗಳ ಪುಸ್ತಕಗಳನ್ನು ಅಲ್ಲಿ ಸಂಗ್ರಹಿಸಲಾಗಿದೆ. ಅವರ ಮನೋವಿಕಾಸಕ್ಕೆ ಬೇಕಾಗುವಂತಹ ವಿವಿಧ ಚಿತ್ರಪಟಗಳ ಸಂಗ್ರಹವೂ ಅಲ್ಲಿದೆ.

ಗುರುಕುಲದ ಶೈಕ್ಷಣಿಕ ವಿಭಾಗವು ಎಲ್ ಆಕಾರದಲ್ಲಿ ಮೇಲಂತಸ್ತಿನ ಕಟ್ಟಡವನ್ನು ಹೊಂದಿದೆ. ಈ ಕಟ್ಟಡದಲ್ಲಿ ಒಟ್ಟು ೪೮ ಕೊಠಡಿಗಳಿದ್ದು, ಅವು ಸುಂದರವಾಗಿವೆ. ಉತ್ತಮವಾದ ಗಾಳಿ, ಬೆಳಕಿನಿಂದ ಕೂಡಿದೆ. ಶಾಂತತೆ ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಂಡಿದೆ. ಒಂದೊಂದು ಕೊಠಡಿ ೨೦ ವಿದ್ಯಾರ್ಥಿಗಳು ಕೂಡುವಷ್ಟು ದೊಡ್ಡದಾಗಿವೆ. ಅಲ್ಲಿ ಬೆಂಚು ಹಾಗೂ ಕಪ್ಪು ಹಲಗೆಗಳ ವ್ಯವಸ್ಥೆ ಮಾಡಲಾಗಿದೆಕ. ಪ್ರತಿಯೊಂದು ಬೆಂಚು ಮೂರು ವಿದ್ಯಾರ್ಥಿಗಳು ಕೂಡುವಷ್ಟು ಅಗಲವಾಗಿದ್ದರೆ, ಕಪ್ಪು ಹಲಗೆಗಳು ಚೊಕ್ಕಟವಾಗಿವೆ.

ಮಕ್ಕಳ ಆರೋಗ್ಯಕರ ಬೆಳವಣಿಗೆಯಲ್ಲಿ ಪಾಠ ಎಷ್ಟೂ ಮುಖ್ಯವೋ ಆಟವೂ ಅಷ್ಟೇ ಅತ್ಯಗತ್ಯವಾದುದು. ಆಟದಿಂದ ಅದರ ಶರೀರ ಸದೃಢವಾದರೆ, ಮನಸ್ಸು ಪ್ರಸನ್ನವಾಗುತ್ತದೆ. ಬುದ್ಧಿ ವಿಕಾಸವಾಗುತ್ತದೆ. ಅಂತೆಯೇ ಗುರುಕುಲ ಪಾಠದಷ್ಟೆ ಅದಕ್ಕೂ ಪ್ರಾಧಾನ್ಯತೆ ನೀಡಿರುವುದನ್ನು ಕಾಣುತ್ತದೆ. ಮಕ್ಕಳಿಗೆ ಆಟಗಳನ್ನು ಆಡುವುದಕ್ಕಾಗಿ ಅದು ವಿಶಾಲವಾದ ಆಟದ ಮೈದಾನವನ್ನು ಪ್ರತ್ಯೇಕವಾಗಿ ಕಲ್ಪಿಸಿಕೊಟ್ಟಿದೆ. ಆಟ ಕಲಿಸುವುದಕ್ಕಾಗಿ ಸಿ.ಪಿ.ಟಿ. , ಬಿ.ಪಿ.ಡಿ. ಪರಿಣಿತ ಶಿಕ್ಷಕರನ್ನು ನೇಮಿಸಿದೆ.

ಗುರುಕುಲ ವೈಜ್ಞಾನಿಕ ಪ್ರಯೋಗಾಲಯದ ವಿಭಾಗವನ್ನು ಹೊಂದಿದೆ. ಈ ಪ್ರಯೋಗಾಲಯದಲ್ಲಿ ೬೦೦ ಕ ್ಕೂ ಹೆಚ್ಚು ವಿಜ್ಞಾನ ಸಾಮಗ್ರಿಗಳಿವೆ. ಚಿತ್ರಕಲೆಗೂ ಗುರುಕುಲ

ಆದ್ಯತೆ ನೀಡಿದೆ. ಅಲ್ಲಿ ೩ ಜನ ಚಿತ್ರಕಲಾ ಶಿಕ್ಷಕರಿದ್ದಾರೆ. ಅವರು ೧ ರಿಂದ ೧೦ ನೇ ತರಗತಿವರೆಗಿನ ಮಕ್ಕಳಿಗೆ ಚಿತ್ರಕಲಾ ಶಿಕ್ಷಣವನ್ನು ಒದಗಿಸಿಕೊಡುತ್ತಾರೆ.

ಇಂದು ಕಂಪ್ಯೂಟರ ಯುಗ, ಪ್ರತಿಯೊಬ್ಬನಿಗೂ ಕಂಪ್ಯೂಟರ್ ಜ್ಞಾನ ಅನಿವಾರ್ಯ. ಕಾಲದ ಈ ಜರೂರಿಯನ್ನು ಅರ್ಥವ ಾಡಿಕೊಂಡು ಬಸವಲಿಂಗ ಶ್ರೀಗಳು ಗುರುಕುಲದ ಮಕ್ಕಳಿಗೆ ಕಂಪ್ಯೂಟರ ಕಲಿಕೆಯ ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ. ಆರು ಗಣಕಯಂತ್ರಗಳನ್ನು ಹೊಂದಿರುವ ಗುರುಕುಲದ ಕಂಪ್ಯೂಟರ ವಿಭಾಗದಲ್ಲಿ ಇಬ್ಬರೂ ಕಂಪ್ಯೂಟರ್ ಶಿಕ್ಷಕರಿದ್ದಾರೆ. ಈ ಶಿಕ್ಷಕರು ಅಲ್ಲಿನ ೫ನೇ ತರಗತಿಯಿಂದ ೧೦ನೇ ತರಗತಿಯವರೆಗಿನ ಕಂಪ್ಯೂಟರ ಜ್ಞಾನವನ್ನು ಒದಗಿಸಿಕೊಡುತ್ತಾರೆ.

ಹೀಗೆ ಸಕಲ ಸೌಕರ್ಯಗಳಿಂದ ಸ ಜ್ಜಾಗಿ ಅತ್ಯಂತ ಪರಿಪಕ್ವವಾಗಿ ಬೆಳೆದು ನಿಂತಿರುವ ವಸತಿ ಶಾಲೆ ೧೦ನೇ ತರಗತಿಯವರೆಗಿನ ಶಿಕ್ಷಣ ನೀಡುತ್ತದೆ. ಕನ್ನಡ ಮಾಧ್ಯಮದಲ್ಲಿ ನಡೆಯುವಲ್ಲಿ ವಸತಿ ಶಾಲೆಯಲ್ಲಿ ಕರ್ನಾಟಕ ಸರಕಾರ ನಿಯಮಿಸಿದ ಪಠ್ಯಕ್ರಮದಂತೆಯೇ ಭೋಧಿಸಲಾಗುತ್ತದೆ. ಆದರೂ ಮಕ್ಕಳ ಭಾಷಾ ಶ್ರೀಮಂತಿಕೆಯ ದೃಷ್ಟಿಯಿಂದ ಕನ್ನಡದ ಜೊತೆಗೆ ಇಲ್ಲಿ ಇಂಗ್ಲೀಷ, ಹಿಂದಿ, ಭಾಷೆಗಳನ್ನು ಕಲಿಸಲಾಗುತ್ತದೆ. ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕಲಿತ ಮಕ್ಕಳ ಇಂಗ್ಲೀಷ ಜ್ಞಾನಕ್ಕಿಂತಲೂ ಇಲ್ಲಿ ಕಲಿಯುತ್ತಿರುವ ಮಕ್ಕಳ ಇಂಗ್ಲೀಷ ಜ್ಞಾನ ಕಡಿಮೆಯೇನಿಲ್ಲ ಎಂಬುದು ೨೨-೧೧-೨೦೦೩ ರಂದು ಗುರುಕುಲಕ್ಕೆ ನೀಡಿದ ನೇರ ಸಂದರ್ಶನದಿಂದ ತಿಳಿದುಬಂದಿದೆ.

ಗುರುಕುಲದಲ್ಲಿ ಒಟ್ಟು ೧೧೦ ಜನ ಸಿಬ್ಬಂಧಿ ವರ್ಗದವರಿದ್ದಾರೆ. ಅವರಲ್ಲಿ ೬೫ ಜನರು ಶಿಕ್ಷಕರು, ಉಳಿದ ೪೫ ಜನರು ಶಿಕ್ಷಕೇತರರು. ಶಿಕ್ಷಕರು ಎಂ.ಎ. , ಎಂ.ಫಿಲ್., ಬಿ.ಈಡಿ. , ಎಂ.ಎಸ್ಸಿ. , ಬೆ.ಈಡಿ. , ಸಿ.ಪಿ.ಈಡಿ. , ಬಿ.ಪಿ.ಈಡಿ. , ಟಿ.ಸಿ.ಹೆಚ್. , ಪದವೀಧರರಾಗಿದ್ದಾರೆ. ತಂತಮ್ಮ ವಿಷಯದಲ್ಲಿ ಉತ್ತಮ ಪ್ರಭುತ್ವ ಪಡೆಯುವುದರ ಜತೆಗೆ ಅವರು ಮಾತ್ರ ಹೃದಯಗಳಾಗಿದ್ದಾರೆ. ಗುರುಕುಲದ ಮಕ್ಕಳನ್ನು ತಮ್ಮ ಸ್ವಂತ ಮಕ್ಕಳಂತೆ ಪ್ರೀತಿಸುತ್ತಾರೆ. ಶಿಸ್ತು , ಸಯಮ, ಕ್ಷಮಾ, ವಿನಯ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ನೈತಿಕತೆ ಮೊದಲಾದ ಸದ್ಗುಣಗಳಿಂದ ಕೂಡಿದ ಆದರ್ಶ ಶಿಕ್ಷಕರಾಗಿದ್ದಾರೆ.

೧೨ನೇ ಶತಮಾನದ ಅನುಭವಮಂಟಪದ ಮಾರ್ಗಾವಲಂಬಿಗಳಾದ ಬಸವಲಿಂಗ ಶ್ರೀಗಳು ಗುರುಕುಲದಲ್ಲಿ ಎಲ್ಲಾ ಜಾತಿ, ವರ್ಗ, ಲಿಂಗ, ಪ್ರದೇಶಗಳ ಜನಾಂಗದ ಮಕ್ಕಳಿಗೆ ಪ್ರವೇಶ ನೀಡಿದ್ದಾರೆ. ಈ ಮಕ್ಕಳೆಲ್ಲ ಅಲ್ಲಿ ಒಂದೇ ಕುಟುಂಬದ ಸದಸ್ಯರಂತೆ ಅತ್ಯಂತ ಸೌಹಾರ್ದತೆಯಿಂದ ಸಹಜೀವನ ನಡೆಸುತ್ತಾರೆ. ಸಹ ಆಟ ಪಾಠ- ಊಟಗಳಲ್ಲಿ ತೊಡಗಿರುತ್ತಾರೆ. ಅದರಲ್ಲಿ ಬಲ್ಲವ-ಬಡವ, ಗಂಡು-ಹೆಣ್ಣು, ಉಚ್ಚ-ನೀಚ, ಸ್ಪೃಶ್ಯ-ಅಸ್ಪೃಶ್ಯ ಎಂಬ ಕ್ಷುಲಕ ತಾರತಮ್ಯಭಾವ ಕಿಂಚಿತ್ತು ಸುಳಿಯದೆ ನಾವೆಲ್ಲರೂ ಸಮಾನರು ಎನ್ನುವುದು ಎದ್ದು ಕಾಣುತ್ತಿದೆ. ಇದನ್ನೆಲ್ಲ ಗಮನಿಸಿದ್ದಾರೆ.

ಗುರುಕುಲದಲ್ಲಿ ಶರಣರು ಪ್ರತಿಪಾದಿಸಿದ ಸಮಾನತೆ–ಸಾಮರಸ್ಯತೆ ತತ್ವಗಳು ಅಕ್ಷರಶಃ ಕಾರ್ಯಗತಗೊಳ್ಳುತ್ತಿವೆ ಎಂದೆನಿಸುತ್ತದೆ. ಇದು ಗುರುಕುಲದ ಮಹತ್ತರ ಸಾಧನೆಗಳಲ್ಲಿ ಒಂದಾಗಿದೆ.

ಗುರುಕುಲದ ಇನ್ನೊಂದು ಮಹತ್ವದ ಸಂಗತಿಯನ್ನು ನಾವು ಇಲ್ಲಿಯೇ ಗಮನಿಸಬೇಕು. ಒಂದು ಕಾಲದಲ್ಲಿ ಬೀದರದ ಮಕ್ಕಳು ಶಿಕ್ಷಣಕ್ಕಾಗಿ ಧಾರವಾಡಾ, ಗದಗ ಜಿಲ್ಲೆಗಳಿಗೆ ಧಾವಿಸುತ್ತಿದ್ದರು. ಆದರೆ ಇಂದು ಆ ಧಾರವಾಡ ಗದಗದವರೇ ಬೀದರ ಜಿಲ್ಲೆಯ ಈ ಗುರುಕುಲದತ್ತ ತುಂಬ ಆಕರ್ಷಿತರಾಗಿದ್ದಾರೆ. ಆ ಜಿಲ್ಲೆಗಳ ಎಷ್ಟೋ ಮಕ್ಕಳು ಇಲ್ಲಿ ವಿದ್ಯಾರ್ಜನೆಗೆ ತೊಡಗಿರುವುದು ಅತ್ಯಂತ ಗಮನಾರ್ಹವಾದ ಅಂಶವಾಗಿದೆ. ಇದು ಗುರುಕುಲ ಧಾರವಾಡ ಗದಗ ಜಿಲ್ಲೆಗಳ ಶಿಕ್ಷಣ ಸಂಸ್ಥೆಗಳಿಗೂ ಮಿಗಿಲಾಗಿ ಬೆಳೆಯುತ್ತಿರುವುದರ ದೊಡ್ಡ ಸೂಚನೆಯಾಗಿದೆ.

ಗುರುಕುಲ ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಆಧ್ಯಾತ್ಮಿಕ ಶಿಕ್ಷಣಕ್ಕೂ ಮಹತ್ವ ನೀಡಿದೆ. ಆಧ್ಯಾತ್ಮಿಕ ಶಿಕ್ಷಣದಿಂದ ಮಕ್ಕಳ ಭಾವಶುದ್ಧಿಯಾಗಿ ಮನಸ್ಸು ಶಾಂತವಾಗುತ್ತದೆ. ಹೃದಯ ಅರಳುತ್ತದೆ. ಬುದ್ಧಿಶಕ್ತಿ ಬೆಳೆಯುತ್ತದೆ. ನೈತಿಕ ಹಾಗೂ ಆತ್ಮ ಶಕ್ತಿಗಳು ಬಲಗೊಳ್ಳುತ್ತದೆ. ಅವರ ಚೇತನ ಅನಿಕೇತನವಾಗಿ ಹೊರಹೊಮ್ಮುತ್ತದೆ. ಇದನ್ನು ಚೆನ್ನಾಗಿ ತಿಳಿದ ಬಸವಲಿಂಗ ಶ್ರೀಗಳು ಮಕ್ಕಳ ಆಧ್ಯಾತ್ಮಿಕ ಶಿಕ್ಷಣಕ್ಕಾಗಿ ಗುರುಕುಲದಲ್ಲ ಇಪ್ರತ್ಯೇಕವಾಗಿ ಒಂದು ಪ್ರಾರ್ಥನಾ ಮಂದಿರವನ್ನೇ ಕ ಟ್ಟಿಸಿದ್ದಾರೆ. ಬಸವ ಪ್ರಾರ್ಥನಾ ಮಂದಿರ ಎಂಬ ಹೆಸರಿನ ಈ ಮಂದಿರ ತುಂಬ ವಿಶಾಲವಾಗಿದೆ. ಅತ್ಯಂತ ಪ್ರಶಾಂತವಾಗಿದೆ. ಬಸವಾದಿ ಶರಣರ ವಚನಗಳನ್ನು ಕಲಿಸಿಕೊಡುವುದರೊಂದಿಗೆ ಅವರ ಜೀವನ ಚರಿತ್ರೆಯ ಬಗ್ಗೆ ತಿಳಿಸಿಕೊಡಲಾಗುತ್ತದೆ. ಮಾತ್ರವಲ್ಲದೆ ಆಗಾಗ ಅಲ್ಲಿಗೆ ಒಳ್ಳೆಯ ಅನುಭಾವಿ ಉಪನ್ಯಾಸಕರನ್ನು ಕರೆಸಿ ಅವರಿಂದ ಮಕ್ಕಳ ಮನಸ್ಸಿನ ಮೇಲೆ ಸತ್ಪರಿಣಾಮ ಬೀರುವಂಥ ಧಾರ್ಮಿಕ, ಆಧ್ಯಾತ್ಮಿಕ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ಹೀಗೆ ಶ್ರೀ ಬಸವಲಿಂಗ ಪಟ್ಟದೇವರು ತಮ್ಮ ಗುರುಕುಲದ ಮಕ್ಕಳಿಗೆ ಅತ್ಯುತ್ತಮವಾದ ಸಂಸ್ಕಾರಯುತ ಶಿಕ್ಷಣವನ್ನು ಕೊಡಿಸಿದ್ದಾರೆ. ಈ ಮೂಲಕ ಮಕ್ಕಳನ್ನು ಭವ್ಯ ಭಾರತದ ಹೆಮ್ಮೆಯ ಸತ್ಪುತ್ರರನ್ನಾಗಿ ನಿಮ್ಮಿಂದ ತುಂಬ ಘನುದಾರಿ ಮಾರ್ಗದಲ್ಲಿ ಹೊರಡಿದ್ದಾರೆ.

ಕಾರ್ಯ ಚಟುವಟಿಕೆಗಳು ಮತ್ತು ಸಾಧನೆ :

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಬೌದ್ಧಿಕ ಗುಣಮಟ್ಟವನ್ನು ಅಳೆಯುವ ಪ್ರಮುಖ ಸಾಧನೆವೆಂದರೆ ಪರೀಕ್ಷೆ. ಕರಡ್ಯಾಳದ ಗುರುಕುಲವು ತನ್ನ ಮಕ್ಕಳಿಗೆ ವಾರ್ಷಿಕ ಪರೀಕ್ಷೆ ಹಾಗೂ ಅರ್ಧ ವಾರ್ಷಿಕ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತದೆ. ಈ ಪರೀಕ್ಷೆಗಳಲ್ಲಿ ಅವರು ಪಡೆದ ಅಂಕಗಳನ್ನು ಅವರ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ಪರಿಗಣಿಸುತ್ತದೆ. ತಿಂಗಳ ಕಿರು ಪರೀಕ್ಷೆಗಳ ವರದಿಯನ್ನು ಅದು ಅವರ ಪಾಲಕರ ಗಮನಕ್ಕೆ ತರುತ್ತವೆ.

ಗುರುಕುಲದ ಮಕ್ಕಳು ತುಂಬ ಪ್ರತಿಭಾವಂತರಾಗಿದ್ದಾರೆ. ೯ನೇ ವರೆಗಿನ ತರಗತಿಗಳಲ್ಲಿ ಮಾತ್ರವಲ್ಲದೇ ೧೦ನೇ ವರ್ಗದಲ್ಲೂ ಅವರು ಅದ್ಭುತವಾದ ಸಾಧನೆಗೈಯುತ್ತಿದ್ದಾರೆ. ಈ ವರ್ಗದ ಪರೀಕ್ಷೆಯಲ್ಲಿ ಎರಡು ವರ್ಷಗಳಿಂದ ಅಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿ ಪ್ರಥಮ ದರ್ಜೆಯಲ್ಲಿ ಪಾಸಾಗುತ್ತಿದ್ದಾರೆ. ಅಷ್ಟೇ ಅಲ್ಲ ೨೦೦೧-೦೨ ರ ಶೈಕ್ಷಣಿಕ ವರ್ಷದಲ್ಲಿ ಇಬ್ಬರು ಹಾಗೂ ೨೦೦೨-೦೩ ರ ಶೈಕ್ಷಣಿಕ ವರ್ಷದಲ್ಲಿ ಮೂವರು ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯ ಫಲಿತಾಂಶ ಪಡೆದಿದ್ದಾರೆ. ಇದು ಗುರುಕುಲದ ಶೈಕ್ಷಣಿಕ ಗುಣಮಟ್ಟವನ್ನು ಎತ್ತಿ ತೋರಿಸುವುದರೊಂದಿಗೆ ಅದು ಸಾಧಿಸಿರುವ ಶೈಕ್ಷಣಿಕ ಸಾಧನೆಗೆ ಕನ್ನಡಿ ಹಿಡಿಯುತ್ತದೆ.

ಗುರುಕುಲದ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಿಗೂ ವಿಶೇಷ ಆದ್ಯತೆ ನೀಡುತ್ತದೆ. ಪ್ರತಿ ವರುಷ ಸ್ನೇಹ ಸಮ್ಮೇಳನ, ಶೈಕ್ಷಣಿಕ ಪ್ರವಾಸ ಹಮ್ಮಿಕೊಳ್ಳುತ್ತದೆ. ಪಾಲಕರ ಸಮಾವೇಶ ಕರೆಯುತ್ತದೆ. ಶಿಕ್ಷಕರಿಗಾಗಿ ಶಿಕ್ಷಣ ಕಮ್ಮಟ ನಡೆಸುತ್ತದೆ. ತನ್ನ ಮಕ್ಕಳಿಗೆ ಅದು ಭಾಷಣ, ನಿಬಂಧ, ಸಾಮಾನ್ಯ ಜ್ಞಾನ, ವಚನ ಕಂಠಪಾಠ, ಸಂಗೀತ, ನೃತ್ಯ ಜನಾನೀನೃತ್ಯ ಜನಪದ ನೃತ್ಯ, ಲೇಝಿಮ ನೃತ್ಯ ಇತ್ಯಾದಿ ಭರತನಾಟ್ಯ, ರೂಪಕ, ಚಿತ್ರಕಲೆ, ಕೋಲಾಟ, ವಾಲಿಬಾಲ್, ಖೋಖೋ, ಕಬಡ್ಡಿ, ಕ್ರಿಕೇಟ, ಮಲಕಂಬದಾಟ ಮೊದಲಾದವುಗಳನ್ನು ಕಲಿಸಿಕೊಡುವುದರ ಜೊತೆಗೆ ಅವುಗಳನ್ನು ಅವರ ಮಧ್ಯೆ ಸ್ಪರ್ಧೆಗಳನ್ನು ಏರ್ಪಡಿಸುತ್ತವೆ. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಯೋಗ್ಯ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡುತ್ತಾರೆ.

ಗುರುಕುಲದ ಮಕ್ಕಳ ಸಾಂಸ್ಕೃತಿಕ ಸ್ಪರ್ಧೆ ಗುರುಕುಲಕಷ್ಟೆ ಸೀಮಿತವಾಗಿರದೆ ಅದು ಕರ್ನಾಟಕ ರಾಜ್ಯದವರೆಗೂ ವ್ಯಾಪಿಸಿದೆ. ಅಲ್ಲಿನ ಮಕ್ಕಳು ಇದುವರೆಗೆ ತಾಲೂಕು, ಜಿಲ್ಲಾ, ರಾಜ್ಯಮಟ್ಟದ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಗಮನಾರ್ಹವಾದ ಸಾಧನೆಗೈದಿದ್ದಾರೆ. ಬೆಂಗಳೂರಿನ ೨೦೦೧-೦೨ ನೇ ಸಾಲಿನ ಚಿತ್ರಕಲಾ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಭಾಗವಹಿಸಿದ ಅಲ್ಲಿನ ೧೦ನೇ ತರಗತಿಯ ಪ್ರಭುಲಿಂಗ ಬೇಲೂರಿನ ದ್ವಿತೀಯ ಸ್ಥಾನ ಪಡೆದರೆ. ಅದೇ ೧೦ ನೇ ವರ್ಗದ ರವಿಕುಮಾರ ಬೆಲ್ದಾಳೆ ೨೦೦೨-೦೩ ನೇ ಸಾಲಿನ ರಾಜ್ಯಮಟ್ಟದ ಜಾನಪದ ಗೀತಾ ಕಿಶೋರ ಪ್ರತಿಭಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾನೆ. ರವಿಕುಮಾರ ಬೆಲ್ದಾಳೆಗೆ ಕರ್ನಾಟಕ ಸರಕಾರ ೧೦೦೦೦ ರೂ. ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ. ಅದೇ ರೀತಿ ೨೦೦೩-೦೪ ನೇ ವರ್ಷದ ಅದೇ ರಾಜ್ಯಮಟ್ಟದ ಜನಪದ ಗೀತೆ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ೫ನೇ ತರಗತಿಯ ಸಿದ್ದ ಕಟ್ಟಿಮನಿ ಕ್ವಿತೀಯ ಸ್ಥಾನದಲ್ಲಿ ವಿಜೇತನಾದರೆ, ೨೦೦೨-೦೩ ನೇ ಸಾಲಿನ ಜಿಲ್ಲಾ ಮಟ್ಟದ ಸಾಮಾನ್ಯ ಜ್ಞಾನ ಸ್ಪರ್ಧೆಯಲ್ಲಿ ಮಹೇಶ ಬೊಮ್ಮ ೧೦೦೧ ರೂಪಾಯಿಗಳ ಬಹುಮಾನದೊಂದಿಗೆ ಜಯ ಪಡೆದಿದ್ದಾನೆ.

ಗುರುಕುಲದ ಮಕ್ಕಳು ರಾಜ್ಯಮಟ್ಟದ ಪುಟಾಣಿ ವಿಜ್ಞಾನ, ಪ್ರಬಂಧ, ಭಾಷಣ, ವಚನ, ಕಂಠಪಾಟ ಮೊದಲಾದ ಅವರ ಮವಕಂಬ ಕಲೆಯ ಕಸರತ್ತು ಜನವರಿ ೨೬–೩–೨೦೦೩ ರಂದು ಬೀದರದ ನೆಹರು ಕ್ರೀಡಾಂಗಣದಲ್ಲಿ ಪ್ರದರ್ಶನಗೊಂಡಿದೆ.

ಗುರುಕುಲದ ಮಕ್ಕಳ ಅದ್ಭುತವಾದ ಪ್ರತಿಭೆ ಹಾಗೂ ಕಲಾಕೌಶಲ್ಯಕ್ಕೆ ಇನ್ನೊಂದು ಪಟ್ಟ ಸಾಕ್ಷಿಯಿದ್ದರೆ. ಅವರು ಮಾಡಿ ತೋರಿಸುವ ರೂಪಕಗಳು ಅಲ್ಲಿನ ಪ್ರತಿಭಾವಂತ ಶಿಕ್ಷಕ ನಿರಂತರವಾದ ಪರಿಶ್ರಮದಲ್ಲಿ ತರಬೇತುಗೊಂಡು ಉತ್ತಮ ಕಲಾವಿದರಾಗಿ ಅರಳಿರುವ ಆ ಮಕ್ಕಳು ಸಮಕಾಲೀನ ರಾಜಕೀಯ ಸಾಮಾಜಿಕ ಧಾರ್ಮಿಕ ಮೊದಲಾದ ರಂಗಗಳನ್ನು ಪ್ರತಿಬಿಂಬಿಸುವಂತಹ ಅನೇಕ ಸುಂದರವಾದ ರೂಪಕಗಳನ್ನು ತುಂಬ ಪರಿಣಾಮಕಾರಿಯಾಗಿ ಪ್ರದರ್ಶಿಸುತ್ತಾರೆ. ಸ್ವತಂತ್ರ ಅಂದು ಇಂದು ಕಂದಾಚಾರ ಪರಿವರ್ತನೆ ಈ ಮುಂತಾದ ರೂಪಕಗಳನ್ನು ಅವರು ಗುರುಕುಲದ ಬಸ್ಸುಗಳ ಮೂಲಕ ಬೀದರ ಜಿಲ್ಲೆಯಾದ್ಯಂತ ಸಂಚರಿಸಿ ಅಭಿನಯಿಸಿ ಜನಜಾಗೃತಿಯನ್ನುಂಟು ಮಾಡಿದ್ದಾರೆ.

ಗುರುಕುಲದ ಮಕ್ಕಳು ಸಾಹಿತ್ಯಕವಾಗಿಯೂ ಬೆಳೆಯುತ್ತಿದ್ದಾರೆ. ಅವರು ರಾಜ್ಯದ ಅನೇಕ ಕಥೆ, ಕವನ, ಲೇಖನಗಳನ್ನು ಕನ್ನಡದ ಖ್ಯಾತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. "ಶಾಂತಿಕಿರಣ" ಎಂಬ ವಿಶೇಷ ಸಂಚಿಕೆಯಲ್ಲಿ ಬೆಳಕುಕೊಂಡಿದೆ. ಉದಾಹರಣೆಗಾಗಿ ಅವರ ಕೆಲವೊಂದು ಕವಿತೆಗಳ ಕೆಲವೊಂದು ಸಾಲುಗಳನ್ನು ಇಲ್ಲಿ ನೋಡಬಹುದು.

ಬೀದರಿನಿಂದ ಬೆಂಗಳೂರಿನವರೆಗೆ ಬೆಳೆದು ನಿಂತ ಗುರುಕುಲ ಭಂಗಗೊಳದೆ ಭಾಲ್ಕಿ ಊರು ಕೂಡಿ ಮೆರೆದ ಗುರುಕುಲ.

ಎಂಬವು ಗುರುಕುಲದ ೭ನೇ ತರಗತಿಯ ಸತೀಷ ಜಾಧವನ ಶಾಲೆಯೊಂದು ಗುರುಕುಲ ಕವಿತೆಯ ಸಾಲುಗಳೆಂದರೆ

"ಅಹಿಂಸೆಯಲ್ಲಿ ಗಾಂಧಿಯಾಗು
ಕ್ಷಮೆಯಲ್ಲಿ ಕ್ರೈಸ್ತನಾಗು
ಶಿಸ್ತಿನಲ್ಲಿ ವಿಶ್ವೇಶ್ವರಯ್ಯನಾಗು
ಪ್ರತಿಜ್ಞೆಯಲ್ಲಿ ಭೀಷ್ಮನಾಗು".

ಎಂಬವು ಅದೇ ೭ ನೇ ವರ್ಗದ ವೀರಶೆಟ್ಟಿ ಪಾಟೀಲ ಬರೆದ ಕವಿತೆಯ ಸಾಲುಗಳಾಗಿವೆ. ಶಿವಕುಮಾರ ಜಮಖಂಡೆ (೬ನೇ ವರ್ಗ), ಮಲ್ಲಿಕಾರ್ಜುನ ಬಿರಾದಾರ, ಸುನೀಲ ಮೇತ್ರೆ, ಓಂ ಪ್ರಕಾಶ ಪಾಟೀಲ (೮ನೇ ವರ್ಗ), ಪರಮೇಶ್ವರ ಗಂಭಗೆ (೭ನೇ ವರ್ಗ). ಈ ಮೊದಲಾದ ವಿದ್ಯಾರ್ಥಿಗಳೂ ಕೂಡ ಅನೇಕ ಕವಿತೆಗಳನ್ನು ಬರೆದಿದ್ದಾರೆ. ೭ನೇ ವರ್ಗದ ಸಂತೋಷ ಗುರಿಗೆ

ಕಿರಣಕುಮಾರ, ಕಾಶೀನಾಥ ರಾಂಪುರೆ ಈ ಮುಂತಾದ ಮಕ್ಕಳು ವಿವೇಕಾನಂದರಂಥವರ ಸುವಿಚಾರಗಳನ್ನು ಸಂಗ್ರಹಿಸುವ ಹವ್ಯಾಸವನ್ನು ಹೊಂದಿದ್ದಾರೆ.

ಹೀಗೆ ಭಾಲ್ಕಿಯ (ಕರಡ್ಯಾಳ) ಬಚನ್ನಬಸವೇಶ್ವರ ಗುರುಕುಲ ಸರ್ವಾಂಗೀಣ ಪ್ರಗತಿಯ ಮಾರ್ಗದಲ್ಲಿ ಸಾಗಿದೆ. ಅಲ್ಲಿ ಜ್ಞಾನಿ ಸುಳಿದೆಗೆಯುತ್ತಿದ್ದಾನೆ. ವಿಜ್ಞಾನಿ ಬೆಳೆಯುತ್ತಿದ್ದಾನೆ. ಕವಿ ಅರಳುತ್ತಿದ್ದಾನೆ. ಕಲಾವಿದ ವಿಕಸಿಸುತ್ತಿದ್ದಾನೆ. ಕ್ರೀಡಾ ಪಟ್ಟು ಜಗಿದಾಡುತ್ತಿದ್ದಾನೆ. ಶರಣ ರೂಪುಗೊಳ್ಳುತ್ತಿದ್ದಾನೆ.

ಅಕ್ಕಮಹಾದೇವಿ ಬಾಲ ಕಾರ್ಮಿಕರ ಪುನರವಸತಿ ಶಾಲೆ :

ಸಮಾಜದಲ್ಲಿ ಇನ್ನು ಬಡತನಕ್ಕೆ ತುತ್ತಾದ ಅನೇಕ ಮಕ್ಕಳಿದ್ದಾರೆ. ಇನ್ನೊಂದೆಡೆ ತಂದೆ ತಾಯಿಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡ ನತದ್ರಷ್ಠ ಅನಾಥ ಮಕ್ಕಳಿದ್ದಾರೆ. ಅವರಿಗೆ ಉತ್ತಮ ಶಿಕ್ಷಣ ನೀಡಿ ಯಾವುದಾದರೊಂದು ಉದ್ಯೋಗ ಕಲ್ಪಿಸಿಕೊಡುವ ಮೂಲಕ ಸ್ವಾಲಂಬಿಗಳಾಗಿ ಮಾಡುವುದು. ಸ್ಥಿತಿವಂತರ ಕಾರ್ಯವಾಗಿದೆ. ಹೀಗೆ ಸ್ಥಿತಿವಂತರು ಅವರಿಗೆ ಪೋಷಿಸುವ ಕಾರ್ಯ ಮಾಡದಿದ್ದರೆ ಅಂಥ ಬಡವ ಅನಾಥ ಮಕ್ಕಳು ಅನಿವಾರ್ಯವಾಗಿ ಬಾಲ್ಯದಲ್ಲಿಯೇ ಹಣಕ್ಕಾಗಿ ಸೇರಬೇಕಾಗುತ್ತದೆ.

ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಅಂಥ ಸುಮಾರು ಒಂದು ನೂರು ಮಕ್ಕಳನ್ನು ಗುರುತಿಸಿ ಮಠದಲ್ಲಿಟ್ಟುಕೊಂಡು ಅವರಿಗೆ ಉಚಿತ ವಸತಿ ಮತ್ತು ಪ್ರಸಾದ ಕೊಟ್ಟು ಪೋಷಿಸುತ್ತಿದ್ದಾರೆ. ಜೊತೆಗೆ ಅವರಿಗೆ ಉದ್ದಿನ ಕಡ್ಡಿ, ಮೇಣದ ಬತ್ತಿ ತಯಾರಿಕೆಯಲ್ಲಿ ತೊಡಗಿಸಿದ್ದಾರೆ. ಇನ್ನೊಂದೆಡೆ ವಿಭೂತಿ ತಯಾರಿಕೆ ಮತ್ತು ಸ್ಕ್ರೀನ್ ಪ್ರೀಂಟಿಂಗಳಲ್ಲಿ ತೊಡಗಿಸಿದ್ದಾರೆ. ಇನ್ನೂ ಹಲವು ಮಕ್ಕಳಿಗೆ ಕೈಗಾರಿಕಾ ತರಬೇತಿ ಸಂಸ್ಥೆ (ಐ.ಟಿ.ಐ.) ದಲ್ಲಿ ಸೇರ್ಪಡೆ ಮಾಡಿ ವಿವಿಧ ಕಲೆಗಳನ್ನು ಕರಗತವಾಗುವಂತೆ ಅವಕಾಶ ಕಲ್ಪಿಸಿದ್ದಾರೆ. ಮತ್ತೆ ಕೆಲವು ಮಕ್ಕಳಿಗೆ ಸಂಗೀತ ಮತ್ತು ಚಿತ್ರಕಲೆಗಳಲ್ಲಿ ತೊಡಗಿಸಿದ್ದಾರೆ.

ಹೀಗೆ ಬಾಲ ಕಾರ್ಮಿಕ ಮಕ್ಕಳಿಗೆ ಅವರವರ ಹವ್ಯಾಸಗಳಿಗೆ ತಕ್ಕ ಕಲೆಗಳಲ್ಲಿ ತರಬೇತಿ ನೀಡುವ ಜೊತೆಗೆ ಅಕ್ಷರಭ್ಯಾಸ ಕೂಡಾ ಮಾಡಿಸುತ್ತಿದ್ದಾರೆ. ಅಂಥ ಮಕ್ಕಳಲ್ಲಿ ಬಾಬು ಲಾಧಾ, ಬಾಬು ಬೆಲ್ದಾಳ, ಶ್ರೀಮಂತ ಹೆಡಗಾಪುರ, ಶಿವಾನಂದ ಅಗಸಗೇರೆ ಮಂಜುನಾಥ, ಸಂಗಮೇಶ, ಬಾಲಾಜಿ ಸಿದ್ದು, ಚಿರಂಜೀವಿ ವಿಶ್ವನಾಥ, ಪ್ರಕಾಶ ಮುಂತಾದವರು ಉತ್ತಮ ರೀತಿಯಲ್ಲಿ ಬೆಳೆಯುತ್ತಿದ್ದಾರೆ. ಸಂಗಯ್ಯ ಡೋಂಗರಗಿ ಎಂಬ ವಿದ್ಯಾರ್ಥಿ ಸಂಗೀತ ಕಲಿತು, ಈಗ ಸರಕಾರಿ ಪ್ರೌಢ ಶಾಲೆಯಲ್ಲಿ ಸಂಗೀತ ಶಿಕ್ಷಕನಾಗಿ ಸೇವೆಯಲ್ಲಿದ್ದಾನೆ.

ಈ ಮೂಲಕ ಮಕ್ಕಳು ವಿವಿಧ ಕಲೆಗಳಲ್ಲಿ ಪ್ರವೀಣರಾಗಿ ಸ್ವಾಲಂಬಿಗಳಾಗುತ್ತಿರುವುದು ಸಮಾಜದ ಸ್ವಾಸ್ಥಕ್ಕೆ ಕಾರಣವಾಗಿದೆ. ಈ ನಿಟ್ಟಿನಲ್ಲಿ ಭಾಲ್ಕಿ ಹಿರೇಮಠದ ಕೊಡುಗೆ ಅಪಾರವಾಗಿದೆ.

ನೀಲಾಂಬಿಕಾ ಅಂಗವಿಕಲ ಮಹಿಳೆಯರ ವಸತಿ ಸಂಗೀತ ಪಾಠಶಾಲೆ :

ಪೂಜ್ಯ ಮಹಾದೇವಮ್ಮ ತಾಯಿಯವರ ನೇತ್ರತ್ವದಲ್ಲಿ ಔರಾದ ತಾಲ್ಲೂಕಿನ ಖೇಡ ಸಂಗಮದ ನೀಲಾಂಬಿಕೆ ಆಶ್ರಮದಲ್ಲಿ ನೀಲಾಂಬಿಕಾ ಅಂಗವಿಕಲ ಮಹಿಳೆಯರ ವಸತಿ ಸಂಗೀತ ಪಾಠ ಶಾಲೆಯನ್ನು ಪೂಜ್ಯ ಚನ್ನಬಸವ ಪಟ್ಟದೇವರ ಸತ್ಯ ಸಂಕಲ್ಪದಂತೆ ಇಂದಿನ ಭಾಲ್ಕಿಯ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಆರಂಭಿಸಿದ್ದಾರೆ. ಪೂಜ್ಯ ಮಹಾದೇವಮ್ಮ ತಾಯಿಯವರು ಸಂಗೀತದಲ್ಲಿ ವಿದ್ವತ್ ಪದವಿ ಪಡೆದಿದ್ದಾರೆ. ವಿಶೇಷವಾಗಿ ಅಂಧ (ಕುರುಡ) ಮಹಿಳೆಯರಿಗೆ ಸಂಗೀತ ಅಭ್ಯಾಸ ಮಾಡಿಸುತ್ತಿದ್ದಾರೆ.

ಈ ಭಾಗದ ಅನೇಕ ಅಂಧ ಮಹಿಳಾ ವಿದ್ಯಾರ್ಥಿನೀಯರು ಈ ಸಂಗೀತ ಪಾಠ ಶಾಲೆಯ ಪ್ರಯೋಜನ ಪಡೆಯುತ್ತಿದ್ದಾರೆ. ಹಾರ್ಮೋನಿಯಂ, ತಬಲಾ, ತಂಬೂರಿ ಇತ್ಯಾದಿ ಸಂಗೀತ ಉಪಕರಣಗಳು ಇವೆ. ಪ್ರತಿ ವರ್ಷ ೧೦ ರಿಂದ ೧೫ ವಿದ್ಯಾರ್ಥಿನಿಯರು ಇಲ್ಲಿ ಪ್ರವೇಶ ಪಡೆದು ಉಚಿತ ವಸತಿ ಪ್ರಸಾದ ಮತ್ತು ಸಂಗೀತ ಶಿಕ್ಷಣ ಪಡೆಯುತ್ತಿದ್ದಾರೆ. ಬೆಂಗಳೂರಿನ ಲಿಂಗೈಕ್ಯ ಹೈಕೋರ್ಟ ನ್ಯಾಯಾಧೀಶ ಡಿ.ಎಂ. ಚಂದ್ರಶೇಶರ ಅವರು ತಮ್ಮ ಟ್ರಸ್ಟ ಮೂಲಕ ಲಕ್ಷಾಂತರ ರೂಪಾಯಿಗಳು ಈ ಸಂಗೀತ ಪಾಠಶಾಲೆಗೆ ದಾನ ನೀಡಿ ಪ್ರೋತ್ಸಾಹಿಸಿದ್ದಾರೆ. ಮುಂದೆ ಅವರ ಕುಟುಂಬದವರು (ಪತ್ನಿ ಪಿ.ಸಿ. ಉಮಾದೇವಿ ಮತ್ತು ಪುತ್ರ ಶಿವದೇವ) ಕೂಡಾ ಆರ್ಥಿಕ ನೆರವು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಡಾ. ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯ :

೨೦೦೭ ಆಗಷ್ಟ ತಿಂಗಳಲ್ಲಿ ಈ ಪ್ರಸಾದ ನಿಲಯ ಬೀದರ ಪಟ್ಟಣದಲ್ಲಿ ಸ್ಥಾಪಿಸಿ ಆರಂಭಿಸಲಾಯಿತು. ಹತ್ತನೇ ತರಗತಿ ಪಾಸಾದ ಉನ್ನತ ಶಿಕ್ಷಣ ಪಡೆಯಬೇಕೆಂಬ ಹಂಬಲವುಳ್ಳ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಬೀದರ ನಗರದಲ್ಲಿ ಉಳಿದು ವಿದ್ಯಾಭ್ಯಾಸ ಮಾಡಲು ಈ ಪ್ರಸಾದ ನಿಲಯ ಆರಂಭಿಸಲಾಯಿತು. ಇಪ್ಪತ್ತೈದು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಪ್ರಸಾದ ನಿಲಯದಲ್ಲಿ ಇಂದು ಐವತ್ತಕ್ಕೂ ಮೀರಿ ಬಡ ವಿದ್ಯಾರ್ಥಿಗಳು ಇದ್ದಾರೆ. ಸಮಾಜದ ಎಲ್ಲಾ ಮತ ಧರ್ಮಗಳ ವಿದ್ಯಾರ್ಥಿಗಳು ಈ ಪ್ರಸಾದ ನಿಲಯದ ಸೌಲಭ್ಯ ಪಡೆಯುತ್ತಿದ್ದಾರೆ. ಈ ಪ್ರಸಾದ ನಿಲಯ ಸದ್ಯದಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದ್ದೆ. ಮುಂಬರುವ ದಿನಗಳಲ್ಲಿ ಇದಕ್ಕಾಗಿಯೇ ಸ್ವಂತ ನಿವೇಶನ ಖರೀದಿಸಿ ಶಾಶ್ವತ ಕಟ್ಟಡ ನಿರ್ಮಾಣ ಮಾಡಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ ಮಾಡುವ ಯೋಜನೆ ರೂಪಿಸಲಾಗುತ್ತಿದೆ.

ಬಡವಿದ್ಯಾರ್ಥಿಗಳಿಗೆ ಶಿಷ್ಯವೇತನ :

ಶ್ರೀಮಂತರ ಇಂದಿಗೂ ಶಿಕ್ಷಣ ವ್ಯವಸ್ಥೆ ಕೇವಲ ಏಳನೇ ಮತ್ತು ಹತ್ತನೇ ತರಗತಿಗಳಿಗೆ ಸಿಮೀತವಾಗಿರುವುದು ಕಾಣುತ್ತೇವೆ. ಗ್ರಾಮಾಂತ ಪ್ರದೇಶದ ಬಡ ಮಕ್ಕಳು ಅಲ್ಲಿರುವ ಸಮೀಪದ ಶಿಕ್ಷಣದ ವ್ಯವಸ್ಥೆಯನ್ನು ಪಡೆದುಕೊಂಡು ಆರ್ಥಿಕ ಅನಾನುಕೂಲತೆಯಿಂದಾಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವುದಿಲ್ಲ. ಅನೇಕ ಪ್ರತಿಭಾವಂತ ಮಕ್ಕಳು ಆರ್ಥಿಕ ತೊಂದರೆಯಿಂದಾಗಿ ಶಿಕ್ಷಣ ಮೊಟಕುಗೊಸುತ್ತಾರೆ. ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಉತ್ತಮ ಜೀವನ ನಡೆಸುವಂತಾಗಲು ನಮ್ಮ ಹಿರೇಮಠ ಸಂಸ್ಥಾನ ವಿದ್ಯಾಪೀಠದ ವತಿಯಿಂದ ಶಿಷ್ಯವೇತನ ನೀಡಲಾಗುತ್ತಿದೆ.

ಕ್ರಿಡೋತ್ಸವ :

ಪಠ್ಯಕ್ರಮಕ್ಕೆ ಬೆಲೆ ಕೊಟ್ಟಷ್ಟು ಪ್ರಮಾಣದಲ್ಲಿ ಕ್ರೀಡೆಗಳಿಗೆ ಪ್ರದಾನ್ಯತೆ ಕಲ್ಪಿಸಲಾಗಿದೆ. ಜ್ಞಾನದ ಜೊತೆಗೆ ದೇಶದ ಆರೋಗ್ಯ ಕಾಪಾಡಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ. ಓಟ, ಎತ್ತರ, ಜಿಗಿತ, ಶಾಟಪುಟ ಥ್ರೋ, ವಾಲಿಬಾಲ, ಕಬ್ಬಡ್ಡಿ, ಖೋ ಖೋ, ಫೂಟಬಾಲ್, ಕ್ರಿಕೇಟ, ಹಾಕಿ ಇತ್ಯಾದಿ ಹೊರಾಂಗಣ ಕ್ರೀಡೆಗಳು ಮತ್ತು ಚೆಸ್ ಕೇರಂ, ಭಾಷಣ, ನಿಬಂಧ, ಚಿತ್ರಕಲೆ, ಸಂಗೀತ, ರಂಗೋಲಿ, ಇತ್ಯಾದಿ ಒಳಾಂಗಣ ಆಟಪಾಠಗಳಿಗೂ ನಿರಂತರವಾಗಿ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. ಆಟಪಾಠಗಳಲ್ಲಿ ಮಕ್ಕಳಲ್ಲಿ ಆಸಕ್ತಿ ಬೆಳೆಸುವ ವಿಶೇಷ ಪರಿಣಿತ ತರಬೇತುದಾರರಿಂದ ತರಬೇತಿ ನೀಡಲಾಗುತ್ತಿದೆ.

ಪ್ರತಿವರ್ಷ ರಾಷ್ಟ್ರೀಯ ಹಬ್ಬಗಳ ಆಚರಣೆ ಸಂದರ್ಭಗಳಲ್ಲಿ ಕ್ರೀಡೋತ್ಸವ ನಡೆಸಲಾಗುತ್ತಿದೆ. ವರ್ಷಕೊಮ್ಮೆ ಅಂತರ ಶಾಲಾ ಎ ುಟ್ಟದಲ್ಲಿ, ತಾಲೂಕಾ ಮಟ್ಟದಲ್ಲಿ ಮತ್ತು ಜಿಲ್ಲಾ ಎ ುಟ್ಟದಲ್ಲಿ ಕ್ರೀಡೋತ್ಸವ ನಡೆಸಲಾಗುತ್ತಿದೆ. ವಿಜೇತ ಕ್ರೀಡಾಪಟುಗಳಿಗೆ ಸನ್ಮಾನಿಸಿ, ಸೂಕ್ತ ಬಹುಮಾನ ಪಾರಿತೋಷಕಗಳು ನೀಡಿ ಸನ್ಮಾನ ಪತ್ರ ಪ್ರಧಾನ ಮಾಡಲಾಗುತ್ತಿದೆ. ಆಟ ಪಾಠಗಳಲ್ಲಿ ಬಹಳ ಆಸಕ್ತಿ ಇರುವ ಮಕ್ಕಳನ್ನು ಗುರುತಿಸಿ ವಿಶೇಷ ತರಬೇತಿ ನೀಡಿ ಬೆಳೆಸಲಾಗುತ್ತಿದೆ. ಮಕ್ಕಳಲ್ಲಿ ಕ್ರೀಡಾ ಮನೋಭಾವನೆ ಬೆಳೆಯುವುದರಿಂದ ದೈಹಿಕವಾಗಿ ಸದೃಡರಾಗಲು ಪೂರಕವಾಗುತ್ತದೆ. ಈ ದಿಶೆಯಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ.

ಹೀಗೆ ಮಠಾಧೀಶರು ಕೇವಲ ಧರ್ಮ ಪ್ರಚಾರಕರೆಂಬ ತೆಳು ಗ್ರಾಹಿಕೆಗಳಿಂದ ದಿನಚಿತದ ಬಹುತೇಕ ಮಠಾಧೀಶರು ಹೊರ ಬಂದಿದ್ದಾರೆ. ಅದರಲ್ಲಿ ಹಿರೇಮಠದ ಶ್ರೀಗಳಂತೂ ಅತ್ಯಂತ ಜನಸಾಮಾನ್ಯರೊಂದಿಗೆ ಬೆರತು ದಿನ ದಲಿತರ ಬಡವರು ಮಹಿಳೆಯರ ಶತಮಾನದಿಂದ ಶೋಷಣೆಗೆ ಒಳಗಾದವರ ಧ್ವನಿಯಾಗಿ ನಿಂತಿದ್ದಲ್ಲದೆ ಶಿಕ್ಷಣಕ್ಕೆ ಎಲ್ಲಿಲ್ಲದ ಆದ್ಯತೆ ನೀಡಿದ್ದಾರೆ. ಏಕೆಂದರೆ ಜಾಗತಿಕ ಸಮಸ್ಯೆಗಳಾದ ಭಯೋತ್ಪಾದನೆ, ಭ್ರಷ್ಟಾಚಾರ, ಬಡತನ ಮೊದಲಾದ

ಸಮಸ್ಯೆಗಳಿಗೆ ಶಿಕ್ಷಣವೇ ಪರಿಹಾರ ಯಾಂತ್ರಿಕತೆಗಳ ಮಧ್ಯದ ಬದುಕು ಮನುಷ್ಯರ ಪ್ರೀತಿ ಶಾಂತಿ ನೆಮ್ಮದಿಗಳನ್ನು ಕಸಿದುಕೊಂಡಿದರೆ ಮನುಷ್ಯನ ಸಾಂಸ್ಕೃತಿಕ ಅಧಃ ಪತನವುಂಟಾಗಿದೆ, ಕಳೆದು ಹೋಗುತ್ತಿರುವ ಜೀವನ ಪ್ರೀತಿಯನ್ನು ಬಯಸಬಹುದು. ಇಂದು ಅಗತ್ಯವಾಗಿರುವುದರಿಂದ ಅದು ಉತ್ತಮ ಸಂಸ್ಕಾರ ಉತ್ತಮ ಶಿಕ್ಷಣದಿಂದ ಮಾತ್ರ ಕೊಡಲು ಸಾಧ್ಯವೆಂದರಿತು, ೧೯೬೨ ರಲ್ಲಿ ಕೇವಲ ನಲವತ್ತು ವಿದ್ಯಾರ್ಥಿಗಳೊಂದಿಗೆ ಗುರುಕುಲದ ವಿದ್ಯಾಪೀಠವನ್ನು ಆರಂಭಿಸಿದ್ದಾರೆ.

ಇಂದು ಸುಮಾರು ೨೯ ಶೈಕ್ಷಣಿಕ ಅಂಗ ಸಂಸ್ಥೆಗಳಾಗಿ ಕವಲೊಡೆದು ಬೆಳೆದಿದೆ. ಸುಮಾರು ಐದು ಸಾವಿರ ವಿದ್ಯಾರ್ಥಿಗಳು ಒಂದೇ ಸಂಸ್ಥೆಯ ಕೆಳಗೆ ಅಧ್ಯಯನ ಶೀಲರಾಗಿದ್ದಾರೆ. ನೂರಾರು ಜನ ಸಿಬ್ಬಂಧಿ ವರ್ಗದವರು ಶಿಕ್ಷಣ ಸಂಸ್ಥೆಯನ್ನು ಬೆಳೆಸುತ್ತಿದ್ದಾರೆ. ಇದರಿಂದ ನೂರಾರು ಕುಟುಂಬಗಳು ನೆಮ್ಮದಿಯಿಂದ ಬದುಕುವುದರೊಂದಿಗೆ ಒಂದು ಪೂಣ್ಯ ಪ್ರಮಾಣದ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಿದಂತಾಗಿದೆ.

ಭಾರತ ದೇಶ ವಿಶ್ವದಲ್ಲೆ ವಿಶಿಷ್ಟವಾಗಿದೆ. ಕಳೆದ ಐದು ಸಾವಿರ ವರ್ಷಗಳಲ್ಲಿ ವಿವಿಧ ಜನಾಂಗ, ನಾಗರೀಕತೆ, ಸಂಸ್ಕೃತಿ, ಧರ್ಮ, ವರ್ಣ, ಜಾತಿ, ಮತ, ಪಂಥ, ಬುಡಕಟ್ಟು, ಭಾಷೆ ಆಚಾರ ಮತ್ತು ನಿಚಾರಗಳ ವೈವಿದ್ಯಗಳಲ್ಲಿ ಸೇರಿ ಒಂದು ರಾಷ್ಟ್ರವಾಗಿ ರೂಪುಗೊಂಡಿದೆ. ಹೀಗೆ ರೂಪುಗೊಳ್ಳುವ ಮೊದಲು ಈ ನೆಲದ ನೂರಾರು ದೇಶಗಳಲ್ಲಿ ಸಂಸ್ಥಾನಗಳಲ್ಲಿ ಮತ್ತು ಕೂಡಿದ ಜನದಿಂದ ಹರಿದು ಹಂಚಿ ಹೋಗಿದ್ದರು. ದೇಶಗಳು ಬೇರೆ ಬೇರೆಯಾಗಿದ್ದರೂ ಹೀಗೆ ವೈವಿಧ್ಯಗಳಿಂದಕೂಡಿದ ಬಹುಮುಖಿ ಬದುಕು ಎಲ್ಲೆಡೆ ಪಸರಿಸಿತ್ತು. ಇದೇ ಉಪಖಂಡದ ವಿವಿಧೆಡೆಯಲ್ಲಿ ಶರಣರು, ಸಂತರು, ಋಷಿಗಳು, ದಾಸರು ಮತ್ತು ತತ್ವಪ್ರತಿಪಾದಕರು ವೈವಿಧ್ಯಗಳ ಮಧ್ಯ ಭಾವೈಕ್ಯವನ್ನು ಸಾಧಿಸಲು ಯತ್ನಿಸಿದರು. ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ಬಹುಪಾಲ ಜನಾಂಗಗಳ ಮಧ್ಯೆ ಸಂಪರ್ಕ ಬಂದಿತು. ಸ್ವಾತಂತ್ರ್ಯನಂತರ ಎಲ್ಲಿ ವೈರುಧ್ಯೆಗಳೊಂಡನೆ ಒಂದಾದೆವು. ಆದರೆ ಆ ವೈರುಧ್ಯಗಳಿಂದ ಮೇಲೆ ಬಿರದೆ ಒದ್ದಾಡುತ್ತಲೇ ಇದ್ದೇವೆ.

ಸಂಪ್ರದಾಯಬದ್ಧ ಸಮಾಜದ ಜಾತಿ ಮತ್ತು ಕೋಮುಗಳ ಸಮಸ್ಯೆ ಮುಂದುವರಿಯುತ್ತಿದ್ದಂತೆಯೇ ಆಧುನಿಕ ಸಮಾಜ ಸೃಷ್ಟಿಸಿದ ಹೊಸ ಸಮಸ್ಯೆಗಳನ್ನು ನಾವಿಂದು ಎದುರಿಸುತ್ತಿದ್ದೇವೆ. ನಮ್ಮ ಶಿಕ್ಷಣ ಪದ್ಧತಿ ಅವುಗಳಲ್ಲಿ ಪ್ರಮುಖವಾಗಿದೆ. ಪರಪರಾಗತವಾಗಿ ಬಂದ ಉತ್ಪಾದನಾ ವ್ಯವಸ್ಥೆಯನ್ನು ನಮ್ಮ ಶಿಕ್ಷಣ ಪದ್ಧತಿ ಹಾಳು ಮಾಡಿತು. ದೇಶದ ೬ ಲಕ್ಷ ೨೫ ಸಾವಿರ ಹಳ್ಳಿಯಲ್ಲಿ ನಿರುದ್ಯೋಗ ಸೃಷ್ಟಿಸಿತು. ನಾಲ್ಕಕ್ಷರ ಕಲಿತವರು ತಮ್ಮ ಹೊಲಗಳನ್ನು ನೋಡದಂತೆ ಮಾಡಿತು. ಅವರೆಲ್ಲ ತಮ್ಮ ಬಗ್ಗೆ ತಿರಸ್ಕಾರ ಭಾವ ತಾಳುವಂಥ ವಾತಾವರಣ ಸೃಷ್ಟಿಸಿತು. ಎಲ್ಲ ನಾಗರೀಕತೆ ಮತ್ತು ಸಂಸ್ಕೃತಿಗಳ ಸಮ್ಮಿಶ್ರಣದಿಂದ ಬಂದ ಪರಂಪರಾಗತ ಜ್ಞಾನವನ್ನು ಕಡೆಗಣಿಸಲಾಯಿತು. ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಕೆಲವರಿಗಾಗಿ

ಉದ್ಯೋಗಾವಕಾಶಗಳು ಕೈ ಮಾಡಿ ಕರೆದರೆ ಬಹುಪಾಲು ಜನ ಉದ್ಯೋಗವಕಾಶಗಳಿಂದ ವಂಚಿತವಾಗುವಂತಾಯಿತು. ಹೀಗಾಗಿ ಕಳೆದ ನೂರು ವರ್ಷಗಳ ಅವಧಿಯಲ್ಲಿ ಭಾರತದಲ್ಲೇ ಇಂಡಿಯಾವೊಂದರ ಸೃಷ್ಟಿಯಾಗಿದೆ. ಹೀಗೆ ನಮಗೆ ಒಂದೇ ರಾಷ್ಟ್ರದಲ್ಲಿ ಎರಡು ತದ್ವಿರುದ್ಧ ನಿಲುವಿನ ದೇಶಗಳನ್ನು ಅನುಭವಿಸುತ್ತಿದ್ದೇವೆ. ಇಂದು ಭಾರತ ಮತ್ತು ಇಂಡಿಯಾ ಮುಖಾಮುಖಿಯಾಗುವ ಹಂತ ತಲುಪಿವೆ. ಭಾರತ ಎಂಬುದು ಕೇವಲ ಹಳ್ಳಿಗಳಿಗೆ ಸೀಮಿತವಾಗಿಲ್ಲ. ಇಂಡಿಯಾ ಎಂಬುದು ಕೇವಲ ನಗರಗಳಿಗೆ ಈ ಭಾರತ ಮತ್ತು ಇಂಡಿಯಾ ಹಳ್ಳಿಗಳಲ್ಲೂ ಇದೆ. ನಗರಗಳಲ್ಲೂ ಇದೆ.

ನಮ್ಮ ದೇಶದ ಆಧುನಿಕ ಶಿಕ್ಷಣ ಪದ್ಧತಿ ಶೇಕಡಾ ೨೫ ರಷ್ಟಿರುವ ಇಂಡಿಯಾದವರಿಗೆ ಮಾತ್ರ ಉಪಯೋಗವಂಥದ್ದು. ಕಳೆದ ೧೫೦ ವರ್ಷಗಳ ಅವಧಿಯಲ್ಲಿ ರೂಪುಗೊಂಡಿರುವ ಶಿಕ್ಷಣ ವ್ಯವಸ್ಥೆ ಇಂದು ಅರ್ಥಹೀನವಾಗುವ ಪರಿಸ್ಥಿತಿ ತಲೆದೂರಿದೆ. ನಮ್ಮ ಸಾಹಿತ್ಯ ಸಂಸ್ಕೃತಿ, ಕಲೆ, ಜನಪದ ಕಲೆ ಅಷ್ಟೇ ಅಲ್ಲ ತತ್ವಜ್ಞಾನ, ವಿಜ್ಞಾನ, ಇತಿಹಾಸ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದವು ಕೂಡ ಕಾಲನಿಸವಾಗುತ್ತಿದೆ. ಪರಿಸ್ಥಿತಿ ಹೀಗೆ ಮುಂದುವರಿಸಿದರೆ ಮುಂದಿನ ೨೫ ವರ್ಷಗಳ ಅವಧಿಯಲ್ಲಿ ಈ ವಿಷಯಗಳು ಅರ್ಥಹೀನವೆನಿಸುತ್ತವೆ. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಂದ ಇಂಥ ವಿಷಯಗಳ ವಿಭಾಗಗಳು ಮಾಯವಾಗುತ್ತಿರುವುದರಿಂದ ಭಾಲ್ಕಿ ಶ್ರೀಗಳು ಶಿಕ್ಷಣ ವ್ಯಾಪಾರೀಕರಣಗಳಿಸಿದರೇ ಕನ್ನಡದಲ್ಲಿ ಶಿಕ್ಷಣ ನೀಡಿ ದೇಶಿ ಚಿಂತನೆಯನ್ನು ಉಳಿಸುತ್ತಿದ್ದಾರೆ.

ಪ್ರಜಾವಾಣಿ (೨೪-೧೨-೨೦೦೬) ರ ಪತ್ರಿಕೆಯಲ್ಲಿ ಓದಿದ್ದು ಪಿ.ಎಚ್.ಡಿ. ಕೆಲಸ ರಸ್ತೆ ರಿಪೇರಿ ತಲೆಬರಹದ ಸುದ್ದಿಯೊಂದು ಪ್ರಕಟವಾಗಿದೆ. ಇಂದು ಕಾಲಕಸವಾಗುತ್ತಿರುವ ಶಿಕ್ಷಣವನ್ನು ಕಲಿತ ಭಾರತದ ಪದವೀಧರರ ಹೃದಯ ವಿದ್ಯಾವಂತ ಪರಿಸ್ಥಿತಿಗೆ ಈ ಸುದ್ದಿ ಸಾಕ್ಷಿಯಾಗಿದೆ. ಬಳ್ಳಾರಿ ಜಿಲ್ಲೆ ಹೂವಿನ ಹೆಡಲಿಯ ದಾಸರಹಳ್ಳಿ ತಾಂಡಾದ ಎಲ್.ದೇವ ನಾಯಕ ಬಿ.ಎ.ಬಿ.ಎಡ್. ಮತ್ತು ಎಂ.ಎ.ಪದವಿಗಳನ್ನು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ. ಪಿ.ಎಚ್.ಡಿ. ಮಹಾ ಪ್ರಬಂಧವನ್ನು ಸಲ್ಲಿಸಿದ್ದಾರೆ. ದಲಿತರಿಗೆ ಸಿಗುವ ಮಿಸಲಾಗತಿ ಸೌಲಭ್ಯವನ್ನು ಹೊಂದಿದ್ದಾರೆ. ಆದರೆ ಯಾವುದೇ ನೌಕರಿ ಸಿಗದೆ ಹಾಸನ ನಗರದ ರಸ್ತೆ ಡಾಂಬರೀಕರಣ ಕಾಮಗಾರಿಯಲ್ಲಿ ದಿನಗೂಲಿಯಾಗಿ ಕೆಲಸ ಮಾಡುತ್ತಿದ್ದಾರೆ.

ಇಷ್ಟೊಂದು ಓದಿದ ಭಾರತದ ವಿದ್ಯಾರ್ಥಿಯ ಪರಿಸ್ಥಿತಿ ಹೀಗಿದೆ ನೋಡಿ ಆದರೆ ಇಂಡಿಯಾ ಯುವಕನೊಬ್ಬ ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ಎಂಜಿನಿಯರಿಂಗ್‌ನಲ್ಲಿ ಅಥವಾ ಕಂಪ್ಯೂಟರ ಸೈನ್ಯದಲ್ಲಿ ಡಿಪ್ಲೋಮಾ ಮಾಡಿಕೊಳ್ಳುತ್ತಾರೆ. ಸ್ವಲ್ಪ ಸ್ವಲ್ಪ ಪ್ರಯತ್ನ ಪಟ್ಟು ಆರಂಭದಲ್ಲೇ ಹತ್ತಾರು ಸಾವಿರ ಸಂಬಳ ಸಿಗುವ ನೌಕರಿ ಪಡೆಯುತ್ತಾರೆ. ವೃತ್ತಿಪರ ಶಿಕ್ಷಣ ಪಡೆದ

ಇಂಡಿಯಾದವರು ನಿರುದ್ಯೋಗಿಗಳಾಗಿ ಉಳಿಯುವುದು ಬಹಳ ಕಡಿಮೆ. ಆದರೆ ಪದವೀಧರ ಭಾರತೀಯರಿಗೆ ಉದ್ಯೋಗಾವಕಾಶಗಳು ತೀರ ಕಡಿಮೆ.

ನಿಲಾಂಬಿಕಾ ಸಂಗೀತ ಪಾಠ ಶಾಲೆ :

ಭಾಲ್ಕಿಯ ಹಿರೇಮಠ ಸಂಸ್ಥಾನದ ನಿಲಾಂಬಿಕೆ ಸಂಗೀತ ಪಾಠಶಾಲೆ ಪೂಜ್ಯ ಗುರುಗಳು ಆರಂಭಿಸಿದ್ದಾರೆ. ಆ ಸಂಗೀತ ಪಾಠ ಶಾಲೆಯಲ್ಲಿ ಪುರುಷರು ಪ್ರವೇಶ ಪಡೆದು ಸಂಗೀತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿಯೂ ಉಚಿತ ವಸತಿ ಮತ್ತು ಪ್ರಸಾದಗಳ ಜೊತೆಗೆ ಉಚಿತ ಸಂಗೀತ ಶಿಕ್ಷಣ ಲಭ್ಯವಿದೆ. ಬಸವಕಲ್ಯಾಣದ ಶ್ರೀ ವಿ. ಸಿದ್ಧರಾಮಣ್ಣನವರು, ಶ್ರೀ ನವಲಿಂಗ ಕುಮಾರ ಪಾಟೀಲ, ಶ್ರೀ ರಾಜಕುಮಾರ ಮದಕಟ್ಟಿ, ಶ್ರೀ ಶಿವಾನಂದ ಅವಟಿ ಗವಾಯಿಗಳು, ಶ್ರೀ ಲೋಕನಾಥ ಚಾಂಗಲೇರ ಮುಂತಾದವರು ಈ ಸಂಗೀತ ಪಾಠ ಶಾಲೆಯನ್ನು ಚೆನ್ನಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ವಿಶೇಷವಾಗಿ ಇಲ್ಲಿಯ ಅಕ್ಕನ ಬಳಗದ ಶರಣೆಯರು ಈ ಪಾಠ ಶಾಲೆಯ ಪ್ರಯೋಜನ ಪಡೆದು ಬೆಳೆದಿದ್ದಾರೆ.

ಶ್ರೀ ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯದ ವಿದ್ಯಾರ್ಥಿಗಳಾದ ಕು. ಬಾಲಾಜಿ ನಾಗಮಾರಪಳ್ಳಿ, ಕು. ಸಿದ್ದು ಕಟ್ಟಿಮನಿ, ಕು. ಚಿರಂಜೀವಿ, ಕು. ವಿಶ್ವನಾಥ. ಕು.ನರಸಾರೆಡ್ಡಿ, ಮುಂತಾದವರು ಈ ಸಂಗೀತ ಪಾಠಶಾಲೆಯ ಪ್ರಯೋಜನ ಪಡೆದು ಬೆಳೆಯುತ್ತಿದ್ದಾರೆ. ಇಲ್ಲಿಯ ಖಡಕೇಶ್ವರ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿನಿ ಕು.ಸುವರ್ಣಾ ರಾಠೋಡ ಈ ಸಂಗೀತ ಪಾಠಶಾಲೆಯ ಪ್ರತಿಭಾವಂತ ವಿದ್ಯಾರ್ಥಿನಿ ಆಗಿದ್ದಾರೆ. ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದವರಲ್ಲಿ ಕು.ಸುವರ್ಣಾ ರಾಠೋಡ ಮತ್ತು ಕು.ಸಿದ್ದು ಕಟ್ಟಿಮನಿ ಸೇರಿರುವುದು ಹೆಮ್ಮೆಯ ವಿಷಯವಾಗಿದೆ.

ಭಾಲ್ಕಿಯ ಸರಸ್ವತಿ ಸಂಗೀತ ಪಾಠಶಾಲೆಯ ಸಂಗೀತ ಗುರುಗಳಾದ ಶ್ರೀ ಕೇಶವರಾವ ಸೂರ್ಯವಂಶಿ ಮತ್ತು ಶ್ರೀ ಶಿವಾಜಿ ಸಾಗರ ಭಾತಂಬ್ರಾ ಅವರು ವಿಶೇಷ ಸಂದರ್ಭದಲ್ಲಿ ಬಂದು ಇಲ್ಲಿಯ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣ ನೀಡುವ ಮೂಲಕ ಸಹಕರಿಸುತ್ತಿದ್ದಾರೆ. ಖೋಣಗಾಪುರದ ಶ್ರೀ ಸಂಗಮೇಶ ಮತ್ತು ದಾಡಗಿಯ ಶ್ರೀ ಧನರಾಜವಾಲೆ ಅವರು ಕೂಡಾ ಸಂಗೀತ ಶಿಕ್ಷಣ ನೀಡಲು ಮತ್ತು ಮಾರ್ಗದರ್ಶನ ಮಾಡಲು ಸಹಕರಿಸುತ್ತಿದ್ದಾರೆ. ಪ್ರತಿ ಗುರುವಾರ ಅಕ್ಕನ ಬಳಗದ ಶರಣೆಯರಿಂದ ಭಜನೆ ಮತ್ತು ಮಠದ ಗಾಯನ ನಡೆಯುತ್ತದೆ. ಶ್ರೀ ಸಂತೋಷ ಹಾಲಕುಡೆ ಮತ್ತು ಶ್ರೀ ಪಂಚಾಕ್ಷರಿ ಸ್ವಾಮಿ ಚಿಂಚೋಳಿ ಅವರು ತಬಲಾ ಸಾಥಿ ಹಾಗೂ ಢೋಲಕ ಸಾಥಿ ಮಾಡುತ್ತಾರೆ. ಶ್ರೀ ಲೋಕನಾಥ ಚಾಂಗಲೇರ ಖಾಯಂ ಶಿಕ್ಷಕರಾಗಿದ್ದಾರೆ.

ನಾಟಕೋತ್ಸವ :

ಹಿರೇಮಠ ಸಂಸ್ಥಾನ ವಿದ್ಯಾಪೀಠ ಅಡಿಯಲ್ಲಿರುವ ಎಲ್ಲಾ ಪ್ರೌಢ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ನಾಟಕ ಪ್ರದರ್ಶನ ಬಗ್ಗೆ ಮತ್ತು ನಾಟಕ ಸಂಸ್ಕೃತಿ ಬಗ್ಗೆ ಮತ್ತು ನಾಟಕ ಸಂಸ್ಕೃತಿ ಬಗ್ಗೆ ವಿಶೇಷ ತರಬೇತಿಯನ್ನು ನೀಡಿ ಈ ಬಗ್ಗೆ ವಿದ್ಯಾರ್ಥಿಗಳಿಗೆ ನಾಟಕದ ಬಗ್ಗೆ ಅಭಿಮಾನ ಮೂಡಿಸಲಾಗುತ್ತಿದೆ. ದೃಶ್ಯ ಮಾಧ್ಯಮದಿಂದ ಜನಸಾಮಾನ್ಯರಿಗೆ ಪರಿಣಾಮಕಾರಿಯಾಗಿ ತತ್ವಗಳನ್ನು ಮತ್ತು ನೀತಿ ಪಾಠಗಳನ್ನು ಬಿಂಬಿಸಬಹುದಾಗಿದೆ. ವಿಶೇಷವಾಗಿ ಯುವಕರಲ್ಲಿ ದುಶ್ಚಟ ದುರ್ವ್ಯಸನೆಗಳು ಇಂದಿನ ದಿನಮಾನಗಳಲ್ಲಿ ಹೆಚ್ಚಾಗಿ ಕಾಣಿಸುತ್ತಿವೆ. ಯುವಕರಿಗೆ ನೀತಿ ಪಾಠ ಭೋದಿಸುವ ನಿಟ್ಟಿನಲ್ಲಿ ಉತ್ತಮ ನಾಟಕಗಳನ್ನು ಪ್ರತಿ ವರ್ಷ ಪ್ರದರ್ಶನ ನೀಡಲಾಗುತ್ತಿದೆ. ನಾಡಿನ ಪ್ರಖ್ಯಾತ ಹವ್ಯಾಸಿ ನಾಟಕ ತಂಡದವರು ಕರೆಯಿಸಿ ಅವರಿಂದ ನಾಟಕೋತ್ಸವ ಏರ್ಪಡಿಸಲಾಗುತ್ತಿದೆ.

ಗ್ರಂಥಾಲಯ :

ಹಿರೇಮಠ ಸಂಸ್ಥಾನದಲ್ಲಿ ಒಂದು ಸುಸಜ್ಜಿತ ಗ್ರಂಥಾಲಯ ಇದೆ. ಈ ಗ್ರಂಥಾಲಯದಲ್ಲಿ ಬಹುತೇಕ ಗ್ರಂಥಗಳು ಶರಣರ ಸಾಹಿತ್ಯ ಕುರಿತಾಗಿ ಕೃಷಿ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿತ ಗ್ರಂಥಗಳು ಕೂಡಾ ಇದೆ. ಒಟ್ಟು ಎಂಟು ಸಾವಿರ ಗ್ರಂಥಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಗಳು ವ್ಯವಸ್ಥಿತವಾಗಿ ಇಡಲಾಗಿದೆ.

ವಿದ್ವಾಂತರು, ಶರಣ ಸಾಹಿತಿಗಳು, ಮಹಾಪ್ರಬಂಧ ಮಂಡಿಸುವವರು ಅಧ್ಯಯನ ಶೀಲರು ಮುಂತಾದವರಿಗೆ ಈ ಗ್ರಂಥಾಲಯದಿಂದ ಉಚಿತವಾಗಿ ಗ್ರಂಥಗಳನ್ನು ಅಭ್ಯಾಸಕ್ಕಾಗಿ ಕೊಟ್ಟು ಮರಳಿ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ. ಹಿರೇಮಠದಲ್ಲಿಯೇ ಉಳಿದು ಅಧ್ಯಯನ ನಡೆಸುವವರಿಗೆ ಉಚಿತ ಪ್ರಸಾದ ವ್ಯವಸ್ಥೆ ಇರುತ್ತದೆ. ಈ ಗ್ರಂಥಾಲಯದ ಸದುಪಯೋಗ ಪಡೆದು ಅನೇಕರು ಸಂಶೋಧನೆ ಮಾಡಿ, ಮಹಾಪ್ರಬಂಧ ಮಂಡಿಸಿ, ಡಾಕ್ಟರೇಟ ಪಡೆದ ಉದಾಹರಣೆಗಳಿವೆ.

ಅಡಿ ಟಿಪ್ಪಣಿ

೧. ಚೆನ್ನಬಸವ ಕಲ್ಯಾಣ ಪು.ಸಂ. ೩೮ ರಿಂದ ೪೦ ರ ವರೆಗೆ

೨. ಚನ್ನಬಸವ ಕಲ್ಯಾಣ ಪು.ಸಂ. ೪೦ ರಿಂದ ೪೮ ರ ವರೆಗೆ

೪. ಧಾರ್ಮಿಕ ಸಾಧನೆಗಳು :

೧೨ ನೇ ಶತಮಾನದಲ್ಲಿ ವಚನಕಾರರು ನಡೆಸಿದ ಸತ್ಯ ಸಂಶೋಧನೆಯಲ್ಲಿ ವಚನ ಧರ್ಮ ಹುಟ್ಟಿಬಂದಿತು. ಧರ್ಮದ ಹೆಸರಿನಲ್ಲಿ ಅನ್ಯಾಯ ಅತ್ಯಾಚಾರಗಳು. ಮನುಷ್ಯ ಕುಲವನ್ನೆ ಹಿಂಡಿ ಹಿಪ್ಪ ಮಾಡುತ್ತಿದ್ದ ಕಾಲವದು ವೈದಿಕ ಮತದ ಕರ್ಮಗಳಿಂದ ಜನ ಬೇಸತ್ತಿತ್ತು. ಮನುಷ್ಯ ಮನುಷ್ಯರಲ್ಲಿ ದ್ವೇಷ ಅಸೂಯೆ ಬೆಳೆದು ದೇಶ, ದುರ್ದೆಸೆಗೆ ಬಂದಿತ್ತು. ಧರ್ಮ, ದೇವರು, ಅಧಿಕಾರ, ಸ್ವಾತಂತ್ರ್ಯ ಕೆಲವು ಉಚ್ಚ ಕುಲದವರ ಸೊತ್ತಾಗಿದ್ದವು. ಜನಸಾಮಾನ್ಯರನ್ನು ಮೋಸಗೊಳಿಸುತ್ತಿದ್ದರು. ಆಗ ವಚನಕಾರರು ಕಲ್ಯಾಣದಲ್ಲಿ ಅನುಭಮಂಟಪ ಸ್ಥಾಪಿಸಿ ಸತ್ಯ ಸಂಶೋಧನೆ ನಡೆಸಿದರು.

ಹಿಂದೆ ಬಂದ್ರೆ ಧರ್ಮ ಒಬ್ಬನೆ ದೇವರು ಒಂದೇ ದಾರಿ ಎಂದು ಸಾರಿ ಜನತೆಯನ್ನು ಒಗಟ್ಟಿನಲ್ಲಿ ಕಟ್ಟಿದರು. ಶಿವಶರಣರ ಆ ಪಟ್ಟ ಲಿಂಗವಂತ ಧರ್ಮ. ಹಿಂದಿನ ವೀರಶೈವ ಧರ್ಮವನ್ನು ತಿದ್ದಿ ಲೇಡಿ ಪುನರುದ್ದಾರ ಮಾಡಿದರು. ತಮ್ಮ ತಪ್ಪಸ್ಸಿನಿಂದ ಅನುಭವದಿಂದ ಕಂಡ ಸತ್ಯವನ್ನು ಲಿಂಗವಂತ ಧರ್ಮದ ಹೆಸರಿನಿಂದ ಸಾರಿದರು.

ಹೀಗೆ ಲಿಂಗವಂತ ಧರ್ಮದ ಕುಸುಮವನ್ನು ವಿಕಸಿಸಲು ಅವರಗೈದ ಮಹಾಮಣಿಹದಲ್ಲಿ ಸಾರ್ವತ್ರಿಕವಂಥ ಸರ್ವಕಾಲಿಕವಾದ ವಿಶ್ವ ಧರ್ಮವೊಂದು ವದಿಗಿಸಿಬಂದಿತ್ತು. ಅದೇ ಬಸವಧರ್ಮ ಯುವ ಧರ್ಮದಲ್ಲಿ ವಿಶ್ವವ್ಯಾಪಕವು ತತ್ವಗಳು ಸರ್ವಕಾಲಿಕವಾದ ಸರ್ವರಿಗೂ ಬೇಕಾಗುವ ತತ್ವಗಳು ಹೆಚ್ಚಿವೆಯೇ ಆ ಧರ್ಮಲೋಕ ಧರ್ಮವೆನಿಸುವುದು. ಈ ಮಾನದಂಡದಿಂದ ಅಳೆದರೆ ಲಿಂಗವಂತ ಧರ್ಮವು ವಿಶ್ವಧರ್ಮವೆನಿಸಲು ಯೋಗ್ಯವಾಗಿದೆಯಂದು ತಿಳಿದುಬರುವುದು.

ಎಷ್ಟೋ ಸಂಪತ್ತಿದ್ದರೂ ಮನುಷ್ಯನಿಗೆ ನಿಜವಾದ ಸುಖದೊರಕದು. ದ್ವಂದ್ವಮಯವಾದ ಜೀವನದಲ್ಲಿ ಮನುಷ್ಯನಿಗೊಂದು ನೆಮ್ಮದಿಬೇಕು, ಅದಿಲ್ಲದೆ ನಮ್ಮ ಬಾಳನ್ನು ಯಾವ ಸುಖ ಸಂಪತ್ತು ಅಂತರಂಗದಲ್ಲಿ ಈ ನೆಮ್ಮದಿಯನ್ನು ನೇತಿಗೊಳಿಸಲಾರವು. ಆ ನೆಮ್ಮದಿ ದೊರಕುವುದು ಧರ್ಮದಿಂದ ಬದುಕನ್ನು ಸಾರ್ಥಕಗೊಳಿಸಿ ನರನನ್ನು ಹರನನ್ನಾಗಿ ಮಾಡುವುದು ಈ ಧರ್ಮ ಮನುಷ್ಯನನ್ನು ನಿಜವಾದ ಗುರಿಯತ್ತ ನಡೆಸಿ ಅತ್ಯಂತ ಸುಖವನ್ನು ಒದಗಿಸುವುದು ಈ ಧರ್ಮ.

ತಾತ್ವಿಕ ಬದುಕಿನ ಸಾರ್ಥಕತೆಗೆ ವಿಶ್ವದ ಶಾಂತಿ, ಜೀವನ ಪ್ರೀತಿ, ಬದುಕಿನ ನೆಮ್ಮದಿಗೆ ಉತ್ತೇಜನ ನೀಡುವಲ್ಲಿ ಅಲೌಕೀಕ ಬದುಕಿನ ಮಠಾಧೀಶರು, ಧರ್ಮದ ದಾರ್ಶನಿಕರೂ ಸೇರಿರುತ್ತಾರೆ. ಆದರೆ ಧರ್ಮಗಳು ಸ್ಥಾಪಿತ ಹಿತಾಸಕ್ತಿ ಮುಂದುಮಾಡಿಕೊಂಡು ಅರಿವನ್ನು ಹಿಂದೆ ಮಾಡಿ ಕುರುಹಿನ ಆಚರಣೆಗೆ ಒತ್ತು ಕೋಡುತ್ತಾ ಧರ್ಮದ ಹೆಸರಿನಲ್ಲಿ ಭಾವೈಕ್ಯ ಕದಡುತ್ತಿರುವ ಆಧುನಿಕ ಜಗತ್ತಿನಲ್ಲಿ ಇದಕ್ಕೆ ಅಪವಾದ ವೆಂಬಂತೆ ಕೆಲವು ಮಠಗಳು ಮಠಾಧೀಶರು ತಮ್ಮನ್ನು ಪರಿಶುದ್ಧವಾದ ಅರಿವಿಗೆ ತೆಗೆದುಕೊಂಡಿದ್ದಾರೆ. ಸತ್ಯ ಶುದ್ಧವಾದ ವಿಚಾರ ಪ್ರಧಾನ ಧರ್ಮವನ್ನು ಬೋಧಿಸುತ್ತಿದ್ದಾರೆ. ಅಂತಹದರಲ್ಲಿ ಭಾಲ್ಕಿ ಹಿರೇಮಠ ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು ಒಬ್ಬರು. ಅವರು ಧಾರ್ಮಿಕ ಮೌಲ್ಯಗಳಿಗೆ ಹೊಸ ವ್ಯಾಖ್ಯಾನ ಬರೆದವರಾಗಿದ್ದಾರೆ. ಮೌಲ್ಯವನ್ನು ವೈಯಕ್ತಿಕವಾಗಿ ಬದುಕುವವರು ಸಾಹಿತ್ಯಿಕವಾಗಿ ಬರೆಯುವರು. ಸಾಮಾಜಿಕವಾಗಿ ಕಾರ್ಯಗತಗೊಳಿಸುವವರು ವಿರಳ ಎಂದು ಡಾ. ಎಂ.ಎಂ.

ಕಲ್ಬುರ್ಗಿಯವರು ವಿವರಿಸುತ್ತ ಕನ್ನಡದಲ್ಲಿ ಬಸವಣ್ಣ ಮಾತ್ರ ಮೂರು ಮೌಲ್ಯಗಳನ್ನು 'ಸಮನ್ವಯನಿನೆನಿಸಿದ್ದಾರೆ. ಹರಿಹರ ಮೌಲ್ಯವನ್ನು ವೈಯಕ್ತಿಕವಾಗಿ ಬದುಕಿ ಸಾಹಿತ್ಯಕವಾಗಿ ಬರೆಯುವ ಎರಡು ಅಂಶಗಳ ಸಮನ್ವಯವೆನಿಸುತ್ತಾನೆ. ಮೌಲ್ಯವನ್ನು ಸಾಹಿತಿಕವಾಗಿ ಮಾತರ ಬರೆಯಬಲ್ಲ ಪಂಪ ವೈಯಕ್ತಿಕವಾಗಿ ಬದುಕಿ ಸಾಹಿತ್ಯಿಕವಾಗಿ ಬರೆಯುವ ಎರಡು ಅಂಶಗಳ ಸಮನ್ವಯವೆನಿಸುತ್ತಾನೆ. ಸಾಮಾಜಿಕವಾಗಿ ಕಾರ್ಯಗತಗೊಳಿಸುವುದಿಲ್ಲ. (ಹರಿಹರ ರಗಳೆಗಳು IX ಎಂ.ಎಂ. ಕಲ್ಬುರ್ಗಿ ಕನ್ನಡ ವಿಶ್ವವಿದ್ಯಾಲಯ ಹುಟಿ ೧೯೯೯) ಎಂದು ವಿವರಿಸಿದ್ದಾರೆ.

ಹಾಗೇ ಶ್ರೀ ಬಸವಲಿಂಗ ಪಟ್ಟದ್ದೇವರು ಮಠಾಧಿಪತಿಗಳಾಗಿದ್ದರೂ ಬಸವಣ್ಣನಂತೆ ಮೌಲ್ಯವನ್ನು ವೈಯಕ್ತಿಕವಾಗಿ ಬದುಕುತ್ತಿದ್ದಾರೆ. ಸಾಹಿತ್ಯಕವಾಗಿ ಬರೆಯುತ್ತಿದ್ದಾರೆ. ಮತ್ತು ಸಾಮಾಜಿಕವಾಗಿ ಕಾರ್ಯಗತಗೊಳಿಸುತ್ತಾದ್ದರೆ.

"ಭೇರುಂಡನ ಪಕ್ಷಿಗೆ ದೇಹ ಒಂದೇ
ತಲೆ ಎರಡರ ನಡುವೆ ಕನ್ನಡವಕಡ್ಡಿ
ಒಂದು ತಲೆಯಲ್ಲಿ ಹಾಲನೆರೆದು
ಒಂದು ತಲೆಯಲ್ಲಿ ವಿಷವ ನೆರೆದಡೆ
ದೇಹವೊಂದೇ ವಿಷ ಬಿಡುವುದೇ ಅಯ್ಯ
ಲಿಂಗದಲ್ಲಿ ಪೂಜೆಯ ಮಾಡಿ ಜಂಗಮದಲ್ಲಿ
ನಿಂದೆಯ ಮಾಡಿದಡೆ
ನಾ ಬೆಂದೆ ಕೂಡಲಸಂಗಮದೇವಾ ! ಬಸವಣ್ಣ".

ಬಸವಣ್ಣನವರ ಪ್ರಮುಖ ವಚನಗಳಲ್ಲಿ ಇದೊಂದಾಗಿದೆ. ಈ ವಚನದಲ್ಲಿ ಬಸವಧರ್ಮದ ತಿರುಳಿದೆ. ಅರಿವು ಮತ್ತು ಆಚರಣೆಯ ಕುರಿತು ಎಚ್ಚರಿಕೆಯ ಈ ವಚನದಲ್ಲಿದ್ದು ಧರ್ಮಕ್ಕಿರುವ ಎರಡು ಮುಖಗಳ ದರ್ಶನ ನೀಡಿರುವುದು ಅರ್ಥಪೂರ್ಣವಾಗಿದೆ. ಧರ್ಮವು ಅಮೃತ ನೀಡುವುದರೊಂದಿಗೆ ವಿಷವನ್ನು ಕಾರುವುದಾಗಿದೆ. ಸ್ಥಾಪಿತ ಧರ್ಮವೆಂದು ಕಾಳಿದುರ್ಗೆ ರೂಪದ ಹಿಂಸೆಯ ಸ್ವರೂಪವಾದರೆ ಪ್ರಗತಿಪರ, ಧರ್ಮವೆಂದು ಜೀವಧಾತು ರೂಪದ ಅನ್ನ ಪುರ್ಣೇಶ್ವರಿಯ ಈ ಸ್ವರೂಪವು ಹೊಂದಿರುತ್ತದೆ. ಹೀಗೆ ಜೀವ ವಿರೋಧಿ ಜೀವ ಪರ ನೆಲೆಯಗಳು ಧರ್ಮಕ್ಕಿವೆ. ಜಗತ್ತಿನ ಎಲ್ಲ ಧರ್ಮಗಳು ಹುಟ್ಟುವಾಗ ಪ್ರಗತಿ ಪರವಾಗಿಯೇ ಹುಟ್ಟಿ, ಸ್ಥಾಪಿತವಾದ ಮೇಲೆ ಜಡವಾಗುತ್ತ ಬರುತ್ತವೆ. ಅರಿವು ಮರೆತು ಆಚರಣೆಗೆ ಮಾತ್ರ ಜೋತು ಬೆಳೆಯುತ್ತವೆ. ಆರಂಭದಲ್ಲಿ ಪ್ರಗತಿಪರವಾಗಿದ್ದಾಗ ಅಮೃತ ಸೌದ್ಯಶವಾದ ಧರ್ಮ ಅರಿವಿನ ಮಹತ್ವ ಕಳೆದುಕೊಳ್ಳುತ್ತದೆ. ಕುರುಹಿಗೆ ಜೋತು ಬಿದ್ದು ಸ್ಥಾಪಿತವಾಗಿ ಜಡವಾಗುತ್ತದೇ ವಿಷಕಾರುತ್ತದೆ. ಜೀವವಿರೋಧಿಯಾಗಿ ನಿಲ್ಲುತ್ತದೆ. ಆದ್ದರಿಂದ ಧರ್ಮವನ್ನುವುದು ಅಮೃತ ವಿಷವೆಂದು ಗ್ರಹಿಸಬಹುದಾಗಿದೆ.

ಜಾಗತೀಕರಣದ ಉತ್ಪಾದನೆಗಳಾದ ಭಯೋತ್ಪಾದನೆ, ಭ್ರಷ್ಟಾಚಾರ, ಬಡತನ, ನಿರುದ್ಯೋಗ ಅನಕ್ಷರತೆಗಳನ್ನು ಸಮಸ್ಯೆಗಳಿಂದ ಇಡೀ ಜಗತ್ತೆ ನರಳುತ್ತಿರುವಾಗ ಅದರಲ್ಲಿ ಧರ್ಮದ್ದು ಬಹುಪಾಲಿದೆ.

ಧರ್ಮದ ಪರಿಭಾಷೆ :

ನಾಲ್ಕು ಪುರುಷಾರ್ಥಗಳಲ್ಲಿ ಒಂದಾದ ಧರ್ಮವು ಮೊದಲ ಸ್ಥಾನದಲ್ಲಿದೆ. ಹಾಗಾಗಿಯೇ ಧರ್ಮವೆನ್ನುವುದು ಮನುಷ್ಯರ ಬದುಕಿನ ವಿಶಿಷ್ಟ ಅಂಶವಾಗಿ ದೃಷ್ಟಿ ಸಮಷ್ಠಿಯ ಅವಿಭಾಜ್ಯ ಅಂಗವಾಗಿದೆ. ಯಾವುದೇ ಧಾರ್ಮಿಕ ಪ್ರಜ್ಞೆ ಶೂನ್ಯದಿಂದ ಹುಟ್ಟಿರುವುದಿಲ್ಲ. ಹಾಗೇ ಇದಕ್ಕೆ ಭಯ ಮೂಲವು ಅಲ್ಲ. ಮನುಷ್ಯರ ಅಸ್ತಿತ್ವ ವ್ಯಕ್ತಿತ್ವದ ಸಮಾಜೇ ಸಾಂಸ್ಕೃತಿಕ ಹಾಗೂ ಕೌಟುಂಬಿಕ ಬದುಕಿನ ಆಯಮಗಳ ಆಳತೆಗೊಲಾಗಿ ಹ ುಟ್ಟಿಕೊಂಡಿವೆ. ಅಂತೆಯೇ ಇದು ಅನೇಕ ಅರ್ಥ ಛಾಯಗಳನ್ನು ಹೊಂದಿದೆ.

ಧರ್ಮದ ಸಂವಾದಿ ವಿದ ಇಂಗ್ಲೀಷಿನಲ್ಲಿ ರಿಲಿಜನ್ ಆಗಿದ್ದು ಇದು ಲ್ಯಾಟಿನ್ ಲಿಲಿಗೂ ಮೂಲದಿಂದ ಬಂದಿದೆ. ಲ್ಯಾಟಿನ ಭಾಷೆಯಲ್ಲಿ ಪುಟ್ಟ ಎಂಬ ಅರ್ಥ ಬಂದಿದ್ದರೂ ಸಂಸ್ಕೃತ ಮೂಲಕ ಧರ್ಮ ವೆಂಬ ಪದದಷ್ಟು ಅರ್ಥ ವ್ಯಾಪ್ತಿ ಪಡೆದಿಲ್ಲ. ಸಂಸ್ಕೃತದ ಧೃ ಧಾತುವಿನಿಂದ ಬಂದ ಧರ್ಮ ಅರ್ಥ ಧಾರಣ, ಧರಿಸು ಎತ್ತಿಹಿಡಿ ಅಥವಾ ಬೆಂಬಲಿಸು ಎಂಬ ಅರ್ಥಗಳು ಬರುತ್ತವೆ. ಧರ್ಮವು ವಿಶ್ವದ ಆಧಾರವಾಗಿದೆ. ಧರ್ಮೋರಕ್ಷತಿ ರಕ್ಷಿತಃ ಧರ್ಮ ರಕ್ಷಿಸಿದವರನ್ನು ರಕ್ಷಿಸುತ್ತದೆಂಬ ಮಾತುಗಳಿಂದ ಧರ್ಮವೆಂದರೆ ಮತಧರ್ಮ ಕಾನೂನು ನೈತಿಕ ಪೂಣ್ಯ, ಕರ್ತವ್ಯ ರುಜತ್ವ, ಶಿಷ್ಟಾಚಾರ ಸ್ವರೂಪ, ವರ್ತನೆ ಪುರುಷಾರ್ಥ ಮೊದಲಾದ ಅರ್ಥ ಪಡೆದುಕೊಂಡಿದೆ.

ಹೀಗೆ ಮೂಲಭೂತವಾಗಿ ಧರ್ಮ ಅರಿತು ಆಚಾರಗಳನ್ನು ಮೈಗೂಡಿಸಿಕೊಳುತ್ತಲೆ ಅರಿವನ್ನು ಮರೆತು ಆಚಾರಗಳಿಗೆ ಜೋತು ಬಿದ್ದಾರೆ. ಅದೊಂದು ಧರ್ಮ ಜಡತ್ವದ ಪಡೆಯುಳಿಕೆ ಅಥವಾ ಅವಶೇಷಗಳ ಅಸ್ತಿ ಪಾರ್ಜವಾಗುತ್ತದೆ. ಆದ್ದರಿಂದ ವರ್ಣಾಶ್ರಮ ಮನುಷ್ಯ ಮನುಷ್ಯನ ಮಧ್ಯ ಕಂದಾಚಾರಗಳ ಕಾವಕಗಳು ಹಿಂಸೆ, ಬಲಿ, ಕೂಡಿಲತೆ ಅಪಕಾರ, ಮೊದಲಾಗಿ ಜೀವ ವಿರೋಧಿ ನೆಲೆಗಳು ರೂಪು ಪಡೆಯುತ್ತವೆ.

ಮಾನವ ಹಕ್ಕುಗಳ ಮೊದಲ ಪ್ರತಿಪಾದಕರು ಪ್ರಜಾಪ್ರಭುತ್ವವನ್ನು ಬದುಕಿ ತೋರಿದವರಾದ ಬಸವಾದಿ ಶರಣರದ್ದು ಅರಿವಿನ ಧಮಶ. ಮನುಷ್ಯ ಮನುಷ್ಯರ ಮಧ್ಯದ ಎಲ್ಲ ಕಂದಕಗಳನ್ನು ಮುಚ್ಚಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ನೀಡಿದರು. ವಿಶ್ವಮಾನವ ಪೂಜೆಗಳಾದ ಸ್ವಾತಂತ್ರ್ಯ ಸಮಾನತೆ, ಸಹೋದರತ್ವಗಾಗಿ ಇಂಬುಕೊಟ್ಟಿದರು. ಉತ್ತಮ ವ್ಯಕ್ತಿತ್ವಗಳ ಉತ್ತಮ ಸಮಾಜ ಕಟ್ಟುವಾಗ ಪರಿಶುದ್ಧವಾದ ಧರ್ಮವನ್ನು ತಿಳಿಸಿ ಮನುಷ್ಯ ಸಂಬಂಧಗಳನ್ನು ಮಾನವೀಕರಣಗೊಳಿಸಿದ್ದಾರೆ. ಅವರ ತತ್ವಗಳನ್ನು ಅನುಚಾನವಾಗಿ ರೂಢಿಸಿಕೊಂಡು ಬಂದವರು ಈ ಭಾಗದ ನಡೆದಾಡುವ ದೇವರೆಂದೇ ಕಲೆಸಿಕೊಂಡ ಡಾ. ಚನ್ನಬಸವ ಪಟ್ಟದ್ದೇವರು ಮತ್ತು ಜನತೆಯ ಸ್ವಾಮಿಗಳೆಂದೇ ಕರೆಯಿಸಿಕೊಳ್ಳುವ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು.

ಧಾರ್ಮಿಕ ನಿಲುವು :

ಶ್ರೀ ಬಸವಲಿಂಗ ಪಟ್ಟದ್ದೇವರು ಮಠದೊಂದು ಅಧಿಪತಿಗಳು, ಖಾದೀಧಾರಿಗಳು ಹಾಗಾಗಿ ಆಧ್ಯಾತ್ಮ ಪರಿಣಿತ ಧಾರ್ಮಿಕ ವ್ಯಕ್ತಿಗಳೆಂದೇ ಹೇಳಬಹುದು. ಆದರೆ ಅದರ ಧಾರ್ಮಿಕ ನಿಲುವುಗಳು ಉಳಿದ ಮಠಾಧೀಶರಿಗಿಂತ ಭಿನ್ನವಾಗಿದ್ದು ಮಠಗಳ ಚೌಕಟ್ಟಿನಾಚೆಯ ನಿಲುವು ಹೊಂದಿವೇ ವಿಶೇಷ.

ಮಹಾವೀರನ ಅಹಿಂಸಾ ಪರಮೋಧರ್ಮ ಪೈಗಂಬರ ನಿರಂತರ ಧರ್ಮ, ಕ್ರೈಸ್ತನ ಜೀವನ ಪ್ರತಿ ಧರ್ಮ, ಬುದ್ಧನ ಕರುಣೆಯ ಧರ್ಮ, ಬಸವಣ್ಣನವರ ದರ್ಯಾದ ಧರ್ಮ ಮೊದಲಾದವುಗಳೆಲ್ಲ ಮೈಯತ್ತಿದಂತೆ ಸಕಲ ಚರಾಚರಗಳ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡು ಪಂಚಭೂತಗಳನ್ನು ಜನ ಕಲ್ಯಾಣಕ್ಕಾಗಿ ಬಳಸುವ ಧೃಢ ನಿರ್ಧಾರದೊಂದಿಗೆ ಆಧ್ಯಾತ್ಮಿಕ ಬದುಕಿಗೆ ಕಾಲಿಟ್ಟವರು ಶ್ರೀ ಬಸವಲಿಂಗ ಕಾಲಿಟ್ಟವರು ಶ್ರೀ ಬಸವಲಿಂಗ ಪಟ್ಟದ್ದೇವರು.

ಅಹಂ ಮತ್ತು ಶೋಷಣೆರಹಿತವಾದ ಸರಳ ಮತ್ತು ಸಹಜ ಸಮಾಜ ನಿರ್ಮಾಣಕ್ಕಾಗಿ ಆಧ್ಯಾತ್ಮಿಕ ಭೌತಿಕ ಶಕ್ತಿಗಳನ್ನು ಒಂದುಗೂಡಿಸುವ ಆಶೆಯು ಅವರದ್ದಾಗಿದೆ. ಅಸ್ಪೃರ್ಶ್ಯರ ಬಡವನ ಮಹಿಳೆಯರ ಸಮಗ್ರ ಅಭಿವೃದ್ಧಿಯ ಕನಸು ಹೊತ್ತು ದಿಟವ ನುಡಿವುದು ನುಡಿದಂತೆ ನಡೆಯುವದನ್ನು ಮೈಗೂಡಿಸಿಕೊಂಡವರು.

ಧರ್ಮ ಆಧ್ಯಾತ್ಮ :

ಶ್ರೀ ಬಸವಲಿಂಗ ಪಟ್ಟದ್ದೇವರು ಮಠಾದೀಶರಾಗಿರುವುದರಿಂದ ಧರ್ಮ ಆಧ್ಯಾತ್ಮ ಅವರೊಂದಿಗೆ ಒಟ್ಟಾಗಿದೆ. ಆದರೆ ಅವರೂ ಎಂದೂ ಧಾರ್ಮಿಕತೆಯನ್ನು ಬೋಧಿಸಲೇ ಇಲ್ಲ. ಬದಲಾಗಿ ಧರ್ಮವನ್ನು ಆಧ್ಯಾತ್ಮಿಕ ಮೂಲದಿಂದ ಕಟ್ಟಲು ನೋಡಿದರು. ಆದ್ದರಿಂದ ಅವರು ಧರ್ಮ ಕಟ್ಟಿದ್ದಾರೆ ಎಂದರೆ ಅದು ನಿಜವಾದ ಅರ್ಥದಲ್ಲಿ ಮನುಷ್ಯರನ್ನು ಕಟ್ಟಿದ್ದಾರೆ. ಏಕೆಂದರೆ ಅದು ನಿಜವಾದ ಅರ್ಥದಲ್ಲಿ ಮನುಷ್ಯರನ್ನು ಕಟ್ಟಿದ್ದಾರೆ. ಏಕೆಂದರೆ ಧರ್ಮಗಳು ಕಂದಾಚಾರ, ಮೌಢ್ಯತೆ, ಭೇದ ಭಾವನೆಗಳನ್ನು ನಿರೂಪಿಸಿರುತ್ತದೆ. ಹಾಗೆ ಧರ್ಮ ಸ್ಥಾವರ ನಿಂತ ನೀರು, ಜಡ ಸಾಕಾರ, ನಿಷ್ಕತೆಗಳೊಂದಿಗೆ ಗೂಡಿದರೆ ಆಧ್ಯಾತ್ಮ ಜಂಗಮ ಚಲನಶೀಲ ಚೇತನ ನಿರಾಕಾರಗಳಿಂದ ಕೂಡಿರುತ್ತದೆ. ಹೀಗೆ ಆಧ್ಯಾತ್ಮಕ ತಳಹದಿಯ ಮೂಲಕ ಲೋಕ ಕಲ್ಯಾಣಕ್ಕೆ ನೀಡಿದರು.

ಮಠಗಳೆಂದರೆ ಭವಿಷ್ಯ ಹೇಳುವ ಪಂಚಾಂಗ ನೋಡುವ, ವಾಸ್ತು ತಿಳಿಸುವ ಮೌಡ್ಯತೆಗಳು ಬಿತ್ತಿ ಆಡಂಬರವಾಗುಳಿಯಲು ಜನರನ್ನು ಸುಲಿಗೆ ಮಾಡುವ ಕೇಂದ್ರಗಳೆಂಬ ಅಸಂಖ್ಯಾತಿಗೆ ಭಾಲ್ಕಿಯ ಮಠ ಮಠಾಧೀಶರು ಅಪವಾದವಾಗಿದ್ದಾರೆ. ಹಸ್ತನೋಡಿ ಬಲ ಕೇಳಲು ಬಂದ ಭಕ್ತರಿಗೆ ಬಲ ಕೈಯೊಳಗಿನ ರೇಖೆಯೊಳಗಿಲ್ಲ ತೋಳಿನಲ್ಲಿದೆ ಎಂದು ಹೇಳಿ ವೈಚಾರಿಕತೆ ಅರುಹಿದ ಉದಾಹರಣೆಗಳಿಗೆ ಲೆಕ್ಕವಿಲ್ಲ. ಇದನ್ನು ಅವರು ಅನೇಕ ವೇದಿಕೆಯ ಮೇಲೆ ಹೇಳಿದ್ದಾರೆ. ಅವರ ಬರೆದ ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಹಾಗಾಗಿ ಶ್ರೀಮಠ ಆಧ್ಯಾತ್ಮಿಕ ಅಸ್ಪತ್ರೆಯಾಗಿಯೂ ಶ್ರೀಗಳು ವೈಚಾರಿಕತೆಯ ಮನೋವೈದ್ಯರಾಗಿಯೂ ಕೆಲಸ ನಿರ್ವಹಿಸುತ್ತಿದ್ದಾರೆ.

ಮಾನವೀಯ ಧರ್ಮ :

ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರದ್ದು ಮಾನವ ಧರ್ಮ ಅಲ್ಲ ಅವರದ್ದೂ ಏನಿದ್ದರೂ ಮನವೀಯ ಧರ್ಮ. ಮಾನವ ಧರ್ಮದ ಒಳಿತು ಬಯಸುತ್ತಲೆ ಮನುಷ್ಯರ ಮೇಲೆ ಸವಾರಿ ಮಾಡುವ ಶೋಷಣೆ ಮಾಡುವ ಪಲ್ಲಕ್ಕಿಗಳ ಮೇಲೆ ಮೆರೆದ ಧರ್ಮ ಅಲ್ಲ. ಬಸವ ಪ್ರಣೀತ ದಯವೇ ಧರ್ಮವೆಂದು ಸಾಗುತ್ತಲೇ ಸಕಲ ಜೀವಾಣಿಗಳ ಬಗ್ಗೆ ಪ್ರೀತಿ ಗೌರವ ಹೊಂದಿದ್ದು ಮನುಷ್ಯರನ್ನು ಎತ್ತಿಕೊಳ್ಳುವ ಧರ್ಮ ಶ್ರೀಗಳಿದ್ದು ಶೋಷಣಾರಹಿತ ಸಮಾಜ ಧಾರ್ಮಿಕ ಬದುಕನ್ನು ಕಟ್ಟುವ ಶ್ರೀ ಬಸವಲಿಂಗ ಪಟ್ಟದ್ದೇವರ ನಿಲುವು ಮಾನವೀಯ ಧರ್ಮವಾಗಿದೆ. ಪುರುಷಾರ್ಥಗಳಿಂದ ಧರ್ಮ ಅರ್ಥ, ಕಾಮ, ಮೋಕ್ಷಗಳಲ್ಲಿ, ಧರ್ಮ, ಮೋಕ್ಷಗಳು, ಮಾನವ ಬದುಕಿಗೆ ಪೂರಕವೂ ಹೌದು ಸಾರ್ಥಕವು ಹೌದು.

ಧಾರ್ಮಿಕ ವಿಚಾರ ವಿರಳವಾಗಿದುದ್ದು ಮೋಕ್ಷ ಕುರಿತು ಪ್ರತಿಪಾದಿಸುತ್ತಾರೆ. ಅದಕ್ಕೆ ತತ್ವಜ್ಞಾನವು ನೆರವನ್ನು ಪಡೆಯುತ್ತದೆ. ಅಂಥಹವರಿಗೆ ಜ್ಞಾನವೇ ತತ್ವಜ್ಞಾನವಾಗಿದೆ. ಆದರೆ ಬಸವಾದಿ ಶರಣರಿಗೆ ಶ್ರಮ ಮೂಲದ ಕಾಯಕವೇ ತತ್ವಜ್ಞಾನ ದಾಸೋಹವೇ ಬದುಕು. ಈ ತತ್ವವನ್ನು ಶ್ರೀ ಬಸವಲಿಂಗ ಪಟ್ಟದ್ದೇವರು ಅನುಚಾರವಾಗಿ ಅನುಸರಿಸಿ ಆಚರಿಸುತ್ತಿದ್ದಾರೆ.

ಶ್ರೀಗಳ ಧಾರ್ಮಿಕ ವಿಚಾರಗಳು ಪ್ರಗತಿಪರವಾಗಿದೆ. ಇವರಿಗೆ ಕುರುಹಿನ ಅರಿವು ಮುಖ್ಯವಾಗಿದೆ. ಸಮಕಾಲಿನ ಪ್ರಗತಿಪರ ಆಲೋಚನೆಗಳನ್ನು ಕಟ್ಟಿಕೊಡುತ್ತವೆ. ಸ್ಥಾಪಿತ ಧರ್ಮದ ನಿಲುವನ್ನು ವಿರೋಧಿಸುತ್ತಾರೆ. ಧರ್ಮದ ಆಚರಣೆ ಶ್ರೇಷ್ಠವೆಂದು ಬೀರುತ್ತ ಉಡುಗೆ ತೊಡುಗೆ ಆಹಾರಗಳ ನೆಪವಾಡಿ ಜನ ಹಿಂಸೆ ಮಾಡಲು ಭಯೋತ್ಪಾದನಾ ಕೃತ್ಯಗಳು ಪ್ರಖರ ದಾಳಿಗಳು ಧಾರ್ಮಿಕ ಅರಾಜಕತೆಯನ್ನು ಎತ್ತ ತೋರಿಸುತ್ತಿವೆ. ಹಿಂಸೆಗೆ ನೆರವಾಗುವ ಬಾಹ್ಯ ಕುರುಹುಗಳ ವಿಷಯಗಳನ್ನು ನಿರಾಕರಿಸುತ್ತಲೇ ಮನುಷ್ಯರನ್ನು ಬೆಳಕಿನ ವಿಚಾರ ಪ್ರಧಾನವಾದ ಅರಿವಿನ ಅಮೃತನ್ನಿಡುತ್ತಿರುವವರು ಶ್ರೀ ಬಸವಲಿಂಗ ಪಟ್ಟದ್ದೇವರು.

ಸದಾ ಸಂಚಾರಿ :

ಜಂಗಮರಾದವರು ಒಂದೆಡೆಗೆ ನಿಲ್ಲಬಾರದು. ಧರ್ಮ ಪ್ರಚಾರಾರ್ಥ ಸಂಚಾರ ಮಾಡುವವನೇ ನಿಜವಾದ ಜಂಗಮ. ಅಂದರು ಶ್ರೀಗಳು. ಇದೇ ಅರ್ಥದಲ್ಲಿ ಪೂಜ್ಯ ಪಟ್ಟದ್ದೇವರು ಹೆಚ್ಚು ಸಂಚಾರ ಮಾಡುತ್ತಾರೆ. ಪಟ್ಟಣಕ್ಕೆ ಪಂಚ ರಾತ್ರಿ, ಹಳ್ಳಿಗೆ ಬಂದು ರಾತ್ರಿ ಎಂಬಂತೆ ಅವರ ಸಂಚಾರ. ಬೀದರ ಜಿಲ್ಲೆಯಷ್ಟೇ ಅಲ್ಲದೆ ರಾಜ್ಯದ ನಾನಾ ಕಡೆಯ ಕಾರ್ಯಕ್ರಮಗಳಿಗೆ ಹೋಗುತ್ತಾರೆ. ಭಕ್ತರಿಗೆ ಶಾಸ್ತ್ರೋಕ್ತವಾಗಿ ದೀಕ್ಷೆ ಕೊಡುತ್ತಾರೆ. ಇವರಿಂದ ದೀಕ್ಷೆ ಹೊಂದಿದವರ ಸಂಖ್ಯೆ ಸುಮಾರು ಎಂಬತ್ತು ಸಾವಿರ ಜನರಿದ್ದಾರೆಂದು ತಿಳಿದುಬರುತ್ತಿದೆ. ಅವರಲ್ಲಿ ನೂರಕ್ಕೆ ೮೦ ರಷ್ಟು ಜನ ಸದಾಚಾರಿಗಳಾಗಿ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಲಿಂಗವಂತರಿಗಷ್ಟೇ ಅಲ್ಲದೆ ಲಿಂಗಾಯತರಿಗೂ ದೀಕ್ಷೆಯನ್ನಿಡಿದ್ದಾರೆ.

ಬಸವ ತತ್ವ ಪ್ರಸಾರ :

ಬಸವ ತತ್ವ ಪ್ರಸಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಗಳು ಈಗಾಗಲೇ ಕನ್ನಡ ಮರಾಠಿ, ಹಿಂದಿ ನಾನಾ ಭಾಷೆಗಳಲ್ಲಿ ಶರಣರ ವಚನ ಸಾಹಿತ್ಯ ಪ್ರಕಟಿಸಿದ್ದಾರೆ ಮತ್ತು ಪ್ರಸಾರ ಕಾರ್ಯ ಕೈಗೊಂಡು ನೂರಾರು ಗ್ರಂಥಗಳು ಹೊರತಂದಿದ್ದಾರೆ.

ಶಿವಾನುಭವ ಗೋಷ್ಠಿ ಶರಣ ಸಂಗಮ ಮನೆಗೊಂದು ವಚನ, ಪ್ರವಚನ, ಶರಣರ ಪುಣ್ಯ ಸ್ಥಳಗಳ ಪ್ರವಾಸ ಸ್ಥಳಗಳ ಪ್ರವಾಸ, ಪ್ರತಿ ವರ್ಷ ಚನ್ನಬಸವಾಶ್ರಮದಲ್ಲಿ ಡಿಸೆಂಬರ್ ೨೨ ರಂದು ಲಿಂಗೈಕ್ಯ ಡಾ. ಚನ್ನಬಸವ ಪಟ್ಟದೇವರ ಜಯಂತೋತ್ಸವ ಮತ್ತು ಏಪ್ರೀಲ್ ೨೨ ರಂದು ಚನ್ನಬಸವೇಶ್ವರರ ಸ್ಮರಣೋತ್ಸವ ಹೀಗೆ ನಾನಾ ಮುಖವಾಗಿ ಬಸವ ತತ್ವ ಪ್ರಸಾರ ಕಾರ್ಯಕೈಗೊಳ್ಳುತ್ತಿದ್ದಾರೆ.

ಮಾಸಿಕ ಕಾರ್ಯಕ್ರಮಗಳು:

೧. **ಶಿವಾನುಭವ ಗೋಷ್ಠಿ :**

ಪ್ರತಿ ತಿಂಗಳು ಹುಣ್ಣಿಮೆಯಂದು ಏರ್ಪಡಿಸಲಾಗುತ್ತಿರುವ ಮಾಸಿಕ ಶಿವಾನುಭವಗೋಷ್ಠಿ ಭಾಲ್ಕಿ ಹಿರೇಮಠದಲ್ಲಿ ದಿನಾಂಕ: ೯-೧೧-೧೯೮೫ ರಂದು ಉದ್ಘಾಟನೆಗೊಂಡಿತು. ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ದಿವ್ಯ ಸನ್ನಿಧಾನದಲ್ಲಿ ಅಂದು ಜರುಗಿದ ಈ ಉದ್ಘಾಟನಾ ಸಮಾರಂಭದಲ್ಲಿ ಲಿಂಗೈಕ್ಯ ವಿ.ವಿ.ಸಂಗಮದ ರಾಣಿಬೆನ್ನೂರು ಅವರು ಮುಖ್ಯ ಅತಿಥಿಗಳಾಗಿ ಅನುಭಾವ ನೀಡಿದರು. ಪ್ರತಿ ತಿಂಗಳು ಲಿಂಗಾಯತ ಧರ್ಮ ಸಾಹಿತ್ಯ ಕುರಿತಾಗಿ ಶಿವಾನುಭವ ಗೋಷ್ಠಿಗಳು ಏರ್ಪಡಿಸುತ್ತ ಬರಲಾಗುತ್ತಿದೆ.

ಕರ್ನಾಟಕ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಬೇರೆ ಬೇರೆ ಕಡೆಗೆ ಇರುವ ವಿಚಾರಶೀಲರನ್ನು ಅನುಭವಿಗಳನ್ನು ಈ ವೇದಿಕೆಗೆ ಬರಮಾಡಿಕೊಳ್ಳುವ ಆಶಯದಿಂದ ಈ ಕಾರ್ಯಕ್ರಮ ರೂಪಿಸಲಾಯಿತು. ಈ ಶಿವಾನುಭವಗೋಷ್ಠಿಯಿಂದ ವೈಚಾರಿಕತೆ ಎಚ್ಚರಗೊಳಿಸುವುದಕ್ಕೆ ಶರಣ ಸಾಹಿತ್ಯದ ಬಗ್ಗೆ ಅಭಿರುಚಿ ಬೆಳೆಯಿಸುವುದಕ್ಕೆ ಉತ್ತಮ ಸಮಾಜದ ನಿರ್ಮಾಣಕ್ಕೆ ಸಾಧ್ಯವಾಗುತ್ತಿರುವದು. ಸಂತಸದ ಸಂಗತಿ ಎನ್ನಬಹುದಾಗಿದೆ. ಇಲ್ಲಿ ಜರುಗುವ ಉಪನ್ಯಾಸ ತಾತ್ಕಾಲಿಕ ಪ್ರಯೋಜನ ಮಾತ್ರವಲ್ಲದೆ "ಶಾಂತಿಕಿರಣ" ದ್ವೈ ಮಾಸಿಕ ಪತ್ರಿಕೆಯಲ್ಲಿ ಇದನ್ನು ಪ್ರಕಟಿಸುವುದರ ಮೂಲಕ ಈ ವಿಚಾರಗಳನ್ನು ಶಾಶ್ವತವಾಗಿ ಉಳಿಸುವ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ. ಭಾಲ್ಕಿ ಹಿರೇಮಠ ಸಂಸ್ಥಾನದಲ್ಲಿ ದಿನಾಂಕ: ೯-೨-೨೦೦೯ ಸೋಮರಾರದಂದು ೨೮೯ ನೇ ಮಾಸಿಕ ಶಿವಾನುಭಗೋಷ್ಠಿ ಜರುಗಿತು.

ಶರಣ ಸಂಗಮ :

ಚೆನ್ನಬಸವ ಪಟ್ಟದ್ದೇವರ ಸಂಕಲ್ಪವು ಸಾಕ್ಷಾತ್ಕಾರಗೊಳ್ಳುವ ಕುರಿತು ಬಸವಲಿಂಗ ಪಟ್ಟದ್ದೇವರು ಚಿಂತನಗೈದರು. ಅವರ ಚಿಂತನದ ಕೂಸೇ ಶರಣ ಸಂಗಮ. ಈ ಒಂದು ಆಧಾರವಿಟ್ಟುಕೊಂಡು ಬಸವತತ್ವ ಬಸವ ಸಂಸ್ಕೃತಿಯ ಕಾರ್ಯಕ್ರಮಗಳನ್ನು ಊರೂರಲ್ಲಿ ಮಠ ಮಠಗಳಲ್ಲಿ, ಮನೆ ಮನೆಗಳಲ್ಲಿ ಮತ್ತು ಮನ ಮನಗಳಲ್ಲಿ ನಡೆಸಿ ಎಲರಲ್ಲಿ ಶರಣರ ನಡೆನುಡಿ ಬರುವ ಕನಸು ಕಂಡರು. ಅವರ ಮನಸ್ಸು ಚೆನ್ನಬಸವ ಪಟ್ಟದ್ದೇವರ ಜನನ ದಿನಾಂಕವಾದ ಡಿಸೆಂಬರ್ ಇಪ್ಪತ್ತೆರಡು ಮತ್ತು ಲಿಂಗೈಕ್ಯ ದಿನಾಂಕವಾದ ಏಪ್ರೀಲ್ ಇಪ್ಪತ್ತೆರಡರ ಮೇಲೆ ನೆಟ್ಟಿತು. ಪ್ರತಿ ತಿಂಗಳು ಇಪ್ಪತ್ತೆರಡನೆಯ ದಿನಾಂಕದಂದು ಅಪ್ಪಗಳ ಜನನ ಮತ್ತು ಲಿಂಗೈಕ್ಯ ಸ್ಮರಣೆಯ ನಿಮಿತ್ತ ಶರಣ ಸಂಗಮ ಕಾರ್ಯಕ್ರಮ ಇಟ್ಟುಕೊಳ್ಳುವ ಪರಿಪಾಠ ಹಾಕಿಬಿಟ್ಟರು.

ಗುರು ವಾಕ್ಯವೇ ಪರಮ ಮಂತ್ರವೆಂದು ನಂಬಿದ ಪೂಜ್ಯ ಬಸವಲಿಂಗ ಪಟ್ಟದ್ದೇವರು ಶರಣ ಸಂಗಮ ಕಾರ್ಯಕ್ರಮವನ್ನು ಲಿಂಗೈಕ್ಯ ಚೆನ್ನಬಸವ ಪಟ್ಟದ್ದೇವರ ಪುಣ್ಯಾಶ್ರಮದಲ್ಲಿ ಷಟಸ್ಥಲ ಧ್ವಜಾರೋಹಣದೊಂದಿಗೆ ಮೇ ೨೨, ೧೯೯೯ ರಂದು ಪ್ರಾರಂಭಿಸಿಬಿಟ್ಟರು.

ಅರಿದೊಡೆ ಶರಣ, ಮರೆದೊಡೆ ಮಾನವ, ತನ್ನ ತಾನರಿತವನೇ ಶರಣ. ಮರೆತವನೆ ಮಾನವ, ತನ್ನ ತಾನರಿತವರ ಮತ್ತು ಮರೆತವರ ಸಮ್ಮಿಲನವೇ ಶರಣ ಸಂಗಮ. ಅರಿತವರು ಮರೆತವರಿಗೆ ತಮ್ಮ ಅನುಭವದಿಂದ ಮಾರ್ಗದರ್ಶನ ಮಾಡುವುದೇ ಶರಣ ಸಂಗಮದ ಮೂಲ ಆಶಯ. ಕತ್ತಲೆಯ ನುಂಗಿದ ಬೆಳಕಿನಂತೆ ಅನುಭಾವಿಗಳು ಮರೆತವರ ಮನಕ್ಕೆ ತಮ್ಮ ಅರಿವಿನ ದೀವಿಗೆಯನ್ನು ಮುಟ್ಟಿಸಿ ಬೆಳಗಿಸುವರು. ಈ ಕ್ರಿಯೆಯನ್ನು ಹರಿಯುಸಿ ನೀರಿನಂತೆ ನಿರಂತರ ನಡೆಸಿಕೊಂಡು ಹೋಗುವ ಸಲುವಾಗಿ ಹತ್ತು ಹಲವಾರು ಯೋಜನೆಗಳನ್ನು ರೂಪಿಸಿ ಜನಮನದಲ್ಲಿ ಶರಣರ ಮಾರ್ಗವನ್ನು ಬಿಂಬಿಸುವುದೇ ಶರಣ ಸಂಗಮವಾಗಿದೆ. ಕಲುಷಿತ ಸಮಾಜದ ಮನಸ್ಸನ್ನು ತಿಳಿಗೊಳಿಸಿ ನೆಮ್ಮದಿಯ ಜೀವನ ನಡೆಸುವುದಕ್ಕೆ ನೆರವಾಗಲು ಎಂದಿಗಿಂತಲೂ ಇಂದು ಶರಣ ಸಂಗಮದಂಥ ಸತ್ಸಂಗಗಳು ಬದುಕಿಗೆ ಗಾಳಿಯಷ್ಟೇ ಅವಶ್ಯಕವೆನ್ನುತ್ತಾರೆ. ಪೂಜ್ಯ ಬಸವಲಿಂಗ ಪಟ್ಟದೇವರು ಶರಣ ಸಂಗಮದ ಮುಖಾಂತರ ಜನರ ಮನಸ್ಸಿನಲ್ಲಿರುವ ಪ್ರಳಯದ ಕಸವತೆಗೆದು ಅಲ್ಲಿ ಶರಣರ ತತ್ವಗಳು ಸುಳಿದೆಗೆಯುವಂತೆ ಮಾಡಲು ಸಾಧ್ಯವೆನ್ನುತ್ತಾರೆ ಪೂಜ್ಯರು.

"ಲೋಕೋ ಭಿನ್ನ ರೂಚಿ" ಎಂಬ ಲೋಕೋಕ್ತಿಯಂತೆ ಸಮಾಜದಲ್ಲಿ ಭಿನ್ನ ಭಿನ್ನ ರೂಚಿಯುಳ್ಳ ಭಿನ್ನ ಭಿನ್ನ ಅಭಿಪ್ರಾಯವುಳ್ಳ ಜನರಿರುತ್ತಾರೆ. ಅವರೆಲ್ಲರಿಗೆ ಮೆಚ್ಚುಗೆಯಾಗುವಂತೆ ನವರಸಭರಿತ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಕಾರ್ಯಕ್ರಮ ಸಂಚಾಲಕರಾದ ಡಾ.ಜಿ.ಬಿ. ವಿಸಾಜಿಯವರು ಶರಣ ಸಂಗಮ ಕಾರ್ಯಕ್ರಮವನ್ನು ಜೀವಂತವಾಗಿರಿಸುತ್ತಿದ್ದಾರೆ. ಅವರ ಕಾರ್ಯಕ್ರಮ ಸಂಯೋಜನೆ ಹಾಗೂ ನಿರ್ವಹಣೆಯನ್ನು ನೋಡುವುದೂ ಕೇಳುವುದೂ

ಒಂದು ಸೌಭಾಗ್ಯವೆನ್ನುತ್ತಾರೆ ಜನರು ಇಪ್ಪತ್ತೆರಡನೇ ದಿನಾಂಕ ಬರುವ ದಾರಿಯನ್ನೇ ಜನರು ಭೌತಿಕ ಪಕ್ಷಿಯಂತೆ ಕಾಯುತ್ತಿರುತ್ತಾರೆ.

ಈ ಶರಣ ಸಂಗಮದಲ್ಲಿ ಪ್ರಾರ್ಥನೆ, ಉಪನ್ಯಾಸ, ಜಯಂತಿ, ರೂಪಕ, ನಾಟಕ, ವಚನ ಕಂಠಪಾಠ ಸ್ಪರ್ಧೆ, ವಚನಗಾಯನ ಸ್ಪರ್ಧೆ, ಸಮನ್ವಯ ಸಮಾವೇಶ, ಸಾಮೂಹಿಕ ಲಿಂಗದೀಕ್ಷೆ, ಸಾಮೂಹಿಕ ಲಿಂಗಪೂಜೆ, ಸರ್ವಧರ್ಮಗಳಿಗೆ ಸಂಬಂಧಿಸಿದವರ ಸಾಮೂಹಿಕ ಉಚಿತ ವಿವಾಹ, ಭಜನೆ, ಸಾಧನೆಗೈದವರಿಗೆ ಬಹುಮಾನ ಸನ್ಮಾನ ಮೊದಲಾದವುಗಳು ನಿರಂತರ ನಡೆವ ಕಾರ್ಯಕ್ರಮಗಳಾಗಿವೆ. ಸಂಗೀತ ಶಿಕ್ಷಕ ಶಿವಾನಂದ ಅವಟಿ ಹಾಗೂ ತಬಲಾವಾದಕ ಲೋಕನಾಥ ಚಾಂಗ್ಲೇರ ಅವರ ವಚನಗಾಯನದೊಂದಿಗೆ ಶರಣ ಸಂಗಮವು ಪ್ರಾರಂಭಗೊಳ್ಳುತ್ತದೆ. ಅಲ್ಲದೆ ಅಕ್ಕನ ಬಳಗದವರಿಂದ ವಚನ ಭಜನೆ ಅಪ್ಪಗಳಿಂದ ಹಾಗೂ ಅತಿಥಿಗಳಿಂದ ಷಟಸ್ಥಲ ಧ್ವಜಾರೋಹಣ ಸಾಮೂಹಿಕ ಪ್ರಾರ್ಥನೆ ಇತ್ಯಾದಿಗಳೊಂದಿಗೆ ಸ್ವಾಗತ, ಗ್ರಂಥ ಪುಷ್ಪಾರ್ಪಣೆಗಳು ಜರುಗಿದ ಮೇಲೆ ಅನುಭಾವ ನಿವೇದನೆ ನೆರವೇರುತ್ತದೆ. ಅನುಭಾವ ನಿವೇದನೆಯು ವಿದ್ವಾಂಸರಿಂದ ವಿಶ್ವವಿದ್ಯಾಲಯ ಮಟ್ಟದ ಪ್ರಾಧ್ಯಾಪಕರು ಹಾಗೂ ಅನುಭವಿಗಳಿಂದ ಜರುಗುತ್ತದೆ. ಸಮಾನತೆ, ಆರ್ಥಿಕ ಸಮಾನತೆ, ಧಾರ್ಮಿಕ ಸಮಾನತೆ, ಕಾಯಕದ ಮಹತ್ವ, ಹನ್ನೆರಡನೆಯ ಶತಮಾನದಲ್ಲಿ ಮಹಿಳೆಯರ ಸ್ಥಾನಮಾನ, ವಚನ ಸಾಹತ್ಯಕ್ಕೆ ಮಹಿಳೆಯರ ಕೊಡುಗೆ ಇತ್ಯಾದಿ ಕುರಿತು ಅನುಭಾವ ಚಿಂತನೆ ನೆರವೇರಿದೆ. ಗುರುಗಳ ಆರ್ಶಿವರ್ಚನದೊಂದಿಗೆ ಅನುಭಾವ ನಿವೇದನೆಯ ಮಂಗಲಗೊಳ್ಳುತ್ತದೆ.

ಶರಣ ಸಂಗಮ ಎಲ್ಲರಿಗೂ ಬೇಕು ಸಂಗ ಎರಡುಂಟು, ಸಜ್ಜನರ ಸಂಗ, ದುರ್ಜನರ ಸಂಗ, ಶರಣರು ಸಜ್ಜನರ ಸಂಗ ಹಿಡಿಯಲು ಹೇಳುತ್ತಾರೆ. ಅಂತಕರಣೆ ಹಾಗೂ ಬಹಿರಂಗ ಶುದ್ಧಿಗೆ ಶರಣ ಸಂಗಮ ಮದ್ದಾಗಿದೆ. ಒಂದು ಸಲದ ಊಟವು ಬದುಕಿನ ಕೊನೆಯಲ್ಲಿ ಬದುಕಿಗೆ ಮೇಲಿಂದ ಮೇಲು ಊಟದ ಅವಶ್ಯಕತೆ ಇರುವಂತೆ ಜೀವನಕ್ಕೆ ಗಾಳಿಯ ಅವಶ್ಯಕತೆ ಇರುವಂತೆ ಆತ್ಮತೃಪ್ತಿಗೆ "ಶರಣ ಸಂಗಮ" ಅತಿ ಅವಶ್ಯವೆನ್ನುತ್ತಾರೆ ಪೂಜ್ಯರು.

ಯಾವ ಪೂಜೆ ಮಾಡಿದರೂ ಅದು ತನ್ನನ್ನು ತಾ ಅರಿತುಕೊಳ್ಳುವುದಕ್ಕೆ ನೆರವಾಗುತ್ತಿರಬೇಕು. ಅಂಬೆಗಾಲಿನ ಕೂಸಿನಂತೆ ಆಮೆಗತಿಯಲ್ಲಿ ನಡೆಯುತ್ತಿದ್ದ ಶರಣಸಂಗಮವೀರ ಎದ್ದು ಓಡಾಡುತ್ತಿದ್ದೆ. ನಿಮ್ಮೆಲ್ಲರ ನಡೆನುಡಿಗಳು ಶರಣ ತತ್ವದಂತೆ ಸಂಸ್ಕಾರಗೊಳ್ಳುತ್ತಿವೆ. ನಿಮ್ಮ ಮನ ಉದ್ಯಾನವನದಂತೆ ಹಸಿರಾಗುತ್ತಿದೆ. ಬೇಡೆಂದವರೂ ಬಯಸಿ ಶರಣ ಸಂಗಮಕ್ಕೆ ಅಸಂಖ್ಯಾತರಾಗಿ ಬರುತ್ತಿದ್ದಾರೆ.

ಶರಣ ಸಂಗಮದ ದಾಸೋಹಕ್ಕೆ ಮೊದಲು ಕೇವಲ ೧೦ ಕಿಲೋ ಗೋಧಿ ಮತ್ತು ಐದು ಕಿಲೋ ಅಕ್ಕಿ ಖರ್ಚಾಗುತ್ತಿತ್ತು. ಈಗ ಎರಡುವರೆ ಕ್ವಿಂಟಾಲ ಖರ್ಚಾಗುತ್ತಿದೆ. ಇದರಿಂದ ಶರಣ

ಸಂಗಮಕ್ಕೆ ಬರುವವರ ಸಂಖ್ಯೆ ಐದಾರು ಪಟ್ಟು ಹೆಚ್ಚಾಗಿದುದ್ದು ಕಂಡುಬರುತ್ತದೆ. ಈ ಕಾರ್ಯಕ್ರಮವು ಭಕ್ತರ ಉಸಿರಾಗಿ ಹೃದಯ ಪರಿವರ್ತನೆ ಮಾಡಿರುವುದನ್ನು ಅವರ ನಡೆ ನುಡಿಯಲ್ಲಿ ಕಾಣಬಹುದಾಗಿದೆ. ಅದು ಪುಣ್ಯಾಶ್ರಮದ ಮಹಿಮೆಯನ್ನು ಪ್ರಜ್ವಲಗೊಳಿಸುತ್ತಿದೆ.

ಈ ಕಾರ್ಯಕ್ರಮದಲ್ಲಿ ಭಕ್ತಿ ಸೇವೆ ಸಲ್ಲಿಸಿದವರಿಗೆ ಮಠದ ವತಿಯಿಂದ ಒಂದು ಪುಸ್ತಕ ವಿಭೂತಿಯನ್ನು ಪೂಜ್ಯರು ಆಶೀರ್ವದಿಸುತ್ತಾರೆ. ಆಶೀರ್ವಾದ ಸಮಯದಲ್ಲಿ "ಓಂ ಗುರು ಬಸವಲಿಂಗಾಯನಮಃ" ಎಂಬ ದ್ವಾದಸ ಮಂತ್ರವನ್ನು ಪಠಿಸಲಾಗುತ್ತದೆ. ಬಸವಲಿಂಗ ಪಟ್ಟದ್ದೇವರು ಭಾವಿಸಿಕೊಂಡಂತೆ ದೃಶ್ಯ ಮಾಧ್ಯಮವು ಶ್ರೋತೃಗಳ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. ಅದಕ್ಕಾಗಿಯೇ ಈ ಮಾಧ್ಯಮವು "ಶರಣ ಸಂಗಮ" ಕಾರ್ಯಕ್ರಮದಲ್ಲಿ ಭದ್ರವಾದ ಸ್ಥಾನವನ್ನು ಹೊಂದಿದೆ. ಶರಣ ಸಂಸ್ಕೃತಿಯಲ್ಲಿ ಭಕ್ತರ ಮನಸ್ಸು ಯಾವಾಗಲೂ ಓಡಾಡುತ್ತಿರಬೇಕೆಂಬುದೇ ಪೂಜ್ಯರ ಹೆಬ್ಬಯಕೆಯಾಗಿದೆ. ಹೊಲದೊಳಿನ ಸತ್ವ ಹಾಳಾದಂತೆ ಹೊಲದ ಕಟ್ಟೆ ನೋಡಿಕೊಳ್ಳುವುದು. ಅದರಂತೆ ಶರಣ ಸಂಗಮ ಕಾರ್ಯಕ್ರಮವು ಭಕ್ತರ ಮನ ಕೆಡದಂತೆ ಹಾಳಾಗದಂತೆ ನೋಡಿಕೊಳ್ಳುತ್ತಲಿದೆ.

ಅಂತರಂಗ, ಬಹಿರಂಗ, ಸರ್ವಾಂಗ, ಶುದ್ಧಿಗೆ ಶರಣ ಸಂಗಮದ ಸಂಗವೇ ಲೇಸೆನ್ನುತ್ತಾರೆ. ಚೆನ್ನಬಸವಪಟ್ಟದೇವರ ಮಾನಸ ಪುತ್ರರಾದ ಬಸವಲಿಂಗ ಪಟ್ಟದೇವರು.

ನಿತ್ಯ ಸಾಮೂಹಿಕ ಪ್ರಾರ್ಥನೆ :

೧೯೩೬ ರಲ್ಲಿ ಡಾ. ಚನ್ನಬಸವ ಪಟ್ಟದೇವರು ಮೊರಗಿಯಲ್ಲಿ ಬಡವ ಮತ್ತು ಅನಾಥ ಮಕ್ಕಳಿಗಾಗಿ ಉಚಿತ ಪ್ರಸಾದ ನಿಲಯ ಆರಂಭಿಸಿದ ದಿನದಿಂದ ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ಎರಡೂ ಹೊತ್ತು ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಚಿಂತನೆ ನಡೆಸುತ್ತ ಬರುತ್ತಿದ್ದಾರೆ. ಇದನ್ನೆ ಇನ್ನು ವ್ಯವಸ್ಥಿತವಾಗಿ ನಾಡಿನ ಎಲ್ಲೆಡೆ ಬಸವ ಸಂಪ್ರದಾಯದ ಮಠಗಳಲ್ಲಿ ಒಂದೇ ತೆರನಾದ ರೀತಿಯಲ್ಲಿ ಸಾಮೂಹಿಕ ಬಸವ ಪ್ರಾರ್ಥನೆ ಇರಲಿ ಎಂಬ ನಿರ್ಧಾರದಂತೆ ೧೯೬೯ ರಿಂದ ನೂತನ ರೀತಿಯಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಿಕೊಂಡು ಬರಲಾಗುತ್ತಿವೆ. ಸಾಮೂಹಿಕ ಪ್ರಾರ್ಥನೆಯಲ್ಲಿ ಧರ್ಮಗುರು ಬಸವಣ್ಣನವರ ಕುರಿತಾದ ಸಿದ್ಧರಾಮೇಶ್ವರ ಹರ ಬಸವಾಯ ನಮಃ ಎಂಬ ವಚನ ವ್ಯಾಪಕವಾಗಿ ಎಲ್ಲಾ ಕಡೆ ಬಳಸಲಾಗುತ್ತಿದೆ. ಇಂದು ಹಿರೇಮಠ ಸಂಸ್ಥಾನದಲ್ಲಿ ಶ್ರೀ ಹಾನಗಲ ಕುಮಾರೇಶ್ವರ ಉತ ಪ್ರಸಾದ ನಿಲಯದಲ್ಲಿ ४೦೦ ಕ್ಕೂ ಹೆಚ್ಚು ಬಡವ ಮತ್ತು ಅನಾಥ ಮಕ್ಕಳು ಇದ್ದಾರೆ. ಇವರೆಲ್ಲರೂ ಪ್ರತಿದಿನ ಬೆಳಿಗ್ಗೆ ೬.೦೦ ಗಂಟೆಗೆ ಮತ್ತು ಸಾಯಂಕಾಲ ೭.೦೦ ಗಂಟೆಗೆ ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಚಿಂತನೆ ಮಾಡುತ್ತಾರೆ. ಪ್ರತಿದಿನ ಎರಡು ಹೊತ್ತು ಶರಣರ ಒಂದೊಂದು ವಚನ ಆಧರಿಸಿ ಮಕ್ಕಳು ಭಾಷಣ ಮಾಡುತ್ತಾರೆ.

ಬೆಳಗಿನ ಪ್ರಾರ್ಥನೆಯಲ್ಲಿ ಪಾಲ್ಕುರಿಕೆ ಸೋಮನಾಥರು ರಸಿದ ೧೦೮ ಬಸವಲಿಂಗ ನಾಮಾವಳಿ ಮಕ್ಕಳೆಲ್ಲರೂ ಕೂಡಿ ಸಂಗೀತದಲ್ಲಿ ಹೇಳುವಾಗ, ಕೇಳುಗರ ಮೈನನ ಮರೆಯುವಂತೆ ಆಗುತ್ತದೆ.

ವಾರ್ಷಿಕ ಕಾರ್ಯಕ್ರಮಗಳು :

೧. ಶ್ರಾವಣ ಮಾಸದಲ್ಲಿ ವಚನ ಪ್ರವಚನ :

ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಒಂದು ತಿಂಗಳು ಪರ್ಯಂತ ವಚನ ಪ್ರವಚನ ಪೂಜ್ಯ ಶ್ರೀಗಳಿಂದಲೇ ಸಾಗುತ್ತಿದೆ. ಮೊದಲು ಹಿರೇಮಠ ಸಂಸ್ಥಾನದಲ್ಲಿಯೇ ಸಾಗುತ್ತಿತ್ತು. ಈಗ ಭಾಲ್ಕಿ ಪಟ್ಟಣದ ಮಧ್ಯಭಾಗದಲ್ಲಿ ನಿರ್ಮಾಣಗೊಳ್ಳುತ್ತಿರುವ ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದೇವರ ಪೂರ್ಣ್ಯಾಶ್ರಮ (ಚನ್ನಬಸವಾಶ್ರಮ) ದ ವಿಶಾಲ ಪ್ರಾಂಗಾಣದಲ್ಲಿ ನಡೆಯುತ್ತಿದೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಶ್ರಾವಣ ಮಾಸದ ಈ ಪ್ರವಚನ ಕಾರ್ಯಕ್ರಮದಲ್ಲಿ ಸದ್ಭಕ್ತರು ಪಾಲ್ಗೊಳ್ಳುತ್ತಾರೆ. ಪೂಜ್ಯ ಶ್ರೀಗಳ ವಚನ ಪ್ರವಚನ ಮಾಡವುದಕ್ಕಿಂತ ಪೂರ್ವದಲ್ಲಿ ಡಾ. ಚನ್ನಬಸವ ಪಟ್ಟದೇವರ ದಿವ್ಯ ಜೀವನ ಮತ್ತು ಸಾಧನೆ ಕುರಿತಾಗಿ ವಿವಿಧ ಅನುಭವಿಗಳಿಂದ ಉಪನ್ಯಾಸ ಮಾಲಿಕೆ ಏರ್ಪಡಿಸುತ್ತ ಬರಲಾಗುತ್ತಿದೆ. ಇದರಿಂದಾಗಿ ಹೊಸ ಹೊಸ ಪ್ರತಿಭೆಗಳು ಬೆಳೆಯಲು ಇದು ಉತ್ತಮ ವೇದಿಕೆಯಾಗಿದೆ.

ಡಾ. ಚನ್ನಬಸವ ಪಟ್ಟದ್ದೇವರ ಜಯಂತ್ಯೋತ್ಸವ :

ಪ್ರತಿ ವರ್ಷ ಡಿಸೆಂಬರ ೨೨ ರಂದು ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ಜಯಂತ್ಯೋತ್ಸವ ಆಚರಿಸಲಾಗುತ್ತಿದೆ. "ಪ್ರಾರಂಭದಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ರೂರಲ್ ಇಂಜಿನಿಯರಿಂಗ್ ಕಾಲೇಜದಲ್ಲಿ" ಸರಳ ರೀತಿಯಿಂದ ಆಚರಿಲಸಾಗುತ್ತಿತ್ತು. ಈಗ ಭಾಲ್ಕಿಯ ಶ್ರೀ ಚನ್ನಬಸವಾಶ್ರಮದಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಇಪ್ಪತ್ತೈದು ಸಾವಿರಕ್ಕೂ ಮೀರಿ ವಿವಿಧ ಗ್ರಾಮಗಳ ಸದ್ಭಕ್ತರು ಈ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಾರೆ. ನೆರೆಯ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಗ್ರಾಮಗಳಿಂದಲೂ ಸಾವಿರಾರು ಸದ್ಭಕ್ತರು ಈ ಸಮಾರಂಭದಲ್ಲಿ ಭಾಗವಹಿಸುತ್ತಾರೆ. ಇದೇ ಸಂದರ್ಭದಲ್ಲಿ ಸರ್ವಧರ್ಮಗಳ ಸಮನ್ವಯ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ. ೨೦೦೮ ರ ಡಿಸೆಂಬರ್ ೨೨ ರಂದು ಲಿಂಗೈಕ್ಯ ಪೂಜ್ಯ ಅಪ್ಪಗಳ ೧೧೯ ನೇ ಜಯಂತೋತ್ಸವ ಸಮಾರಂಭ ಜರುಗಿತು. ಜಯಂತ್ಯೋತ್ಸವ ನಿಮಿತ್ಯವಾಗಿ ಪ್ರತಿ ವರ್ಷವೂ ಮುಂಚಿತವಾಗಿ ಒಂದು ತಿಂಗಳು ಪರ್ಯಂತ ನಾಡಿನ ಖ್ಯಾತ ಬಸವತತ್ವನಿಷ್ಠ ಪ್ರವಚನಕಾರರನ್ನು ಆಹ್ವಾನಿಸಿ, ಅವರಿಂದ ವಚನ ಪ್ರವಚನ ಏರ್ಪಡಿಸಲಾಗುತ್ತಿದೆ. ಡಾ. ಚನ್ನಬಸವ ಪಟ್ಟದ್ದೇವರ ಜನ್ಮಸ್ಥಳವಾದ ಕಮಲನಗರದಿಂದ (ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ) ಭಾಲ್ಕಿವರೆಗೆ ಚನ್ನಬಸವ ಜ್ಯೋತಿ ಪಾದಯಾತ್ರೆ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರ ದಿವ್ಯ ನೇತೃತ್ವದಲ್ಲಿ

ಜರುಗುತ್ತದೆ. ಮಾರ್ಗಮಧ್ಯದಲ್ಲಿ ಬರುವ ಡಿಗ್ಗಿ, ಹೊಳಸಮುದ್ರ, ನಿಬಳಿ, ಸಂಗಮ, ಆಳಂದಿ, ಡೋಣಗಾಪುರ ಗ್ರಾಮಗಳ ಸದ್ಭಕ್ತರು ಪಾದಯಾತ್ರೆಗೆ ಭಕ್ತಿಯಿಂದ ಸ್ವಾಗತಗೈಯ್ಯುತ್ತಾರೆ. ಪಾದಯಾತ್ರೆಯಲ್ಲಿ ಭಾಗವಹಿಸಿದ ಯಾತ್ರಾರ್ಥಿಗಳಿಗೆ ಪ್ರಸಾದ ವ್ಯವಸ್ಥೆ ಮಾಡುತ್ತಾರೆ.

ಡಾ. ಚನ್ನಬಸವ ಪಟ್ಟದ್ದೇವರ ಸ್ಮರಣೋತ್ಸವ :

ಪ್ರತಿ ವರ್ಷ ಏಪ್ರಿಲ ತಿಂಗಳಲ್ಲಿ ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ಸ್ಮರಣೋತ್ಸವವನ್ನು ದಿನಾಂಕಃ ೨೦-೨೧ ಮತ್ತು ೨೨ ರಂದು ಮೂರು ದಿವಸಗಳ ಪರ್ಯಂತ ಅದ್ದೂರಿಯಿಂದ ಆಚರಿಸಲಾಗುತ್ತಿದೆ. ಸ್ಮರಣೋತ್ಸವ ನಿಮಿತ್ಯವಾಗಿ ಪ್ರತಿ ವರ್ಷ ಜನವರಿ ತಿಂಗಳಿಂದ ಮೂರು ತಿಂಗಳುಗಳವರೆಗೆ "ಬಸವ ಧರ್ಮ ಜಾಗೃತಿ ಸಂದೇಶ" ಯಾತ್ರೆ ಮೂಲಕ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳ ವಿವಿಧ ಗ್ರಾಮಗಳಿಗೆ ಭೇಟಿ ಮಾಡಲಾಗುತ್ತಿದೆ. ಸ್ಮರಣೋತ್ಸವ ಪೂರ್ವದಲ್ಲಿ ಪ್ರತಿ ವರ್ಷ ಮಾರ್ಚ ೨೨ ರಂದು ಒಂದು ತಿಂಗಳು ಪರ್ಯಂತ ಬಸವತತ್ವನಿಷ್ಠ ನಾಡಿನ ಖ್ಯಾತ ಪ್ರವಚನಕಾರರಿಂದ ವಚನ ಪ್ರವಚನ ಏರ್ಪಡಿಸಲಾಗುತ್ತದೆ. ಬಸವಕಲ್ಯಾಣದ ಅನುಭವ ಮಂಟಪದಿಂದ ಭಾಲ್ಕಿವರೆಗೆ ಬಸವಜ್ಯೋತಿ ಪಾದಯಾತ್ರೆ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರ ದಿವ್ಯ ನೇತೃತ್ವದಲ್ಲಿ ಜರುಗುತ್ತದೆ. ಮಾರ್ಗ ಮಧ್ಯೆ ಬರುವ ಧನ್ನೂರಾ (ಬಿ) ಮುಚಳಂಬ ಗೋರ್ಟಾ, ಹೊನ್ನಳ್ಳಿ, ಮೊರಂಬಿ, ಉಚ್ಚಾ, ದಾಡಗಿ, ಕಲವಾಡಿ ಇತ್ಯಾದಿ ಗ್ರಾಮಗಳ ಸದ್ಭಕ್ತರು ಪಾದಯಾತ್ರೆಗೆ ಭಕ್ತಿಯಿಂದ ಸ್ವಾಗತಗೈಯುತ್ತಾರೆ. ಯಾತ್ರಾರ್ಥಿಗಳಿಗೆ ಪ್ರವಾಸ ವಸತಿ ವ್ಯವಸ್ಥೆ ಮಾಡುತ್ತಾರೆ. ಹಿರೇಮಠ ಸಂಸ್ಥಾನ ಭಾಲ್ಕಿ ಆಶ್ರಯಮದಲ್ಲಿ ಜರುಗುವ ಎಲ್ಲಾ ಕಾರ್ಯಕ್ರಮಗಳಲ್ಲಿ ಇದು ಅತ್ಯಂತ ದೊಡ್ಡ ಪ್ರಮಾಣದಲ್ಲಿ ನಡೆಯುವ ಸಮ್ಮೇಳನವಾಗಿದೆ. ಇಪ್ಪತ್ತು ಲಕ್ಷ ರೂಪಾಯಿಗಳಿಗೂ ಮೀರಿ ಖರ್ಚು ತಗಲುತ್ತಿದೆ. ಇದೆಲ್ಲವೂ ಲಿಂಗೈಕ್ಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ಸಾವಿರಾರು ಸದ್ಭಕ್ತರ ಭಕ್ತಿ ದಾಸೋಹದಲ್ಲಿಯೇ ನೆರವೇರುತ್ತದೆ. ೨೦೦೬ ಏಪ್ರೀಲ ೨೦, ೨೧ ಮತ್ತು ೨೨ ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಗುರು ಚನ್ನಬಸಪ್ಪ ಅವರ ಮಾರ್ಗದರ್ಶನದಲ್ಲಿ ಒಂಬತ್ತನೇ ಅಖಿಲ ಭಾರತ ಶರಣ ಸಾಹಿತ್ಯಿಕ ಸಮ್ಮೇಳನ ಅರ್ಥಪೂರ್ಣವಾಗಿ ಜರುಗಿತು.ಈ ಸಮ್ಮೇಳನದ ಸವಿನೆನಪಿಗಾಗಿ "ಚನ್ನಬಸವಕಲ್ಯಾಣ" ಎಂಬ ಸ್ಮರಣ ಸಂಚಿಕೆ ಹೊರತರಲಾಗಿದೆ.

ಪ್ರತಿ ವರ್ಷವೂ ಧರ್ಮಗುರು ಬಸವಣ್ಣನವರ ಜಯಂತಿ ಅಲ್ಲಮಪ್ರಭುದೇವರ ಜಯಂತಿ, ಅಕ್ಕಮಹಾದೇವಿ ಜಯಂತಿ, ಸಿದ್ಧರಾಮೇಶ್ವರ ಜಯಂತಿ ಹೀಗೆ ಮುಂತಾಗಿ ಎಲ್ಲಾ ಬಸವಾದಿ ಶರಣ ಶರಣೆಯರ ಜಯಂತಿಗಳನ್ನು ಆಚರಿಸಲಾಗುತ್ತದೆ. ವಚನ ಸಾಹಿತ್ಯದ ಪಿತಾಮಹ ಫ.ಗು. ಹಳಕಟ್ಟಿ ಸ್ಮರಣೋತ್ಸವ ಆಚರಿಸಲಾಗುತ್ತಿದೆ. ಇದಲ್ಲದೆ ರಾಷ್ಟ್ರದ ಮಹಾಪುರುಷರ ಸ್ವರಣೋತ್ಸವಗಳು ಕೂಡಾ ಆಚರಿಸಲಾಗುತ್ತಿದೆ.

ಭಾಲ್ಕಿ ಮಠದ ಗುರುಗಳು ದಲಿತರ ಮನೆಗೆ ಹೋಗುವದು ಪರಸ್ಪರ ಪಾದಪೂಜೆ ಮಾಡುವುದು ಮತ್ತು ಎಲ್ಲರ ಜೊತೆಗೆ ಮುಕ್ತವಾಗಿ ಊಟ, ಉಪಚಾರ ಮಾಡುವುದು ಸಾಮಾನ್ಯ ನಿತ್ಯ ಆಚರಣೆಯಾಗಿದೆ. ಪೂಜ್ಯ ಅಪ್ಪಗಳಂತೆ ಇಂದಿನ ಶ್ರೀಗಳು ಭಾಲ್ಕಿಯ ಅಶೋಕನಗರ ಬಡಾವಣೆಯಲ್ಲಿರುವ ಉರಿಲಿಂಗ ಪದ್ದಿ ಮಠದಲ್ಲಿ ಪ್ರತಿ ವರ್ಷ ಉರಿಲಿಂಗಪೆದ್ದಿ ಸ್ಮರಣೋತ್ಸವ ಕಾರ್ಯಕ್ರಮ ನಡೆಸುತ್ತಿದ್ದಾರೆ.

ಮನೆಗೊಂದು ವಚನ ಪ್ರವಚನ :

ಹೆಸರೇ ಸೂಚಿಸುವಂತೆ ಇದು ಮನೆ ಮನೆಗಳಲ್ಲಿ ನಡೆಯುವ ಕಾರ್ಯಕ್ರಮವಾಗಿದೆ. ಬಸವಾದಿ ಶರಣರ ವಚನಗಳಲ್ಲಿರುವ ಪ್ರಗತಿಪರ ವಿಚಾರಗಳು ಜನಮನಗಳಲ್ಲಿ ಪರಿಣಾಮಕಾರಿಯಾಗಿ ಬಿತ್ತುವ ಮೂಲಕ ಸಮಾಜದಲ್ಲಿ ಆರೋಗ್ಯಪೂರ್ಣ ವಾತಾವರಣ ಮೂಡಿಸುವುದು ಈ ಕಾರ್ಯಕ್ರಮದ ಏಕೈಕ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಹಿಂದೆಯೂ ಬಸವಜ್ಯೋತಿ ಮನೆಯಲ್ಲಿ ಮಹಾ ಮನೆ ವಚನೋತ್ಸವ ಇತ್ಯಾದಿ ಹೆಸರಿನ ಕಾರ್ಯಕ್ರಮಗಳು ನಡೆದು ಆದಾವುದೋ ಕಾರಣದಿಂದ ನಿಂತು ಹೋದವು. ಮತ್ತೆ ಇಂಥ ಕಾರ್ಯಕ್ರಮ ಆರಂಭಿಸಬೇಕೆಂಬ ಘನ ಉದ್ದೇಶದಿಂದ ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು ಮನೆಗೊಂದು ವಚನ ಪ್ರವಚನ ಹೆಸರಿನ ಕಾರ್ಯಕ್ರಮ ದಿನಾಂಕ: ೧೨-೧೦-೨೦೦೧ ರಂದು ಭಾಲ್ಕಿ ಪಟ್ಟಣದಲ್ಲಿ ಆರಂಭಿಸಿದರು. ಆರಂಭದಲ್ಲಿ ಪ್ರತಿ ಶುಕ್ರವಾರವಷ್ಟೇ ನಡೆಯುತ್ತಿದ್ದ ಕಾರ್ಯಕ್ರಮ ಮುಂದೆ ಮುಂದೆ ವಾರದ ಎಲ್ಲಾ ಏಳೂ ದಿನಗಳಂದು ವಿಕಾಸಗೊಳಿಸಿ ನಡೆಸಲಾಗುತ್ತಿದೆ. ಪೂಜ್ಯ ಶ್ರೀಗಳ ನೇತೃತ್ವದಲ್ಲಿ ನಡೆಯುವ ಈ ಕಾರ್ಯಕ್ರಮದ ಯಶಸ್ವಿಗಾಗಿ ಡಾ.ಜಿ.ಬಿ.ವಿಸಾಜಿ ಅವರು ಸತತವಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ವೀರಣ್ಣ ಕುಂಬಾರ ಸಂಯೋಜಕರಾಗಿ ಕಾರ್ಯ ಮಾಡುತ್ತಿದ್ದಾರೆ. ಸಂಚಾಲಕರಾಗಿ ರತ್ನಮ್ಮ ಸ್ವಾಮಿ, ಮಲ್ಲಮ್ಮ ಪಾಟೀಲ, ರೇಖಾ, ಮಹಾಜನ, ಮಹಾನಂದಾ ದೇಶಮುಖ ನಿರಗುಡಿ, ಮಲ್ಲಿಕಾರ್ಜುನ ಪಾವಡಶೆಟ್ಟಿ, ಪ್ರಭಾಕರ ಬೆಳಕೆರೆ, ನಿರ್ಮಲಾ ಟೆಂಕಾಳೆ, ಸರಸ್ವತಿ ಸ್ವಾಮಿ, ಸುನಂದಾ ಥಮಕೆ, ರಾಜಕುಮಾರ ಬಚ್ಚಣ್ಣಾ, ಸಂತೋಷ ಹಡಪದ, ಶಕುಂತಲಾ ಬಚ್ಚಣ್ಣಾ, ವಿಜಯಲಕ್ಷ್ಮಿ ಬೆಳಕೇರೆ, ಪ್ರೇಮಲಾ ತೊಂದರೆ ಮುಂತಾದವರೊಂದಿಗೆ ಅಕ್ಕನ ಬಳಗದ ಶರಣೆಯರು ಶ್ರಮಿಸುತ್ತಿದ್ದಾರೆ. ಪ್ರೊ. ಶಂಭುಲಿಂಗ ಕಾಮಣ್ಣ, ಪ್ರೊ. ಅಶೋಕ ಮೈನಳ್ಳಿ, ಪ್ರೊ. ಶರಣಮ್ಮ ಮಠಪತಿ ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಇಲ್ಲಿಯವರೆಗೆ ಭಾಲ್ಕಿ ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮದಲ್ಲಿಯ ಒಟ್ಟು ೯೧೬ ಮನೆಗಳಲ್ಲಿ ಮನೆಗೊಂದು ವಚನ ಪ್ರವಚನ ಕಾರ್ಯಕ್ರಮಗಳು ನಡೆದಿದೆ. ಇದೇ ಮಾದರಿಯಲ್ಲಿ

ಜಿಲ್ಲೆಯ ಇತರೆ ಗ್ರಾಮಗಳಲ್ಲಿಯೂ ವ್ಯಾಪಕವಾಗಿ ಇಂಥ ಕಾರ್ಯಕ್ರಮ ಹಮ್ಮಿಕೊಳ್ಳುವ ಯೋಜನೆ ಪೂಜ್ಯ ಶ್ರೀಗಳದ್ದಾಗಿದೆ.

ಸಾಪ್ತಾಹಿಕ ಸಾಮೂಹಿಕ ಪ್ರಾರ್ಥನೆ :

ದಿನಾಂಕ ೨೪-೦೯-೨೦೦೬ ರವಿವಾರದಿಂದ ಚನ್ನಬಸವಾಶ್ರಮದ ಸಭಾ ಮಂಟಪದಲ್ಲಿ ಬೆಳಿಗ್ಗೆ ೬.೦೦ ಗಂಟೆಯಿಂದ ೧೦.೦೦ ಗಂಟೆವರೆಗೆ ಪ್ರತಿ ರವಿವಾರ ಸಾಮೂಹಿಕ ಬಸವ ಪ್ರಾರ್ಥನೆ ಮತ್ತು ವಚನ ಚಿಂತನ ನಡೆಸಿಕೊಂಡು ಬರಲಾಗುತ್ತಿದೆ. ವಿಶೇಷವಾಗಿ ಸರಕಾರಿ ನೌಕರದಾರರಿಗೆ ರವಿವಾರ ಬಿಡುವು ಇರುವುದರಿಂದ ಅವರು ಕಡ್ಡಾಯವಾಗಿ ಪಾಲ್ಗೊಳ್ಳುವ ಸಲುವಾಗಿ ಮತ್ತು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಈ ಸಪ್ತಾಹಿಕ ಕಾರ್ಯಕ್ರಮ ಪೂಜ್ಯ ಶ್ರೀ ಅಪ್ಪಣೆ ಮೇರೆಗೆ ಆರಂಭಿಸಲಾಗಿದೆ. ದಿನಾಂಕ ೨೪-೧೨-೨೦೦೬ ರಂದು ಹದಿನಾಲ್ಕನೇ ಸಾಪ್ತಾಹಿಕ ಕಾರ್ಯಕ್ರಮ ನಡೆಯಿತು. "ಡಾ. ಚನ್ನಬಸವ ಪಟ್ಟದ್ದೇವರು ಪತ್ತಿನ ಸಹಕಾರ ಸಂಘದ" ಉಪಾಧ್ಯಕ್ಷರಾದ ಶ್ರೀ ಶರಣಪ್ಪ ಬಿರಾದಾರ ಮತ್ತು ಡಾ.ಚನ್ನಬಸವ ಪಟ್ಟದ್ದೇವರು ಯುವಕ ಸಂಘದ ಅಧ್ಯಕ್ಷ ಶ್ರೀ ಗುರುಬಸವ ಮೂಲಗೆ ಚಟ್ನಾಳ ವಹಿಸಿಕೊಂಡಿದ್ದಾರೆ.

ಶ್ರೀ ಚನ್ನಬಸವೇಶ್ವರ ನಿತ್ಯ ದಾಸೋಹ:

ಕ್ರಿ.ಶ. ೧೯೨೪ ರಲ್ಲಿ ಪೂಜ್ಯ ಚನ್ನಬಸವ ಪಟ್ಟದ್ದೇವರು ಭಾಲ್ಕಿ ಹಿರೇಮಠ ಸಂಸ್ಥಾನದ ಪಟ್ಟಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಆವರ ಸತ್ಯಸಂಕಲ್ಪದಂತೆ ಈ ಮಠದಲ್ಲಿ ದೂರದ ಸ್ಥಳಗಳಿಂದ ಬರುವ ಸದ್ಭಕ್ತರಿಗೆ ನಿತ್ಯ ಪ್ರಸಾದ ದೊರೆಯುವಂತಾಗಲು ಈ ಯೋಜನೆ ರೂಪಿಸಲಾಗಿದೆ. ಆರಂಭದಲ್ಲಿ ಶ್ರೀಮಠಕ್ಕೆ ಭೇಟಿ ನೀಡುವ ಸದ್ಭಕ್ತರ ಸಂಖ್ಯೆ ಬಹಳ ಕ ಡಿಮೆ ಪ್ರಮಾಣದಲ್ಲಿ ಇತ್ತು. ಇಂದು ಈ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಇದಕ್ಕಾಗಿ ಹೆಚ್ಚಿನ ವ್ಯವಸ್ಥೆ ಮಾಡಲಾಗಿದೆ. ನಿತ್ಯವೂ ಈ ದಾಸೋಹದಲ್ಲಿ ಬೆಳಗಿನ ಉಪಹಾರ ಮಧ್ಯಾಹ್ನ ಮತ್ತು ಸಾಯಂಕಾಲ ಹೀಗೆ ಎರಡು ಸಲ ಪ್ರಸಾದ (ಊಟ) ವ್ಯವಸ್ಥೆ ನಿತ್ಯವು ಇರುತ್ತದೆ.

ಬಸವಧರ್ಮ ಪ್ರಸಾರ ಸಂಸ್ಥೆ :

ಭಾಲ್ಕಿ ಹಿರೇಮಠ ಸಂಸ್ಥಾನವು ಪುಸ್ತಕ ಪ್ರಕಟನೆಗಾಗಿಯೇ "ಬಸವಧರ್ಮ ಪ್ರಸಾರ ಸಂಸ್ಥೆ" ಎಂಬ ಪ್ರಕಾಶನ ಸಂಸ್ಥೆಯನ್ನು ಹುಟ್ಟು ಹಾಕಿದೆ. ಈ ಮೂಲಕ ಅನೇಕ ಪುಸ್ತಕಗಳನ್ನು ಪ್ರಕಟಿಸಿದೆ.

ಕ್ರ.ಸಂ.	ಪುಸ್ತಕದ ಹೆಸರು	ಲೇಖಕರು	ಇಸ್ವಿ
೧.	ವೈರಾಗ್ಯ ನಿಧಿ ಅಕ್ಕಮಹಾದೇವಿ (ಭಜನ ಮಾಲಿಕೆ)	ರಾಮಲಿಂಗಪ್ಪ ಅಂಬಲಗೆ	೧೯೬೯

೨.	ಸಾಮೂಹಿಕ ಪ್ರಾರ್ಥನೆ	ಎಂ.ಬಂಡೆಪ್ಪ	೧೯೭೮
೩.	ಶಿವಶರಣ್ಯ ನನ್ನಯ್ಯ (ನಾಟಕ)	ವಿ. ಸಿದ್ಧರಾಮಣ್ಣ	೧೯೮೩
೪.	ಇಷ್ಟಲಿಂಗ ಪೂಜಾ ವಿಧಾನ	ಶ್ರೀ ಬಸವಲಿಂಗಪಟ್ಟದೇವರು	೧೯೮೩
೫.	ಷಣ್ಮುಖ ಶಿವಯೋಗ (ನಾಟಕ)	ವಿ. ಸಿದ್ಧರಾಮಣ್ಣ	೧೯೮೪
೬.	ಇಷ್ಟಲಿಂಗ ಪೂಜಾ ವಿಧಾನ (ಮರಾಠಿ)	ಶ್ರೀ ಬಸವಲಿಂಗ ಪಟ್ಟದೇವರು	೧೯೮೫
೭.	ಬಸವೇಶ್ವರ ಸಹಸ್ರ ನಾಮಾವಳಿ	ಬಸವ ಯೋಗೇಂದ್ರ	೧೯೮೫
೮.	ಸಾಮೂಹಿಕ ಪ್ರಾರ್ಥನೆ (ಮರಾಠಿ)	ಶ್ರೀ ಬಸವಲಿಂಗ ಪಟ್ಟದೇವರು	೧೯೮೯
೯.	ಲಿಂಗಾಯತ Bibliography	ಡಾ.ಎಸ್.ಎಸ್.ಗುಂಜಾಳ	೧೯೮೯
೧೦.	ಶ್ರೀ ಚನ್ನಬಸವ ಪಟ್ಟದ್ದೇವರು ಭಾಲ್ಕಿ (ಜೀವನ ಚರಿತ್ರೆ)	ಡಾ. ಜಿ.ಬಿ. ವಿಸಾಜಿ	೧೯೯೦
೧೧.	ಚಿಂತನ ದೀಪಿಕೆ (ರೇಡಿಯೋ ಚಿಂತನೆಗಳು)	ಡಾ. ಜಿ.ಬಿ. ವಿಸಾಜಿ	೧೯೯೦
೧೨.	ಚನ್ನಬಸವ (ಜೀವನ ಚರಿತ್ರೆ)	ವಿ.ಎಸ್. ಚರಂತಿ ಮಠ	೧೯೯೦
೧೩.	ಶಿವಶರಣ ಹರಳಯ್ಯಾ (ನಾಟಕ)	ವಿ. ಸಿದ್ಧರಾಮಣ್ಣ	೧೯೯೧
೧೪.	ಕಾಯಕ ಪರಿಣಾಮಿ (ಗೌರವ ಗ್ರಂಥ)	ಡಾ. ಶಾಂತರಸ	೧೯೯೧
೧೫.	ಬಸವೇಶ್ವರ ಮತ್ತು ಅಂಬೇಡ್ಕರ	ದೇ.ಜ.ಗೌ.	೧೯೯೨
೧೬.	ಚನ್ನನ ಮಹಿಮೆ (ಕವನ ಸಂಕಲನ)	ಶಿವರುದ್ರಯ್ಯಾ ಸ್ವಾಮಿ	೧೯೯೩
೧೭.	ಬಸವಣ್ಣನವರ ವಚನಗಳಲ್ಲಿ ದಲಿತದರ್ಶನ	ವಿ.ಎಸ್. ಚರಂತಿಮಠ	೧೯೯೪
೧೮.	ಬಸವೇಶ್ವರ ಮತ್ತು ಅಂಬೇಡ್ಕರ (ಮರಾಠಿ)	ಮೂಲ ದೇ.ಜ.ಗೌ.ಅನುವಾದ ಶಶಿಕಲಾ ಮಡಕಿ	೧೯೯೪
೧೯.	ಬಸವೇಶ್ವರಕೀ ಆತ್ಮಕಥಾ (ಹಿಂದಿ)	ಎಸ್.ಆರ್. ಗೂಂಜಾಳ	೧೯೯೫
೨೦.	ಬಸವಜ್ಯೋತಿ	ಶ್ರೀ ಬಸವಲಿಂಗ ಪಟ್ಟದೇವರು	೧೯೯೭
೨೧.	ಕಾಯಕಯೋಗಿ ಚನ್ನಬಸವ ಪಟ್ಟದೇವರ (ಮರಾಠಿ)	ಶಾಲಿನಿ ಶ್ರೀಶೈಲ ದೊಡ್ಡಮನಿ	೧೯೯೮

೨೨.	ವಚನ ಸಾಹಿತ್ಯ ಚಿಂತನ ಮತ್ತು ಸಂಶೋಧನ (ಹಿಂದಿ)	ಡಾ. ಭಗವಾನದಾಸ ತಿವಾರಿ	೧೯೯೮
೨೩.	ಲಕ್ಕನ ವಚನಾಮೃತ (ಮರಾಠಿ ಅನುವಾದ)		೧೯೯೯
೨೪.	ಅಕ್ಕಮಹಾದೇವಿ (ನಾಟಕ)	ಲೇ.ವಿ. ಸಿದ್ಧರಾಮಣ್ಣ	
೨೫.	ಅಂಬಿಗರ ಚೌಡಯ್ಯನ ವಚನಗಳು	ಸಂ.ಎಚ್.ಬಸವರಾಜ	
೨೬.	ಬಸವ ನೈವೇದ್ಯ	ಶ್ರೀ ಬಸವಲಿಂಗ ಪಟ್ಟದೇವರು	೨೦೦೪
೨೭.	ಶಿವಶರಣೆಯ ವಚನಗಳು	ಸಂ. ಶ್ರೀ ಬಸವಲಿಂಗ ಪಟ್ಟದೇವರು	
೨೮.	ಸುಖೀ ಜೀವನದ ಸೂತ್ರಗಳು	ಖೇಡಾ.ಎಸ್.ಆ್. ಗುಂಜಾಳ	
೨೯.	ಇಷ್ಟಲಿಂಗ ಪೂಜಾ ವಿಧಾನ (ಹಿಂದಿ)	ಶ್ರೀ ಬಸವಲಿಂಗ ಪಟ್ಟದ್ದೇವರು ೨೦೦೪	
೩೦.	ಬಸವಚೇತನ ಶ್ರೀ ಮ.ಘ.ಚ. ಚನ್ನಬಸವ ಪಟ್ಟಾಧ್ಯಕ್ಷರು	ಲೇ.ಪ್ರೊ. ಸಿದ್ದಣ್ಣ ಲಂಗೋಟಿ	
೩೧.	ಬಸವಣ್ಣ ಮತ್ತು ಅಷ್ಟಾವರಣ	ಲೇ. ಬಸವಲಿಂಗ ಪಟ್ಟದ್ದೇವರು	೨೦೦೫
೩೨.	ಗಡಿನುಡಿಯ ಬೆಡಗು	ಲೇ.ಡಾ.ಗುರುಲಿಂಗಪ್ಪ ಧಬಾಲೆ	೨೦೫
೩೩.	ಬಸವಣ್ಣ ಅಷ್ಟಾವರಣ	ಲೇ.ಬಸವಲಿಂಗ ಪಟ್ಟದ್ದೇವರು	೨೦೦೫
೩೪.	ಶರಣಧರ್ಮ ಪ್ರಸಾರ	ಲೇ.ಬಸವಲಿಗ ಪಟ್ಟದೇವರು	೨೦೦೬
೩೫.	ಬಸವೇಶ್ವರಾಂಚಾ ವಿಶ್ವಸಂದೇಶ (ಕನ್ನಡ ಮೂಲ ಲೇ.ರಂಜಾನ ದರ್ಗಾ ಅನುವಾದ ರಾಜೇಂದ್ರ ಜಿರೋಬಿ)	ಮರಾಠಿ ಪ್ರತಿ	೨೦೦೭
೩೬.	ಬಸವ ನೈವೇದ್ಯ (ಮರಾಠಿ)	ಶ್ರೀಮತಿ ಸ್ವರೂಪಾ ತಾಯಿ ಬಿರಾದಾರ	ಮೂಲ ಲೇ ಪೂಜ್ಯ ಬಸವಲಿಂಗ ಪಟ್ಟದೇವರು

"ಮಹಾರಾಷ್ಟ್ರ ಬಸವ ಪರಿಷತ್ತು" :

ಬಸವಾದಿ ಶರಣರ ವಚನಗಳಲ್ಲಿ ವಿಶ್ವಮಾನ್ಯ ಸಂದೇಶವಿದೆ. ನಿತ್ಯದ ಬದುಕಿನಲ್ಲಿ ಮನುಷ್ಯನು ನೆಮ್ಮದಿಯಿಂದ ಬದುಕಲು ಹಲವಾರು ಉತ್ತಮ ವಿಚಾರಗಳು ವಚನದ ಸಾಲು ಸಾಲುಗಳಲ್ಲಿ ತುಂಬಿವೆ. ಈ ಎಲ್ಲಾ ವಿಚಾರಗಳು ಕನ್ನಡ ಭಾಷೆಯಲ್ಲಿ ಮಾತ್ರ ಇವೆ. ಕನ್ನಡ ಭಾಷೆಯ ಈ ವಿಚಾರಗಳು ಭಾರತೀಯ ಅನ್ಯ ಭಾಷೆಗಳಿಗೆ ತುರ್ಜುಮೆ ಮಾಡಿ ದೇಶದ ನಾನಾ ಕಡೆ ಶರಣರ ವಿಚಾರಗಳು ಪ್ರಸಾರ ಮಾಡುವುದು ಬಹಳ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಕರ್ನಾಟಕದ ನೆರೆಯ ರಾಜ್ಯವಾದ ಮಹಾರಾಷ್ಟ್ರ ಭಾಗದಲ್ಲಿ ಮರಾಠಿ ಭಾಷೆಯಲ್ಲಿ ಶರಣರ ವಿಚಾರಗಳು ಪ್ರಸಾರ ಮಾಡುವ ಉದ್ದೇಶದಿಂದ ಮಹಾರಾಷ್ಟ್ರ ಬಸವ ಪರಿಷತ್ತು ದಿನಾಂಕಃ ೭-೧-೨೦೦೭ ರಂದು ಹಚ್ಚು ಹಾಕಲಾಯಿತು. ಈ ಪರಿಷತ್ತಿನ ಆಶ್ರಯದಲ್ಲಿ ಹಲವಾರು ಪ್ರತಿಗಳು ಇಲ್ಲಿಯವರೆಗೆ ಪ್ರಕಟಿಸಲಾಗಿದೆ. ಪ್ರತಿ ವರ್ಷ ಮಹಾರಾಷ್ಟ್ರ ಪ್ರಾಂತದಲ್ಲಿ ಶರಣ ಸಾಹಿತ್ಯವನ್ನು ಮರಾಠಿ ಭಾಷೆಯಲ್ಲಿ ರಚಿಸಿದ ಶ್ರೇಷ್ಠ ಲೇಖಕರಿಗೆ ಡಾ. ಚನ್ನಬಸವ ಪಟ್ಟದೇವರು ಪ್ರಶಸ್ತಿಯನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

"ಆಂಧ್ರ ಪ್ರದೇಶ ಬಸವ ಪರಿಷತ್ತು" :

ಬಸವಾದಿ ಶರಣರ ವಚನಗಳಲ್ಲಿ ವಿಶ್ವಮಾನ್ಯ ಸಂದೇಶವಿದೆ. ನಿತ್ಯದ ಬದುಕಿನಲ್ಲಿ ಮನುಷ್ಯನು ನೆಮ್ಮದಿಯಿಂದ ಬದುಕಲು ಹಲವಾರು ಉತ್ತಮ ವಿಚಾರಗಳು ವಚನದ ಸಾಲು ಸಾಲುಗಳಲ್ಲಿ ತುಂಬಿವೆ. ಈ ಎಲ್ಲಾ ವಿಚಾರಗಳು ಕನ್ನಡದ ಭಾಷೆಯಲ್ಲಿ ಮಾತ್ರ ಇದೆ. ಕನ್ನಡ ಭಾಷೆಯ ಈ ವಿಚಾರಗಳು ಭಾರತೀಯ ಅನ್ಯ ಭಾಷೆಗಳಿಗೆ ತುರ್ಜುಮೆ ಮಾಡಿ ದೇಶದ ನಾನಾ ಕಡೆ ಶರಣರ ವಿಚಾರಗಳು ಪ್ರಸಾರ ಮಾಡುವುದು. ಬಹಳ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಕರ್ನಾಟಕದ ನೆರೆಯ ರಾಜ್ಯವಾದ ಆಂಧ್ರಪ್ರದೇಶ ಪ್ರಾಂತದಲ್ಲಿ ತೆಲಗು ಭಾಷೆಯಲ್ಲಿ ಶರಣರ ವಿಚಾರಗಳು ಪ್ರಸಾರ ಮಾಡುವ ಉದ್ದೇಶದಿಂದ ಆಂಧ್ರಪ್ರದೇಶ ಬಸವ ಪರಿಷತ್ತು ದಿನಾಂಕಃ ೨೨-೧೨-೨೦೦೭ ರಂದು ಆರಂಭಿಸಲಾಯಿತು. ಈ ಪರಿಷತ್ತಿನ ಆಶ್ರಯದಲ್ಲಿ ಹಲವಾರು ಕೃತಿಗಳನ್ನು ಪ್ರಕಟಿಸಲಾಯಿತು.

ಉರಿಲಿಂಗಪೆದ್ದಿ ಮಠಾಧೀಶರ ರಾಜ್ಯಮಟ್ಟದ ಪ್ರಥಮ ಸಮಾವೇಶ :

ಉರಿಲಿಂಗಪೆದ್ದಿ ಎಂಬ ಶರಣರು ಹನ್ನೆರಡನೆಯ ಶತಮಾನದ ಬಸವಣ್ಣನವರ ಸಮಕಾಲೀನ ಶರಣರಲ್ಲಿ ಒಬ್ಬರಾಗಿದ್ದಾರೆ. ಅವರು ಮಹಾರಾಷ್ಟ್ರ ರಾಜ್ಯದ ನಾಂದೇಡದವರು ಆಗಿದ್ದಾರೆ. ಉರಿಲಿಂಗದೇವರು ಅವರಿಂದ ದೀಕ್ಷೆಯನ್ನು ಪಡೆದವರಾಗಿದ್ದಾರೆ. ಬಾಲ್ಯದಲ್ಲಿ ಕಳ್ಳತನ ಮಾಡುವ ಕೆಟ್ಟ ಪ್ರವೃತ್ತಿ ಅವರದಾಗಿತ್ತು. ಶರಣರ ಒಡನಾಟದಿಂದ ಮತ್ತು ಉರಿಲಿಂಗದೇವರ

ಅನುಗ್ರಹದಿಂದ ಅವರು ಸಾತ್ವಿಕ ಜೀವನಕ್ಕೆ ಮರಳಿದರು. ಉರಿಲಿಂಗದೇವರು ಲಿಂಗೈಕ್ಯರಾದ ನಂತರ ಆ ಮಠಕ್ಕೆ ಉರಿಲಿಂಗಪೆದ್ದಿಗಳು ಜಂಗಮ ದೀಕ್ಷೆ ಪಡೆದು ಮಠಾಧೀಶರಾಗುತ್ತಾರೆ. ಇವರ ತರುವಾಯ ಉರಿಲಿಂಗಪೆದ್ದಿ ಮಠಗಳು ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಇವರ ಅನುಯಾಯಿಗಳು ಸ್ಥಾಪಿಸಿದ್ದು ಕಾಣುತ್ತೇವೆ. ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ೫೦ ಕ್ಕೂ ಮೀರಿ ಉರಿಲಿಂಗಪೆದ್ದೀಶ್ವರ ಮಠಗಳು ಇವೆ. ಈ ಮಠಗಳಿಗೆ ಶೂದ್ರರು ಲಿಂಗದೀಕ್ಷೆ ಪಡೆದು ಈ ಮಠಗಳ ಅಧಿಕಾರವನ್ನು ವಹಿಸಿಕೊಂಡಿರುವುದು ವಿಶೇಷತೆಯಾಗಿದೆ. ಹೀಗಾಗಿ ಈ ಮಠಗಳು ಲಿಂಗಾಯತ ಮಠಗಳಾಗಿದ್ದರೂ ಕೂಡಾ ಶೂದ್ರರ ಮಠಗಳೆಂಬುದು ಜನಸಾಮಾನ್ಯರಲ್ಲಿ ಮೂಡಿದೆ. ಇವರ ಪರಿಸ್ಥಿತಿ ಅತ್ತ ಶೂದ್ರರೂ ಅಲ್ಲ ಇತ್ತ ಲಿಂಗಾಯತರು ಅಲ್ಲ ಎನ್ನುವಂತಾಗಿದೆ. ಈ ಕೀಳರಿಮೆ ಹೋಗಲಾಡಿಸಲು ಹಿರೇಮಠ ಸಂಸ್ಥಾನ ಆಶ್ರಯದಲ್ಲಿ ರಾಜ್ಯಮಟ್ಟದ ಉರಿಲಿಂಗಪೆಡ್ಡಿ ಮಠಾಧೀಶರ ಪ್ರಥಮ ಸಮಾವೇಶ ೨೦೦೭ ರಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮಾವೇಶದಲ್ಲಿ ೪೦ ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಂಡಿದ್ದಾರೆ.

ಅಖಿಲ ಭಾರತ ಒಂಭತ್ತನೆಯ ಶರಣ ಸಾಹಿತ್ಯ ಸಮ್ಮೇಳನ :

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಸುತ್ತೂರು ಮಠದ ಆಶ್ರಯದಲ್ಲಿ ಹತ್ತು ವರ್ಷಗಳ ಹಿಂದೆ ಆರಂಭಿಸಲಾಯಿತು. ಈ ಪರಿಷತ್ತಿನ ವತಿಯಿಂದ ಶರಣ ಧರ್ಮ ಪ್ರಸಾರ ವ್ಯಾಪಕವಾಗಿ ನಾಡಿನಲ್ಲಿ ಮಾಡಲಾಗುತ್ತಿದೆ. ನಾಡಿನ ಜಿಲ್ಲೆ ಮತ್ತು ತಾಲೂಕಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಪ್ರತಿ ವರ್ಷ ಶರಣ ಸಾಹಿತ್ಯ ಸಮ್ಮೇಳನ ಬೇರೆ ಬೇರೆ ಭಾಗಗಳಲ್ಲಿ ಬೃಹತ್ ಪ್ರಮಾಣದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಒಂಭತ್ತನೆಯ ಶರಣ ಸಾಹಿತ್ಯ ಸಮ್ಮೇಳನ ನಮ್ಮ ಹಿರೇಮಠ ಸಂಸ್ಥಾನ ಆಶ್ರಯದಲ್ಲಿ ಹಮ್ಮಿಕೊಳ್ಳುವ ಅವಕಾಶ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗುರು ಚನ್ನಬಸಪ್ಪನವರು ವಹಿಸಿಕೊಟ್ಟರು. ಈ ಕಾರಣದಿಂದ ಭಾಲ್ಕಿಯಲ್ಲಿ ಈ ಸಮ್ಮೇಳನ ೨೦೦೬ ರಲ್ಲಿ ಏರ್ಪಡಿಸಲಾಯಿತು. ನಾಡಿನ ಅನೇಕ ವಿದ್ವಾಂಸರು, ಅನುಭವಿಗಳು ಮತ್ತು ಸಾಹಿತಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ವಾರ್ಷಿಕ ವಚನ ಪ್ರವಚನ :

ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಒಂದು ತಿಂಗಳು ಪರ್ಯಂತ ಪ್ರತಿನಿತ್ಯ ಸಾಯಂಕಾಲ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಅವರಿಂದ ಭಾಲ್ಕಿ ಚನ್ನಬಸವಾಶ್ರಮದಲ್ಲಿ ವಚನ ಪ್ರವಚನ ಏರ್ಪಡಿಸಲಾಗುತ್ತದೆ. ಅದೇ ರೀತಿ ಪ್ರತಿ ವರ್ಷ ಏಪ್ರೀಲ್ ಮತ್ತು ಡಿಸೆಂಬರ್ ತಿಂಗಳಲ್ಲಿ ಲಿಂಗೈಕ್ಯ ಪೂಜ್ಯ ಡಾ. ಚೆನ್ನಬಸವ ಪಟ್ಟದೇವರ ಸ್ಮರಣೋತ್ಸವ ಹಾಗೂ ಜಯಂತೋತ್ಸವ ಸಮಾರಂಭಗಳ ಪೂರ್ವಭಾವಿಯಾಗಿ ಕ್ರಮವಾಗಿ ವಚನ ಪ್ರವಚನ ಹಮ್ಮಿಕೊಳ್ಳಲಾಗುತ್ತದೆ. ಈ ಎರಡೂ

ಸಂದರ್ಭಗಳಲ್ಲಿ ನಾಡಿನ ಹೆಸರಾಂತ ಪ್ರವಚನಕಾರರನ್ನು ಆಹ್ವಾನಿಸಲಾಗುತ್ತದೆ. ಇದಕ್ಕಾಗಿ ಪ್ರತಿ ವರ್ಷ ಲಕ್ಷಗಟ್ಟಲೆ ಹಣ ಖರ್ಚಾಗುತ್ತದೆ.

ಜಾತಿ ಮತ ಪಂಥಗಳ ಗೋಡೆಗಳನ್ನು ಕಟ್ಟಿಕೊಂಡು ನರಳುತ್ತಿರುವ ಸಮಾಜದಲ್ಲಿ ಸಮಾನತೆ ತತ್ವ ತರುವುದು. ಜನರಲ್ಲಿರುವ ಅರ್ಥವಿಲ್ಲದ ಆಚರಣೆಗಳನ್ನು ಹೊಡದೂಡಿಸುವುದು ನಿಜವಾದ ಜಾಗೃತಿ ಮೂಡಿಸುವುದು. ಜನರ ದುಶ್ಚಟ ದುರ್ವ್ಯಸನಗಳನ್ನು ಬಿಡಿಸುವುದು ಇತ್ಯಾದಿ ವಚನ ಪ್ರವಚನ ಏರ್ಪಡಿಸುವುದರ ಪ್ರಮುಖ ಗುರಿಯಾಗಿದೆ.

ವಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಜಿ ಧಾರವಾಡ ಮನಗುಂಡಿಯ ಪೂಜ್ಯ ಬಸವಾನಂದ ಸ್ವಾಮಿ, ಬೈಲೂರ ನಿಷ್ಕಲ ಮಂಟಪದ ಪೂಜ್ಯ ನಿಜಗುಣಾನಂದ ಸ್ವಾಮಿಜೀ ತಿಕೋಟಾದ ಪೂಜ್ಯ ಮಲ್ಲಿಕಾರ್ಜುನ ಸ್ವಾಮೀಜಿ, ಹೂವಿನ ಹಾಟಿಗಯ್ಯಾ, ಪೂಜ್ಯ ಚನ್ನಬಸವ ಸ್ವಾಮಿಜಿ, ದಾವಣಗೇರೆ ಬಸವ ಬಳಗದ ಮಾತು ಮುದಗಲ್ಲದ ಪೂಜ್ಯ ಮಹಾಂತ ಸ್ವಾಮಿಜಿ ಮುಂತಾದವರು ಭಾಲ್ಕಿಗೆ ಆಗಮಿಸಿ ತಮ್ಮ ವಚನ ಪ್ರವಚನ ನಡೆಸಿಕೊಟ್ಟಿದ್ದು ಇಲ್ಲಿ ಸ್ಮರಿಸಬಹುದಾಗಿದೆ.

ಡಾ. ಎಮ್.ಎಮ್. ಕಲಬುರ್ಗಿ, ಡಾ. ಎಸ್.ಆರ್.ಗುಂಜಾಳ, ಲಿಂಗಣ್ಣ ಸತ್ಯಂಪೇಟೆ, ಅರಸುವ ಜತ್ತಿ, ರಂಜಾನ ದರ್ಗಾ, ಡಾ.ಬಸವರಾಜ ಮೋದಿ ಮುಂತಾದ ವಿದ್ವಾಂಸರು ಇಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಇಂತಹ ವಾರ್ಷಿಕ ವಚನ ಪರವಚನ ಕಾರ್ಯಕ್ರಮಗಳು ನಿರಂತಗವಾಗಿ ಹಿರೇಮಠ ಸಂಸ್ಥಾನ ಭಾಲ್ಕಿ ಆಶ್ರಯದಲ್ಲಿ ಸಾಗಿ ಬರುತ್ತವೆ.

ಮಾಸಿಕ ಶಿವಾನುಭವ ಗೋಷ್ಠಿ :

೧೯೮೫ ನೇ ವರ್ಷದಿಂದ ಆರಂಭಿಸಿದ ಮಾಸಿಕ ಶಿವಾನುಭವ ಗೋಷ್ಠಿ ಪ್ರತಿ ತಿಂಗಳು ಹುಣ್ಣಿಮೆಯೆಂದು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಪೂಜ್ಯರು ತಾವು ಪಟ್ಟಾಧಿಕಾರ ವಹಿಸಿಕೊಂಡ ನಂತರ ಸತತವಾಗಿ ಇಲ್ಲಿಯವರೆಗೆ ೨೮೯ ಮಾಸಿಕ ಕಾರ್ಯಕ್ರಮಗಳು ಪೂರ್ತಿಯಾಗಿದೆ. ಈ ಒಂದು ಕಾರ್ಯಕ್ರಮದಲ್ಲಿ ಇಲ್ಲಿಯವರೆಗೆ ಸುಮಾರು ೨೫೦ ಶಿವಾನುಭವಗೋಷ್ಠಿಗಳನ್ನು ನಡೆಸಿದ್ದಾರೆ. ಪ್ರತಿ ಹುಣ್ಣಿಮೆಗೆ ಜರಗುವ ಶಿವಾನುಭವ ಗೋಷ್ಠಿಗಳಿಗೆ ನಾಡಿನ ಖ್ಯಾತ ವಿದ್ವಾಂಸರನ್ನು ಬರಮಾಡಿಕೊಳ್ಳುತ್ತಾರೆ. ಜಿಲ್ಲೆಯಲ್ಲಿ ಇದೊಂದು ಹೊಸ ಪ್ರಯೋಗವೆಂದೇ ಹೇಳಬೇಕು.

ಲಿಂಗಾಯತ ಸಂಸ್ಕಾರಗಳ ನವೀಕರಣ :

ಬಸವಣ್ಣನವರ ಗುರುತ್ವದಲ್ಲಿ ಲಿಂಗಾಯತ ಸಂಸ್ಕಾರಗಳು ಜನಪರವಾಗಿವೆ. ಶೋಷಣೆ ರಹಿತವಾಗಿದೆ. ಪೂಜಾರಿ ಪರುಒಹಿತರ ಅಗತ್ಯವಿಲ್ಲ. ನನ್ನ ಬ್ಯಾಟರಿ ಬೆಳಕಿನಲ್ಲಿ ನೀನುಬಾ

ಎಂಬುದು ಇಲ್ಲ. ನಿನ್ನ ಬೆಳಕಿನಲ್ಲಿ ನೀನು ನಡೆಯಬೇಕು ಎಂಬುದೇ ಲಿಂಗಾಯತ ಸಂಸ್ಕಾರಗಳ ಗುರಿಯಾಗಿದೆ ಎನ್ನುತ್ತಾರೆ ಶ್ರೀಗಳು.

ಬಹುಶಃ ಹೊರದೇಶದವರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ, ಅವರ ಮೂಲತ ಸರಳ ಸಮಾನ ಸಂಸ್ಕಾರಗಳ ಅಧ್ಯಯನ ಮಾಡಿ ಪ್ರತ್ಯಕ್ಷವಾಗಿ ನೋಡಬೇಕೆಂದು ಕರ್ನಾಟಕದಲ್ಲಿ ಲಿಂಗಾಯತ ಮನೆ ಮಠಗಳಿಗೆ ಬಂದು ಭೇಟಿಕೊಟ್ಟಾಗ, ಅವರು ಗಾಬರಿಯಾಗಿ ಓಡಿ ಹೋಗಬಹುದು. ಅಥವಾ ಅವರು ಈ ರೀತಿ ವ್ಯಾಖ್ಯಾನಿಸಬಹುದು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಯಾವ ಯಾವ ಸಂಸ್ಕಾರಗಳನ್ನು ನೀಡಿದ್ದಾರೇ, ಏನು ಹೇಳಿದ್ದಾರೋ ಅದರ ವಿರುದ್ಧವಾಗಿ ನಡೆಯುವವರೇ ಲಿಂಗಾಯತರು ಇದು ಕಠೋರ ಅನಿಸಬಹುದು. ಆದರೆ ಸತ್ಯವಾಗಿದೆ. ನವೀಕರಣ ಎನ್ನುವ ಅವಶ್ಯಕತೆ ಎಂದಿಗಿಂತಲೂ ಇಂದು ಅಗತ್ಯವಾಗಿದೆ.

ಅಂಗದ ಮೇಲೆ ಇಷ್ಟಲಿಂಗ ಧರಿಸಿಕೊಂಡು ಏಕಲಿಂಗ ಆಚರಿಸು ಎಂದು ಲಿಂಗಾಯತ ಸಂಸ್ಕಾರ ಹೇಳುತ್ತದೆ. ಆದರೆ ಇಂದು ನೂರಾರು ದೇವರುಗಳಿಗೆ ಅಡ್ಡಾಡಿ ಎಲ್ಲಾ ಕಡೆ ಅಡ್ಡ ಉದ್ದ ಬಿದ್ದು ಬೇಡಿಕೊಳ್ಳುವವರು ನಾವಾಗಿದ್ದೇವೆ. ಸತ್ಯನಾರಾಯಣ ಕಥೆ, ವಂದ ಶಂಕರ ವೃತ್ತ , ಸೋಳಾ ಸೋಮವಾರದ ವೃತ, ಮಹಾಲಕ್ಷ್ಮಿ ವೃತ, ವೈಭವ ಲಕ್ಷ್ಮಿ ವೃತ, ಒಂದೇ ಎರಡೇ ಅರ್ಥವಿಲ್ಲದ ಸಂಸ್ಕಾರಗಳು ನಮ್ಮಲ್ಲಿ ಮನೆಮಾಡಿಕೊಂಡಿವೆ. ಇಲ್ಲಿ ನವೀಕರಣ ಅವಶ್ಯವಾಗಿದೆ ಎನ್ನುತ್ತಾರೆ ಶ್ರೀಗಳು.

ಲಿಂಗಾಯತ ಧರ್ಮಭಾಷೆ ಕನ್ನಡ ಸಂಸ್ಕೃತಕ್ಕೂ ಲಿಂಗಾಯತಕ್ಕೂ ಸಂಬಂಧವೇ ಇಲ್ಲ. ನಾವು ಬಸವಾದಿ ಪ್ರಮಥರ ವಚನಗಳ ಮೂಲಕ ಪ್ರತಿಯೊಂದು ಸಂಸ್ಕಾರ ನೇರವೇರಿಸಬೇಕು. ಅದು ಬಿಟ್ಟು ನಮ್ಮಂಥ ಮಠಾಧೀಶರು ಪುರೋಹಿತರ ಅಪ್ಪನಂತೆ ವರ್ತಿಸುತ್ತಾ ತಿಳಿಯದವರಿಗೆ ತಿಳಿಯಲಾರದಂತೆ ಸಂಸ್ಕೃತದಲ್ಲಿ ಮಂತ್ರಗಳನ್ನು ಹೇಳುತ್ತಾ ಸಮಾಜವನ್ನು ಅಡ್ಡ ಹಾದಿಗೆ, ಕತ್ತಲೆಯತ್ತ, ಕಾರ್ಯಗತ್ತಲೆಯಾಗಿ ಸಾಗಿಸುವವರು ಮಠಾಧೀಶರು. ಆದ್ದರಿಂದ ಇಲ್ಲಿ ನವೀಕರಣ ತರುವುದು ಬಹಳ ಅಗತ್ಯವೆನಿಸುತ್ತದೆ.

ಕೆಲವು ಮಠಾಧೀಶರು ಕೆಲವು ಲಿಂಗಾಯತ ಮಠಗಳ ಸಭೆ ಸಮಾರಂಭಗಳಲ್ಲಿ ವೇದ ಮಂತ್ರ ಘೋಷಣೆಯೊಂದಿಗೆ ಕಾರ್ಯಕ್ರಮ ಪ್ರಾರಂಭ ಎಂದು ಸಂಕೋಚವಿಲ್ಲದೆ ಪ್ರಕಟಿಸುತ್ತಾರೆ. ಯಾವ ಲಿಂಗಾಯತ ಧರ್ಮ ವೇದ ಮಂತ್ರದ ವಿರುದ್ಧ ಹುಟ್ಟಿತ್ತೋ, ವೈದಿಕತನದ ವಿರುದ್ಧ ಹ ುಟ್ಟಿತ್ತೋ ಅಂಥ ವೇದಮಂತ್ರ ಪಠಿಸುವುದೆಂದರೆ ಏನು ? ಹಾಸ್ಯಾಸ್ಪದವಲ್ಲವೆ ? ಇಲ್ಲಿ ನವೀಕರಣದ ಅವಶ್ಯವಾಗಿದೆ ಎನ್ನುತ್ತಾರೆ ಶ್ರೀಗಳು.

ಅನೇಕ ಮಠ ಮಾನ್ಯಗಳಲ್ಲಿ ವೈದಿಕಮಂತ್ರ ಕಲಿಸುವ ವೈದಿಕ ಪಾಠಶಾಲೆ, ವೇದ ಪಾಠಶಾಲೆ, ಜ್ಯೋತಿಷ್ಯ ಪಾಠಶಾಲೆ, ನಿರಂತರವಾಗಿ ಇಂದಿಗೂ ನಡೆಯುತ್ತ ಇವೆ. ಅದರ ಬದಲಾಗಿ ವಚನ ಪಾಠಶಾಲೆ, ಲಿಂಗಾಯತ ಸಂಸ್ಕಾರಗಳ ಪಾಠಶಾಲೆ ಅಥವಾ "ಬಸವ ಧರ್ಮ ಸಂಸ್ಕಾರ" ಪಾಠ ಶಾಲೆ ತೆರೆದು ವಚನಗಳ ಮೂಲಕ ಸರಳ ಸಹಜ ಸಂಸ್ಕಾರಗಳನ್ನು ನಡೆಸಬೇಕು. ಒಂದೇ ಕೋಮಿನವರಿಗೆ ಅವಕಾಶ ನೀಡದೆ ಜಾತಿ ಭೇದವಿಲ್ಲದೆ ಆಸಕ್ತಿ ಇದ್ದ ಎಲ್ಲರಿಗೂ ಪ್ರವೇಶ ನೀಡಬೇಕು. ಇಲ್ಲಿ ನವೀಕರಣದ ಅವಶ್ಯಕತೆ ಇದೆ, ಎನ್ನುತ್ತಾರೆ ಶ್ರೀಗಳು.

ನೀರಿನ ಟ್ಯಾಂಕ್ ಸ್ವಚ್ಛವಾಗಿದ್ದರೆ ನಳದಲ್ಲಿ ನೀರು ಸ್ವಚ್ಛ ಬರುತ್ತವೆ. ಟ್ಯಾಂಕಿನಲ್ಲಿ ರಾಡಿ ನೀರು ಕಲಕು ನೀರು ಇದ್ದರೆ ನಳದಲ್ಲಿ ಶುದ್ಧ ನೀರು ಅಪೇಕ್ಷೆಪಡಲು ಸಾಧ್ಯವಿಲ್ಲ ಮಠಗಳು, ಮಠಾಧೀಶರು ನೀರಿನ ಟ್ಯಾಂಕ್ ಇದ್ದಂತೆ, ಅದಕ್ಕೆ ನಾವು ಮೊದಲು ಟ್ಯಾಂಕಗಳು ಸ್ವಚ್ಛಮಾಡಲು ನವೀಕರಣ ಮಾಡಲು ಮುಂದಾಗುವುದು ಬಹು ಅವಶ್ಯವಿದೆ ಎನ್ನುತ್ತಾರೆ. ಶ್ರೀ ಎ ೦ಠಕ್ಕೆ ಬಂದ ಭಕ್ತರನ್ನು ಭಸ್ಮ, ರುದ್ರಾಕ್ಷಿ, ಲಿಂಗ, ವಚನಗ್ರಂಥ, ಬಸವಣ್ಣನವರ ಭಾವಚಿತ್ರ ಕೊಟ್ಟು ಆಶೀರ್ವದಿಸಬೇಕು. ಅದುಬಿಟ್ಟು ಕಂದಾರ, ಚೀಟಿ, ತಾಯಿತ, ಮತ್ತೆ ಏನೋ ಏನೋ ಕೊಡುತ್ತಾರೆ. ಲಿಂಗಾಯತ ಸಂಸ್ಕಾರದ ಪ್ರಕಾರ ಶುದ್ಧ ತಪ್ಪು. ಇಲ್ಲಿ ನವೀಕರಣದ ಅವಶ್ಯವಿದೆ ಎನ್ನುತ್ತಾರೆ ಶ್ರೀಗಳು.

ಮಠಾಧೀಶರಾದವರೇ ನಂದಿ ಉಂಗೂರ ಧರಿಸುತ್ತಾರೆ. ಲಿಂಗಮಜ್ಜನ ಮಾಡುವಾಗ ಎಡಗೈ ಬೆರಳುಗಳಿಗೆ ನಂದಾ ಉಂಗೂರ ಧರಿಸಿ ಲಿಂಗಕ್ಕೆ ಮಜ್ಜನ ಮಾಡುತ್ತಾರೆ. ಇದು ಲಿಂಗಾಯತ ಸಂಸ್ಕಾರ ಅಲ್ಲ. ನವಗೃಹಗಳ ಪ್ರತಿಷ್ಠಾಪನೆ ಮಾಡುತ್ತಾರೆ. ಇದು ಲಿಂಗಾಯತ ಸಂಸ್ಕಾರ ಅಲ್ಲ. ಜುಟ್ಟು ಬಿಡುತ್ತಾರೆ, ಲಿಂಗಾಯತ ಮಠಾಧೀಶರೇ ಜುಟ್ಟಾ ಬಿಟ್ಟಿರುವುದನ್ನು ಕಾಣುತ್ತೇವೆ. ಇಲ್ಲಿ ನವೀಕರಣ ಅವಶ್ಯಕತೆ ಇದೆ ಎನ್ನುತ್ತಾರೆ ಶ್ರೀಗಳು.

ಮಹಾರಾಷ್ಟ್ರದ ಗಡಿ ಭಾಗದಲ್ಲಿ ಒಂದು ಪ್ರಸಿದ್ಧ ಲಿಂಗಾಯತ ಮಠವಿದೆ. ಒಂದು ವರ್ಷದ ಹಿಂದೆ ಅಲ್ಲಿ ಬೃಹತ ಯಜ್ಞ ಹೋಮ ಮಾಡಿದರು. ಅದರಲ್ಲಿ ಇಪ್ಪತ್ತೊಂದು ಡಬ್ಬಿ ತುಪ್ಪ ಹನ್ನೊಂದು ಚೀಲ ವಿಧವಿಧವಾದ ಧಾನ್ಯ ಹೋಮನಲ್ಲಿ ಸುರುವಿದರು. ಬೆಲೆಬಾಳುವ ಪಿತಾಂಬರ, ರೇಶ್ಮೆ ಬಟ್ಟೆಗಳು ಆಹುತಿಯಾದವು. ಇದರಲ್ಲಿ ಸಾವಿರಾರು ಸಂಖ್ಯೆಯಲ್ಲಿ ಲಿಂಗಾಯತ ಸದ್ಭಕ್ತರು ಭಾಗವಹಿಸಿದ್ದರು. ಯಜ್ಞ ಯಾರ ಹೋಮ ಹವನ ಮಾಡುವುದು ಲಿಂಗಾಯತ ಸಂಸ್ಕಾರವಿಲ್ಲ. ಇಲ್ಲಿ ನವೀಕರಣ ಅವಶ್ಯವಿದೆ ಎನ್ನುತ್ತಾರೆ ಶ್ರೀಗಳು.

ವೇದಗಳು ಆಗಮಗಳು ನಮ್ಮ ನಿಜವಾದ ಧರ್ಮ ಗ್ರಂಥಗಳು ಎಂದು ಕೆಲವು ಮಠಾಧೀಶರು ಹೇಳುತ್ತಾರೆ. ಆದರೆ ಲಿಂಗಾಯತ ಸಂಸ್ಕಾರ ಹು ಟ್ಟಿದ್ದು ವೇದ ಆಗಮ ವಿರುದ್ಧ ಎಂಬುದು ಮರೆಯಬಾರದು. ವೇದಕ್ಕೆ ಒರೆಯ ಕಟ್ಟುವೆ. ಶಾಸ್ತ್ರಕ್ಕೆ ನಿಗಳನಿಕ್ಕುದೆ ಆಗಮದ ಮೂಗ

ಕೊಯ್ಯವೆ ಎಂದು ಬಸವಣ್ಣನವರು ಹೇಳಿದ್ದು ಇಲ್ಲಿ ಸ್ಮರಿಸಬಹುದು. ನಮ್ಮ ನಿಜವಾದ ಧರ್ಮಗ್ರಂಥ ಹನ್ನೆರಡನೆಯ ಶತಮಾನದಲ್ಲಿ ಉದಯವಾದ ಬಸವಣ್ಣನವರ ಶರಣರ ವಚನಗಳೇ ನಂತರ ಆ ಪರಂಪರೆಯಲ್ಲಿ ಬಂದ ಶರಣರ ವಚನಗಳು ಪೂರಕ (ರೆಫೆರೆನ್ಸ) ವಾಗಿರುತ್ತವೆ. ಗಟ್ಟಿ ಮನದಿಂದ ವಚನ ಸಾಹಿತ್ಯವೇ ನಮ್ಮ ಧರ್ಮ ಗ್ರಂಥವೆಂದು ತಿಳಿಯುವಂತೆ ಪ್ರಥಮ ನವೀಕರಣದ ಅವಶ್ಯಕತೆ ಇದೆ ಎನ್ನುತ್ತಾರೆ ಶ್ರೀಗಳು.

ರುದ್ರಾಭಿಷೇಕ, ಲಕ್ಷ ದೀಪೋತ್ಸವ, ಎಳೆನೀರು, ಜೇನುತುಪ್ಪ, ಹಾಲು, ಮೊಸರು, ಪಂಚಾಮೃತದಿಂದ ಲಿಂಗಕ್ಕೆ ಅಭಿಷೇಕ ಮಾಡಿ ಕೊಡಗಟ್ಟಲೆ ಹಾಲು ಮೊಸರು ನಾಶ ಮಾಡುತ್ತಾರೆ. ಇಷ್ಟಲಿಂಗಕ್ಕೆ ರೂಪ, ಪ್ರಾಣಲಿಂಗಕ್ಕೆ ರುಚಿ. ಭಾವಲಿಂಗಕ್ಕೆ ತೃಪ್ತಿ ಅರ್ಪಿಸಬೇಕೆಂಬುದ ಗಮನಿಸಬೇಕು. ಇಷ್ಟಲಿಂಗದ ಮೇಲೆ ಎರೆಯುವುದು ತಪ್ಪಾಗುತ್ತದೆ. ಇಷ್ಟಲಿಂಗಕ್ಕೆ ರೂಪ ಮಾತ್ರ ತೋರಿಸಬೇಕು. ತಮ್ಮೊಳಗಿರುವ ಪ್ರಾಣಲಿಂಗ ರೂಚಿ ನೋಡುತ್ತದೆ. ನಮ್ಮೊಳಗಿರುವ ಭಾವಲಿಂಗ ತೃಪ್ತಿ ಹೊಂದುತ್ತದೆ. ಇದು ನಿಜವಾದ ಲಿಂಗಾಯತ ಸಂಸ್ಕಾರ ಎನ್ನುತ್ತಾರೆ ಶ್ರೀಗಳು. ಈ ದಿಶೆಯಲ್ಲಿ ನವೀಕರಣವಾಗಬೇಕು. ಜನನ ಸೂತಕ ಮುರಣ ಸೂತಕ ಮುಂತಾದ ಅನೇಕ ಸೂತಕ ಪಾಲಿಸಬಾರದು. ಲಿಂಗಾಯತರು ಕೋಳಿ, ಕುರಿ ಮುಂತಾದವುಗಳ ಬಲಿ ಕೊಡುತ್ತಾರೆ ಇಲ್ಲಿಯೂ ನವೀಕರಣ ಅವಶ್ಯವಿದೆ.

ಲಿಂಗಾಯತ ಧರ್ಮದಲ್ಲಿ ಗರ್ಭದಲ್ಲಿ ಮಗುವಿದ್ದಾಗಲೇ ಎಂಟು ತಿಂಗಳಲ್ಲಿ ಲಿಂಗ ಕಟ್ಟುವ ವಿನೂತನ ಸಂಸ್ಕಾರ ಇದೆ. ಅಲ್ಲಿ ತಾಯಿಯ ಮೂಲಕ ಮಗುವಿಗೆ ಆಹಾರ, ನೀರು, ಗಾಳಿ ಎಲ್ಲವೂ ಹೋದಂತೆ. ಉತ್ತಮ ಆಚಾರ ಸಂಸ್ಕಾರವೂ, ಬಹಳ ಮುಖ್ಯವಾಗಿರುತ್ತವೆ. ಬಹುಶಃ ಯಾವ ಧರ್ಮದಲ್ಲಿಯೂ ಕಾಣದ ವಿಶಿಷ್ಟವಾದ ವೈಜ್ಞಾನಿಕ ಸಂಸ್ಕಾರ ಇಲ್ಲಿ ಕಾಣುತ್ತೇವೆ. ಲಿಂಗಾಯತ ಸಂಸ್ಕಾರದಂತೆ ವಚನಗಳ ಮೂಲಕ ಗುರು ಮೂರ್ತಿ ಕ್ರಿಯಾಮೂರ್ತಿ ನಡೆಸಿಕೊಡುತ್ತದೆ. ಅರಿವು ಆಚಾರ ಅನುಭಾವವಿದ್ದವನೇ ಜಂಗಮ. ಜಾತಿ ಮುಖ್ಯವಲ್ಲ, ಜ್ಯೋತಿ ಮುಖ್ಯ. ಗುರು ಜಂಗಮ ಅರ್ಹತೆಯದೇ ವಿನಃ ಜಾತಿ ಮುಖ್ಯದಲ್ಲ. ಯಾರಲ್ಲಿ ಅರಿವು ಇದೆಯೋ, ಆಚಾರ ಅನುಭವ ಇದೆಯೋ, ಅವರೆಲ್ಲ ಸಂಸ್ಕಾರ ನಡೆಸಿಕೊಡಲು ಬರುತ್ತದೆ. ಇದು ಬರುವಂತೆ ಮಾಡಬೇಕು. ಹೆಣ್ಣು ಮಕ್ಕಳೂ ಗುರು ಜಂಗಮರಾಗಿ ಸಂಸ್ಕಾರ ನಡೆಸಿಕೊಡಲು ಬರುತ್ತದೆ ಎಂಬುದನ್ನು ಗಮನಿಸಬೇಕು. ಇದು ಬೃಹತ್ತಾಗಿ ಆಗುವಂತೆ, ಬೆಳೆಯುವಂತೆ ಮಾಡುವತ್ತ ನವೀಕರಣದ ಅವಶ್ಯಕತೆ ಇದೆ.

ಇದೇ ರೀತಿ ಗೃಹ ಪ್ರವೇಶ (ಗುರು ಪ್ರವೇಶ), ನಾಮಕರಣ, ಲಿಂಗ ದೀಕ್ಷೆ, ಕಲ್ಯಾಣ ಮಹೋತ್ಸವ, ನಿಶ್ಚಿತಾರ್ಥ ಕಾರ್ಯಕ್ರಮ, ಶ್ರೀಮಂತ ಕಾರ್ಯ, ಅಂಗಡಿ ಪೂಜೆ, ಜಂಗಮ ಸಂಸ್ಕಾರ, ಲಿಂಗೈಕ್ಯ ಸ್ಮರಣೋತ್ಸವ, ಅಂತ್ಯಕ್ರಿಯಾ ವಿಧಾನ ಮುಂತಾದ ಅನೇಕ ಸಂಸ್ಕಾರಗಳು

ಬರುತ್ತವೆ. ಸಂಸ್ಕಾರಗಳಲ್ಲಿ ವೈದಿಕತೆ ಬೆರೆತುಕೊಂಡಿದೆ. ಗೊಜಲು ಗೋಜಲಾಮಯವಾಗಿದೆ. ಅದಕ್ಕೆ ಶುದ್ಧೀಕರಣ ನವೀಕರಣ ಮಾಡಬೇಕಾಗಿದೆ.

"ಹಳೆ ಬೇರು ಹೊಸ ಚಿಗುರು

ಕೂಡಿದಲು ಮರ ಸೊಬಗು".

ಎಂಬ "ಡಿ.ವಿ.ಜಿ." ಯವರ ವಾಣಿಯಂತೆ ಬಸವಣ್ಣನವರ ಮೂಲ ಸಿದ್ಧಾಂತಕ್ಕೆ ಧಕ್ಕೆ ಬರಲಾರದಂತೆ ಆಧುನಿಕ ಈ ವಿಜ್ಞಾನ ಮಾನವನಿಗೆ ಎಷ್ಟು ಬೇಕೋ ಅಷ್ಟು ಪ್ರಗತಿಪರವಾಗಿ ವೈಚಾರಿಕವಾಗಿ ಸಂಸ್ಕಾರಗಳ ಸಂಸ್ಕಾರವಾಣಿ ಸಂಸ್ಕಾರಗಳ ನವೀಕರಣವಾಗಬೇಕು. ವಚನಗಳ ಮೂಲ ಸಿದ್ಧಾಂತಕ್ಕೆ ಧಕ್ಕೆ ಬರಬಾರದು.

ಹೀಗೆ ಬಂದಲ್ಲಿ ನೂರಾರು ಇಂಥ ಉದಾಹರಣೆಗಳನ್ನು ಹೇಳಬಹುದು. ಒಟ್ಟಾರೆ ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಯಾವುದು ಬೇಡ ಎಂದು ಹೊರ ಹಾಕಿದ್ದರೋ ಕಸಗುಡಿಸಿ ಸ್ವಚ್ಛ ಮಾಡಿದ್ದರೋ ಆ ವೈದಿಕ ಕಸವೆಲ್ಲವನ್ನು ತಂದು ಮತ್ತೆ ಒಳಗೆ ತುಂಬಿಕೊಂಡಿದ್ದೇವೆ. ಬೆಳಕು ಓಡಿಸಿ ಕತ್ತಲೆ ಮಾಡಿಕೊಂಡಿದ್ದೇವೆ. ಇಂದು ಮತ್ತೆ ಬೆಳಕು ಮಾಡಿಕೊಳ್ಳುವ ಇಂದಿನ ಅಗತ್ಯ ಬಹಳ ಇದೆ.

ನವೀಕರಣಕ್ಕೆ ಕೆಲವು ಸಲಹೆಗಳು :

- ಬಸವಣ್ಣನವರೇ ನಮ್ಮ ಧರ್ಮದ ಮೂಲ ಗುರು. ಮಂತ್ರ ಪುರುಷ ಎಂದು ಗಟ್ಟಿಯಾಗಿ ನಂಬಬೇಕು. ಧರ್ಮದ ಗುರುಗಳು ನೂರಾರು ಇರಲಿ. ಧರ್ಮಕ್ಕೆ ಮಾತ್ರ ಬಸವಣ್ಣನವರು ಒಬ್ಬರೇ ಗುರು ಎಂದು ಮನಿಸಬೇಕು.
- ವಚನ ಸಾಹಿತ್ಯವೇ ನಮ್ಮ ಧರ್ಮಗ್ರಂಥ ಎಂದು ಪೂರ್ಣವಾಗಿ ನಾವು ಸ್ವೀಕರಿಸಬೇಕು. ಅಥಣಿ ಶಿವಯೋಗಿಗಳ ಗೌರವ ಕೊಟ್ಟಂತೆ ನಾವೆಲ್ಲ ಮಠಾಧೀಶರು ವಚನ ಸಾಹಿತ್ಯಕ್ಕೆ ಅವರ ಗೌರವ ಕೊಡಬೇಕು. ಕ್ರೈಸ್ತರಿಗೆ ಬೈಬಲ ಇದ್ದಂತೆ, ಇಸ್ಲಾಮಿಯರಿಗೆ ಖುರಾನ ಇದ್ದಂತೆ, ನಮಗೆ ವಚನ ಸಾಹಿತ್ಯವಿದೆ ಎಂದು ತಿಳಿಯಬೇಕು.
- ಪ್ರತಿಯೊಂದು ಲಿಂಗಾಯತ ಸಂಸ್ಕಾರ ನಡೆಸುವಾಗ ಧರ್ಮಗುರು ಬಸವಣ್ಣನವರ ಭಾವಚಿತ್ರ ಎದ್ದು ಕಾಣುವಂತೆ ಇಡಬೇಕು. ಸಂಸ್ಕಾರ ತೆಗೆದುಕೊಳ್ಳುವವರು. ಸಂಸ್ಕಾರ ನೆರವೇರಿಸಿಕೊಡುವವರು ಪ್ರಥಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಗೌರವ ಸಲ್ಲಿಸಬೇಕು. ಪುಷ್ಪಾರ್ಪಣೆ ಮೂಲಕ ಬಸವ ವಚನ ಪಠಣದ ಮೂಲಕ ಗೌರವ ಸಲ್ಲಿಸಿಯೇ ಸಂಸ್ಕಾರ ಪ್ರಾರಂಭಿಸಬೇಕು.

- ಲಿಂಗಾಯತ ಸಮ್ಮೇಳನ ನಡೆಯುತ್ತವೆ ಶರಣ ಸಾಹಿತ್ಯ ಸಮ್ಮೇಳನ ನಡೆಯುತ್ತವೆ. ಆದರೆ ಈ ಬಸವಣ್ಣನವರ ಭಾವಚಿತ್ರದ ನೆನಪೇ ಯಾರಿಗೂ ಇರುವುದಿಲ್ಲ. ಇದು ಮದು ಮಗನನ್ನು ಬಿಟ್ಟು ಮದುವೆಗೆ ಹೋದಂತೆ ಹಾಸ್ಯಾಸ್ಪದ. ಏಕೆಂದರೆ ಇಂದು ಯಾವುದೇ ಸಣ್ಣ ಸಭೆ ಇರಲಿ ದೊಡ್ಡ ಸಭೆ ಇರಲಿ ಮೊದಲಿಗೆ ಗುರುಬಸವಣ್ಣನವರ ಭಾವಚಿತ್ರಕ್ಕೆ ಗೌರವ ಸಲ್ಲಿಸಬೇಕು.

- ಲಿಂಗಾಯತ ಸಂಸ್ಕಾರಗಳ ಅಥವಾ ಲಿಂಗಾಯತ ಧರ್ಮದ ಯಾವುದೇ ಆಮಂತ್ರಣ ಪತ್ರಿಕೆ ಇರಲಿ. ಅದರ ಮೇಲೆ "ಓಂ ಶ್ರೀ ಗುರುಬಸವ ಲಿಂಗಾಯನಮಃ" ಕಡ್ಡಾಯವಾಗಿ ಇರಬೇಕು. ಬಸವಣ್ಣನವರ ಭಾವಚಿತ್ರ ಎತ್ತರದಲ್ಲಿ ಇರಬೇಕು. ಕೆಲವರು ತಮ್ಮ ಶ್ರೀಮಠದ ಗುರುಗಳ ಹೆಸರಿನಿಂದ .... ಪ್ರಸನ್ನ ಎಂದು ಬರೆಯುತ್ತಾರೆ. ಇದು ತಪ್ಪು ಬಹುದೇವೋಪಾಸನೆಯಿಂದ ಲಿಂಗಾಯತ ಧರ್ಮಕ್ಕೆ ಅಪಾಯವಾದಂತೆ ಬಹು ಗುರುಗಳ ಉಪಾಸನೆಯಿಂದಲೂ ಲಿಂಗಾಯತ ಧರ್ಮಕ್ಕೆ ಅಪಾಯವಿದೆ ಎಂಬುದನ್ನು ನಾವು ಮರೆಯಬಾರದು.

- ಕ್ರೈಸ್ತ ಧರ್ಮದಲ್ಲಿ ಕ್ರೈಸ್ತ ಧರ್ಮ ಪಾಲಿಸುವ ಬೈಬಲನ್ನು ಅಭ್ಯಾಸ ಮಾಡಿಸುವ ಕಾಲೇಜುಗಳಿಗೆ ಆದರೆ ಲಿಂಗಾಯತ ಧರ್ಮದ ಅಧ್ಯಯನ ಮಾಡುತ್ತೇನೆ ಅನ್ನುವ ಆಶಕ್ತರಿಗೆ ಹಂಬಲಿಸುವವರಿಗೆ ಶಿಸ್ತಿನಿಂದ ಕಲಿಸುವ ಕಾಲೇಜುಗಳಿಲ್ಲ. ಒಂದು ಸಲಹೆ ಎಂದರೆ ಇಂಥ ಕಾಲೇಜು ಯಾವನೇ ಒಬ್ಬ ಮಠಾಧೀಶರು ನಡೆಸುವಂತೆ ಇರಬಾರದು. ಬಸವನಿಷ್ಠರ ಮಠಾಧೀಶರಲ್ಲಿ ಸೇರಿ ಮಾಡಿದಾಗ ಮಾತ್ರ ಅದಕ್ಕೆ ಸಾರ್ವತ್ರಿಕ ರೂಪ ಬರುತ್ತದೆ. ಈಗ ಚಿತ್ರದುರ್ಗ ಮಠದಲ್ಲಿ ಹೀಗೆ ಶಿಕ್ಷಣ ನೀಡುವುದನ್ನು ಕಾಣುತ್ತೇವೆ. ಅಲ್ಲಿ ಕೆಲವರು ಬೇರೆ ಮಠಕ್ಕೆ ಅಧಿಕಾರವಾದಾಗ ಅದು ನನ್ನದೆ ಮಠ ಎನ್ನುವ ಸರ್ವಾಧಿಕಾರ ಬೆಳೆಯುತ್ತದೆ. ಇದು ಬಹಳ ಅಪಾಯ. ಅದರ ಬದಲು ಎಲ್ಲ ಮಠಾಧೀಶರು ಸೇರಿ ತೆರೆದರೆ ಅವಕ್ಕೆ ಮಹತ್ವ ಬರುತ್ತದೆ. ಅವರಲ್ಲಿ ಎಲ್ಲರಿಗೂ ಪ್ರವೇಶಾವಕಾಶ ದೊರೆಯಬೇಕು.

- ಎಲ್ಲಿ ಬಸವನಿಷ್ಠ ಮಠಾಧೀಶರ ಒಂದು ಒಕ್ಕೂಟವಿದ್ದಬೇಕು. ಅದರ ಮೂಲಕ ಬಸವತತ್ವದ ಕಾರ್ಯಗಳು ನಡೆಯಲು ಅನುಕೂಲವಾಗುತ್ತದೆ. ಪ್ರತಿಯೊಬ್ಬ ಮಠಾಧೀಶರು ಪ್ರತ್ಯೇಕ ಮಾಡಿದರೆ, ಪುನರಾವರ್ತನೆ ಚರ್ವಿತ ಚರ್ವಣವಾಗುತ್ತದೆ. ಬಸವನಿಷ್ಟ ಮಠಾಧೀಶರ ಒಕ್ಕೂಟ ರಚನೆ ಈಗ ತುರ್ತಾಗಿ ಆಗಬೇಕಿದೆ.

- ಹರೆ ರಾಮ ಹರೆ ಕೃಷ್ಣ ಪಂಥದವರಂತೆ ಅಥವಾ ಗೀತಾ ಪ್ರೆಸ್ ಗೋರಖಪುರದವರಂತೆ ಅತಿ ಅತಿ ಕಡಿಮೆ ಬೆಲೆಯಲ್ಲಿ ಮಾನಸಗ್ರಂಥ ಪ್ರಕಟಿಸಿ ಹಂಚುವುದು. ಸದ್ಯದಲ್ಲಿ ಎಲ್ಲ

ಮಠಾಧೀಶರೂ ಸೇರಿ ಬಸವಣ್ಣನವರ ಷಟಸ್ಥಲ ವಚನಗಳ ಒಂದು ಲಕ್ಷಪ್ರತಿ ಪ್ರಕಟಿಸಿ ಐದು ರೂಪಾಯಿಗೆ ಒಂದರಂತೆ ಕೊಡಬೇಕು. ಇಂಥ ಅನೇಕ ಯೋಜನೆಯನ್ನು ಹಾಕಿಕೊಳ್ಳುವುದು.

- ಗಡಿಭಾಗದ ನಮ್ಮ ಮಹಾರಾಷ್ಟ್ರದ ಬಂಧುಗಳಿಗೆ ಆಂಧ್ರದ ಬಂಧುಗಳಿಗೆ ನಿಜವಾದ ಲಿಂಗಾಯತ ಸಂಸ್ಕಾರದ ಬಗ್ಗೆ ಪರಿಚಯ ಎ ಾಡಿಕೊಡುವ ಅಗತ್ಯವಿದೆ. ಅದಕ್ಕೆ ಮರಾಠಿಯಲ್ಲಿ ತೆಲುಗಿನಲ್ಲಿ ಹಿಂದಿಯಲ್ಲಿ ವಚನ ಗ್ರಂಥಗಳು ಕನ್ನಡದಲ್ಲಿ ಉತ್ತಮ ಗ್ರಂಥಗಳು ಅನುವಾದಿಸಿ ಕಡಿಮೆ ಬೆಲೆಯಲ್ಲಿ ಪ್ರಕಟಿಸಿ ಪ್ರಸಾರ ಮಾಡುವದು ಪ್ರತಿ ತಾಲೂಕಿಗೆ ಒಂದರಂತೆ ವರ್ಷದಲ್ಲಿ ಬೇಸಿಗೆ ರಜೆ, ದಸರಾ ರಜೆಯಲ್ಲಿ ಲಿಂಗಾಯತ ಶಿಬಿರಗಳು ನಡೆಯುವಂತೆ ಆಯೋಜಿಸುವದು.

ಒಟ್ಟಾರೆ ಲಿಂಗಾಯತ ಸಂಸ್ಕಾರಗಳ ನವೀಕರಣ ಧರ್ಮ ಗುರು ಬಸವಣ್ಣ, ಧರ್ಮಗ್ರಂಥ ವಚನ ಸಾಹಿತ್ಯ ಈ ಹಳಿಯ ಮೇಲೆ ನವೀಕರಣ ಟ್ರೇನು ಬಿಡಿಸಬೇಕು. ಆಗ ಖಂಡಿತಾ ಯಶಸ್ಸು ಪ್ರಾಪ್ತಿಯಾಗುತ್ತದೆ. ಅದಕ್ಕೆ ತನು ಮನ ಭಾವದ ಮೂಲಕ ಪ್ರತಿಯೊಬ್ಬರು ಕಳಕಳಿಯಿಂದ ದಾಸೋಹ ಮಾಡಬೇಕು.

ವಚನ ಸಂಗೀತಕ್ಕೆ ಪ್ರಾಮುಖ್ಯತೆ :

ಭಾಲ್ಕಿಯ ಪೂಜ್ಯ ಚನ್ನಬಸವ ಪಟ್ಟದ್ದೇವರು ೧೯೯೯ ರ ಏಪ್ರೀಲ್ ೨೨ ರಂದು ಲಿಂಗೈಕ್ಯರಾದರು. ಅಂದಿನಿಂದ ಅವರ ಸ್ಮರಣೋತ್ಸವ ಅವರ ಕರಸರಜಾತರಾದ ಮಠದ ಪಟ್ಟಾಧ್ಯಕ್ಷರಾದ ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರ ದಿವ್ಯ ನೇತೃತ್ವದಲ್ಲಿ ಬೃಹತ್ ಪ್ರಮಾಣದಲ್ಲಿ ಬಸವಧರ್ಮ ಮಹಾಸಮ್ಮೇಳನ ರೂಪದಲ್ಲಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ವಿಶೇಷವಾಗಿ ಕಲಾವಿದರಿಗೆ ಪ್ರಮುಖವಾಗಿ ಗುರುತಿಸಿ ಅವರಿಗೆ ಸನ್ಮಾನಿಸುವ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ.

ಪೂಜ್ಯ ಪಂಚಾಕ್ಷರಿ ಗವಾಯಿಗಳವರು ಡಾ. ಮಲ್ಲಿಕಾರ್ಜುನ ಮನ್ಸೂರ, ಪಂ. ಬಸವರಾಜ ರಾಜಗುರು ಮತ್ತು ಶ್ರೀ ಸಿದ್ಧರಾಮ ಜಂಬಲದಿನ್ನಿಯವರು ವಚನಗಳನ್ನು ಭಾವ ತುಂಬಿ ಹಾಡಿದರು. ಶ್ರೀ ಜಂಬಲದಿನ್ನಿಯವರು ಅವುಗಳಿಗೊಂದು ಹೊಸ ಅತ್ಯುತ್ತಮ ಮಾದರಿಯನ್ನು ಒದಗಿಸಿದರು.

ಈ ದಿಸೆಯಲ್ಲಿ ಶ್ರೀ ಸಿದ್ಧರಾಮ ಜಂಬಲದಿನ್ನಿಯವರ ಕೊಡಗೆ ಸದಾ ಚಿರಸ್ಮರಣೀಯವಾಗಿದೆ. ಆದ್ದರಿಂದ ಭಾಲ್ಕಿಯ ಪೂಜ್ಯ ಶ್ರೀಗಳು ಲಿಂ.ಡಾ.ಚನ್ನಬಸವ ಪಟ್ಟದೇವರು ಪ್ರಶಸ್ತಿಯನ್ನು ಲಿಂಗೈಕ್ಯ ಸಿದ್ಧರಾಮ ಜಂಬಲದಿನ್ನಿ ಅವರ ಸ್ಮರಣೆಯಲ್ಲಿ ಉತ್ತಮ ವಚನ ಸಂಗೀತಕಾರರಿಗೆ ಪ್ರತಿ ವರ್ಷ ನೀಡಲು ಯೋಜನೆ ರೂಪಿಸಿದ್ದಾರೆ.

೧. ಶ್ರೀ ಶೇಷಪ್ಪ ಗವಾಯಿಗಳು ಬಸವಕಲ್ಯಾಣ

೨. ಶ್ರೀಮತಿ ತಾರಾಬಾಯಿ ಎಸ್.ಜಂಬಲದಿನ್ನಿ ಗುಲಬರ್ಗಾ

೩. ಶ್ರೀ ಬಿ.ಎಸ್.ವಠಾರ್ ಹುಮನಾಬಾದ

೪. ಶ್ರೀ ಈಶ್ವರಪ್ಪ ಪಾಂಚಾಲ

೫. ಶಿವಾನಂದ ಅವಟಿ ಗವಾಯಿಗಳ ಗೊಬ್ಬುರ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಪ್ರಶಸ್ತಿಯು ರೂ. ೧೦,೦೦೦/– ನಗದು ಪುರಸ್ಕಾರ ಮತ್ತು ಪ್ರಶಸ್ತಿ ಫಲಕ ಜೊತೆಗೆ ಶಾಲು ಫಲ ಪುಷ್ಪ ಒಳಗೊಂಡಿರುತ್ತವೆ. ಪ್ರತಿ ವರ್ಷ ಎಪ್ರೀಲ್ ೨೨ ರಂದು ಈ ಪ್ರಶಸ್ತಿ ನೀಡಲಾಗುತ್ತಿದೆ.

ಬೀದರ ಶ್ರೀ ಜಗನ್ನಾಥ ನಾನಕೇರಿ, ಶ್ರೀ ಈಶ್ವರಪ್ಪ ಪಾಂಚಾಳ, ಶ್ರೀ ಸಂಗಮೇಶ ಡೋಣಗಾಪುರ, ಕುಮಾರಿ ಕವಿತಾ ಮಠಪತಿ, ಕು. ಬಸವರಾಜೇಶ್ವರಿ ಪಾಟೀಲ, ಕು. ಸೋನಾಕ್ಷಿ ಪಾಟೀಲ, ಭಾಲ್ಕಿಯ ಕು. ಸುವರ್ಣಾ ರಾಠೋಡ, ಸಂಗಮದ ಪೂಜ್ಯ ಮಹಾದೇವಮ್ಮ ಮುಂತಾದವರು ವಚನಗಳಿಗೆ ರಾಗ ಸಂಯೋಜಿಸಿ ಹಾಡುವಲ್ಲಿ ಮುಂಚೂಣಿಯಲ್ಲಿದ್ದಾರೆ. ಹಿರೇಮಠ ಸಂಸ್ಥಾನ ಭಾಲ್ಕಿಯಲ್ಲಿ ಶ್ರೀ ಶಿವಾನಂದ ಅವಟಿ ಗವಾಯಿಗಳು ಮತ್ತು ಶ್ರೀ ಲೋಕನಾಥ ಚಾಂಗಲೇರ ಇಬ್ಬರೂ ಅಂಥ ಕಲಾವಿದರಾಗಿದ್ದಾರೆ. ಮಠದ ಆಸ್ಥಾನ ಕಲಾವಿದರಾಗಿದ್ದಾರೆ. ಶರಣರ ವಚನಗಳಿಗೆ ರಾಗ ಸಂಯೋಜಿಸಿ ಹಾಡುತ್ತಾರೆ.

ಅನೇಕ ಯುವ ಕಲಾವಿದರಿಗೆ ಮಾರ್ಗದರ್ಶನ ನೀಡಿ ಬೆಳೆಸುತ್ತಿದ್ದಾರೆ. ಕುಮಾರ ಸಿದ್ದು ಕಟ್ಟಿಮನಿ ಮತ್ತು ಕುಮಾರ ಚಿರಂಜೀವಿ ಕಟ್ಟಿಮನಿ ಇವರ ಗರಡಿಯಲ್ಲಿ ಚೆನ್ನಾಗಿ ತಯಾರಾಗುತ್ತಿದ್ದಾರೆ. ಸಿದ್ದು ಕಟ್ಟಿಮನಿ ವಚನ ಗಾಯನದಲ್ಲಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಶ್ರೀಮಠಕ್ಕೆ ಕೀರ್ತಿ ತಂದ ವಿದ್ಯಾರ್ಥಿಯಾಗಿದ್ದಾನೆ. ಚೇತನ ಬೆಲ್ಲಾಳೆ ಜನಪದ ಗೀತೆ ಹಾಡಿ ರಾಜ್ಯಮಟ್ಟದಲ್ಲಿ ಪಶಸ್ತಿ ಗಳಿಸಿದ ಇನ್ನೋರ್ವ ವಿದ್ಯಾರ್ಥಿಯಾಗಿದ್ದಾನೆ.

ಶ್ರೀಮಠದಿಂದ ಹೊರತಂದ ಧ್ವನಿಸುರುಳಿಗಳು :

ಹಿರೇಮಠ ಸಂಸ್ಥಾನ ಭಾಲ್ಕಿ ವತಿಯಿಂದ ಪೂಜ್ಯ ಚನ್ನಬಸವ ಪಟ್ಟದ್ದೇವರು ಕುರಿತಾಗಿ ರಚನೆಯಾದ ಕವಿತೆಗಳನ್ನು ಸಂಗೀತಕ್ಕೆ ಅಳವಡಿಸಿ ವಿವಿಧ ಕಲಾವಿದರು ಹಾಡಿದ ಧ್ವನಿ ಸುರುಳಿಗಳು (ಕ್ಯಾಸೆಟ) ಹೊರತರಲಾಗಿದೆ. ಇಲ್ಲಿಯವರೆಗೆ ನಾಲ್ಕು ಕ್ಯಾಸೆಟಗಳು ಹೊರಬಂದಿವೆ. ಡಾ.ಶಾಂತರಸ ಮತ್ತು ಇನ್ನಿತರ ಹಿರಿಯ ಸಾಹಿತಿಗಳಿಂದ ರಚಿತವಾದ ಕವಿತೆಗಳಿಗೆ ಮೊಟ್ಟಮೊದಲ ಸಂಗೀತ ಜೋಡಿಸಿ ಹಾಡಿದ ಕ್ಯಾಸೆಟ ಹೊರತಂದವರಲ್ಲಿ ಬೆಳಗಾವಿಯ ಶ್ರೀಮತಿ ಶಾಂತಾದೇವಿ ಗುಂಜಾಳವರು ಮೊದಲಿಗರು ಆರ್ಥಿಕ ನೆರವು ಅವರದೆ ಒದಗಿಸಿದ್ದಾರೆ. ಗುಲಬರ್ಗಾದ ಶ್ರೀ ಅಮರ ಹಿರೇಮಠ ಸಂಗೀತ ಅಳವಡಿಸಿದ್ದಾರೆ. ಎಲ್ಲಾ ಕವಿತೆಗಳು ಪೂಜ್ಯ ಮಹಾದೇವಮ್ಮನವರೇ

ರಚಿಸಿದ್ದಾರೆ. ಬಹುತೇಕ ಹಾಡುಗಳು ಅವರೇ ಹಾಡಿದ್ದಾರೆ. ಶ್ರೀ ಜಗನ್ನಾಥ ಚೆಂಗಡಿ ತಬಲಾ ಸಾಥಿ, ಶ್ರೀ ರವಿ ಸ್ವಾಮಿ ಗೋಟೂರ ಢೋಲಕ ಸಾಥಿ ಮತ್ತು ಶ್ರೀ ಕೃಷ್ಣಾ ರಾಠೋಡ ಮಾರ್ಗದರ್ಶನ ಮಾಡಿದ್ದಾರೆ. ನಂತರದಲ್ಲಿ ಶ್ರೀ ಮಲ್ಲಿಕಾರ್ಜುನ ನಾಗಮಾರಪಳ್ಳಿಯವರು ಕಾಪಾಡು ಚನ್ನಬಸವ ಹೆಸರಿನ ಕ್ಯಾಸೆಟ ಹೊರತಂದಿದ್ದಾರೆ. ಎಲ್ಲಾ ಗೀತೆಗಳನ್ನು ಅವರೇ ರಚಿಸಿ ಒಂದೆರಡು ಗೀತೆ ಅವರೇ ಹಾಡಿದ್ದಾರೆ. ಆರ್ಥಿಕ ನೆರವು ಅವರೇ ಭರಿಸಿದ್ದಾರೆ.

ಹಿರೇಮಠದಲ್ಲಿರುವ ನೀಲಾಂಬಿಕಾ ಸಂಗೀತ ಪಾಠಶಾಲೆಯ ಪ್ರಾಚಾರ್ಯ ಶ್ರೀ ಶಿವಾನಂದ ಅವಟಿ ಗವಾಯಿಗಳು ಒಂದೆರಡು ಹಾಡುಗಳನ್ನು ಹಾಡಿದ್ದಾರೆ. ಈ ಕ್ಯಾಸೆಟ್ ತುಂಬಾ ಒಳ್ಳೆಯ ರೀತಿಯಿಂದ ತಯಾರಾಗಿದೆ ಎಂಬುದನ್ನು ಗದಗ ಶ್ರೀಗಳಿಂದ ಮೊದಲ್ಗೊಂಡು ಬಹಳಷ್ಟು ಜನರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ "ಭಾಲ್ಕಿಯ ಈ ಮಣ್ಣಿನ ಪುಣ್ಯ" ಎಂಬ ಹಾಡು ಎಲ್ಲರೂ ಮೆಚ್ಚಿದ್ದಾರೆ.

ಅಥಣೀಯ ಮೋಟಗಿ ಮಠದ "ಪೂಜ್ಯ ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ" ಅವರ ಮಾರ್ಗದರ್ಶನದಲ್ಲಿ ಭಕ್ತಿ ಗೀತಾಂಜಲಿ ಕ್ಯಾಸೆಟ್ ಹೊರತರಲಾಗಿದೆ. ಹಿರೇಮಠ ಭಾಲ್ಕಿ ಶಿಷ್ಯರಾದ ಶ್ರೀ ಸುಜೀತ ಪಾಟೀಲ (ಅಮೇರಿಕಾ) ದಂಪತಿಗಳು ಆರ್ಥಿಕ ನೆರವು ಒದಗಿಸಿದ್ದಾರೆ. ಶ್ರೀ ಶಿವಾನಂದ ಗವಾಯಿಗಳು, ಶ್ರೀ ಜಗನ್ನಾಥ ಬಿರಾದಾರ ಬೀರಿ, ಅಕ್ಕನ ಬಳಗ ಶರಣೆಯರು ಮತ್ತು ಭಾಲ್ಕಿಯ ಹಿರೇಮಠದ ಸಂಪರ್ಕ ಇಟ್ಟುಕೊಂಡಿರುವ ಸಂಗೀತ ಕಲಾ ಕಲಾವಿದರು ಹಾಡಿದ ಭಕ್ತಿಗೀತೆಗಳ ಕ್ಯಾಸೆಟಗಳು ಮತ್ತು ಸಿ.ಡಿ. ಹೊರತರುವ ಯೋಜನೆ ಇದೆ ಎಂದು ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು ಅನೇಕ ಸಂದರ್ಭದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಈ ರೀತಿ ಅನೇಕ ಕಲಾವಿದರಿಗೆ ಸಂಗೀತಕಾರರಿಗೆ ಪ್ರೋತ್ಸಾಹ ನೀಡಿ ಪೋಷಿಸಲಾಗುತ್ತಿದೆ.

ನೃತ್ಯ ರೂಪಕ ಪ್ರದರ್ಶನ :

ಈ ವಿದ್ಯಾಪೀಠದ ಅಡಿಯಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದ ಪ್ರಕಾರ ೨೮ ಶಾಲಾ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಶ್ರೀಮಠದಿಂದ ನಡೆಯುವ ವಿಶೇಷ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಚನಾಭಿನಯ ವಚನ ಗಾಯನ ಮತ್ತು ಬಸವಾದಿ ಶರಣರ ದಿವ್ಯ ಬದುಕು ಬೋಧನೆ ಕುರಿತಾದ ರೂಪಕಗಳು ಪ್ರದರ್ಶನ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡುವ ಮೂಲಕ ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆ ವ್ಯಕ್ತಪಡಿಸಲು ಉತ್ತೇಜನ ನೀಡಲಾಗುತ್ತಿದೆ.

ಪೂಜ್ಯ ಶ್ರೀಗಳು ಮಕ್ಕಳು ಪ್ರದರ್ಶನ ಮಾಡುವ ಎಲ್ಲಾ ಸಾಂಸ್ಕೃತಿಕ ಕಾರ್ಯಗಳನ್ನು ಆಸಕ್ತಿಯಿಂದ ವೀಕ್ಷಿಸುತ್ತಾರೆ. ಸೂಕ್ತ ಮಾರ್ಗದರ್ಶನ ಮಾಡುತ್ತಾರೆ. ಬಸವೇಶ್ವರ ಚೆನ್ನಬಸವಣ್ಣ, ಅಕ್ಕಮಹಾದೇವಿ, ಆಯ್ದಕ್ಕಿ ಮಾರಯ್ಯಾ, ಲಕ್ಕಮ್ಮ, ಶಿವಶರಣ ನನಯ್ಯ, ಸಮಗಾರ ಹರಳಯ್ಯ, ಕುಂಬಾರ ಗುಂಡಯ್ಯಾ, ಉರಿಲಿಂಗಪೆದ್ದಿ, ಜ್ಞಾನಪೀಠ ಪ್ರಶಸ್ತಿ ವಿಜೇತರು, ವರದಕ್ಷಿಣೆ

ವಿರೋಧಿಸುವ ದಹನ ಪರಿವರ್ತಿತ ಮುಂತಾದ ಅನೇಕ ರೂಪಕಗಳು ಮಕ್ಕಳು ಪ್ರದರ್ಶನ ಮಾಡಿದ್ದಾರೆ. "ಕೂಡಲಸಂಗಮದೇವಾ" ಎಂಬ ನೃತ್ಯರೂಪಕ ಬೆಂಗಳೂರಿನ ಸಿ. ಅಶ್ವಥ ಅವರ ನಿರ್ದೇಶನದಲ್ಲಿ ಬೀದರಿನ ರಂಗಮಂದಿರದಲ್ಲಿ ಪ್ರಥಮ ಬಾರಿ ಪ್ರದರ್ಶನಗೊಂಡಿತ್ತು. ಅದನ್ನು ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿ ಶಾಲೆಯ ಶಿಕ್ಷಕ ಶಿಕ್ಷಕಿಯರು ಯಥಾವತ್ತಾಗಿ ೨೦೦೪ ಡಿಸೆಂಬರ್ ೨೨ ರಂದು ಚನ್ನಬಸವಾಶ್ರಮದಲ್ಲಿ ಪ್ರದರ್ಶನ ನೀಡಿ ಜನ ಮೆಚ್ಚುಗೆಗಳಿಸಿದ್ದಾರೆ.

ಬಸವಕಲ್ಯಾಣ ತಾಲ್ಲೂಕಿನ ಬೇಲೂರು ಗ್ರಾಮದಲ್ಲಿರುವ ಉರಿಲಿಂಗ ಪೆದ್ದಿ ಮಠದಲ್ಲಿ ಜರುಗಿದ ಭವ್ಯ ಸಮಾರಂಭದಲ್ಲಿ ಹಿರೇಮಠದ "ಶ್ರೀ ಹಾನಗಲ್ಲ ಕುಮಾರೇಶ್ವರ" ಪ್ರಸಾದ ನಿಲಯದ ವಿದ್ಯಾರ್ಥಿಗಳು ಉರಿಲಿಂಗ ಪೆದ್ದಿ ನಾಟಕ ಪ್ರದರ್ಶನ ನೀಡಿ ಜನ ಮೆಚ್ಚುಗೆ ಗಳಿಸಿದ್ದಾರೆ. ಭಾಲ್ಕಿಯ ಶ್ರೀ ಕುಂಭೇಶ್ವರ ದೇವಾಲಯದ ಆವರಣದಲ್ಲಿ ಜರುಗಿದ ಶರಣ ಕುಂಬಾರ ಗುಂಡಯ್ಯನವರ ಸ್ಮರಣೆಯೋತ್ಸವ ಸಮಾರಂಭದಲ್ಲಿ ದಿನಾಂಕಃ ೨೫-೬-೨೦೦೫ ರಂದು ಶರಣ ಕುಂಬಾರ ಗುಂಡಯ್ಯ ರೂಪಕವನ್ನು ಗುರುಕುಲದ ವಸತಿ ಶಾಲೆಯ ಶಿಕ್ಷಕ ಶಿಕ್ಷಕಿಯರು ಚೆನ್ನಾಗಿ ಪ್ರದರ್ಶನ ನೀಡಿದ್ದಾರೆ. ಕೇತಕ ದೇವಿ ಪಾತ್ರದಲ್ಲಿ ಶ್ರೀದೇವಿ ಕುಮಾರ ಅವರು ಉತ್ತಮ ಅಭಿನಯ ನೀಡಿದಕ್ಕಾಗಿ ಅಂದಿನ ಸಮಾರಂಭದಲ್ಲಿ ದಿವ್ಯ ಸನ್ನಿಧಾನ ವಹಿಸಿದ ಗದಗ ಜಗದ್ಗುರುಗಳು ಮೆಚ್ಚಿ ಆಶೀರ್ವದಿಸಿದರು. ಶ್ರೀ ಶಿವಪ್ರಕಾಶ ಕುಂಬಾರ ಕಬ್ಬೂರ ಅವರು ವೇಷ ಭೂಷಣಗಳ ವಿನ್ಯಾಸ ಚೆನ್ನಾಗಿ ನಿರ್ವಹಿಸಿದ್ದರು. ಬೀದರಿನ ಶ್ರೀ ಶಾಂತಪ್ಪ ದೇವರಾಯ ರೂಪಕದ ಮಾರ್ಗದರ್ಶನ ಮಾಡಿದ್ದಾರೆ.

ಹೀಗೆ ಮಕ್ಕಳ ಮತ್ತು ಶಿಕ್ಷಕ ಶಿಕ್ಷಕಿಯರ ಪ್ರತಿಭೆಗಳನ್ನು ಹೊರಹಾಕುವ ಮೂಲಕ ಕಲೆ ಮತ್ತು ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಪ್ರತಿ ವರ್ಷ ಶಾಲಾ ವಾರ್ಷಿಕೋತ್ಸವದಲ್ಲಿ ಎಲ್ಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಪ್ರೇರಣೆ ನೀಡಲಾಗುತ್ತಿದೆ. ನಿಧಾನವಾಗಿ ಸೊರಗಿ ಸಾಯುತ್ತಿರುವ ಮತ್ತೊಂದು ಜನಪದ ಕಲೆ ಭಜನೆ ಅರಮನೆಯ ಆಶ್ರಯ ತಪ್ಪಿರುವ ಕಲೆ, ಕಲಾವಿದರಿಗೆ ಹಿರೇಮಠ ಪೋಶಿಸುತ್ತಿರುವುದು ವಿಶೇಷ.

"ಅಕ್ಕನ ಬಳಗ" ಎಂಬ ಮಹಿಳೆಯರ ಸಂಘ ಮತ್ತು ಅಣ್ಣನ ಬಳಗ ಎಂಬ ಪುರುಷರ ಸಂಘ ಆರಂಭಿಸಿ ಜನಪದ ಕಲೆ, ಭಜನೆ ಉಳಿಸಿ ಬೆಳೆಸಲಾಗುತ್ತಿದೆ. ಪ್ರತಿ ವರ್ಷ ಎಪ್ರೀಲ್ ತಿಂಗಳಲ್ಲಿ ವಿವಿಧ ಭಜನೆ ತಂಡಗಳಿಗೆ ಆಹ್ವಾನಿಸಿ ಸ್ಪರ್ಧೆ ನಡೆಸಲಗತ್ತಿದೆ. ಔರಾದ ತಾಲ್ಲೂಕಿನ ಶೆಂಬೆಳ್ಳಿ, ಬಳತ, ಸಂಗಮ, ಲಾಧಾ, ಸಂತಪೂರ, ಕಮಲನಗರ ಭಜನೆ ತಂಡಗಳು ಈ ಕಲೆ ಚೆನ್ನಾಗಿ ಉಳಿಸಿಕೊಂಡು ಬಂದಿವೆ. ಶರಣರ ವಚನಗಳಿಗೆ ರಾಗ ಸಂಯೋಜಿಸಿ ಹಾಡುತ್ತಾರೆ. ಭಾಲ್ಕಿಯ ಅಕ್ಕನಬಳಗ ದಾಡಗಿಯ ಭಜನೆ ತಂಡದವರು ಕೂಡಾ ಮುಂಚೂಣಿಯಲ್ಲಿದ್ದಾರೆ.

ಪ್ರತಿ ವರ್ಷ ಡಿಸೆಂಬರ ತಿಂಗಳಲ್ಲಿ ಭಾಲ್ಕಿ ಪಟ್ಟಣ ಹಾಗೂ ಸುತ್ತ ಮುತ್ತಲಿನ ಗ್ರಾಮದ ಶಾಲಾ ಕಾಲೇಜ ಮಕ್ಕಳಿಗಾಗಿ ಪ್ರತಿಭಾ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ವಚನ ಗಾಯನ, ವಚನ ಕಂಠಪಾಠ, ವಚನ ಪ್ರವಚನ ಸ್ಪರ್ಧೆ (ಭಾಷಣ) , ನಿಬಂಧ, ರಂಗೋಲಿ, ಚಿತ್ರಕಲೆ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳು ನಡೆಸಲಾಗುತ್ತಿದೆ. (೧) ಕಿರಿಯ ಪ್ರಾಥಮಿಕ (೨) ಹಿರಿಯ ಪ್ರಾಥಮಿಕ (೩) ಪ್ರೌಢ ಶಾಲೆ (೪) ಕಾಲೇಜ ವಿದ್ಯಾರ್ಥಿಗಳು ಮತ್ತು (೫) ಹಿರಿಯರ ಗುಂಪು ಎಂದು ಪ್ರತ್ಯೇಕವಾಗಿ ಐದು ಗುಂಪುಗಳನ್ನು ಮಾಡಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ವಿಶೇಷವಾಗಿ ನಾಟಕ ಮತ್ತು ನೃತ್ಯ ಕಲೆಗಳಿಗೆ ಪ್ರೋತ್ಸಾಹ ನೀಡಲು ರೂಪಕಗಳ ಸ್ಪರ್ಧೆ ಕೂಡಾ ನಡೆಸಲಾಗುತ್ತಿದೆ. ಶರಣರ ಬದುಕು ಬೋಧನೆ ಕುರಿತಾದ ವಿಷಯ ವಸ್ತುಗಳೆ ರೂಪಕಗಳು ಹೊಂದಿರುತ್ತವೆ. ಈ ರೀತಿ ಕಲೆ ಮತ್ತು ಸಂಗೀತ ಉಳಿಯಲು ಮತ್ತು ಬೆಳೆಯಲು ಹಿರೇಮಠ ಸಂಸ್ಥಾನ ಭಾಲ್ಕಿಯ ಪಟ್ಟದ್ದೇವರು ವಿಶೇಷ ಗಮನ ನೀಡುತ್ತಿದ್ದಾರೆ. ೨೦೦೮ ನೆಯ ಸಾಲಿನ ಬಸವ ಜಯಂತಿ ನಿಮಿತ್ಯವಾಗಿ ರಾಜ್ಯಮಟ್ಟದ ವಚನ ಕಂಠಪಾಠ ಸ್ಪರ್ಧೆ ದಿನಾಂಕ: ೨೧-೧೨-೨೦೦೮ ರಂದು ಏರ್ಪಡಿಸಲಾಗಿತ್ತು. ಪ್ರಥಮ ಬಹುಮಾನ ರೂ. ೧೦,೦೦೦/-, ದ್ವಿತೀಯ ಬಹುಮಾನ ರೂ. ೫,೦೦೦/-, ಮತ್ತು ತೃತೀಯ ಬಹುಮಾನ ರೂ. ೨,೦೦೦/- ನಿಗದಿಪಡಿಸಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸ್ಪರ್ಧಾಳುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಮಹಾತ್ಮಾ ಬಸವೇಶ್ವರರ ಸ್ತ್ರೀ ಉದ್ದಾರದ ಕಾರ್ಯ ಮುಂದುವರೆಯಿಸಿಕೊಂಡು ಬಂದಿರುವ ಪೂಜ್ಯ ಚನ್ನಬಸವ ಪಟ್ಟದ್ದೇವರು ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಹಾಗೂ ಧಾರ್ಮಿಕವಾಗಿ ಮೇಲಕ್ಕೆತ್ತುವ ಘನೋದ್ದೇಶದಿಂದ ಔರಾದ ತಾಲ್ಲೂಕಿನ ಖೇಡ, ಸಂಗಮ ಗ್ರಾಮಗಳ ಮಧ್ಯ ನದಿಯ ದಂಡೆಯ ಮೇಲೆ ನೀಲಾಂಬಿಕೆ ಆಶ್ರಮ ಸ್ಥಾಪಿಸಿದ್ದಾರೆ. ಇಲ್ಲಿ ಪ್ರಾರ್ಥನೆ, ಪ್ರವಚನ ವಿಭೂತಿ ತಯಾರಿಕೆ, ಶರಣ ಶರಣೆಯ ಜಯಂತಿ ವಿಶೇಷ ರೀತಿಯಲ್ಲಿ ಯುಗಾದಿ ಪಾಡ್ಯದಿನದಂದು ಏರ್ಪಡಿಸಲಾಗುತ್ತದೆ. ಈ ಭಾಗದ ಸಂಗೀತ ಕಲಾವಿದರಿಗೆ ಆಹ್ವಾನಿಸಲಾಗುತ್ತದೆ. ಶರಣರ ಕುರಿತ ರೂಪಕ ನಾಟಕಗಳ ಪ್ರದರ್ಶನ ನಡೆಯುತ್ತವೆ.

ಸಂಘಟನೆ :

ಮಾನವ ಸಂಘ ಜೀವಿ, ಸಂಘಟನೆ ಸಮಾಜದ ಶಕ್ತಿ , ಸಂಘಟನೆಯಿಂದ ನಿರೀಕ್ಷಿತ ಗುರಿ ಮತ್ತು ಯೋಜನೆ ಸಾಕಾರಗೊಳ್ಳುವದೆಂಬ ಸದಾಶಯೆದೊಂದಿಗೆ ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರು ಬಸವಾದಿ ಶರಣರ ತತ್ವಪ್ರಸಾರ, ಕನ್ನಡ ನುಡಿಯ ಬೆಳವಣಿಗೆ ಮತ್ತು ಸ್ವಾಸ್ಥ್ಯ

ಸಮಾಜ ನಿರ್ಮಾಣ ಮಾಡುವ ಕನಸುದೊಂದಿಗೆ ಹಲವಾರು ಸಂಘಟನೆಗಳನ್ನು ಹುಟ್ಟು ಹಾಕಿದ್ದಾರೆ. ಆ ಮೂಲಕ ಜನಪರವಾದ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಸಂಘ ಟನೆಗಳು ಮತ್ತು ಅವುಗಳ ಪದಾಧಿಕಾರಿಗಳು ಭಾರತೀಯ ಬಸವ ಬಳಗ ಅಧ್ಯಕ್ಷರು (ಭಾಲ್ಕಿ) ಶ್ರೀ ಅನಿಲಕುಮಾರ ಬೆಲ್ದಾಳ, ಚನ್ನಬಸವ ಪಟ್ಟದೇವರು ಕನ್ನಡ ಸಂಘ ಕಾರ್ಯಧ್ಯಕ್ಷರು ಡಾ.ಜಿ.ಬಿ.ವಿಸಾಜಿ, ತಾಲೂಕು ಅಧ್ಯಕ್ಷರು ಪ್ರೊ. ಶಂಭೂಲಿಂಗ ವಿ.ಕಾಮಣ್ಣ ಭಾಲ್ಕಿ, ಶ್ರೀ ಬಸವರಾಜ ಕಾಮಶೆಟ್ಟಿ, ಬಸವಕಲ್ಯಾಣ, ಶ್ರೀ ಅಣ್ಣೆಪ್ಪ ರೋಡಾ, ಹುಮನಾಬಾದ, ಪ್ರೊ. ಮಾಣಿಕಪ್ಪ ಬಿರಾದಾರ, ಉದಗೀರ, ಡಾ. ಚನ್ನಬಸವ ಪಟ್ಟದೇವರು ಯುವಕ ಸಂಘ ಅಧ್ಯಕ್ಷರು ಶ್ರೀ ರಮೇಶ ಪಟ್ನೆ, ಹರಳಯ್ಯಾ ಕಲ್ಯಾಣವನ್ನು ಸರ್ವಧರ್ಮ ವಧು-ವರರ ಮಾಹಿತಿ ಕೇಂದ್ರ ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾನ ನಿಲಯದ ಹಳೆಯ ವಿದ್ಯಾರ್ಥಿಗಳ ಸಂಘ, ಅಧ್ಯಕ್ಷರು ಪ್ರಕಾಶ ದೇಶಮುಖ ನಾಗೊರ ಬಿ.

೫. ಪೂಜ್ಯ ಬಸವಲಿಂಗ ಪಟ್ಟದ್ದೇವರಿಗೆ ಲಭ್ಯದ ಪ್ರಶಸ್ತಿ ಪುರಸ್ಕಾರಗಳು :

ಕ್ರಿ.ಶ. ೧೯೮೫ ರ ಜೂನ ತಿಂಗಳಲ್ಲಿ ಪೂಜ್ಯ ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿಯ ಪಟ್ಟಾಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡರು. ಪೂಜ್ಯ ಡಾ.ಚೆನ್ನಬಸವ ಪಟ್ಟದ್ದೇವರ ಸತ್ಯಸಂಕಲ್ಪದಂತೆ ಅವರ ಎಲ್ಲಾ ಕಾರ್ಯಗಳು ವಿನೂತನ ರೀತಿಯಲ್ಲಿ ವಿಕಾಸಗೊಳಿಸುತ್ತ ಮುನ್ನಡೆಯುತ್ತಿದ್ದಾರೆ. ಇವರು ಆಂಧ್ರಪ್ರದೇಶ ರಾಜ್ಯದ ಮೇದಕ ಜಿಲ್ಲೆಯ ನಾರಾಯಣಖೇಡ ತಾಲೂಕಿನ ನಾಗೋರ ಬಿ. ಗ್ರಾಮದಲ್ಲಿ ಶರಣರ ದಂಪತಿಗಳಾದ ಭಾಗೀರಥಿ ಮತ್ತು ರಾಚಪ್ಪ ಕಾಡೋದೆ ಇವರ ಉದರದಲ್ಲಿ ದಿನಾಂಕ: ೨೫-೮-೧೯೫೦ ರಂದು ಜನಿಸಿದರು. ಭಾಲ್ಕಿಯ ಚನ್ನಬಸವೇಶ್ವರ ಕಾಲೇಜದಲ್ಲಿ ಬಿ.ಎ.ಪದವಿ ಮುಗಿಸಿದರು. ಕೋಲ್ಹಾಪೂರ ವಿಶ್ವವಿದ್ಯಾಲಯದಿಂದ ಎಮ್.ಎ.ಪದವಿ ಪಡೆದಿದ್ದಾರೆ. ಇವರು ನಿರಂತರವಾಗಿ ಜನಪರ ಕಾರ್ಯಗಳು ಮತ್ತು ಕನ್ನಡ ನಾಡು ನುಡಿಯ ಸೇವೆ ಮಾಡುತ್ತಿರುವುದು ಸಮಾಜ ಗುರುತಿಸಿದೆ. ಈ ಹಿನ್ನಲೆಯಲ್ಲಿ ಸರಕಾರ ಮತ್ತು ವಿವಿಧ ಸಂಘ ಸಂಸ್ಥೆಗಳಿಂದ ಈ ಕೆಳಕಂಡ ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಲಭಿಸಿದೆ.

೧. ಕಲ್ಯಾಣ ಬಸವಣ್ಣ ಪ್ರಶಸ್ತಿ :

ಕ್ರಿ.ಶ. ೨೦೦೦ ವರ್ಷದಲ್ಲಿ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಅಲ್ಲಿಯ ಟ್ರಸ್ಟಿಗಳು ಮತ್ತು ಪೂಜ್ಯ ಬಸವಲಿಂಗ ಪಟ್ಟದೇವರ ಮಧ್ಯೆ ಹಲವು ಭಿನ್ನಾಭಿಪ್ರಾಯಗಳು ಮೂಡಿ ಅದೊಂದು ರೀತಿಯ ದ್ವೇಷಕ್ಕೆ ಕಾರಣವಾಗುತ್ತದೆ. ಆ ಕಾರಣದಿಂದ ಭಾಲ್ಕಿಯಲ್ಲಿ ಪ್ರಕ್ಷುಬ್ದ ವಾತಾವರಣ ನಿರ್ಮಾಣವಾಗುತ್ತದೆ. ಈ ಸ್ಥಿತಿ ವಿಕೋಪಕ್ಕೆ ಹೋಗಿ, ಯಾವುದೇ ಅನಾಹುತಗಳು ಸಮಾಜದಲ್ಲಿ

ಸಂಭವಿಸಬಾರದು ಎಂಬ ಹಿನ್ನಲೆಯಲ್ಲಿ ಪೂಜ್ಯ ಬಸವಲಿಂಗ ಪಟ್ಟದೇವರು ಬಸವಯೋಗಾನುಷ್ಠಾನ ಕೈಗೊಳ್ಳುತ್ತಾರೆ. ಅರವತ್ಮೂರು ದಿವಸಗಳ ಅವಧಿ ಮುಕ್ತಾಯವಾದ ನಂತರ ಅನುಷ್ಠಾನವನ್ನು ಮುಗಿಸುತ್ತಾರೆ. ಈ ಅವಧಿಯಲ್ಲಿ ವಾತಾವರಣವು ತನ್ನಿಂದ ತಾನೇ ತಿಳಿಯಾಗುತ್ತದೆ. ಜನ ಶಾಂತಿಯಿಂದ ಜೀವಿಸಲಿಕ್ಕೆ ಈ ಅನುಷ್ಠಾನ ಬಹಳ ಯೋಗ್ಯ ರೀತಿಯಲ್ಲಿ ಕಾರ್ಯ ಮಾಡುತ್ತದೆ. ಈ ಸಂತೋಷಕ್ಕಾಗಿ ಬೀದರ ಜಿಲ್ಲೆಯ ನಾಗರಿಕ ಸಮಿತಿ ವತಿಯಿಂದ "ಕಲ್ಯಾಣ ಬಸವಣ್ಣ ಪ್ರಶಸ್ತಿ" ಎಂಬ ಪ್ರಶಸ್ತಿಯನ್ನು ಪೂಜ್ಯ ಬಸವಲಿಂಗ ಪಟ್ಟದ್ದೇವರಿಗೆ ಅರ್ಪಿಸಿ ಸದ್ಭಕ್ತರು ತಮ್ಮ ಭಕ್ತಿಯನ್ನು ಮೆರೆಯುತ್ತಾರೆ. ಇದೆ ಸಂದರ್ಭದಲ್ಲಿ ಬೀದರ ರಹಸ್ಯ ಕನ್ನಡ ದಿನಪತ್ರಿಕೆಯ ಸಂಪಾದಕರಾದ ಶ್ರೀ ಡಿ.ಕೆ.ಸಿದ್ರಾಮ ಅವರು ರೂ. ೫೦,೦೦೦/- ಭಾಲ್ಕಿ ಹಿರೇಮಠಕ್ಕೆ ಸಲ್ಲಿಸುತ್ತಾರೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ :

ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಕನ್ನಡ ನಾಡು ನುಡಿಗಾಗಿ ಸೇವೆ ಮಾಡಿದಂತೆ ಪೂಜ್ಯ ಬಸವಲಿಂಗ ಪಟ್ಟದ್ದೇವರು ಸಾಹಿತ್ಯಿಕವಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. "ಬಸವಧರ್ಮ ಪ್ರಸಾರ ಸಂಸ್ಥೆ" ಅಡಿಯಲ್ಲಿ ಸುಮಾರು ಒಂದೂನೂರಕ್ಕೂ ಅಧಿಕವಾಗಿ ಗ್ರಂಥಗಳನ್ನು ಹೊರತಂದಿದ್ದಾರೆ. ರಾಜ್ಯದ ಗಡಿಭಾಗದಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಿ ಕನ್ನಡ ಭಾಷೆಯನ್ನು ಗಟ್ಟಿಯಾಗಿ ಉಳಿಯಲು ಶ್ರಮಿಸಿದ್ದಾರೆ. ಈ ಕಾರಣದಿಂದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ (ಚಿಂಚಣಿ) ಗ್ರಾಮದ ಶ್ರೀ ಅಲ್ಲಮಪ್ರಭು ಸಿದ್ಧಸಂಸ್ಥಾನ ಮಠದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೨೦೦೩ ಇವರಿಗೆ ನೀಡಿ ಗೌರವಿಸಲಾಗಿದೆ.

ಸುವರ್ಣ ಕರ್ನಾಟಕ ಏಕೀಕರಣ ಪುರಸ್ಕಾರ :

ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಕಮಲನಗರದಲ್ಲಿ ಕ್ರಿ.ಶ. ೧೯೫೬ ರ ಆರಂಭದಲ್ಲಿ "ರೈಲು ರೋಕೋ" ಚಳುವಳಿ ಮಾಡುತ್ತಾರೆ. ಈ ಚಳುವಳಿಯ ಫಲವಾಗಿ ಬೀದರ ಜಿಲ್ಲೆ ಸಂಪೂರ್ಣವಾಗಿ ಕರ್ನಾಟಕ ರಾಜ್ಯದಲ್ಲಿ ಉಳಿಯುವಂತೆ ಆಗಿದ್ದು ಐತಿಹಾಸಿಕ ಮಹತ್ವ ಪಡೆದಿದೆ. ಅಂದಿನಿಂದ ಪೂಜ್ಯ ಚನ್ನಬಸವ ಪಟ್ಟದ್ದೇವರು ಕನ್ನಡ ನಾಡು ನುಡಿಯ ಸೇವೆ ನಿರಂತರ ಮಾಡುತ್ತಾ ಬಂದಿದ್ದಾರೆ. ಇವರ ನಂತರದಲ್ಲಿ ಪೂಜ್ಯ ಬಸವಲಿಂಗ ಪಟ್ಟದ್ದೇವರು ಸಾಹಿತ್ಯಿಕ ಸೇವೆ ಗಣನೀಯ ರೀತಿಯಲ್ಲಿ ಮಾಡಿದ್ದಾರೆ. ಪೂಜ್ಯ ಚನ್ನಬಸವ ಪಟ್ಟದ್ದೇವರ ಶತಮಾನೋತ್ಸವ ಸಂದರ್ಭದಲ್ಲಿ "ಕಾಯಕ ಪರಿಣಾಮಿ" ಎಂಬ ಗೌರವ ಗ್ರಂಥ ಹೊರತಂದಿದ್ದಾರೆ. ಈ ಗ್ರಂಥದಲ್ಲಿ ಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರ ದಿವ್ಯ ಜೀವನ ಮತ್ತು ಸಾಧನೆ ಪರಿಣಾಮಕಾರಿಯಾಗಿ ವಿವಿಧ ಲೇಖಕರು ವಿದ್ವಾಂಸರಿಂದ ಉಲ್ಲೇಖಿತವಾಗಿದೆ.

ಈ ಎಲ್ಲಾ ಕನ್ನಡಪರ ಚಟುವಟಿಕೆಯಿಂದಾಗಿ ಕ್ರಿ.ಶ. ೨೦೦೬ ರಲ್ಲಿ ಕರ್ನಾಟಕ ರಾಜ್ಯವು 'ಸುವರ್ಣ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಭಾಲ್ಕಿಯ ಹಿರೇಮಠ ಸಂಸ್ಥಾನಕ್ಕೆ ಸುವರ್ಣ ಕರ್ನಾಟಕ ಏಕೀಕರಣ ಪುರಸ್ಕಾರ ಘೋಷಿಸಿತು. ದಿನಾಂಕಃ ೧–೧೧–೨೦೦೬ ರಂದು ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಚ್.ಡಿ.ಕುಮಾರಸ್ವಾಮಿ ಅವರಿಂದ ಪೂಜ್ಯ ಬಸವಲಿಂಗ ಪಟ್ಟದ್ದೇವರು ಈ ಪುರಸ್ಕಾರವನ್ನು ಪಡೆದರು. ಈ ಪ್ರಶಸ್ತಿ ಲಭಿಸಿದಕ್ಕೆ ಬೆಳಗಾವಿ, ಜಿಡಗಾ, ನಾಲವಾರ ಮುಂತಾದ ಮಠಗಳ ಮಠಾಧೀಶರು ಹಾರ್ದಿಕವಾಗಿ ಅಭಿನಂದಿಸಿದ್ದಾರೆ. ವಿವಿಧ ಸಂಘ ಸಂಸ್ಥೆಗಳ ಪದಾಧೀಕಾರಿಗಳು ಭಕ್ತಿಯಿಂದ ಅಭಿನಂದಿಸಿ ಸಂತೋಷ ಪಟ್ಟಿದ್ದಾರೆ.

ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿ ಃ

ಸುವರ್ಣ ಕರ್ನಾಟಕ ಏಕೀಕರಣ ಆಚರಿಸುತ್ತಿರುವ ಸಂದರ್ಭದಲ್ಲಿ ಬೆಂಗಳೂರಿನ ವಾರದ ಸ್ಫೋಟ ಕನ್ನಡ ಪತ್ರಿಕೆ ವತಿಯಿಂದ ಶ್ರೀ ಗವಿಸಿದ್ದ ಪಾಟೀಲರು ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿ ೨೦೦೬ ಪೂಜ್ಯ ಬಸವಲಿಂಗ ಪಟ್ಟದ್ದೇವರಿಗೆ ಅರ್ಪಿಸಿ ಗೌರವಿಸಿದ್ದಾರೆ.

ರಮಣಶ್ರೀ ಶರಣ ಪ್ರಶಸ್ತಿ ಃ

ಕ್ರಿ.ಶ. ೧೯೬೨ ರಲ್ಲಿ ಪೂಜ್ಯ ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ವಿದ್ಯಾಪೀಠ ಎಂಬ ಶಿಕ್ಷಣ ಸಂಸ್ಥೆ ಆರಂಭಿಸಿದರು. ಈ ವಿದ್ಯಾಪೀಠದ ಅಡಿಯಲ್ಲಿ ಇಂದು ನಲವತ್ತು ಅಂಗಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಸುಮಾರು ಎಂಟುನೂರಕ್ಕೂ ಅಧಿಕ ಸಂಖ್ಯೆಯಲ್ಲಿ ಬೋಧಕರು, ಬೋಧ್ಯೇತರರು ಸೇವೆ ಸಲ್ಲಿಸುತ್ತಿದ್ದಾರೆ. ಸುಮಾರು ಆರು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ವಿದ್ಯಾಥಿ/ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಶರಣ ಸಂಸ್ಕೃತಿಯನ್ನು ವಿದ್ಯಾರ್ಥಿಗಳಲ್ಲಿ ಬಿಂಬಿಸುವ ಮೂಲಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಬೋಧಿಸುವ ಕ್ರಮವು ಈ ವಿದ್ಯಾಪೀಠದ ವಿಶೇಷತೆಯಾಗಿದೆ.

ಈ ಸೇವೆಯನ್ನು ಗುರುತಿಸಿ ದಿನಾಂಕಃ ೧೭–೧೧–೨೦೦೮ ರಂದು ಬೆಂಗಳೂರಿನ ರಮಣಶ್ರೀ ಪ್ರತಿಷ್ಠಾನ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಇವರ ವತಿಯಿಂದ "ರಮಣಶ್ರೀಶರಣ" ಪ್ರಶಸ್ತಿಯನ್ನು ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರಿಗೆ ಲಭಿಸಿದೆ.

ಸುರಭಿ ಪ್ರಶಸ್ತಿ ಃ

ಬೀದರ ಜಿಲ್ಲೆಯಲ್ಲಿ ಸಾಮಾಜಿಕ ರಂಗದಲ್ಲಿ ಜನತೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹಲವು ಜನಪರ ಕಾರ್ಯಗಳು ಪೂಜ್ಯ ಬಸವಲಿಂಗ ಪಟ್ಟದ್ದೇವರು ದಿವ್ಯ ನೇತ್ರತ್ವದಲ್ಲಿ ವ್ಯಾಪಕವಾಗಿ ನಡೆಯುತ್ತಿವೆ. ವಿಶೇಷವಾಗಿ ಬೀದರ ಜಿಲ್ಲೆಯ ಅಭಿವೃದ್ಧಿ ಕಾರ್ಯದಲ್ಲಿ ತಮ್ಮನ್ನು

ತಾವು ತೊಡಗಿಸಿಕೊಂಡು ಮಾಡುತ್ತಿರುವ ಪೂಜ್ಯ ಜನಪರ ಸೇವೆಯನ್ನು ಗುರುತಿಸಿ, ಸುರಭಿ ಸಂಸ್ಥೆಯವರು ದಿನಾಂಕಃ ೩೦-೧೧-೨೦೦೮ ರಂದು "ಸುರಭಿ ಪ್ರಶಸ್ತಿ" ಅರ್ಪಿಸಿ ಗೌರವಿಸಿದ್ದಾರೆ.

ಕೆಲವು ಪ್ರಮುಖ ಸಮಾರಂಭಗಳಲ್ಲಿ ಭಾಗವಹಿಸಿದ್ದು ಮತ್ತು ಪ್ರಶಸ್ತಿ ಪುರಸ್ಕಾರ ಲಭ್ಯವಾದದ್ದು :

೧. ಕದಳಿ ವನದಲ್ಲಿ ಅಕ್ಕಮಹಾದೇವಿ ಸ್ಮಾರಕವಾಗಿ ಅಕ್ಕನ ಮೂರ್ತಿ ೧೯೮೮ ರಲ್ಲಿ ಸ್ಥಾಪಿಸಿದ್ದು.

೨. ದೆಹಲಿಯಲ್ಲಿ ಜಾರವ ಜನಾಂಗದ ಸಹಸ್ರಾರು ಜನರಿಗೆ ೨೦೦೪ ರಲ್ಲಿ ಲಿಂಗದೀಕ್ಷೆ ನೀಡಿದ್ದು.

೩. ಬೀದರದಲ್ಲಿ ೨೦೦೪ ರಲ್ಲಿ ಅ.ಭಾ.ಶರಣ ಸಾಹಿತ್ಯ ಜಿಲ್ಲಾ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾಗಿದ್ದು.

೪. ಕರ್ನಾಟಕದ ಸುತ್ತೂರು, ಸಿದ್ಧಗಂಗಾ, ಗದಗ, ಮಂಡ್ಯ, ಇಲಕಲ್ಲ, ಮುಂತಾದ ಮಹಾರಾಷ್ಟ್ರದ ಅಕೋಲಾ, ಜಾಲನಾ, ಮುಂಬೈ, ನಾಗಪೂರ, ಸೋಲಾಪೂರ, ಔರಂಗಾಬಾದ ಮುಂತಾದ ಮತ್ತು ಆಂಧ್ರಪ್ರದೇಶದ ಹೈದರಾಬಾದ, ಸಂಗಾರೆಡ್ಡಿ, ನಿಜಾಮಬಾದ, ಜಹಿರಾಬಾದ, ನಾರಾಯಣಖೇಡ ಮುಂತಾದ ಪ್ರಮುಖ ನಗರಗಳಲ್ಲಿ ಏರ್ಪಡಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು.

೫. ಬೆಳಗಾವಿ ಜಿಲ್ಲೆಯ ಗಡಿನಾಡು ಬಳಗ ಚಿಂಚಣಿ ಮಠದಲ್ಲಿ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ಸನ್ಮಾನ ಲಭ್ಯವಾಗಿದೆ.

೬. ಭಾಲ್ಕಿಯ ಬಸವ ಭಕ್ತರ ಪರವಾಗಿ ೨೦೦೪ ರಲ್ಲಿ ೬೩ ದಿವಸ ಅನುಷ್ಠಾನ ಮಾಡಿ ಎ ಖಕ್ತಾಯ ಸಮಾರಂಭದಲ್ಲಿ ಕಲ್ಯಾಣ ಬಸವಶ್ರೀ ಪ್ರಶಸ್ತಿ ಭಕ್ತರು ನೀಡಿ ಗೌರವಿಸಿದರು.

ಉಪಸಂಹಾರ :

ಈ ಎಲ್ಲಾ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದು ಅವಲೋಕಿಸಿದರೆ ಪೂಜ್ಯರ ಎಲ್ಲಾ ವಿಧಾಯಕ ಕಾರ್ಯಗಳಿಗೆ ಜನ ವ್ಯಾಪಕವಾಗಿ ಸ್ಪಂದಿಸಿರುವುದು ಕಂಡುಬರುತ್ತದೆ. ಈ ಪ್ರಶಸ್ತಿ ಪುರಸ್ಕಾರಗಳು ಲಭಿಸಿದಾಗ ಪೂಜ್ಯ ಬಸವಲಿಂಗ ಪಟ್ಟದ್ದೇವರು ವಿನಯಪೂರ್ವಕವಾಗಿ ಸ್ವೀಕರಿಸಿ, ಈ ಪ್ರಶಸ್ತಿ ತಮಗೆ ಸಂದಿಲ್ಲ. ಇದು ಎಲ್ಲರ ಸಂಘಕ ಶ್ರಮದ ಪ್ರತೀಕವಾಗಿವೆ ಎಂದು ತಿಳಿಸುತ್ತ, ಪೂಜ್ಯ ಚನ್ನಬಸವ ಪಟ್ಟದ್ದೇವರ ಆರ್ಶೀವಾದದ ಫಲವಾಗಿದೆ ಎಂದು ನಮ್ರವಾಗಿ ಹೇಳಿಕೊಂಡಿದ್ದಾರೆ. ಇದು ಪೂಜ್ಯರ ಘನತೆಯನ್ನು ಸೂಚಿಸುತ್ತದೆ. ಪ್ರಶಸ್ತಿ ಪುರಸ್ಕಾರಗಳಿಗಿಂತ ಇವರ ಸೇವೆ ಅಧಿಕವಾಗಿದೆ. ಮುಂಬರುವ ದಿನಗಳಲ್ಲಿ ಪೂಜ್ಯ ಬಸವಲಿಂಗ ಪಟ್ಟದ್ದೇವರ ನೇತೃತ್ವದಲ್ಲಿ ಹಲವಾರು ಜನಪರ ಕಾರ್ಯಗಳು ಇನ್ನು ವಿಕಾಸಗೊಳ್ಳುವ ಸಾಧ್ಯತೆಗಳು ವಿಪುಲವಾಗಿರುವುದು ತಿಳಿದುಬರುತ್ತವೆ.

೬. ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರ ವ್ಯಕ್ತಿತ್ವ ಃ

ವ್ಯಕ್ತಿತ್ವ ಃ

ಶರಣ ಕುಂಬಾರ ಗುಂಡಯ್ಯಾ ಶರಣೆ ಕೇತಲಾದೇವಿ ಮತ್ತು ಪೂಜ್ಯ ಶ್ರೀ ರೇವಪಯ್ಯಾ ನಾವದಗಿ ಮುಂತಾದ ಪುಣ್ಯ ಪುರುಷರು ಮೆಟ್ಟಿದ ನೆಲೆ ಬಲ್ಲೂಂಕೆ ಡಾ.ಮ.ಘ.ಚ. ಚನ್ನಬಸವರ ಘನ ವ್ಯಕ್ತಿತ್ವದ ಪ್ರಭಾವ ಪೂಜ್ಯ ಬಸವಲಿಂಗ ಪಟ್ಟದೇವರ ಮೇಲಾಗಿರುವುದು ಸಹಜವೆ. ಈ ಎಲ್ಲಾ ಮಹಾನುಭಾವರ ಸತ್ಯ ಮತ್ತು ತತ್ವ ಮೈಗೂಡಿಸಿಕೊಂಡರು ಭಾಲ್ಕಿ ಶ್ರೀಗಳು ಸರಳರು ಮತ್ತು ಸಹೃದಯಿಗಳು, ಕಷ್ಟ ಸಹಿಷ್ಣುಗಳು, ವಿನಯಶೀಲರು, ನಿರಾಡಂಭರಿಗಳು ಮತ್ತು ನಿಷ್ಕಲಶ್ಯ ಸಹೃದಯಿಗಳು, ಉತ್ತಮ ವಾಗ್ಮಿಗಳಾದ ಶ್ರೀಗಳು ಬಸವಾದಿ ಶರಣರ ತತ್ವಗಳನ್ನು ವಚನ ಪ್ರವಚನದ ಮೂಲಕ ನಿರಗಳವಾಗಿ ಜನಮನಕ್ಕೆ ಮುಟ್ಟುವಂತೆ, ಸದಾ ಹರಣವಾಗಿ ತಿಳಿಸುತ್ತಾರೆ. ದೃಷ್ಟಾಂತಗಳನ್ನು ಕೊಡುವದರಲ್ಲಂತೂ ಎತ್ತಿದ ಕೈಯಾಗಿದ್ದಾರೆ. ಕಂಡ ಭಕ್ತರಿಗೆ ಕೈ ಮುಗಿಯುವಾತನೆ ಭಕ್ತ ಎನ್ನುವಂತೆ ಸಕಲರಿಗೆ ಕೈಮುಗಿದು ಬರಮಾಡಿಕೊಳ್ಳುತ್ತಾರೆ. ಎದುರಾದ ಭಕ್ತರಿಗೆ ಮಾತನಾಡಿಸದೆ ಮುಂದುಡಿ ಇಡುವದೇ ಇಲ್ಲ. ಲಿಂಗಪೂಜೆ, ಜಂಗಮಾರ್ಚನೆ, ಧ್ಯಾನ ಮುಂತಾದ ಆಧ್ಯಾತ್ಮದ ಚಿಂತನೆಯೊಂದಿಗೆ ದಿನನಿತ್ಯದ ಕ್ರಿಯೆಗಳಾದ ವಾಯುವಿಹಾರ, ಪ್ರಾಣಾಯಮ, ವಚನ ಅಧ್ಯಯನ, ಜ್ಞಾನದಾಸೋಹ, ಅನ್ನದಾಸೋಹ, ಮತ್ತು ಆಡಳಿತ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಾಧನೆ ಮಾಡಿದವರಿಗೆ, ಮಾಡುತ್ತಿರುವವರಿಗೆ ಪ್ರೋತ್ಸಾಹ ಇವು ಅವರಲ್ಲಿ ಎದ್ದು ಕಾಣುವ ಗುಣಗಳಾಗಿವೆ. "ನೀರು ನಿಲ್ಲಬಾರದು, ಸ್ವಾಮಿ ಕುಳಿತಿರಬಾರದು". ಎನ್ನುವಂತೆ ಪೂಜ್ಯ ಶ್ರೀಗಳು "ಪಟ್ಟಣಕ್ಕೆ ಪಂಚರಾತ್ರಿ, ಹಳ್ಳಿಗೆ ಒಂದು ರಾತ್ರಿಯಂತೆ" ಚರಜಂಗಮರಾಗಿ ಸದಾ ಸಂಚರಿಸುತ್ತಲೆ ಇರುತ್ತಾರೆ. ಮಠ ಖಾಲಿ ಇರಬಾರದು. ಮಠದಲ್ಲಿ ಭಕ್ತರು ತುಂಬಿರಬೇಕು ಎಂಬಂತೆ ಶ್ರೀಮಠಕ್ಕೆ ಭಕ್ತವೃಂದವನ್ನು ಆಕರ್ಷಿಸುವ ಆಯಸ್ಕಾಂತದ ವ್ಯಕ್ತಿತ್ವ ಹೊಂದಿದ್ದಾರೆ. ಸಮಯ ಪೂಜ್ಞೆ ಸ್ಮರಣ ಶಕ್ತಿ, ದೂರ ದೃಷ್ಟಿ, ಗುರುನಿಷ್ಠೆ, ಆಧ್ಯಾತ್ಮದ ಹಸಿವು ಮುಂತಾದ ಗುಣಗಳು ಸಂಸ್ಕಾರಜನ್ಯವಾಗಿ ಬಂದಿವೆ. ಎಂದು ಹೇಳಬಹುದು. ಒಟ್ಟಿನಲ್ಲಿ ಪೂಜ್ಯ ಬಸವಲಿಂಗ ಪಟ್ಟದ್ದೇವರು ಸಮಷ್ಠಿಯ ಶಕ್ತಿಯಾಗಿ ವಚನಗಳನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಪ್ರವಚನ ರೂಪದಲ್ಲಿ ಬಿತ್ತರಿಸುವ ಕಾಯಕಯೋಗಿಯಾಗಿದ್ದಾರೆ.

ಸದಾ ಕಂಗಳಲ್ಲಿ ಕರುಣೆ, ಮನದಲ್ಲಿ ಬಸವಾದಿ ಶರಣರ ಆದರ್ಶ ಮೌಲ್ಯಗಳ ಚಿಂತನೆ, ಹೃದಯದಲ್ಲಿ ಭೆತ್ತದ ತಾಯಿಯ ಪ್ರೀತಿ, ವಾತ್ಸಲ್ಯ ತುಂಬಿಕೊಂಡವರು, ಮೃದುವಚನ ಸದುವಿನಯದ ಸಾಕಾರ ಮೂರ್ತಿಗಳು, ಮುಗಿದ ಕೈಬಾಗಿದ ತಲೆ, ಮರಿಗಳ ಮನಸ್ಕರು ಅನಾಥ ಮಕ್ಕಳಿಗೆ ತಂದೆ ತಾಯಿಯಾದವರು. ತ್ರೀಕಾರದಾಸೋಹ ಮೂರ್ತಿಗಳು, ಹಮ್ಮಬಿಮ್ಮು ಅಳಿದವರು, ಶರಣ ಸಂಸ್ಕೃತಿಯ ಸಾಕಾರ ಮೂರ್ತಿಯಾಗಿ ಬಸವ ಭಾಸ್ಕರ ಬೆಳಕಿನಲ್ಲಿ ಸದಾ

ಬೆಳಗುತ್ತಿರುವ ಇವರು ಬೇರಾರು ಅಲ್ಲ ರಮಣಶ್ರೀ ಪ್ರಶಸ್ತಿಗೆ ಭಾಜನರಾದವರು ಕನ್ನಡಾಂಬೆಯ ಕಿರೀಟವಾದ ಬೀದರ ಜಿಲ್ಲೆಯ ಭಾಲ್ಕಿಯ ಹಿರೇಮಠ ಸಂಸ್ಥಾನದ ಸಧ್ಯದ ಪೀಠಾಧ್ಯಕ್ಷರಾದ ಶ್ರೀ ಬಸವಲಿಂಗ ಪಟ್ಟದೇವರು.

ಲಿಂಗೈಕ್ಯ ಡಾ.ಚನ್ನಬಸವ ಪಟ್ಟದ್ದೇವರಿಗೆ ತಕ್ಕ ಶಿಷ್ಯರಾಗಿ ಗುರುಗಳಿಟ್ಟ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ನಿಮ್ಮ ಮಂಡಗೆಗೆ ಹೂ ತರುವೆನಲ್ಲಿದೆ ಹುಲ್ಲು ತಾರೇನು ಎನ್ನುವ ಮಹಾ ಶಿವಶರಣೆ ವೀರ ವಿರಾಗಿಣಿ ಅಕ್ಕಮಹಾದೇವಿಯ ವಾಣಿಯಂತೆ ಕಾರ್ಯಗೈಯುತ್ತಿದ್ದಾರೆ.

ಶ್ರೀಗಳ ಬಗ್ಗೆ ಏನೆಂದು ವರ್ಣನೆ ಮಾಡಿದರೂ ಕಡಿಮೆಯೇ ಸರಿ. ಅವರ ಕಾರ್ಯ ವ್ಯಾಪ್ತಿ ಬಣ್ಣಿಸಲು ಪದಗಳು ಸೋಲುತ್ತವೆಯೇ ಹೊರತು ಅವರ ಜನಪರ ಕಾರ್ಯ ಚಟುವಟಿಕೆಗಳು ಹೇಳಿ ಮುಗಿಸಲಾಗದಷ್ಟು ವ್ಯಾಪಕವಾಗಿವೆ. ಶ್ರೀ ಬಸವಲಿಂಗ ಪಟ್ಟದ್ದೇವರು ಹೊರಗೆ ಹೊರ ನೋಟಕ್ಕೆ ಸಾಮಾನ್ಯರಂತೆ ಕಂಡರೂ ಒಳಗೆ ಬೂದಿ ಮುಚ್ಚಿದ ಕೆಂಡದಂತೆ ಅದ್ಭುತ ಆಧ್ಯಾತ್ಮ ಶಕ್ತಿ, ಅಪಾರವಾದ ಸಾಮಾಜಿಕ ಕಳಕಳಿ, ಬಡ ಮಕ್ಕಳ ಬಗ್ಗೆ ಹೇಳತೀರದ ಅನುಕಂಪ ಹೊಂದಿದವರಾಗಿದ್ದಾರೆ.

ಶ್ರೀಗಳು ಕೈಗೊಂಡಿರುವ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸೇವೆ ಎಂಥವರನ್ನು ಬೆರಗುಗೊಳಿಸದಿರಲಾರವು. ಸಮಾಜವನ್ನು ಅಂತರಂಗ, ಬಹಿರಂಗವಾಗಿ ಬೆಳಗಬಹುದಾದ ವಚನ ಸಾಹಿತ್ಯ ಒಂದು ಕೈಯಲ್ಲಿ ಮತ್ತೊಂದು ಕೈಯಲ್ಲಿ ಶಿಕ್ಷಣ ಜ್ಯೋತಿ ಹಿಡಿದು ಹಗಲು ರಾತ್ರಿ ಎನ್ನದೆ ಕಾರ್ಯಗೈಯುತ್ತಿದ್ದಾರೆ. ಯಾವುದೇ ರೀತಿಯ ಪ್ರಶಸ್ತಿ, ಮಾನ ಸನ್ಮಾನಗಳು ಅಪೇಕ್ಷಿಸದೆ, ಸಮಾಜದ ಪರ ವಿರೋಧದ ಮಾತಿಗೆ ಕಿವಿಗೊಡದೆ ಸೇವೆಗೆ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡವರಾಗಿದ್ದಾರೆ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಗೋವಾ, ಹೀಗೆ ಸಮಾಜದ ಮೂಲೆ ಮೂಲೆಗೆ ಬಸವತತ್ವದ ಕಂಪನ್ನು ಮುಟ್ಟಿಸಿ ಮಾನವೀಯ ಮೌಲ್ಯಗಳ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ.

ಅಲ್ಬರ್ಟ ಐನಸ್ಟೈನರು ಗಾಂಧೀಜಿಯವರನ್ನು ಕುರಿತು ರಕ್ತ ಮಾಂಸಗಳಿಂದ ತುಂಬಿರುವ ಇಂಥ ವ್ಯಕ್ತಿಯೊಬ್ಬ ನಮ್ಮ ನಡುವೆ ನಡೆದಾಡುತ್ತಿದ್ದನೆಂದರೆ ಮುಂದಿನ ಜನಾಂಗ ನಂಬುವುದು ಕಷ್ಟವಾಗುತ್ತದೆ ಎಂದು ನುಡಿದಿದ್ದರು. ಭಾಲ್ಕಿಯ ಹಿರಿಯ ಶ್ರೀಗಳಾದ ಚೆನ್ನಬಸವ ಪಟ್ಟದೇವರನ್ನು ನೆನೆದಾಗೆಲ್ಲ ನನಗೆ ಐನಸ್ಟೈನರ ಮಾತುಗಳು ನೆನಪಾಗುತ್ತಿರುತ್ತವೆ. ಅಂತಹ ದೃಢ ಸಂಕಲ್ಪದ ಕ್ರಿಯಾಶೀಲರಾದ, ದುಡಿಮೆಯೇ ಧರ್ಮವೆನ್ನುವ, ಸರಳತೆಯೇ ವ್ಯಕ್ತಿತ್ವವನ್ನು ಅಳೆಯುವ ಮಾಪನವೆನ್ನುವ ಗುರುವಿನ ಸಂಗಾತಿಯಾದವರು ಬಸವಲಿಂಗ ಪಟ್ಟದ್ದೇವರು. ಪ್ಲೇಟೋನಿಗೆ ಅರಿಸ್ಟಾಟಲ್‌ನಂತೆ, ಪರಮಹಂಸರಿಗೆ ವಿವೇಕಾನಂದರಂತೆ, ಉರಿಲಿಂಗದೇವರಿಗೆ ಉರಿಲಿಂಗಪೆದ್ದಿಗಳಂತೆ ಹಿರಿಯ ಪೂಜ್ಯರು ಹಾದಿಯಲ್ಲಿ ನಡೆಯುತ್ತಿರುವವರು ಸರಳ ಜೀವನವನ್ನು

ನಡೆಸುವ ಅವಶ್ಯಕತೆ ಇರುವುದು ಇತರರಿಗೆ ತೋರಿಸಲಿಕ್ಕಾಗಿಲ್ಲ. ಬದಲಿಗೆ ತನ್ನ ಅಂತರಂಗ ಬಹಿರಂಗಗಳ ನಡುವಿನ ಬಿರ ುಕು ಕಡಿಮೆ ಇರುವಂತೆ ನೋಡಿಕೊಳ್ಳುವುದಕ್ಕಾಗಿ ಎಂದು ನಂಬಿದ ಮತ್ತು ಹಾಗೆ ನಡೆದ ಗುರುಗಳ ಧ್ಯೇಯ ವಾಕ್ಯ ಇವರ ಗುರಿಯಾಗಿದೆ.

ಹಿರಿಯ ಶ್ರೀಗಳು ಮೂಲತಃ ಆಡಂಬರದ ಸಂಕೇತಗಳಾದ ಪಂಚಾಚಾರ್ಯದ ಅರಿವು, ಪಲ್ಲಕ್ಕಿ, ಬೆಳ್ಗೊಡೆಗಳನ್ನೆಲ್ಲತ್ಯಜಿಸಿ ಸರಳ ಬದುಕಿನ ಮಾರ್ಗವಾದ ಬಸವಾದಿ ಶಿವಶರಣರ ಹಾದಿಯಲ್ಲಿ ನಡೆದದ್ದು ಈ ಮಠದ ಮನುಷ್ಯಪರ ಧೋರಣೆಯಾಗಿದೆ. ಅದನ್ನೇ ಮುಂದುವರಿಸಿಕೊಂಡು ಬರುತ್ತಿರುವವರು ಬಸವಲಿಂಗ ಪಟ್ಟದ್ದೇವರು, ಸಣ್ಣ ಮಗುವಿನಿಂದ ಹಿಡಿದು ಉನ್ನತ ಚಿಂತನೆಯ ವ್ಯಕ್ತಿತ್ವಗಳೊಂದಿಗೆ ಸಂವಾದ ಮಾಡುವ ಶಕ್ತಿ ಬರುವುದು ಸರಳ ಬದುಕಿನೊಂದಿಗೆ ಸಾವಯವವಾಗಿ ಇರುವ ಜೀವಪರ ನಿಲುವುಗಳಿಂದ ಮಾತ್ರ ಸಾಧ್ಯ. ಅವರು ಅಂತಹ ಸರಳ ಜೀವಿಗಳು.

ಸಾಮಾನ್ಯವಾಗಿ ಸ್ವಾಮೀಜಿಗಳಲ್ಲಿ ಬೇರೆಯವರ ಮಾತುಗಳನ್ನು ಕೇಳುವ ವ್ಯವಧಾನವಿರುವುದಿಲ್ಲ. ನಾನು ಎಲ್ಲವನ್ನೂ ತಿಳಿದಿದ್ದೇನೆಂಬ ಅಹಮ್ಮಿಗೆ ಅವರನ್ನು ಆಳುತ್ತಿರುತ್ತದೆ. ಆದರೆ ಭಾಲ್ಕಿ ಶ್ರೀಗಳು ಇದರಿಂದ ಬಲೂದೂರ. ಎಲ್ಲಿಯೂ ತನ್ನನ್ನು ಬಣ್ಣಿಸ್ಟೊಳ್ಳದೆ ಬೇರೆಯವರು ತನ್ನನ್ನು ಹೊಗಳಬೇಕೆಂಬ ನಿರೀಕ್ಷೆಯನ್ನು ಇಟ್ಟುಕೊಳ್ಳದೆ ಎಲೆ ಮರೆಯತನವನ್ನು ಸದಾ ಕಾಯ್ದುಕೊಂಡಿರುತ್ತಾರೆ. ಬಸವನ ಹುಳುವಾಗಿ ಬೆಳ್ಳಿದಾರಿಯ ಕೊರೆವ ಕೈಂಕರ್ಯವನ್ನು ಅಪ್ಪಿಕೊಂಡಿರುತ್ತಾರೆ.

ತಮ್ಮ ಪಟ್ಟಾಭೀಷೇಕದ ಸಂದರ್ಭದಲ್ಲಿ ಹೂವ ಸಂದರ್ಭದಲ್ಲಿ "ಹೂವೂ ತರುವೆನು ಹುಲ್ಲತಾರೆನೆಂಬ" ಮಾತನ್ನು ಇಲ್ಲಿಯವರೆಗೂ ನಡೆಸಿಕೊಂಡು ಬಂದಿದ್ದಾರೆ. ಪೂರ್ವಗ್ರಹಗಳಿಲ್ಲಿವೆ ಎಲ್ಲರ ಮಾತನ್ನು ಸಂತಸದಿಂದ ಆಲಿಸುವ ತಾಳ್ಮೆ ಒಳನೋಟ ಸರಳತೆಯಿಂದ ಮಾತ್ರ ಸಾಧ್ಯವಾಗುತ್ತದೆ. ಮುಂದಿನ ಜನಾಂಗಕ್ಕೆ ಅವರ ಬದುಕು ಮಾದರಿಯಾಗಬೇಕಾಗಿದೆ. ಅಂತಹ ಗುರುತರ ಜವಾಬ್ದಾರಿ ಅವರ ಹೆಗಲ ಮೇಲಿದೆ. ಅವರ ಸರಳತೆಗೆ ಇನ್ನೊಂದು ಉದಾಹರಣೆ ಅವರ ತಮ್ಮ ತಾಯಿಯ ಸಂಸ್ಕಾರದೇ ಭಾಗವಹಿಸಿದ್ದು, ಮುಖವಾಡಗಳನ್ನು ಹಾಕಿಕೊಂಡು ಜನರನ್ನು ಒಳ ಒಳಗಿಂದೊಳಗೆ ಬಂಧು ಬಳಗ, ಸ್ವಜನ ಪಕ್ಷಪಾತಿಗಳಾಗಿರುತ್ತಾರೆ. ಸಾರ್ವಜನಿಕ ಆಸ್ತಿಯಾದ ಮಠವನ್ನು ಅವರಿಗಾಗಿ ಬಳಸುತ್ತಿರುತ್ತಾರೆ. ಆದರೆ ಯಾರು ಜನರೊಂದಿಗೆ, ಜನಪರ ನಿಲುವುಗಳೊಂದಿಗೆ ಇರುತ್ತಾರೆಯೋ ಅವರಿಗೆ ಮುಖವಾಡಗಳನ್ನು ಧರಿಸಿಕೊಂಡು ತಿರುಗುವ ಅವಶ್ಯಕತೆಯಿರುವುದಿಲ್ಲ.

ಅಂತೆಯೇ ಬಸವಲಿಂಗದೇವರು ತಮ್ಮ ತಾಯಿ ಲಿಂಗೈಕ್ಯರಾದಾಗ ಯಾವುದೇ ರೀತಿಯ ಒಣಾ ಸಿದ್ಧಾಂತಗಳಿಗೆ ಕಟ್ಟು ಬೀಳದೆ, ಸರಳವಾಗಿ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿದರು.

ಒಳಹೊರಗೊಂದಾದವರಿಗೆ ಮಾತ್ರ ಈ ಎದೆಗಾರಿಕೆ ಸಾಧ್ಯವಾಗುತ್ತದೆ. ಬಸವಣ್ಣ ತನ್ನ ಮಗ ಬಾಲ ಬಸವ ಇಹತ್ಯಜಿಸಿದಾಗ ಎನ್ನನೊಯ್ಯದೆ ಎಳೆಗಾಯಿಯನ್ನೇ ಒಯ್ದ ಎಂದು ಕೂಡಲಸಂಗನಿಗೆ ಕೇಳುತ್ತಾನಲ್ಲ, ಅಂತಹ ನಿರ್ಭಡೆಯ ಮಾನಸಿಕ ದೂರದಿಂದ ಮಾತ್ರ ನಾವು ಸರ್ವರಿಗೂ ವಾಸಿಸಲು ಯೋಗ್ಯವಾದ ಮಹಾಮನೆಯ ನಿರ್ಮಾಣ ಮಾಡಬಲ್ಲೆವು. ಅಮರರಾದ "ಶಂಕರಾಚಾರ್ಯರು" ಕೂಡಾ ತಮ್ಮ ತಾಯಿಯ ಅಂತ್ಯಸಂಸ್ಕಾರಕ್ಕೆ ಹೋಗಿದ್ದೂ ಇಂತಹ ಮಾನವೀಯ ನೆಲೆಗಳನ್ನೇ ಎತ್ತಿ ತೋರಿಸುತ್ತದೆ. ಆತ್ಮ ವಂಚನೆಯ ಡಾಂಭಿರತೆಗಿಂತ ವಿರಕ್ತರಲ್ಲಿರಬೇಕಾದ ಅರ್ಧ ಹೃದಯವನ್ನು ಈ ಸಂಗತಿಗಳು ಪರಿಚಯಿಸುತ್ತವೆ.

ಹೀಗಾಗಿ ಸರಳ ಜೀವನವು ಉಪಭೋಗ ಸಂಸ್ಕೃತಿ ತಂದಿಡುವ ದುರಂತಗಳನ್ನು ಇಕ್ಕಿ ಮೆಟ್ಟಲು ಇರುವ ಏಕೈಕ ಮಾರ್ಗವಾಗಿದೆ. ಅಂತರಂತ ಬಹಿರಂಗ ಸರಳತೆಯ ನಾವು ಅಂತ್ಯರಿಕವಾಗಿ ಬಯಸುವ ನೆಮ್ಮದಿಯ ತಾಯಿಯಾಗಿರುವುದರಿಂದ ತಮ್ಮನ್ನು ನಿರಂತರ ಆಗು ಮಾಡಿಕೊಳ್ಳುವಿಕೆಗೆ ಒಡ್ಡಿಕೊಂಡಿರುವ ಭಾಲ್ಕಿಯ ಶ್ರೀಗಳಾಗಿದ್ದಾರೆ.

ಅಧ್ಯಾಯ-೬

ಉಪಸಂಹಾರ

ಅಧ್ಯಾಯ-೬

ಉಪಸಂಹಾರ

ಶ್ರೀಗಳ ಚರಿತ್ರೆಯನ್ನು ಬರೆಯುವಾಗ ನಮಗೆ ಆದರ್ಶವಾಗಿ ಗೋಚರಿಸುವುದೆಂದರೆ ಅವರ ವ್ಯಕ್ತಿತ್ವ. ಅವರು ಆ ವ್ಯಕ್ತಿತ್ವವನ್ನು ಬಹುಪರಿಶ್ರಮದಿಂದ ಬೆಳೆಸಿಕೊಂಡಿದ್ದರು. ಯಾವನೇ ವ್ಯಕ್ತಿ ಇರಲಿ ಹಣ, ವಿದ್ಯೆ, ಅಧಿಕಾರ ಮೊದಲಾದವುಗಳ ಜೊತೆಗೆ ವ್ಯಕ್ತಿತ್ವವನ್ನು ಬೆಳೆಯಿಸಿಕೊಳ್ಳಬೇಕು. ಎಷ್ಟೋ ಜನ ಹಣ ಗಳಿಸುತ್ತಾರೆ. ವಿದ್ಯೆ ಗಳಿಸುತ್ತಾರೆ. ಅಧಿಕಾರ ಗಿಟ್ಟಿಸುತ್ತಾರೆ, ಆದರೆ ಜೀವನದಲ್ಲಿ ಪ್ರಮುಖವಾದುದನ್ನೇ ಬೆಳೆಯಿಸಿಕೊಳ್ಳುವದಿಲ್ಲ. ಈ ವ್ಯಕ್ತಿತ್ವವು ಅವರ ಗುಣ–ಶೀಲ–ಸಂಸ್ಕಾರಗಳಿಂದ ಬೆಳೆಯುತ್ತಿದೆ. ಮನೆ ದೊಡ್ಡದಿರಬಹುದು, ಹಣ ಬಹಳವಿರಬಹುದು, ಆದರೆ ಶೀಲ ಸಂಸ್ಕಾರ ಕಿರಿಯವಿರಬಹುದು, ಅಧಿಕಾರ ದೊಡ್ಡದಿರಬಹುದು, ಆದರೆ ಅದರೊಡನೆ ಉಪಕಾರ ಮಾಡುವ ಗುಣ ಇಲ್ಲದಿರಬಹುದು. ಇವು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಾಧನವಾದರೆ ಯೋಗ್ಯ ಶಿವನಂ ನಮಗೆ ಹಣ, ಗುಣ, ನೆಣಗಳನ್ನು ಕೊಟ್ಟು ನೋಡುವುದು ಯಾತಕ್ಕೆ ? ನಮ್ಮ ಪರೀಕ್ಷೆಗೆ ನಾವು ಅವುಗಳನ್ನು ಹೇಗೆ ಸಹಸದ್ವಿವೇಕದಿಂದ ಉಪಯೋಗಿಸುತ್ತೇವೆಂಬುದು ಪರೀಕ್ಷೆಗೆ ಅದಕ್ಕೆ ಅಲ್ಲವೇ ಶರಣರು.

"ಹಣವಿರ್ದಾಗಲೆ ಭಕ್ತಿ, ಗುಣವಿರ್ದಾಗಲೇ ಸೇವೆ, ಮಾಡಿ ಮುಕ್ತಿ ಪಡೆಯಾತ್ಮ" ಎಂದು ಬೋಧಿಸುತ್ತಿದ್ದರು. ಈ ಮೂರು ಸದ್ವಿನಿ ಯೋಗವಾಗಬೇಕು. ಪಾಪದಿಂದ ಗಳಿಸಿದ ಐಶ್ವರ್ಯವು ಪ್ರಾಯಶ್ಚಿತ್ತದ ಪಾಡಾಗದ ಮುನ್ನ ಎಚ್ಚರೆಟ್ಟೆ ವಹಿಸಬೇಕು. ದೊಡ್ಡ ಮರದ ಆಶ್ರಯದಲ್ಲಿ ಬೆಳೆದಂತೆಯಿಲ್ಲ, ಒಳ್ಳೆಯ ಪುಷ್ಪಗಳನ್ನು ಒದಗಿಸುವ ಸ್ವತಂತ್ರ ಲತೆಯಾಗಬೇಕು. ನೀರಿನಲ್ಲಿ ಬೆಳೆವ ಕಮಲವಾಗಬೇಕೇ ವಿನಾ ಹವ್ಯಾಸಯಾಗಬಾರದು. ಶ್ರೀಗಳು ತಮ್ಮ ಪ್ರತಿಯೊಂದೂ ಉತ್ಸವದ ಕಾರ್ಯದಲ್ಲಿಯೂ ತಮ್ಮ ಪೀಠದ ಹಿರಿಯರನ್ನೇ ಅಧ್ಯಕ್ಷ ಸಿಂಹಾಸನದಲ್ಲಿ ಕುಳ್ಳಿರಿಸಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಅದು, ಅವರೊಂದೊಂದು ಹಿರಿಯ ವೃಕ್ಷದ ಶಾಖೆಯೆಂಬುದನ್ನು ಸೂಚಿಸುತ್ತಿದೆ. ಆದರೆ ಆ ಶಾಖೆ ಅನೇಕ ಪಕ್ಷಿಗಳಿಗೆ ಆಶ್ರಯವನ್ನುಯುವಷ್ಟು ವಿಶಾಲವೂ, ಒಂದು ಹೆಮ್ಮರವೇ ಎನ್ನುವಷ್ಟು ವಿಸ್ತೃತವೂ ಆಗಿತ್ತು. ಈ ಸ್ವಶಕ್ತಿಯಿಂದ ಬಂದುದು.

ಶ್ರೀಗಳು ತಮ್ಮ ವ್ಯಕ್ತಿತ್ವವನ್ನು ವಿಶಾಲ ವೃಕ್ಷವಾಗಿ ಬೆಳೆಸಿಕೊಂಡದು ಹೇಗೆ. ಅದು ಸತತ ಸಾಧನೆಯ ಫಲವಾಗಿ ಈ ಸಾಧನೆಯನ್ನು ಸ್ಥೂಲವಾಗಿ:

೧. ನೀತಿಯನ್ನು ಬೆಳೆಸಿಕೊಂಡುದು,

೨. ಗುರುಭಕ್ತಿ , ಲಿಂಗಭಕ್ತಿ ಮತ್ತು ಜಂಗಮ ಭಕ್ತಿಗಳನ್ನು ಬೆಳೆಯಿಸಿಕೊಂಡುದು

೩. ನುಡಿಯ ಭಕ್ತಿಯನ್ನು ಬೆಳೆಯಿಸಿಕೊಂಡುದು,

೪. ಸಮಯ ಹಾಗೂ ಸಮಾಜಪೂಜ್ಞೆ ಬೆಳೆಯಿಸಿಕೊಂಡುದು.

ಎಂದು ವಿಂಗಡಿಸಬಹುದು. ತಮ್ಮ ಗುರುವಿನಲ್ಲಿ ಲಿಂಗಯ್ಯನಲ್ಲಿ ಪ್ರಾರ್ಥನೆಯಲ್ಲಿ ಯಾವಾಗಲೂ ಭಕ್ತಿ, ವೈರಾಗ್ಯಗಳನ್ನು ಕೊಡು ಎಂದು ಬೇಡುತ್ತಿದ್ದರು. ವೈರಾಗಿಗಳಾಗಿ ಮಹಿಮರಾದವರು, ತಪಸ್ವಿಗಳೆಂದು

ಹೆಸರುವಾಸಿಯಾದ ಮಹಾತ್ಮರು, ಅವರೆಂದೂ ಕ್ಷುದ್ರ ವಸ್ತುಗಳನ್ನು ಬೇಡರು. ಆದರೂ ಶ್ರೀಗಳು ಕಲ್ಲೆದೆಯ ವೈರಾಗಿಗಳಲ್ಲ, ಮಾತೃ ಹೃದಯದವರು. ಈ ಮಾತೃ ಹೃದಯವನ್ನು ಜಾತ್ರೆಯ ಕಾಲದಲ್ಲಿ ಬಂದ ಭಕ್ತಾದಿಗಳಿಗೆ ಸಂತೋಷದಿಂದ ಉಣಬಡಿಸುತ್ತಿದ್ದ ಅವರ ರೀತಿಯಲ್ಲಿ ನಾವು ಕಾಣುತ್ತಿದ್ದೇವು. ಅವರ ಈ ಸೇವಾ ಭಾವನೆಯನ್ನು ಮಾತ್ರ ಹೃದಯವನ್ನು ಕಂಡ ಜನರು ಎಂದೆಂದು ಕಾಣಿಕೆಗಳನ್ನಿತ್ತು ಉಪಕಾರ ತೀರಿಸುತ್ತಿದ್ದರು. ಬಾಹ್ಯ ಪ್ರಕೃತಿಯೆಂತೋ ಅಂತೆಯೇ ಶ್ರೀಗಳ ಅಂತಃ ಪ್ರಕೃತಿಯೂ ಯಾವಾಗಲೂ ಶರಣರ ಹಾಡನ್ನು ಹಾಡುವುದು, ಕೇಳುವುದರಿಂದ ಅವರ ಕಂಠವು ಕೋಗಿಲೆಯಂತೆ ಇನಿದನಿಯಾಗಿತ್ತು. ಅವರ ಕಾಯಕವು ಶ್ರೀಯ ಆಗರವಾಗಿತ್ತು. ಅವರ ಕಾಮಶಕ್ತಿ ಕುಗ್ಗಿ ಧರ್ಮಶಕ್ತಿಯಾಗಿತ್ತು. ಮಾತು ಆಡುವುದು ಮಿತವಾಗಿತ್ತು.

ದೇಶಭಕ್ತಿ ಕೆಲವರ ಉಸಿರಾದರೆ ಸಮಯಭಕ್ತಿ, ದೈವಶಕ್ತಿ, ಇನ್ನೂ ಕೆಲವರ ಉಸಿರು. ಕಪಟ ಭಕ್ತನಾಗಿರುವುದಕ್ಕಿಂತ ನಾಸ್ತಿಕನಾಗಿವುದೇ ಮೇಲು. ಕೋಪದಿಂದ ಮನಸ್ಸು ಮನಸ್ಸಿನಿಂದ ದೇಹವು ನಾಸ್ತಿಕನಾಗಿವುದೇ ಮೇಲು. ಕೋಪದಿಂದ ಮನಸ್ಸು ಮನಸ್ಸಿನಿಂದ ದೇಹವು ಅಸ್ಥಿರವಾಗುತ್ತವೆ. ಆದರೆ ಶ್ರದ್ಧೆಯ ಬಲದಿಂದ ಅವುಗಳನ್ನು ನಿಗ್ರಹಿಸಬಹುದು. ಅವರು ಉತ್ತಮರಾಗಿ ಬಾಳಿದುದಕ್ಕೆ ಅವರ ಶ್ರದ್ದೆಯೇ ಕಾರಣ. ಅವರ ಮುಖದ ಚೈತ್ಯನಕ್ಕೆ ತೇಜಸ್ಸಿಗೆ ಅವರ ಶೀಲವೇ ಕಾರಣ. ಸಾವಿರಾರು ಜನ ಭಕ್ತರ ಮಧ್ಯದಲ್ಲಿದ್ದರೂ ಪಹಜದಂತಿದ್ದರು. ಅವರ ನೀತಿಯನ್ನು ನೆನೆದಾಗೆಲ್ಲ ಮಹಾತ್ಮಾ ಗಾಂಧೀಜಿಯವರ ನೆನಪಾಗುತ್ತದೆ. ಎಷ್ಟೋ ಜನ ಸ್ತ್ರೀಯರು ಅವರನ್ನು ಕಾಣಬಂದಾಗ ಅವರನ್ನೆಂದಿಗೂ ವಿಕಾರಭಾವನೆಯಿಂದ ಅವರು ಕಂಡವರಲ್ಲ.

ಮಾನವನು ಎಷ್ಟೇ ಬುದ್ಧಿವಂತನಾಗಿರಬಹುದು, ಆದರೆ ಶೀಲವನ್ನು ಕಳೆದುಕೊಂಡರೆ ಹಿರಿಮೆ ತೀವ್ರವೇ ಜಾರುತ್ತದೆ. ಮಾನವನು ಹಿರಿಯನಾಗಿ ಬಾಳಬೇಕು, ಉತ್ತಮನಾಗಿ ಬಾಳಬೇಕು ಎಂದು ಯೋಚಿಸಿದರೆ ಸರ್ವಜ್ಞನ ಅಮೃತೊಪಮ ಮಾತುಗಳು ಮನನೀಯವಾಗಿವೆ. ಬಾಳಿನ ಆದಿಯಿಂದ ಅಂತ್ಯದವರೆಗೆ ಶ್ರೀಗಳ ಚಾರಿತ್ರ್ಯವು ಪರಿಶುದ್ಧವಾದುದರಿಂದಲೇ ಅವರಿಗೆ ಸಲ್ಲಬೇಕಾದುದಕ್ಕಿಂತ ಹೆಚ್ಚಿನ ಗೌರವವನ್ನು ಜನತೆ ತೋರಿಸಿದೆ. ವಿರಕ್ತನು ವಿರಕ್ತನಾಗಿಯೇ ಉಳಿಯಬೇಕಾದರೆ ಅಂತಹ ಮನೋನಿಗ್ರಹ, ಸಾಧನೆ ಬೇಕಾಗುತ್ತದೆ. ಶ್ರೀಗಳ ಸರಸವೆಲ್ಲ ಲಿಂಗಯ್ಯನೊಡನೆ, ಅವನೇ ಪತಿ. ಶ್ರೀಗಳ ಹಣೆ ಯಾವಾಗಲೂ ಭೂಸಿತಲೇಪನದಿಂದ ಬೆಳುಗತ್ತದೆ. ನಿತ್ಯವೂ ಅವರ ಮುಖ ಪ್ರಸನ್ನವಾಗಿ ಪರಿಶೋಭಿಸುತ್ತದೆ. ಅವರಿಂದಾಗಿ ಭೂಸಿತ ರುದ್ರಾಕ್ಷೆಗಳಿಗೆ ಕಳೆಬರುತ್ತದೆ.

ಅವರ ಗುರುಭಕ್ತಿಯೂ ಎಲ್ಲದರಲ್ಲಿಯೂ ಎದ್ದು ಕಾಣುವಂತಹದು. ಲಿಂಗಭಕ್ತಿಯೂ ಅಂತಹದೇ. ಲಿಂಗಯ್ಯನನ್ನು ಪೂಜಿಸಿದ ಅವರ ಹಸ್ತವು ಪರುಷಹಸ್ತವಾಗಿತ್ತು. ಲಿಂಗ ಪೂಜೆಯೊಂದು ಏನೋ ಶೋಭೆಗೆ ಪ್ರಚಾರಕ್ಕೆ ಮಾಡುವುದಲ್ಲ. ಲಿಂಗಯ್ಯನ ಪೂಜೆಯ ಫಲವೂ ಮುಖದಲ್ಲಿ ಒಂದು ರೀತಿಯಲ್ಲಿ ತಾನು ತಾನಾಗಿಯೇ ಗೋಚರಿಸುತ್ತಿತ್ತು. ಪ್ರಭೆಯ ಬಲದಿಂದಲೇ ಶ್ರೀಗಳು ಸಮಾಜದಲ್ಲಿ ಗಣನೀಯ ಸ್ಥಾನವನ್ನು ಗಣಸಿದ್ದರು. ಲಿಂಗಾನು ಭಾವಿಗಳು ಅವರಾಗಿದ್ದುದರಿಂದಲೇ ಅವರನ್ನು ಜನತೆ ತ್ರಿವಿಧ ದಾಸೋಹ ಮೂರ್ತಿಗಳೆಂದು ಕೊಂಡಾಡುತ್ತಿತು. ಬಂದ ಜಂಗಮರನ್ನು ಯಾವಾಗಲೂ

ಉಚ್ಚವೆಂದು ಭಾವಿಸಿ ಅವರ ಚರಣ ಜಲವನ್ನು ತಳೆಯುವುದರಲ್ಲಿ ಶ್ರೀಗಳು ಎಂದೂ ಹಿಂದು ಮುಂದೆ ನೋಡಲಿಲ್ಲ. ಬಂದ ಜಂಗಮಕ್ಕೆ ರಸದೋತ್ತಿನವ ಪಕ್ವಾನ್ನವನುಣಬಡಿಸುವುದರ ಜೊತೆಗೆ ಅವರಿಗೆ ಸನ್ಮಾನ ಮಾಡಿ ಕಳಿಸುವ ಪರಿಪಾಠವನ್ನು ಆವರಿಟ್ಟುಕೊಂಡಿದ್ದುದರಿಂದ, ಜಂಗಮ ಪುರುಷರಿಗೂ ಶ್ರೀಗಳ ಮಠಕ್ಕೆ ಬರುವುದೆಂದರೆ ಎಲ್ಲಿಲ್ಲದ ಸಂತೋಷವೆ, ಬಂದ ಜಂಗಮರಿಗೆ ಆವರೊಂದು ಮಾದರಿ.

ಶ್ರೀಗಳು ಎಲ್ಲ ಜೀವಿಗಳ ಸುಖ, ಶಾಂತಿ, ಆನಂದಗಳಿಗೆ ಹಾರೈಸುತ್ತಿದ್ದುದನ್ನು ಜಂಗಮಮೂರ್ತಿಗಳು ಕೇಳಿದರೆ ಅವರೇ ಧನ್ಯರಲ್ಲವೇ ? ಜೀವನದಲ್ಲಿ ಸಿದ್ಧಿಯ ತುತ್ತ ತುದಿಗೇರಬಯಸುವವರು ಪಟ್ಟ ಸಹವಾಸವನ್ನು ಮೆಟ್ಟಿ, ಫಲಾಪೇಕ್ಷೆ ಇಲ್ಲವೆ ಕಾರ್ಯ ಕೈಕೊಳ್ಳಲೇಬೇಕು. ಶ್ರೀ ಗೌರೀಶಂಕರ ಸ್ವಾಮಿಗಳಂತಹರು ಮೆಚ್ಚಿದ್ದರೆಂದರೆ ಶ್ರೀ ಮೃತ್ಯುಂಜಯ ಸ್ವಾಮಿಗಳ ಭಕ್ತಿ , ಶೀಲ ಚಾರಿತ್ರವನ್ನು ಹೇಳುವುದೇನು ? ಮುಕ್ತಿಗೆ ಪರಮ ವೈರಾಗ್ಯವೇ ಸರಿ ಎಂಬುದು ಅವರನ್ನು ನೋಡಿದ ಜಂಗಮ ಮೂರ್ತಿಗಳಿಗೆಲ್ಲರಿಗೂ ಎನ್ನಿಸುವಂತಿದ್ದಿತು.

ನಿತ್ಯವು ಲಿಂಗಪೂಜೆ ಮಾಡಿ, ತನು ಗುಣವನೀಡಾಡಲು ಮಾಡಿದ ಪ್ರಯತ್ನದ ಫಲವಾಗಿ ಪ್ರಸಾದ ಕಾಯವನ್ನು ಪಡೆಯುವ ದಾರಿಯಲ್ಲಿ ಅವರಿದ್ದುದರಿಂದ ಭೂಸಿತವ ಬಾಳಲೋಚನನಂತೆ, ರುದ್ರಾಕ್ಷೆಯ ರುದ್ರನಂತೆ, ಪಂಚಾಕ್ಷರಿ ಪಂಚಮುಖನಂತೆ, ಕಂಗಳಿಗೆ ಮನೋಹರರಾಗಿದ್ದರು. ವೈರಾಗ್ಯವೂ, ತಪಸ್ಸೂ, ಎಲ್ಲೆಲ್ಲಿಯೂ ಪಸರಿಸಿ ಹೊರಹೊಮ್ಮುವುದನ್ನು ನೋಡಿದರೆ ಮೇರುಗಿಡಿಯಿಂದ ಒರಸುವ ರಸ ಧಾರೆಯನ್ನು ನೆನಪಿಗೆ ತರುತ್ತಿವೆ. ಜನತೆ ಧಾವಿಸುತ್ತಿದ್ದುದು ಅವರ ಈ ದಿವ್ಯತೇಜಸ್ಸಿನ, ಪ್ರಭಾವಯುತ ಮುಖವನ್ನು ಕಾಣಲು ಕನ್ನಡ ನಾಡಿನ ಪ್ರಸಿದ್ಧ ಕವಿಗಳಾದ ಶ್ರೀ ಕ ುವೆಂಪು ಅವರು ಸಹ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೆಳನಕ್ಕೆ ಬಂದಾಗ ಶ್ರೀಗಳ ದರ್ಶನವನ್ನು ಪಡೆಯದಿರಲಿಲ್ಲ. ಅವರು ಧಾರವಾಡಕ್ಕೆ ಬಂದಾಗ ಮುರುಘಾ ಮಠದಲ್ಲಿ ತಮ್ಮಃ

"ಸೂರ್ಯೋದಯ ಚಂದ್ರೋದಯ
ದೇವರ ದಯಕಾಣೋ".

ಎಂಬ ಕವನವನ್ನು ಓದಿ ಜನರನ್ನು ಮುಗ್ಧರನ್ನಾಗಿಸಿದರು. ಕ ುವೆಂಪು ಮುರುಘಾಮಠದ ವಾತಾವರಣವನ್ನೆ ದೇವರ ದಯೆ ಎಂಬ ಮಾತಿನಿಂದ ಕರೆದುದು. ಇಲ್ಲಿಯೆ ಸೂರ್ಯೋದಯ ಚಂದ್ರೋದಯ ದೊಡನೆ, ಧಾರವಾಡದಲ್ಲಿ ದೇವರ ದಯೇ ಯೂ ಇದೆಯೆಂಬ ಭಾವನೆಯನ್ನು ವ್ಯಕ್ತಪಡಿಸಿದುದು ಆಶ್ಚರ್ಯವೇನಲ್ಲ. ಶ್ರೀಗಳ ನೋಟ, ದರ್ಶನ, ದೇವರ ದಯೆ, ಸಾಕಾರ, ಕರುಣೆಗಳನ್ನು ನೆನಪಿಗೆ ತಂದುಕೊಡುತ್ತಿವೆ. ಅದು ಶ್ರೀಗಳ ಸಾತ್ವಿಕ ಸಾಧನೆಯಿಂದ ಬಂದುದು.

ಹೀಗೆ ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರು ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾಗಿ. ಸಂಘ ಸಂಸ್ಥೆಯ ಸಂಸ್ಥಾಪಕರಾಗಿ ಅಧ್ಯಕ್ಷರಾಗಿ, ಗೌರವಾನ್ವಿತ ಸದಸ್ಯರಾಗಿ ಮತ್ತು ಗುರುವಿಗೆ ತಕ್ಕ ಶಿಷ್ಯರಾಗಿ ತಮ್ಮ ಕರ್ತವ್ಯನಿರ್ವಹಿಸುತ್ತಿದ್ದಾನೆ. ಶ್ರೀ ಮಠದ ಸದ್ಭಕ್ತರ ಮನಸಿನ ಆಶೆಗಳನ್ನು ಮನಸೋಕ್ತವಾಗಿ ಪೂರೈಸಿದ್ದಾರೆ. ಕಲ್ಯಾಣ ಸಮಾಜದ ಕನಸು ಹೊತ್ತು ಆ ದಿಸೆಯಲ್ಲಿ ಪ್ರಯತ್ನಶೀಲರಾಗುತ್ತಿದ್ದಾರೆ.

ಮಠದ ಉತ್ತರಾಧಿಕಾರಿಗಳಾಗಿದವರು ಹೇಗಿರಬೇಕೆಂಬುದಕ್ಕೆ ಮಾದರಿಯಾಗಿದ್ದಾರೆ. ಕೆರೆಯ ನೀರು ಕೆರೆಗೆ ಚೆಲ್ಲುವಂತೆ ಕೊಡ ಮತ್ತು ತೆರೆದುಕೊಳ್ಳುವವನು ಅವೆ ಎಂದರಿತು ನಾವು ನಿಮಿತ್ಯ ಮಾತ್ರರು ಎಂದು ನಿಶ್ಚಿಂತರಾಗಿ ದುಡಿಯುತ್ತಿದ್ದಾರೆ. ಸಮರ್ಥ ಮಾರ್ಗದರ್ಶಕರಾಗಿ ಗುರುವಿನ ಘನತೆ ಗುರುತ್ವಕ್ಕೆ ತಕ್ಕ ರೀತಿಯಲ್ಲಿ ನಡೆದುಕೊಂಡು ನಡೆಯುತ್ತಿದ್ದಾರೆ.

ವಂಶಾವಳಿ

ಸಂಗಪ್ಪ ಚವಳವ್ವ

ವಿಶ್ವನಾಥಪ್ಪ
(ಗೋಪೆಮ್ಮ)

ರಾಜಪ್ಪ (ಭಾಗೀರಥಿ ೬೩)
೭೮ (ನಿಧನ)

ಶಿವರಾಜ ಕಾಡೋದೆ
ಶಿವಲಿಂಗದೇವರು
ಬಸವಲಿಂಗಪಟ್ಟದ್ದೇವರು

ಸೋಮನಾಥ
ಕಾಡೋದೆ
(ಶಾತಮ್ಮ)
೨-೧೦-೧೯೫೫

ಸಂಗಪ್ಪ ಕಾಡೋದೆ
(ಮಹಾದೇವಿ)

ಪ್ರಭುಲಿಂಗ

ಪೂರ್ಣಚಂದ್ರ

ಬಸವಪ್ರಸಾದ
೧೩ ವರ್ಷ

ಭಾಗ್ಯಶ್ರೀ
೮ ವರ್ಷ

ವಚನಶ್ರೀ
೫ ವರ್ಷ

ಶರಣಬಸಪ್ಪ
೧೦ ತಿಂಗಳು

(ಕಂಸದಲ್ಲಿ ಕೊಟ್ಟ ಹೆಸರುಗಳು ಅವರವರ ಹೆಂಡತಿ ಹೆಸರುಗಳಿವೆ)

(ಬಸವ ಶಿಶು)[೬]

ಆಧಾರ ಗ್ರಂಥಗಳು

ಕ್ರ.ಸಂ.	ಪುಸ್ತಕದ ಹೆಸರು	ಸಂಪಾದನೆ
೦೧.	ಬೀದರ ಜಿಲ್ಲೆಯ ಗೆಜೆಟಿಯರ್	
೦೨.	ಚನ್ನಬಸವಕಲ್ಯಾಣ	ಡಾ. ಗುರುಲಿಂಗಪ್ಪಾ ಧಬಾಲೆ
		ಡಾ. ಜಗನ್ನಾಥ ಹೆಬ್ಬಾಳೆ
೦೩.	ಕಾಯಕ ಪರಿಣಾಮಿ	ಸಂ. ಡಾ. ಜೆ.ಬಿ. ವಿಸಾಜಿ
೦೪.	ಶಿವಶರಣೆಯರ ವಚನ ಸಂಪುಟ	ಡಾ. ವೀರಣ್ಣಾ ರಾಜೂರು
೦೫.	ಶಿವಶರಣೆಯರ ವಚನ ಸಂಪುಟ	ಡಾ. ವೀರಣ್ಣಾ ರಾಜೂರು
೦೬.	ಅಲ್ಲಮಪ್ರಭು ದೇವರ ವಚನ ಸಂಪುಟ	ಡಾ. ಬಿ.ವ್ಹಿ. ಮಲ್ಲಾಪುರು
೦೭.	ಸಂಕೀರ್ಣ ವಚನ ಸಂಪುಟ ಎರಡು	ಡಾ. ಎಸ್. ವಿದ್ಯಾಶಂಕರ
೦೮.	ಸಿದ್ಧರಾಮೇಶ್ವರ ವಚನ ಸಂಪುಟ	ಡಾ. ಎಸ್. ವಿದ್ಯಾಶಂಕರ
೦೯.	ಬಸವಣ್ಣನವರ ವಚನ ಸಂಪುಟ	ಡಾ. ಎಂ.ಎಂ. ಕಲಬುರ್ಗಿ
೧೦.	ಸಿದ್ಧರಾಮೇಶ್ವರ ವಚನ ಸಂಪುಟ	ಡಾ. ಎಸ್. ವಿದ್ಯಾಶಂಕರ
೧೧.	ಬಸವ ನೈವೇದ್ಯ	ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು.
೧೨.	ಬಸವ ವಚನ ಸಿಂಚನ	ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು.
೧೩.	ಶಿವಶರಣೆಯ ವಚನಗಳು	ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು
೧೪.	ಶರಣ ಸಾಹಿತ್ಯ ದರ್ಪಣ	ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು
೧೫.	ಬಸವಜ್ಯೋತಿ	ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ ಭಾಲ್ಕಿ
೧೬.	ಬಸವ ಶಿಶು	ದೇಶಾಂಶ ಹುಡುಗಿ
೧೭.	ಬಸವಣ್ಣ ಮತ್ತು ಅಷ್ಟಾವರಣ	ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು.
೧೮.	ಬಸವತತ್ವ ಆಚರಣೆಗಳು ಮತ್ತು ನಾವು	ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು.
೧೯.	ಚನ್ನಬಸವ ಪಟ್ಟದೇವರು	ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು.
೨೦.	ಇಷ್ಟಲಿಂಗ ಪೂಜಾ ವಿಧಾನ	ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು.



ಪರಮಪೂಜ್ಯ ಶ್ರೀ ಮ.ಘ.ಚ ಬಸವಲಿಂಗ ಪಟ್ಟದ್ದೇವರಿಗೆ ರಮಣಶ್ರೀ ಪ್ರಶಸ್ತಿ ನಿಡುವತ್ತಿರುವ ದೃಶ



ಪರಮಪೂಜ್ಯ ಶ್ರೀ ಮ.ಘ.ಚ ಬಸವಲಿಂಗ ಪಟ್ಟದ್ದೇವರಿಗೆ ಕರ್ನಾಟಕ ಏಕೀಕರಣ ಪ್ರಶಸ್ತಿ ನಿಡುತ್ತಿರುವ ದೃಶ



